ಶುಕ್ರವಾರ, ಏಪ್ರಿಲ್ 21, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 110 | ಪುಟ 18
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸಿನಿಮಾ ಪುರವಣಿ
'ರತ್ನನ್‌ಪ್ರಪಂಚ' ಸಿನಿಮಾಗಿಂತಲೂ ಮೊದಲೇ, ನಟ ಪ್ರಮೋದ್ ಒಪ್ಪಿಕೊಂಡಿದ್ದ 'ಇಂಗ್ಲಿಷ್ ಮಂಜ' ಸಿನಿಮಾ ಇಂದು ತೆರೆಕಾಣುತ್ತಿದೆ

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
59,632 ▲	17,624 ▲	₹62,250 (ಬೆಂಗಳೂರು) ▼	₹77,600 (ಬೆಂಗಳೂರು) ▲	82.14 ▲

ಪ್ರಜಾ ಮತ
ಜನತಂತ್ರದ ಹಬ್ಬ

ಚಿನಕುರಳಿ
ಪ್ರಕಾಶ್ ಶೆಟ್ಟಿ



ಡಿ.ಕೆ. ಶಿವಕುಮಾರ್ ನಾಮಪತ್ರ ತಿರಸ್ಕಾರ, ಬಂಧನ ಭೀತಿ: ಬಿಜೆಪಿ ತಂತ್ರಕ್ಕೆ ಕಾಂಗ್ರೆಸ್ ಪ್ರತಿತಂತ್ರ

ಸುರೇಶ್ ನಾಮಪತ್ರ ಕುತೂಹಲ

ಪ್ರಜಾವಾಣಿ ವಾರ್ತೆ

ರಾಮನಗರ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರತಿನಿಧಿಸುವ ಕನಕಪುರ ಕ್ಷೇತ್ರದಲ್ಲಿಯೇ ಅವರನ್ನು ಕಟ್ಟಿ ಹಾಕುವ ಉದ್ದೇಶಕ್ಕೆ ಬಿಜೆಪಿ ನಾಯಕರು ಕಂದಾಯ ಸಚಿವ ಆರ್. ಅಶೋಕ ಅವರನ್ನು ಕಣಕ್ಕೆ ಇಳಿಸಿರುವ ಬೆನ್ನಲ್ಲೇ, ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಹಾಗೂ ಶಿವಕುಮಾರ್ ತಮ್ಮ ಡಿ.ಕೆ. ಸುರೇಶ್ ಕನಕಪುರ ಕ್ಷೇತ್ರ ದಿಂದಲೇ ನಾಮಪತ್ರ ಸಲ್ಲಿಸಿರುವುದು ಸ್ಪರ್ಧಾಕಣದ ಕುತೂಹಲ ಹೆಚ್ಚಿಸಿದೆ.

ಕನಕಪುರ ಕಾಂಗ್ರೆಸ್ ಅಭ್ಯರ್ಥಿಯಾಗಿ ಶಿವಕುಮಾರ್ ಇದೇ 17ರಂದು ನಾಮಪತ್ರ ಸಲ್ಲಿಸಿದ್ದರು. ಆದರೆ ಅವರ ನಾಮಪತ್ರವನ್ನು ಅಸಿಂಧುಗೊಳಿಸಲು ಬಿಜೆಪಿ ಕುತಂತ್ರ ನಡೆಸಿದೆ ಎಂದು ಆರೋಪಿಸಿರುವ ಸುರೇಶ್ ಅವರು ಗುರುವಾರ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಸಲು ಕಡೆಯ ದಿನವಾದ ಗುರುವಾರ ಬೆಳಿಗ್ಗೆ ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಸ್. ಗಂಗಾಧರ್ ಜೊತೆಗಿದ್ದ ಅವರು ಅಲ್ಲಿಂದ ನೇರವಾಗಿ ಕನಕಪುರಕ್ಕೆ ತೆರಳಿದರು. ಮಧ್ಯಾಹ್ನ 1 ಗಂಟೆಗೆ ತಹಶೀಲ್ದಾರ್ ಕಚೇರಿಯಲ್ಲಿ ನಾಮಪತ್ರ ಸಲ್ಲಿಸಿದರು.

ನಾಮಪತ್ರಗಳ ಪರಿಶೀಲನೆ ಕಾರ್ಯ ಶುಕ್ರವಾರ ನಡೆಯಲಿದ್ದು, ಉಮೇದುವಾರಿಕೆ ಹಿಂದಕ್ಕೆ ಪಡೆಯಲು ಏ. 24ರವರೆಗೆ ಅವಕಾಶ ಇದೆ. ಶಿವಕುಮಾರ್ ನಾಮಪತ್ರ ಕ್ರಮಬದ್ಧವಾಗಿದ್ದಲ್ಲಿ ಸುರೇಶ್ ನಾಮಪತ್ರ ಹಿಂದಕ್ಕೆ ಪಡೆದುಕೊಳ್ಳಲಿದ್ದಾರೆ ಎಂದು ಹೇಳಲಾಗಿದೆ.

ಕಾಂಗ್ರೆಸ್ ಆತಂಕ: ಡಿ.ಕೆ. ಶಿವಕುಮಾರ್ ಇದೇ 17ರಂದು ಎರಡು ಪ್ರತಿಗಳಲ್ಲಿ ನಾಮಪತ್ರ ಸಲ್ಲಿಸಿದ್ದಾರೆ.

12ನೇ ಪುಟ ನೋಡಿ

ಮುಗಿದ ನಾಮಪತ್ರ ಸಲ್ಲಿಕೆ

224	5,102	3,632
ಕ್ಷೇತ್ರ	ಒಟ್ಟು ನಾಮಪತ್ರ	ಅಭ್ಯರ್ಥಿಗಳ ಸಂಖ್ಯೆ

ಏನೇನು ಜಪ್ತಿ (ಏಪ್ರಿಲ್ 13ರಿಂದ 20ರವರೆಗೆ)

₹79.51 ಕೋಟಿ ನಗದು	₹18.71 ಕೋಟಿ ಉಚಿತ ಕೊಡುಗೆ ಮೌಲ್ಯ	₹47.93 ಕೋಟಿ (125.25 ಕೋಟಿ ಲೀಟರ್) ಮದ್ಯ
₹15.82 ಕೋಟಿ (1,047.96 ಕೆ.ಜಿ) ಮಾದಕ ವಸ್ತು	144.27 ಕೆ.ಜಿ (₹73.46 ಕೋಟಿ) ಚಿನ್ನ	581.90 ಕೆ.ಜಿ (₹4.06 ಕೋಟಿ) ಬೆಳ್ಳಿ

ಒಟ್ಟು ₹239.52 ಕೋಟಿ


ಶಿವಕುಮಾರ್


ಸುರೇಶ್

ಸಿಬಿಐ ತನಿಖೆ: ಡಿಕೆಶಿ ಅರ್ಜಿ ವಜಾ

ಬೆಂಗಳೂರು: 'ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆ ನಡೆಸಲು ಅನುಮತಿ ನೀಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಅಧಿಸೂಚನೆ ಪ್ರಶ್ನಿಸಿ, ಕನಕಪುರದ ಕಾಂಗ್ರೆಸ್ ಶಾಸಕ ಡಿ.ಕೆ. ಶಿವಕುಮಾರ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಡಿ.ಕೆ. ಶಿವಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯ ಮೇಲಿನ ಕಾಯ್ದಿರಿಸಿದ್ದ ತೀರ್ಪನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣ'ಗಳ ಹೈಕೋರ್ಟ್‌ನ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಕೆ. ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಪ್ರಕಟಿಸಿತು.

12ನೇ ಪುಟ ನೋಡಿ

'5 ಸಾವಿರ ಜನರಿಂದ ನನ್ನ ಆಸ್ತಿಪಟ್ಟಿ ಡೌನ್‌ಲೋಡ್'

ಮಂಡ್ಯ: 'ನಾನು ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಆಸ್ತಿಪಟ್ಟಿಯನ್ನು 5 ಸಾವಿರ ಜನ ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ಅದರಲ್ಲಿ ಬಿಜೆಪಿ ಮುಖಂಡರ ಕುತಂತ್ರ ರಾಜಕಾರಣವಿದೆ. ರಾಜಕೀಯ ಲೆಕ್ಕಾಚಾರದ ಕಾರಣಕ್ಕೆ ಕನಕಪುರ ವಿಧಾನಸಭಾ ಕ್ಷೇತ್ರಕ್ಕೆ ಡಿ.ಕೆ. ಸುರೇಶ್ ಅವರೂ ನಾಮಪತ್ರ ಸಲ್ಲಿಸಿದ್ದಾರೆ. ಸುರೇಶ್ ನಾಮಪತ್ರ ಸಲ್ಲಿಕೆ ಆತುರದ ನಿರ್ಧಾರ ವಲ್ಲ, ನಮ್ಮ ತಂತ್ರವೂ ಇದೆ. ಅದನ್ನು ಈಗಲೇ ಬಿಟ್ಟುಕೊಡುವುದಿಲ್ಲ, ನಾಳಿದ್ದು ಎಲ್ಲರಿಗೂ ತಿಳಿಯುತ್ತದೆ. ನಮಗೂ ರಾಜಕಾರಣ ಬರುತ್ತದೆಂದು ತಿಳಿಸುವುದು ನಮ್ಮ ಉದ್ದೇಶ' ಎಂದು ಡಿ.ಕೆ.ಶಿವಕುಮಾರ್ ಅವರು ಗುರುವಾರ ಹೇಳಿದರು.


ಉಗ್ರರ ದಾಳಿಯಿಂದಾಗಿ ಹೊತ್ತಿ ಉರಿಯುತ್ತಿರುವ ಸೇನಾ ವಾಹನ– ಪಿಟಿಐ ಚಿತ್ರ

ಕಾಶ್ಮೀರದಲ್ಲಿ ಉಗ್ರರ ದಾಳಿ ಐವರು ಯೋಧರ ಸಾವು

ಪೂಂಛ್ (ಜಮ್ಮು ಮತ್ತು ಕಾಶ್ಮೀರ) (ಪಿಟಿಐ): 'ರಜೌರಿ ವಲಯದ ಬಿಂಬೇರ್ ಗಾಲಿ–ಪೂಂಛ್ ಮಾರ್ಗದಲ್ಲಿ ಗುರುವಾರ ಭಯೋತ್ಪಾದಕರು ಹೊಂಚು ಹಾಕಿ ನಡೆಸಿದ ದಾಳಿಯಲ್ಲಿ ಸೇನಾ ವಾಹನಕ್ಕೆ ಬೆಂಕಿ ಹೊತ್ತಿಕೊಂಡಿದ್ದರಿಂದ ಐವರು ಸೈನಿಕರು ಅಸುನೀಗಿದ್ದಾರೆ. ಮತ್ತೊಬ್ಬ ಸೈನಿಕ ಗಂಭೀರವಾಗಿ ಗಾಯಗೊಂಡಿದ್ದಾರೆ' ಎಂದು ಅಧಿಕಾರಿಗಳು ಗುರುವಾರ ಹೇಳಿದ್ದಾರೆ.

'ಮೃತ ಯೋಧರೆಲ್ಲರೂ ರಾಷ್ಟ್ರೀಯ ರೈಫಲ್ಸ್ ಘಟಕಕ್ಕೆ ಸೇರಿದವರಾಗಿದ್ದಾರೆ. ಇವರು ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಗೆ ನಿಯೋಜನೆಗೊಂಡಿದ್ದರು' ಎಂದು ಸೇನಾ ಪ್ರಕಟಣೆ ತಿಳಿಸಿದೆ.

'ಘಟನಾ ಸ್ಥಳದ ಸನಿಹದಲ್ಲೇ ಅಡಗಿ ಕುಳಿತಿದ್ದ ಭಯೋತ್ಪಾದಕರು ಸೈನಿಕರನ್ನು ಕರೆದೊಯ್ಯುತ್ತಿದ್ದ ವಾಹನದ ಮೇಲೆ ದಾಳಿ ನಡೆಸಿದ್ದಾರೆ. ಅವರು ಗ್ರೆನೇಡ್ ಎಸೆದಿದ್ದರಿಂದ ವಾಹನಕ್ಕೆ ಬೆಂಕಿ ಹೊತ್ತಿಕೊಂಡಿದೆ. ಸೇನಾ ವಾಹನವು ಮಧ್ಯಾಹ್ನ 3 ಗಂಟೆ ಸುಮಾರಿಗೆ ಸಾಗುತ್ತಿತ್ತು. ಭಾರಿ ಮಳೆ ಸುರಿಯುತ್ತಿದ್ದುದರಿಂದ ಆ ಪ್ರದೇಶದಲ್ಲಿ ಕಡಿಮೆ ಗೋಚರತೆ ಇತ್ತು. ಇದರ ಲಾಭ ಪಡೆದಿರುವ ಉಗ್ರರು ವಾಹನದ ಮೇಲೆ ದಾಳಿ ನಡೆಸಿದ್ದಾರೆ' ಎಂದು ಸೇನೆಯು ಮಾಹಿತಿ ನೀಡಿದೆ.

13ನೇ ಪುಟ ನೋಡಿ

ಇಂದು ಬೆಳಿಗ್ಗೆ 11ಕ್ಕೆ ಪಿಯು ಫಲಿತಾಂಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022–23ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯು ಫಲಿತಾಂಶವನ್ನು ಶುಕ್ರವಾರ ಬೆಳಿಗ್ಗೆ 11ಕ್ಕೆ ಪ್ರಕಟಿಸಲಾಗುವುದು ಎಂದು ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ಹೇಳಿದೆ.

ಪರೀಕ್ಷೆಗಳು ಮಾರ್ಚ್ 9ರಿಂದ 29ರವರೆಗೆ ರಾಜ್ಯದ 1,109 ಕೇಂದ್ರಗಳಲ್ಲಿ ನಡೆದಿದ್ದವು. 7,27,387 ವಿದ್ಯಾರ್ಥಿಗಳು ಹೆಸರು ನೋಂದಾಯಿಸಿಕೊಂಡಿದ್ದರು. ಚುನಾವಣಾ ಪ್ರಕ್ರಿಯೆಗಳ ಮಧ್ಯೆಯೇ ಮೌಲ್ಯಮಾಪನ ಕಾರ್ಯವನ್ನು ಮಂಡಳಿಯು ಸುಸೂತ್ರವಾಗಿ ಪೂರ್ಣಗೊಳಿಸಿ, ಫಲಿತಾಂಶ ಪ್ರಕಟಿಸುತ್ತಿದೆ.

ವಿದ್ಯಾರ್ಥಿಗಳು, ಪೋಷಕರು ಫಲಿತಾಂಶವನ್ನು https://karresults.nic.in ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು ಎಂದು ಮಂಡಳಿಯ ಅಧ್ಯಕ್ಷರು ಮಾಹಿತಿ ನೀಡಿದ್ದಾರೆ.

ಶಿಕ್ಷೆಗೆ ತಡೆ ಕೋರಿದ್ದ ರಾಹುಲ್ ಅರ್ಜಿ ತಿರಸ್ಕೃತ

ಸೂರತ್ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಮಾನನಷ್ಟ ಪ್ರಕರಣದಲ್ಲಿ ವಿಧಿಸಲಾಗಿರುವ ಶಿಕ್ಷೆಗೆ ತಡೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸೂರತ್‌ನ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ ಗುರುವಾರ ತಿರಸ್ಕರಿಸಿದೆ.



ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶ ಆರ್.ಪಿ. ಮೊಗೇರ, 'ನೀವು ಲೋಕಸಭಾ ಸದಸ್ಯರಾಗಿದ್ದವರು ಹಾಗೂ ದೇಶದ ಎರಡನೇ ಅತಿ ದೊಡ್ಡ ರಾಜಕೀಯ ಪಕ್ಷವೊಂದರ ಅಧ್ಯಕ್ಷರೂ ಆಗಿದ್ದವರು. ಹೀಗಾಗಿ, ಪದಗಳನ್ನು ಬಳಸುವಾಗ ನೀವು (ರಾಹುಲ್) ಎಚ್ಚರದಿಂದ ಇರಬೇಕಿತ್ತು' ಎಂದು ಹೇಳಿದರು.

'ರಾಹುಲ್ ಅವರಂತಹ ವ್ಯಕ್ತಿಯಿಂದ ಸಭ್ಯ ನಡವಳಿಕೆಗೆ ಸಂಬಂಧಿಸಿ ಅಧಿಕ ನಿರೀಕ್ಷೆ ಇರುತ್ತದೆ' ಎಂದ ನ್ಯಾಯಾಧೀಶರು, 'ಕಾನೂನಿನಡಿ ಅವಕಾಶವಿರುವಷ್ಟು ಪ್ರಮಾಣದ ಶಿಕ್ಷೆಯನ್ನು ವಿಚಾರಣಾ ನ್ಯಾಯಾಲಯ ವಿಧಿಸಿದೆ' ಎಂದರು.

ಶಿಕ್ಷೆಗೆ ತಡೆ ನೀಡದೇ ಇದ್ದರೆ, ಪ್ರಜಾಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 8(3)ರ ಪ್ರಕಾರ, ರಾಹುಲ್ ಅವರಿಗೆ ಚುನಾವಣೆಗೆ ಸ್ಪರ್ಧಿಸುವ ಅವಕಾಶ ದೊರೆಯುವುದಿಲ್ಲ. ಹಾಗಾದರೆ, ಅವರಿಗೆ ಸರಿಪಡಿಸಲಾರದಷ್ಟು ಹಾನಿ ಆಗುತ್ತದೆ ಎಂಬುದನ್ನು ಸಾಬೀತು ಮಾಡುವಲ್ಲಿ ವಕೀಲರು ಯಶಸ್ವಿಯಾಗಿಲ್ಲ ಎಂದರು.

'ಯಾವುದೇ ಮಾನಹಾನಿಕರ ಪದಗಳು ನಿಂದನೆಗೆ ಒಳಗಾದ ವ್ಯಕ್ತಿಗೆ ಮಾನಸಿಕ ಹಿಂಸೆಗೆ ಕಾರಣವಾಗುತ್ತವೆ' ಎಂದು ಆದೇಶದಲ್ಲಿ ವಿವರಿಸಲಾಗಿದೆ.

13ನೇ ಪುಟ ನೋಡಿ

'ಹೈಕೋರ್ಟ್‌ಗೆ ಮೊರೆ'

ರಾಹುಲ್ ಗಾಂಧಿ ಅವರ ಅರ್ಜಿಯನ್ನುತಿರಸ್ಕರಿಸಿ ಸೂರತ್‌ನ ಸೆಷನ್ಸ್ ನ್ಯಾಯಾಲಯ ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲಾಗುವುದು ಎಂದು ರಾಹುಲ್ ಪರ ವಕೀಲ ಕಿರೀಟ್ ಪಾನ್‌ವಾಲಾ ಹೇಳಿದ್ದಾರೆ. 'ಏಪ್ರಿಲ್ 3ರ ಆದೇಶದಂತೆ, ರಾಹುಲ್ ಗಾಂಧಿ ಅವರು ಜಾಮೀನಿನ ಮೇಲೆ ಇರುತ್ತಾರೆ' ಎಂದೂ ಅವರು ಹೇಳಿದ್ದಾರೆ.

ವಾಯುವಿಹಾರಕ್ಕೆ ತೆರಳಿದ್ದ ವೃದ್ಧೆಯ ಸರ ಕಸಿದು ಪರಾರಿ

ಬೆಂಗಳೂರು: ರಾಮಮೂರ್ತಿನಗರ ಠಾಣೆ ವ್ಯಾಪ್ತಿಯಲ್ಲಿ ವಾಯುವಿಹಾರಕ್ಕೆ ತೆರಳಿದ್ದ ಶಕುಂತಲಾ (62) ಎಂಬುವವರ ಸರ ಕಳವು ಮಾಡಿದ್ದ ಇಬ್ಬರು ಕಳ್ಳರು, ಸಾರ್ವಜನಿಕರಿಗೆ ಹೆದರಿ ಬೈಕ್ ಅನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾರೆ.

'ಮಂಗಳವಾರ ವಾಯುವಿಹಾರಕ್ಕೆ ತೆರಳಿದ್ದಾಗ ಒಬ್ಬ ಬೈಕ್‌ನಿಂದ ಇಳಿದು ಸರ ಕಸಿದುಕೊಂಡಿದ್ದಾನೆ. ಅಲ್ಲೇ ಬೈಕ್‌ನಿಂದ ಬರುತ್ತಿದ್ದವರು ಹಾಗೂ ಇತರೆ ವಾಯುವಿಹಾರಗಳು ಗಮನಿಸಿ ಕಳ್ಳರ ಬೈಕ್‌ನ್ನು ತಡೆದು ನಿಲ್ಲಿಸಿದ್ದಾರೆ. ಅವರನ್ನು ತಳ್ಳಿದ ಇಬ್ಬರೂ ಪರಾರಿಯಾಗಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಆರೋಪಿಗಳು ಬಳಸುತ್ತಿದ್ದ ಬೈಕ್ ಸಹ ಕಳವು ಮಾಡಿದ್ದು ಎಂದು ಗೊತ್ತಾಗಿದೆ.

ನಂದಿಗಿರಿಧಾಮಕ್ಕೆ ಪ್ರವೇಶ: ಸಮಯ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ


ಚಿಕ್ಕಬಳ್ಳಾಪುರ: ಬೇಸಿಗೆ ರಜೆ ಹಿನ್ನೆಲೆಯಲ್ಲಿಪ್ರಸಿದ್ಧ ನಂದಿಗಿರಿಧಾಮದ ಪ್ರವೇಶದ ಅವಧಿಯನ್ನು ಪರಿಷ್ಕರಿಸಲಾಗಿದೆ. ಬೆಳಿಗ್ಗೆ 5ರಿಂದ ಸಂಜೆ 7ರವರೆಗೆ ಗಿರಿಧಾಮಕ್ಕೆ ಪ್ರವಾಸಿಗರಿಗೆ ಪ್ರವೇಶ ನೀಡಲಾಗುವುದು ಎಂದು ಜಿಲ್ಲಾಧಿಕಾರಿ ಎನ್.ಎಂ.ನಾಗರಾಜ್ ತಿಳಿಸಿದ್ದಾರೆ.

ಈ ಹಿಂದೆ ಬೆಳಿಗ್ಗೆ 5.30 ರಿಂದ ಸಂಜೆ 6ರವರೆಗೆ ಪ್ರವೇಶಕ್ಕೆ ಅವಕಾಶವಿತ್ತು. ಬೇಸಿಗೆ ರಜೆ ಪ್ರಾರಂಭವಾಗುತ್ತಿದೆ. ಸೂರ್ಯೋದಯ ಮತ್ತು ಸೂರ್ಯಾಸ್ತ ವೀಕ್ಷಣೆಗಾಗಿ ಪ್ರವಾಸಿಗರಿಗೆ ಹೆಚ್ಚಿನ ಕಾಲಾವಕಾಶ ಒದಗಿಸುವ ನಿಟ್ಟಿನಲ್ಲಿ ಮತ್ತು ನಂದಿಗಿರಿಧಾಮ ಸಮಗ್ರ ಅಭಿವೃದ್ಧಿ ಮತ್ತು ನಿರ್ವಹಣಾ ಸಮಿತಿ ಅಧ್ಯಕ್ಷರ ಆದೇಶದ ಮೇರೆಗೆ ಸಮಯ ವಿಸ್ತರಿಸಲಾಗಿದೆ ಎಂದರು.

ಈ ವಿಸ್ತರಣೆ ಸೆ.30ರವರೆಗೆ ಅನ್ವಯ ಆಗಲಿದೆ ಎಂದು ಅವರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ರಾಮೋತ್ಸವ ವಿಶೇಷ



ವೆಂಕಟೇಶ್ ಕುಮಾರ್

ಶ್ರೀರಾಮ ನವಮಿ ಸಂಗೀತೋತ್ಸವ: ರಾಮಗಾನ ಕಲಾಕಛೇರಿ: ವೆಂಕಟೇಶ್ ಕುಮಾರ್, ಹಾರ್ಮೋನಿಯಂ: ಸತೀಶ್ ಕೊಳ್ಳಿ, ತಬಲಾ: ಕೇಶವ ಜೋಶಿ, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 5.30

30ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ರಾಘವ್, ಕರ್ನಾಟಕ ಶಾಸ್ತ್ರೀಯ ಗಾಯನ: ಭಾರ್ಗವಿ ವೆಂಕಟರಾಮ್, ಹಿಂದೂಸ್ಥಾನಿ ಸಂಗೀತ ಗಾಯನ: ಅಂಕಿತಾ ಜೋಷಿ, ಪಿಟೀಲು:ಸಿಂಧು ಸುಚೇತನ, ಮೃದಂಗ: ಬಿ.ಸಿ. ಮಂಜುನಾಥ್, ಹಾರ್ಮೋನಿಯಂ: ಅಭಿನಯ್ ರಾವಂಡೆ, ತಬಲಾ: ರಾಮಕೃಷ್ಣ ಕರಂಬೆಳ್ಕರ್, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5.15ರಿಂದ

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಸುನಿಲ್ ಗಾರ್ಗ್ಯಾನ್, ಪಿಟೀಲು: ಚಾರುಲತಾ ರಾಮಾನುಜಂ, ಮೃದಂಗ: ಆನೂರು ಅನಂತ ಕೃಷ್ಣಶರ್ಮಾ, ಖಂಜೀರಾ: ಸುನಾದ್ ಆನೂರ್, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30



ಅದಿತಿ ದೇವಿಪ್ರಸಾದ್

ಹರಿದಾಸ ಮಂಜರಿ: ಅದಿತಿ ದೇವಿಪ್ರಸಾದ್, ಆಯೋಜನೆ ಮತ್ತು ಸ್ಥಳ: ಅಭಯ ಲಕ್ಷ್ಮೀನರಸಿಂಹ ಚಾರಿಟೇಬಲ್ ಟ್ರಸ್ಟ್, ಅಭಯ ಲಕ್ಷ್ಮೀನರಸಿಂಹ ಪಟ್ಟಾಭಿರಾಮ ದೇವಸ್ಥಾನ, ತ್ಯಾಗರಾಜನಗರ, ಸಂಜೆ 6.30

ಪ್ರವಚನ ವಾಹಿನಿ: 'ಶಂಕರ ಭಗವತ್ಪಾದರ ಸ್ತೋತ್ರ ಸಾಹಿತ್ಯ'ದ ಕುರಿತು ಉಪನ್ಯಾಸ: ಸುದರ್ಶನ ಶರ್ಮ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ಆರೋಪಪಟ್ಟಿ ಸಲ್ಲಿಕೆ

ನವದೆಹಲಿ (ಪಿಟಿಐ): 2022ರ ಅಕ್ಟೋಬರ್‌ನಲ್ಲಿ ಸಂಭವಿಸಿದ್ದ ಕೊಯಮತ್ತೂರು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ಆರು ಆರೋಪಿಗಳ ವಿರುದ್ಧ ಆರೋಪಪಟ್ಟಿಯನ್ನು ಗುರುವಾರ ಸಲ್ಲಿಸಿದೆ ಎಂದು ಎನ್‌ಐಎ ಹೇಳಿದೆ.

ಬನ್ನೇರುಘಟ್ಟ: ಸುವರ್ಣಳಿಗೆ ಜನಿಸಿದ ಮರಿ ಗರ್ಭದಲ್ಲಿಯೇ ಸಾವು

ಪ್ರಜಾವಾಣಿ ವಾರ್ತೆ



ಬನ್ನೇರುಘಟ್ಟ ಜೈವಿಕ ಉದ್ಯಾನದ ಆನೆ ಸುವರ್ಣಳನ್ನು ಪರೀಕ್ಷಿಸುತ್ತಿರುವ ಉದ್ಯಾನದ ವೈದ್ಯಕೀಯ ತಂಡ



ಗರ್ಭದಲ್ಲೇ ಮೃತಪಟ್ಟ ಮರಿ

ಆನೇಕಲ್ : ಬನ್ನೇರುಘಟ್ಟ ಜೈವಿಕ ಉದ್ಯಾನದ ಸುವರ್ಣ ಹೆಸರಿನ ಹೆಣ್ಣಾನೆಗೆ ಗುರುವಾರ ಶಸ್ತ್ರ ಚಿಕಿತ್ಸೆ ಮೂಲಕ ಪ್ರಸವ ಮಾಡಿಸಲಾಗಿದ್ದು, ತಾಯಿಯ ಗರ್ಭದಲ್ಲೇ ಮರಿ ಮೃತಪಟ್ಟಿದೆ.

ಸುವರ್ಣಗೆ ಜನಿಸಿದ ಹತ್ತನೇ ಮರಿ ಇದಾಗಿತ್ತು. ಮರಿಯು ತಾಯಿಯ ಗರ್ಭದಲ್ಲೇ ಸತ್ತು ಹೋಗಿತ್ತು. ಇದರಿಂದ ವೈದ್ಯರು ಶಸ್ತ್ರಚಿಕಿತ್ಸೆ ನಡೆಸಿ, ಮರಿಯನ್ನು ಹೊರತೆಗೆದರು.

49 ವರ್ಷದ ಆನೆ ಸುವರ್ಣ, ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿ ಒಂಬತ್ತು ಮರಿಗಳಿಗೆ ಜನ್ಮ ನೀಡಿದ್ದು, ಅವು ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿಯೇ ಬೆಳೆದಿವೆ. ಸಾಮಾನ್ಯವಾಗಿ 23-24 ತಿಂಗಳಿಗೆ ಆನೆ ಮರಿ ಹಾಕುತ್ತದೆ. ಪ್ರಸ್ತುತ ಸುವರ್ಣ ಗರ್ಭ ಧರಿಸಿ ಅಂದಾಜು 23 ತಿಂಗಳಿಗೂ ಹೆಚ್ಚು ಅವಧಿಯಾಗಿತ್ತು. ಕಳೆದ ಎರಡು ದಿನಗಳಿಂದ ಆನೆ ಪ್ರಸವ ವೇದನೆ ಅನುಭವಿಸುತ್ತಿತ್ತು. ಮರಿಯ ಕಾಲುಗಳು ಹಿಮ್ಮುಖವಾಗಿದ್ದರಿಂದ ಹೆರಿಗೆಗೆ ತೊಂದರೆಯಾಗಿತ್ತು ಎಂದು ವೈದ್ಯರು ತಿಳಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ತಜ್ಞ ವೈದ್ಯರಾದ ಡಾ.ಕೃಷ್ಣಮೂರ್ತಿ, ಡಾ.ಹೊನ್ನಪ್ಪ, ಡಾ.ವಸಂತ್‌ಶೆಟ್ಟಿ, ಡಾ.ಉಮಾಶಂಕರ್, ಡಾ.ವಿಜಯಕುಮಾರ್, ಡಾ.ಮಂಜುನಾಥ್ ವೈದ್ಯರ ತಂಡವು ಚರ್ಚೆ ನಡೆಸಿ, ಅರವಳಿಕೆಗೆ ಒಳಪಡಿಸಿ ಶಸ್ತ್ರಚಿಕಿತ್ಸೆ ಮೂಲಕ ಮರಿಯನ್ನು ಹೊರ ತೆಗೆಯಲಾಗಿದೆ. ತಾಯಿ ಸುವರ್ಣಳನ್ನು ವೈದ್ಯರು ಆರೈಕೆ ಮಾಡುತ್ತಿದ್ದಾರೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಸುನೀಲ್ ಪನ್ವಾರ್ ತಿಳಿಸಿದ್ದಾರೆ.

ಉದ್ಯಾನದ ವೈದ್ಯ ಡಾ.ಉಮಾಶಂಕರ್ ಮಾತನಾಡಿ, ಸುವರ್ಣ ಆನೆ ಅಪರೂಪದ ಆನೆಯಾಗಿದೆ. ಸಾಮಾನ್ಯವಾಗಿ ಆನೆಗಳು 3-4 ಮರಿಗಳನ್ನು ಹಾಕುತ್ತವೆ. ಆದರೆ ಸುವರ್ಣ 10 ಮರಿಗಳಿಗೆ ಜನ್ಮ ನೀಡಿರುವುದು ದಾಖಲೆಯಾಗಿದೆ ಎಂದರು.

ಬನ್ನೇರುಘಟ್ಟ ಜೈವಿಕ ಉದ್ಯಾನದ ಆನೆ ಸುವರ್ಣ, ವನಿತಾ, ಶಿವ, ಗೋಕುಲ, ವನಶ್ರೀ, ಗಜೇಂದ್ರ, ಶ್ರೀರಾಮ, ಭವಾನಿ, ಸುರೇಶ, ಸುಧಾ ಎಂಬ ಆನೆಗಳಿಗೆ ಜನ್ಮ ನೀಡಿದ್ದಾಳೆ. ಒಂದು ಆನೆ ಮೈಸೂರು ಮೃಗಾಲಯದಲ್ಲಿದೆ. ವನಿತಾ ಮತ್ತು ಗೋಕುಲ ಮೃತಪಟ್ಟಿವೆ. ಉಳಿದ ಆರು ಮರಿಗಳು ಬನ್ನೇರುಘಟ್ಟ ಜೈವಿಕ ಉದ್ಯಾನದಲ್ಲಿವೆ.

13,850 ಅಡಿ ಎತ್ತರದ ಪರ್ವತ ಏರಿದ ಬಾಲಕಿ

ಪ್ರಜಾವಾಣಿ ವಾರ್ತೆ



ಶ್ರೀಕನಸು

ಬೆಂಗಳೂರು: ಇಲ್ಲಿನ ಹನ್ನೊಂದು ವರ್ಷದ ಬಾಲಕಿಯೊಬ್ಬಳು 13,850 ಅಡಿ ಎತ್ತರದ ಹಿಮಾಲಯದ ಸರ್ಪಾಸ್ ಪರ್ವತವನ್ನು ಏರಿದ್ದಾಳೆ.

ಕೋರಮಂಗಲದ ಚಿನ್ಮಯ ವಿದ್ಯಾಲಯದಲ್ಲಿ ಆರನೇ ತರಗತಿ ಓದುತ್ತಿರುವ ಶ್ರೀಕನಸು ಈ ಸಾಧನೆ ಮಾಡಿದ್ದು, ಇವಳು ವೀರಕಪುತ್ರ ಶ್ರೀನಿವಾಸ ಹಾಗೂ ಶೋಭಾ ದಂಪತಿಯ ಪುತ್ರಿಯಾಗಿದ್ದಾಳೆ.

‘ಕೈಲಾಸರಥ ಎಂಬ ಟ್ರೆಕ್ಕಿಂಗ್ ಸಂಸ್ಥೆ ಹಮ್ಮಿಕೊಂಡಿದ್ದ ಟ್ರೆಕ್ಕಿಂಗ್ ತಂಡದಲ್ಲಿ ನಾವು ಪಾಲ್ಗೊಂಡಿದ್ದೆವು. ಸಂಸ್ಥೆಯ ಕರ್ನಾಟಕ ಚಾಪ್ಟರ್‌ನ ನೇತೃತ್ವವನ್ನು ರಂಗಕರ್ಮಿ ಕಿರಣ್ ವಟಿ ವಹಿಸಿಕೊಂಡಿದ್ದರು. ಹಿಮಾಚಲ ಪ್ರದೇಶದ ಕಸೋಲ್‌ನಿಂದ ಹೊರಟ ನಮ್ಮ ಟ್ರೆಕ್ಕಿಂಗ್ ತಂಡ, ಮೊದಲ ದಿನ ಗ್ರಹಣ್‌ಗೆ ತಲುಪಿತು. ಎರಡನೆ ದಿನ ಪದ್ರಿ, ಮೂರನೆ ದಿನ ಮಿಂಜ್ ತಾಚ್ ಎಂಬ 11,541 ಅಡಿ ಎತ್ತರದ ಸ್ಥಳ ತಲುಪಿತು. ಸರ್ಪಾಸ್‌ಗೆ ಹೋಗುವ ಹಾದಿ ನಿಜಕ್ಕೂ ಅಪಾಯಕಾರಿಯಾಗಿತ್ತು’ ಎಂದು ವೀರಕಪುತ್ರ ಶ್ರೀನಿವಾಸ ತಿಳಿಸಿದ್ದಾರೆ.

‘ಎಲ್ಲಾ ಕಷ್ಟಗಳನ್ನು ಧೈರ್ಯವಾಗಿ ಎದುರಿಸಿ, ತಂಡದ ಎಲ್ಲರಿಗಿಂತ ಮೊದಲು ಸರ್ಪಾಸ್ ಎನ್ನುವ ಹಿಮಾಲಯದ ಅತ್ಯಂತ ಸುಂದರ ಸರೋವರ ಸ್ಥಳವನ್ನು ಶ್ರೀಕನಸು ತಲುಪಿದಳು’ ಎಂದು ಹೇಳಿದ್ದಾರೆ.

₹ 30 ಲಕ್ಷದ ಗಾಂಜಾ ಜಪ್ತಿ

ಬೆಂಗಳೂರು: ಒಡಿಶಾದಿಂದ ರೈಲಿನಲ್ಲಿ ಗಾಂಜಾ ತಂದು ನಗರದ ವಿವಿಧೆಡೆ ಪೆಡ್ಲರ್‌ಗಳಿಗೆ ಪೂರೈಸುತ್ತಿದ್ದ ಆರೋಪಿಯನ್ನು ಕಾಟನ್‌ಪೇಟೆ ಪೊಲೀಸರು ಬಂಧಿಸಿದ್ದಾರೆ.

ಒಡಿಶಾದ ಕಂದಮಲ್ ಜಿಲ್ಲೆ ಸಾರುಕೋಯಿ ಗ್ರಾಮದ ರಾಜ್ ಕಿಶೋರ್ ಸಹಾನಿ (26) ಬಂಧಿತ.

‘ಬಂಧಿತನಿಂದ ₹ 30 ಲಕ್ಷ ಮೌಲ್ಯದ 70 ಕೆ.ಜಿ. ಗಾಂಜಾ, ಒಂದು ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಾರಿಗೆ ನೌಕರರ ಮುಷ್ಕರ: ಪಿಐಎಲ್ ವಿಲೇವಾರಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನೌಕರರ ಸಮಾನ ಮನಸ್ಕರ ವೇದಿಕೆ ನಿಗದಿಪಡಿಸಿದ್ದ ಮುಷ್ಕರದ ದಿನಾಂಕ ಈಗಾಗಲೇ ಮುಗಿದಿರುವ ಕಾರಣ ಅರ್ಜಿಯು ವಿಚಾರಣೆಯ ಮಾನ್ಯತೆ ಕಳೆದುಕೊಂಡಿದೆ’ ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ಈ ಸಂಬಂಧ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ವಿಲೇವಾರಿ ಮಾಡಿದೆ.

‘ಮುಷ್ಕರ ನಡೆಸದಂತೆ ಸಾರಿಗೆ ನಿಗಮಗಳ ನೌಕರರ ಸಮಾನ ಮನಸ್ಕರ ವೇದಿಕೆಗೆ ನಿರ್ದೇಶಿಸಬೇಕು’ ಎಂದು ಕೋರಿ ತೀರ್ಥಹಳ್ಳಿ ತಾಲ್ಲೂಕಿನ ಹಾರೋಗೋಳಿಗೆ ಗ್ರಾಮದ ಎಚ್.ಎಂ. ವೆಂಕಟೇಶ್ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರಿ ವಕೀಲರು, ‘ಮುಷ್ಕರಕ್ಕೆ ಸಂಬಂಧಿಸಿದಂತೆ ಸಾರಿಗೆ ನೌಕರರ ಸಂಘಗಳು ಮತ್ತು ಕಾರ್ಮಿಕ ಇಲಾಖೆಯೊಂದಿಗೆ ನಡೆದ ಎರಡನೇ ಸಂಧಾನ ಸಭೆ ವಿಫಲವಾಗಿದೆ’ ಎಂದು ಅವರು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಸಭೆಯ ನಿರ್ಧಾರಗಳ ಕುರಿತ ವರದಿಯನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿ’ ಎಂದು ಸೂಚಿಸಿ ‘ಈ, ಅರ್ಜಿಯಲ್ಲಿ ವಿಚಾರಣೆಗೆ ಪರಿಗಣಿಸಬಹುದಾದ ಯಾವುದೇ ಅಂಶಗಳು ಬಾಕಿ ಉಳಿದಿಲ್ಲ’ ಎಂದು ಇತ್ಯರ್ಥಪಡಿಸಿತು.


DAMRO
South Asia's Largest Furniture Manufacturer
Summer SALE
SAVE ₹22,000
Manila (3 + 1 + 1 Seater) NOW ₹60,000 EMI ₹5,000
HYDRAULIC STORAGE BED
Buy Anjela3 Piece Bedroom Set (Bed + Wardrobe + Dresser) & Get FREE Sinclair Single Seater Recliner Worth ₹ 28,000
SAVE ₹20,000
Haily Recliner Sofa (3 + 1R + 1R) NOW ₹67,000 EMI ₹5,583
SAVE ₹27,000
Blake Recliner Sofa (3RR + 1R + 1R) (Colour Code Pv06)* NOW ₹90,000 EMI ₹7,500
GENUINE LEATHER
SAVE ₹20,000
Midland (Corner Sofa) NOW ₹1,15,000 EMI ₹9,583
SAVE ₹12,000
Clifton (3 + 2 Seater) NOW ₹76,000 EMI ₹6,333
DAMRO MATTRESSES
Buy Spring Mattress & Get Free Two Pillows
BUY Modular Kitchen & Get Brisbane 6 Seater Dining Table Set FREE*
Combo Offer
GENUINE LEATHER
Proxima (3 + 2 Seater) + Canton 4 Seater Dining Table Set
NOW ₹89,000 EMI ₹7,417
Combo Offer
Mercury 2 Piece Bedroom Set (Queen Bed + 3D Wardrobe) NOW ₹27,900 EMI ₹2,325
Combo Offer
Pearl 4 Seater Dining Table + Dining Cabinet
NOW ₹27,900 EMI ₹2,325
(DKDC 001)
32% OFF
Dillon Single Seater Recliner NOW ₹12,900
50% OFF
TV Stand (KAV 071) NOW ₹5,690
Bed (BKBP 022) NOW ₹10,090
37% OFF
Dresser (GKDL 001) NOW ₹4,990
40% OFF
Executive Table (KWT 048 + KWT 049) NOW ₹8,990
14% OFF
High Back Chair (OCH 014) NOW ₹5,990
NOW IN MANTRI SQUARE MALL (MALLESHWARAM)
BANGALORE : JP NAGAR - Tel: 080 26585941/42, MARATHAHALLI - Tel: 9611022523, ELECTRONIC CITY - Tel 080 43705882, NAGARBHAVI - Tel: 080 23240240,
BANASWADI - Tel: 080 4152 3335. RAJAJINAGAR - Tel: 080 23132297, HEBBAL - Tel : 7348835653, MANTRI SQUARE MALL - Tel: 080 30160018,
BELAGAVI - Tel : 0831 2478223. MANGALORE - Tel: 0824 4251 388. UDUPI - Tel: 0820 2528788. KUNDAPURA - Tel: 08254 263888.
HASSAN - Tel: 08172 246595, MYSORE - Tel: 0821 4268646, BALLARI - Tel: 08392 268944. HUBLI - Tel: 0836 2363435, KALABURAGI - Tel: 08472 235852.
www.damroindia.com
NO COST EMI
BAJAJ FINSERV EMI
HDFC BANK CREDIT CARD & EMI
OPEN ON SUNDAYS Conditions Apply

‘ಅಬಕಾರಿ ಹಗರಣ: ಸಿಸೋಡಿಯಾ ‘ಕಿಂಗ್ ಪಿನ್’

ನವದೆಹಲಿ(ಪಿಟಿಐ): ‘ದೆಹಲಿಯ ಮಾಜಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರು ದೆಹಲಿ ಅಬಕಾರಿ ನೀತಿ ಹಗರಣದ ಪ್ರಮುಖ ಸೂತ್ರಧಾರಿ. ಆರ್ಥಿಕ ಅಪರಾಧ ಚಟುವಟಿಕೆಯಲ್ಲಿ ಶಾಮೀಲಾಗಿದ್ದಾರೆ’ ಎಂದು ಸಿಬಿಐ, ಗುರುವಾರ ದೆಹಲಿ ಹೈಕೋರ್ಟ್‌ಗೆ ತಿಳಿಸಿದೆ.

ಸಿಸೋಡಿಯಾ ಸಲ್ಲಿಸಿರುವ ಜಾಮೀನು ಅರ್ಜಿಗೆ ಆಕ್ಷೇಪ ವ್ಯಕ್ತಪಡಿಸಿರುವ ಸಿಬಿಐ, ಈ ಸಂಬಂಧ ನ್ಯಾಯಾಲಯಕ್ಕೆ ಲಿಖಿತ ಪ್ರತಿಕ್ರಿಯೆ ಸಲ್ಲಿಸಿದೆ.

ಸಿಸೋಡಿಯಾ ಪರ ವಕೀಲರ ವಾದ ಆಲಿಸಿದ ಬಳಿಕ ನ್ಯಾಯಮೂರ್ತಿ ದಿನೇಶ್ ಕುಮಾರ್ ಶರ್ಮಾ ಅವರು ಈ ಸಂಬಂಧ ಏಪ್ರಿಲ್ 26ರಂದು ವಿವರವಾದ ಪ್ರತಿಕ್ರಿಯೆ ಸಲ್ಲಿಸುವಂತೆ ಸಿಬಿಐ ಪರ ವಕೀಲರಿಗೆ ನಿರ್ದೇಶಿಸಿದ್ದಾರೆ.

ತರಬೇತುದಾರನಿಗೆ ಮೊಣಕಾಲು ಬದಲಿ ಶಸ್ತ್ರಚಿಕಿತ್ಸೆ

ಬೆಂಗಳೂರು: ರಸ್ತೆ ಅಪಘಾತದಲ್ಲಿ ಗಂಭೀರ ಗಾಯಗೊಂಡು, ಮೊಣಕಾಲಿಗೆ ಹಾನಿ ಮಾಡಿಕೊಂಡಿದ್ದ ಇಲ್ಲಿನ 30 ವರ್ಷದ ಜಿಮ್ ತರಬೇತುದಾರನಿಗೆ ಫೋರ್ಟಿಸ್ ಆಸ್ಪತ್ರೆ ವೈದ್ಯರು ಯಶಸ್ವಿಯಾಗಿ ಮೊಣಕಾಲು ಬದಲಿ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ಮೂರು ವರ್ಷದ ಹಿಂದೆ ಗಾಯಗೊಂಡಿದ್ದ ಅವರು, ಚಿಕಿತ್ಸೆಗಾಗಿ ಹಲವು ಆಸ್ಪತ್ರೆಗಳಿಗೆ ಅಲೆದಿದ್ದರು. ಸಮಸ್ಯೆ ಸರಿಯಾಗದಿದ್ದರಿಂದ ಅವರು ಗಾಲಿ ಕುರ್ಚಿ ಅವಲಂಬಿಸಿದ್ದರು. ಫೋರ್ಟಿಸ್ ಆಸ್ಪತ್ರೆಯ ಡಾ. ರಘು ನಾಗರಾಜ್ ನೇತೃತ್ವದ ವೈದ್ಯರ ತಂಡ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿದೆ.

‘ಸತತ ಎರಡೂವರೆ ಗಂಟೆ ನಡೆದ ಶಸ್ತ್ರಚಿಕಿತ್ಸೆಯಲ್ಲಿ ಮೊಣಕಾಲಿನ ಕೀಲು ತೆಗೆದು, ಕೃತಕ ಮೊಣಕಾಲಿನ ಕೀಲು ಜೋಡಿಸಲಾಯಿತು. ಅಪಘಾತ ನಡೆದು ಮೂರು ವರ್ಷದ ಬಳಿಕ ಈ ರೀತಿಯ ಶಸ್ತ್ರಚಿಕಿತ್ಸೆ ಸವಾಲಿನ ಕೆಲಸ. ಈ ಅವಧಿಯೊಳಗಾಗಲೇ ಕಾಲಿನ ಮೀನುಖಂಡ ಸೇರಿದಂತೆ ಇತರೆ ನರ ಹಾಗೂ ಮೂಳೆಗಳು ತನ್ನ ಅಸ್ತಿತ್ವವನ್ನೇ ಕಳೆದುಕೊಂಡು ಸೊರಗಿರುತ್ತವೆ. ಶಸ್ತ್ರಚಿಕಿತ್ಸೆಯಿಂದ ಮೊಣಕಾಲಿನ ಕೆಳಗಿನ ಭಾಗಕ್ಕೂ ಜೀವ ನೀಡಲಾಗಿದೆ’ ಎಂದು ವೈದ್ಯರು ತಿಳಿಸಿದರು. ‘ವ್ಯಕ್ತಿಯು ಈಗ ಗಾಲಿ ಕುರ್ಚಿಯನ್ನು ಬಿಟ್ಟು, ಊರುಗೋಲಿನ ನೆರವಿನಿಂದ ನಡೆಯುತ್ತಿದ್ದಾರೆ. ಮುಂದೆ ಯಾವುದೇ ಸಹಾಯವಿಲ್ಲದೆ ನಡೆಯಲಿದ್ದಾರೆ’ ಎಂದು ವಿವರಿಸಿದರು.



ಫ್ರೇಜರ್ ಟೌನ್ ಎಂಎಂ ರಸ್ತೆಯ ಪಾದಚಾರಿ ಮಾರ್ಗದಲ್ಲಿ ರಂಜಾನ್ ಪ್ರಯುಕ್ತ ಹಾಕಿಕೊಂಡಿರುವ ಹೋಟೆಲ್ ತೆರವುಗೊಳಿಸಬೇಕೆಂದು ಸ್ಥಳೀಯರು ಬಿಬಿಎಂಪಿ ಅಧಿಕಾರಿಗಳಿಗೆ ಒತ್ತಾಯಿಸಿದರು

ಬಿಬಿಎಂಪಿ, ಪೊಲೀಸರ ನೇತೃತ್ವದಲ್ಲಿ ಕಾರ್ಯಾಚರಣೆ

ಫ್ರೇಜರ್ ಟೌನ್: ಆಹಾರ ಮೇಳ ಮಳಿಗೆಗಳ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಂಜಾನ್ ಮಾಸದ ಅಂಗವಾಗಿ ಫ್ರೇಜರ್ ಟೌನ್‌ನಲ್ಲಿ ನಡೆಯುತ್ತಿರುವ ಆಹಾರ ಮೇಳದಲ್ಲಿ ರಸ್ತೆ, ಪಾದಚಾರಿಗಳನ್ನು ಅತಿಕ್ರಮಿಸಿಕೊಂಡು ನಿರ್ಮಿಸಿದ್ದ ಮಳಿಗೆಗಳನ್ನು ಬೆಂಗಳೂರು ಮಹಾನಗರ ಪಾಲಿಕೆ ಸಿಬ್ಬಂದಿ ಹಾಗೂ ಪೊಲೀಸರ ನೇತೃತ್ವದಲ್ಲಿ ಗುರುವಾರ ಮಧ್ಯಾಹ್ನ ನಡೆದ ಕಾರ್ಯಾಚರಣೆಯಲ್ಲಿ ತೆರವುಗೊಳಿಸಲಾಯಿತು.

ಮಸೀದಿ ರಸ್ತೆಯಲ್ಲಿರುವ ಅಂಗಡಿ–ಮುಂಗಟ್ಟುಗಳು ಹೋಟೆಲ್‌ಗಳ ಎದುರಿನ ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡು ಮೇಳದ ಮಳಿಗೆಗಳನ್ನು ನಿರ್ಮಿಸಿಕೊಳ್ಳಲಾಗಿತ್ತು. ಇನ್ನು ಕೆಲವು ಮಾಲೀಕರು ಹೊರಗಿನ ವ್ಯಾಪಾರಿಗಳಿಗೆ ಬಾಡಿಗೆಗೆ ಸ್ಥಳ ನೀಡಿದ್ದರು. ಅಂತಹ ಅನಧಿಕೃತ ಮಳಿಗೆಗಳನ್ನು ಪೊಲೀಸರು ಹಾಗೂ ಬಿಬಿಎಂಪಿ ಸಿಬ್ಬಂದಿ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ತೆರವುಗೊಳಿಸಲಾಯಿತು. ಕಾರ್ಯಾಚರಣೆ ವೇಳೆ ಸಿಬ್ಬಂದಿ ಹಾಗೂ ವ್ಯಾಪಾರಸ್ಥರ ನಡುವೆ ವಾಗ್ವಾದ ನಡೆಯಿತು.

‘ಒತ್ತುವರಿ ಮಾಡಿಕೊಂಡು ಮಳಿಗೆ ನಿರ್ಮಿಸಿಕೊಂಡು ವ್ಯಾಪಾರ ನಡೆಸಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸರು ಎಚ್ಚರಿಸಿದರು.



ಹೋಟೆಲ್‌ಗಳನ್ನು ಬಿಬಿಎಂಪಿ ಅಧಿಕಾರಿಗಳು ಮತ್ತು ಪೊಲೀಸ್ ಸಿಬ್ಬಂದಿಗಳು ತೆರವುಗೊಳಿಸಿದರು — ಪ್ರಜಾವಾಣಿ ಚಿತ್ರಗಳು

‘ಆಹಾರ ಮೇಳದಿಂದ ಫ್ರೇಜರ್ ಟೌನ್‌ನ ನಿವಾಸಿಗಳಿಗೆ ತೊಂದರೆಯಾಗಿದೆ’ ಎಂದು ಕ್ಷೇಮಾಭಿವೃದ್ಧಿ ಒಕ್ಕೂಟದ ಸದಸ್ಯರು ದೂರಿದ್ದರು. ಮೇಳದ ವಿರುದ್ಧ ಆನ್‌ಲೈನ್ ಅಭಿಯಾನ ಆರಂಭಿಸಿದ್ದರು. ಅನಧಿಕೃತ ಮಳಿಗೆದಾರರ ವಿರುದ್ಧ ಕ್ರಮ ಕೈಗೊಳ್ಳದಿದ್ದರೆ ಕೋರ್ಟ್‌ಗೆ ತೆರಳಲಾಗುವುದು ಎಂದೂ ಎಚ್ಚರಿಸಿದ್ದರು.

ಬಿಬಿಎಂಪಿಗೆ ಹಲವು ಬಾರಿ ಮನವಿ ಸಲ್ಲಿಸಿದ್ದರು. ಮಳಿಗೆ ತೆರವು ಮಾಡಿರಲಿಲ್ಲ. ಕ್ಷೇಮಾಭಿವೃದ್ಧಿ ಒಕ್ಕೂಟದ ಸದಸ್ಯರು ಪಾಲಿಕೆಗೆ ಮುತ್ತಿಗೆ ಹಾಕಲಾಗುವುದು ಎಂದು ಎಚ್ಚರಿಸಿದ್ದರು.

‘ಫ್ರೇಜರ್ ಟೌನ್ ರಸ್ತೆಗಳು ತ್ಯಾಜ್ಯದ ತಾಣವಾಗಿವೆ. ಎಲ್ಲೆಂದರಲ್ಲಿ ಪ್ಲೇಟ್‌ಗಳು ಬಿದ್ದಿವೆ. ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ಗ್ರಾಹಕರು ಬರುತ್ತಿರುವ ಕಾರಣ ಸ್ಥಳೀಯರಿಗೆ ನೆಮ್ಮದಿ ಇಲ್ಲವಾಗಿದೆ. ಪ್ರತಿನಿತ್ಯ ಮಾಂಸದ ಖಾದ್ಯ ತಯಾರಿಕೆಗೆ 3 ಟನ್‌ನಷ್ಟು ಸೌದೆ ಉರಿಸಲಾಗುತ್ತಿದೆ. ಮಕ್ಕಳು, ವೃದ್ಧರಿಗೆ ಉಸಿರಾಟದ ಸಮಸ್ಯೆ ಎದುರಾಗಿದೆ. ಅನಧಿಕೃತವಾಗಿ ವಿದ್ಯುತ್ ಸಂಪರ್ಕ ಎಳೆದುಕೊಳ್ಳಲಾಗಿದೆ’ ಎಂದು ಒಕ್ಕೂಟದ ಸದಸ್ಯ ಸೌದ್ ದಸ್ತಗೀರ್ ದೂರಿದ್ದರು.

ರಜೆ ಸಿಕ್ಕಿಲ್ಲವೆಂದು ಗಾರ್ಮೆಂಟ್ಸ್ ಉದ್ಯೋಗಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚೊಕ್ಕಸಂದ್ರದ ಮಾರುತಿ ಬಡಾವಣೆಯ ಪ್ರೇಮ್‌ಕುಮಾರ್ ಹಾಸ್ಟೆಲ್‌ನಲ್ಲಿ ನೆಲೆಸಿದ್ದ ಬಿಹಾರದ ರೀಮಾ ಕುಮಾರಿ (22) ಎಂಬ ಯುವತಿ ಹಾಸ್ಟೆಲ್‌ನ ಕಟ್ಟಡದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

7 ತಿಂಗಳ ಹಿಂದೆ ಚೊಕ್ಕಸಂದ್ರದ ಶಾಹಿ ಎಕ್ಸ್‌ಪೋರ್ಟ್ ಯೂನಿಟ್ –20 ಗಾರ್ಮೆಂಟ್ಸ್‌ನಲ್ಲಿ ಟೈಲರಿಂಗ್ ಕೆಲಸಕ್ಕೆ ಸೇರಿಕೊಂಡಿದ್ದರು. ಆಕೆ ಬುಧವಾರ ಹಾಸ್ಟೆಲ್ ಕಟ್ಟಡದಿಂದ ಜಿಗಿದು ಆಕೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

‘ಪಾಟ್ನಾದಲ್ಲಿ ಟೈಲರಿಂಗ್ ತರಬೇತಿ ಪಡೆದಿದ್ದ ರೀಮಾ, ಕೆಲಸ ಅರಸಿ ರಾಜಧಾನಿಗೆ ಬಂದಿದ್ದರು. ಚೊಕ್ಕಸಂದ್ರದ ಗಾರ್ಮೆಂಟ್ಸ್‌ನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದರು. ಗಾರ್ಮೆಂಟ್ಸ್‌ನ ಮಾಲೀಕರು ರಜೆ ನೀಡದೇ ಮಾನಸಿಕ ಕಿರುಕುಳ ನೀಡುತ್ತಿದ್ದರು. ಇದರಿಂದ ಆಕೆ ಊರಿಗೆ ತೆರಳಲೂ ಸಾಧ್ಯವಾಗುತ್ತಿರಲಿಲ್ಲ. ರಜೆ ನೀಡುತ್ತಿಲ್ಲ ಎಂದು ಪದೇ ಪದೇ ನಮ್ಮ ಬಳಿ ಹೇಳಿಕೊಳ್ಳುತ್ತಿದ್ದಳು. ರಜೆ ನೀಡದ ಕಾರಣಕ್ಕೆ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ’ ಎಂದು ಸಿಬ್ಬಂದಿ ಆರೋಪಿಸಿದ್ದಾರೆ.

ಗಾರ್ಮೆಂಟ್ಸ್ ನೌಕರರ ಒಕ್ಕೂಟದ ಕಾರ್ಯದರ್ಶಿ ಸರೋಜಾ ಅವರು ಸ್ಥಳಕ್ಕೆ ತೆರಳಿ ಘಟನೆಯ ಮಾಹಿತಿ ಪಡೆದುಕೊಂಡಿದ್ದಾರೆ.

ಆಕೆಯ ಪೋಷಕರು ಬಿಹಾರದಿಂದ ನಗರಕ್ಕೆ ಬಂದಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ. ಪೀಣ್ಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಆರಂಭದಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಳ್ಳಲು ಹಿಂದೇಟು ಹಾಕಿದ್ದರು. ಹಿರಿಯ ಅಧಿಕಾರಿಗಳ ಗಮನಕ್ಕೆ ತಂದ ಬಳಿಕ ದೂರು ದಾಖಲಿಸಿಕೊಂಡಿದ್ದಾರೆ. ಗಾರ್ಮೆಂಟ್ಸ್‌ನವರು ರಜೆ ನೀಡದ ಕಾರಣಕ್ಕೆ ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಆರೋಪಿಸಿ ಪೋಷಕರು ದೂರು ನೀಡಿದ್ದಾರೆ’ ಎಂದು ಕಾರ್ಮಿಕರೊಬ್ಬರು ತಿಳಿಸಿದ್ದಾರೆ.

ವಿಂಗ್ ಕಮಾಂಡರ್ ದೀಪಿಕಾಗೆ ಶೌರ್ಯ ಪ್ರಶಸ್ತಿ

ನವದೆಹಲಿ: ವಿಂಗ್ ಕಮಾಂಡರ್ ದೀಪಿಕಾ ಮಿಶ್ರಾ ಅವರು ಶೌರ್ಯ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಈ ಗೌರವಕ್ಕೆ ಪಾತ್ರರಾದ ಭಾರತೀಯ ವಾಯುಪಡೆಯ ಮೊದಲ ಮಹಿಳಾ ಅಧಿಕಾರಿ ಎಂಬ ಹೆಗ್ಗಳಿಕೆ ದೀಪಿಕಾ ಅವರದು.

ವಾಯುಪಡೆ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿ.ಆರ್.ಚೌಧರಿ ಅವರು ಇಲ್ಲಿನ ಸುಬ್ರತೊ ಪಾರ್ಕ್‌ನಲ್ಲಿರುವ ವಾಯುಪಡೆ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ದೀಪಿಕಾ ಅವರಿಗೆ ‘ವಾಯು ಸೇನಾ ಪದಕ’ ಪ್ರದಾನ ಮಾಡಿದರು.

ರಾಜಸ್ಥಾನ ಮೂಲದ ದೀಪಿಕಾ ಅವರು ಹೆಲಿಕಾಪ್ಟರ್ ಪೈಲಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಮಧ್ಯಪ್ರದೇಶದಲ್ಲಿ ಪ್ರವಾಹ ಸಂದರ್ಭದಲ್ಲಿ ಕೈಗೊಂಡಿದ್ದ ರಕ್ಷಣಾ ಕಾರ್ಯದ ವೇಳೆ ಅಪ್ರತಿಮ ಧೈರ್ಯ ಪ್ರದರ್ಶಿಸಿದ್ದಕ್ಕಾಗಿ ದೀಪಿಕಾ ಅವರಿಗೆ ಈ ಪುರಸ್ಕಾರ ನೀಡಲಾಗಿದೆ ಎಂದು ವಾಯುಪಡೆ ತಿಳಿಸಿದೆ.

ರಂಜಾನ್: ಕಳೆಗಟ್ಟಿದ ನಗರದ ಮಾರುಕಟ್ಟೆ ಖರೀದಿ ಜೋರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಸ್ಲಿಮರ ಪವಿತ್ರ ಹಬ್ಬ ‘ಈದ್ ಉಲ್ ಫಿತ್ರ್’ ಆಚರಣೆಗೆ ನಗರ ಸಜ್ಜಾಗಿದ್ದು, ಮಾರುಕಟ್ಟೆಗಳಲ್ಲಿ ಖರೀದಿ ಜೋರಾಗಿ ನಡೆಯುತ್ತಿದೆ.

ಇಸ್ಲಾಂ ಧರ್ಮದ ಪವಿತ್ರ ರಂಜಾನ್ ಮಾಸದ ರೋಜಾ (ಉಪವಾಸ) ವ್ರತಾಚರಣೆಯು ಚಂದ್ರನ ದರ್ಶನದಿಂದ ಆರಂಭಗೊಂಡು ಇದೀಗ ಚಂದ್ರನ ದರ್ಶನದಿಂದಲೇ ಮುಕ್ತಾಯಗೊಳ್ಳುತ್ತದೆ. ಶುಕ್ರವಾರ ಸಂಜೆ ಬಾನಂಗಳದಲ್ಲಿ ಚಂದ್ರ ಗೋಚರಿಸುವ ನಿರೀಕ್ಷೆ ಮುಸ್ಲಿಂ ಸಮುದಾಯದಲ್ಲಿದೆ. ಚಂದ್ರ ದರ್ಶನವಾದ ಮರುದಿನವೇ ಏಪ್ರಿಲ್ 22 (ಶನಿವಾರ) ಈದ್ ಉಲ್ ಫಿತ್ರ್ (ರಂಜಾನ್ ಹಬ್ಬ) ಆಚರಣೆ ನಡೆಯಲಿದೆ.

ಶಿವಾಜಿನಗರ, ಫ್ರೇಜರ್‌ಟೌನ್, ಹಲಸೂರು ಸೇರಿ ನಗರದಲ್ಲಿ ವಿವಿಧೆಡೆ ಇರುವ ಮಸೀದಿಗಳಿಗೆ ವಿದ್ಯುತ್ ದೀಪಗಳ ಅಲಂಕಾರ ಮಾಡಲಾಗಿದ್ದು, ರಾತ್ರಿ ವೇಳೆ ಆಕರ್ಷಕವಾಗಿ ಕಂಗೊಳಿಸುತ್ತವೆ. ಕಳೆದ 4–5 ದಿನಗಳಿಂದ ಶಿವಾಜಿನಗರ, ಕೆ.ಆರ್. ಮಾರುಕಟ್ಟೆ, ಯಶವಂತಪುರ, ಜಯನಗರ 4ನೇ ಕ್ರಾಸ್‌ನ ಮಾರುಕಟ್ಟೆಗಳಲ್ಲಿ ರಂಜಾನ್ ಹಬ್ಬದ ಸಿದ್ಧತೆಗೆ ಬಣ್ಣ, ಬಣ್ಣದ ಬಳೆಗಳು, ಬಟ್ಟೆಗಳು, ಚಪ್ಪಲಿ ಹಾಗೂ ಮನೆಬಳಕೆಯ ಆಲಂಕಾರಿಕ ವಸ್ತುಗಳು ಗಮನ ಸೆಳೆಯುತ್ತಿವೆ. ದೆಹಲಿ, ಮುಂಬೈ, ಸೂರತ್ ಹಾಗೂ ಅಹಮದಾಬಾದ್‌ನಿಂದ ತಂದ ಬಟ್ಟೆಗಳ ಖರೀದಿಗೆ ಹೆಚ್ಚು ಬೇಡಿಕೆಯಿದೆ.

‘ಹಬ್ಬದ ಪ್ರಯುಕ್ತ ಮಾರುಕಟ್ಟೆಯಲ್ಲಿ ಡ್ರೈ ಫ್ರುಟ್ಸ್, ಸೇರಿ ಹಬ್ಬದ ಅಗತ್ಯ ಸಾಮಾಗ್ರಿ ಖರೀದಿಸುವಲ್ಲಿ ಜನ ಮಗ್ನರಾಗಿದ್ದಾರೆ. ಇದರಿಂದ ಸಹಜವಾಗಿಯೇ ಮಾರುಕಟ್ಟೆಯಲ್ಲಿ ಜನದಟ್ಟಣೆ ಹೆಚ್ಚುತ್ತಿದೆ. ಶುಕ್ರವಾರ ಅಹೋರಾತ್ರಿ ಇನ್ನೂ ಬಿರುಸಿನಿಂದ ವಹಿವಾಟು ನಡೆಯುವ ನಿರೀಕ್ಷೆಯಿದೆ’ ಎಂದು ಕೆ.ಆರ್. ಮಾರುಕಟ್ಟೆಯ ವ್ಯಾಪಾರಿ ತೌಫಿಕ್ ತಿಳಿಸಿದರು.

‘ವಿಶ್ವದ ಹಲವು ದೇಶಗಳಲ್ಲಿ ಈದ್ ಉಲ್ ಫಿತ್ರ್ ಸಿಹಿ ತಿನಿಸಿನ ಹಬ್ಬ ಎಂದು ಪ್ರಸಿದ್ಧಿ ಪಡೆದಿದೆ. ಅಷ್ಟರ ಮಟ್ಟಿಗೆ ಈ ಹಬ್ಬಕ್ಕೂ ಸಿಹಿಗೂ ನಂಟಿದೆ. ಹಬ್ಬದ ದಿನ ಶೀರ್ ಖುರ್ಮಾ ತಯಾರಿಗೆ ಅವಶ್ಯವಿರುವ ಕಾಜು, ಬಾದಾಮಿ, ಪಿಸ್ತಾ, ಖೋವಾಗೆ ಹೆಚ್ಚು ಬೇಡಿಕೆ ಇದ್ದು, ಹಬ್ಬದ ಮುನ್ನ ದಿನ ಹೆಚ್ಚಿನ ಪ್ರಮಾಣದಲ್ಲಿ ಮಾರಾಟಗೊಳ್ಳುವ ನಿರೀಕ್ಷೆಯಿದೆ’ ಎನ್ನುತ್ತಾರೆ ರಸೆಲ್ ಮಾರುಕಟ್ಟೆ ವ್ಯಾಪಾರಿಗಳ ಸಂಘದ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಇದ್ರೀಸ್ ಚೌಧರಿ.

‘ಹೋದ ವರ್ಷಕ್ಕೆ ಹೋಲಿಕೆ ಮಾಡಿದರೆ ಈ ಬಾರಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲು ಸಿದ್ಧತೆ ನಡೆಯುತ್ತಿದೆ. ಹೀಗಾಗಿ, ಖರೀದಿಯೂ ಜೋರಾಗಿದೆ. ಈ ತಿಂಗಳಲ್ಲಿ ಉತ್ತಮ ವ್ಯಾಪಾರ–ವಹಿವಾಟು ನಡೆಯುತ್ತಿದ್ದು, ಉತ್ತಮ ಲಾಭವಾಗುವ ನಿರೀಕ್ಷೆ ಇದೆ’ ಎಂದು ಶಿವಾಜಿನಗರದ ಬಟ್ಟೆ ವ್ಯಾಪಾರಿ ಮುಬಾರಕ್ ಮಾಹಿತಿ ನೀಡಿದರು.

ಕರಾವಳಿ ಭಾಗದಲ್ಲಿ ನಾಳೆ ಈದ್ ಉಲ್ ಫಿತ್ರ

ಗುರುವಾರ ಸಂಜೆ ಚಂದ್ರನ ದರ್ಶನವಾಗದ ಹಿನ್ನೆಲೆಯಲ್ಲಿ ಶನಿವಾರ ರಾಜ್ಯದ ಪಶ್ಚಿಮ ಕರಾವಳಿ ತೀರದಲ್ಲಿ ರಂಜಾನ್ ಹಬ್ಬ ಆಚರಿಸಲಾಗುವುದು. ಶುಕ್ರವಾರ ಸಂಜೆ ಚಂದ್ರನ ದರ್ಶನವಾದರೆ ರಾಜ್ಯದಾದ್ಯಂತ ಶನಿವಾರವೇ ಈದ್-ಉಲ್-ಫಿತ್ರ್ ಆಚರಣೆ ಮಾಡಲಾಗುವುದು. ಇಲ್ಲದಿದ್ದರೆ ಭಾನುವಾರ ರಂಜಾನ್ ಆಚರಣೆ ನಡೆಯಲಿದೆ ಎಂದು ವಕ್ಫ್ ಮಂಡಳಿ ಅಧ್ಯಕ್ಷ ಮೌಲಾನಾ ಶಾಫಿ ಸಾ-ಅದಿ ತಿಳಿಸಿದ್ದಾರೆ.

‘ಸುಡಾನ್ ಕದನ ವಿರಾಮಕ್ಕೆ ವಿಶ್ವಸಂಸ್ಥೆ ಗಂಭೀರ ಯತ್ನ’

ವಿಶ್ವಸಂಸ್ಥೆ (ಪಿಟಿಐ): ಸುಡಾನ್‌ನಲ್ಲಿ ಸೇನೆ ಮತ್ತು ಅರೆಸೇನಾ ಪಡೆಗಳ ನಡುವಿನ ಸಂಘರ್ಷ ಶಮನಗೊಳಿಸಲು ಕದನ ವಿರಾಮ ಸ್ಥಾಪನೆಗಾಗಿ ವಿಶ್ವಸಂಸ್ಥೆಯು ಗಂಭೀರ ಪ್ರಯತ್ನಗಳನ್ನು ನಡೆಸುತ್ತಿದೆ ಎಂದು ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

ಕದನ ವಿರಾಮ ಸ್ಥಾಪನೆ ನಿಜಕ್ಕೂ ಅಗತ್ಯವಾಗಿದೆ. ಏಕೆಂದರೆ, ಈ ಸಮಯದಲ್ಲಿ ಕದನ ವಿರಾಮ ಜಾರಿಯಾಗದೆ, ಮಾನವೀಯ ಕಾರಿಡಾರ್‌ಗಳನ್ನು ತೆರೆಯದೇ ಜನರು ಹೊರಬರುವುದು ಸುರಕ್ಷಿತವಲ್ಲ ಎಂದು ಅವರು ಹೇಳಿದರು.

ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಗುಟೆರಸ್ ಅವರನ್ನು ಗುರುವಾರ ಭೇಟಿ ಮಾಡಿ, ಸುಡಾನ್ ಸಂಘರ್ಷ, ಉಕ್ರೇನ್ ಬಿಕ್ಕಟ್ಟು ಹಾಗೂ ಜಿ 20 ಭಾರತದ ಅಧ್ಯಕ್ಷತೆ ವಿಷಯವಾಗಿ ಚರ್ಚಿಸಿದರು.

ಸುಡಾನ್‌ನಲ್ಲಿ ಹಲವಾರು ಭಾರತೀಯರು ಸಿಲುಕಿದ್ದು, ಸಹಜವಾಗಿಯೇ ಈ ವಿಷಯಲ್ಲಿ ನಾವು ಹೆಚ್ಚು ಗಮನ ಕೊಟ್ಟಿದ್ದೇವೆ. ನಾಗರಿಕರ ರಕ್ಷಣೆಗಾಗಿ ಕದನ ವಿರಾಮ ಸ್ಥಾಪನೆ ಮತ್ತು ಮಾನವೀಯ ಕಾರಿಡಾರ್ ತೆರೆಯಲು ವಿಶ್ವಸಂಸ್ಥೆಯು ಅಗತ್ಯವಾಗಿ ಎಲ್ಲರೊಂದಿಗೂ ಮಾತುಕತೆ ನಡೆಸುತ್ತಿದೆ ಎಂದು ಜೈಶಂಕರ್ ಹೇಳಿದರು.

ಅಕ್ಸೆಂಚರ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಉಲ್ಲಾಸ್ ನಂಬಿಯಾರ್ ಹೇಳಿಕೆ

‘ಯಾವುದೇ ವಿಭಾಗ ನಿರ್ಲಕ್ಷಿಸುವಂತಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಅಪಾರ ಪ್ರಗತಿ ಸಾಧಿಸುತ್ತಿರುವುದು ವಾಸ್ತವ. ಆದರೆ, ಎಂಜಿನಿಯರಿಂಗ್‌ನ ಯಾವುದೇ ವಿಭಾಗಗಳನ್ನು ನಿರ್ಲಕ್ಷಿಸುವಂತಿಲ್ಲ. ಎಲ್ಲ ವಿಭಾಗಗಳಿಗೂ ಮಹತ್ವವಿದೆ’ ಎಂದು ಅಕ್ಸೆಂಚರ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಉಲ್ಲಾಸ್ ನಂಬಿಯಾರ್ ಹೇಳಿದರು.

ರಾಮಯ್ಯ ತಾಂತ್ರಿಕ ಸಂಸ್ಥೆಯಲ್ಲಿ ಗುರುವಾರ ಆಯೋಜಿಸಿದ್ದ ರಾಷ್ಟ್ರ ಮಟ್ಟದ ಕಾರ್ಯಯೋಜನೆಗಳ ಪ್ರದರ್ಶನ ಮತ್ತು ಸ್ಪರ್ಧೆ ಉದ್ಘಾಟಿಸಿ ಮಾತನಾಡಿದ ಅವರು, ‘ಇಂದಿನ ಯುಗದಲ್ಲಿ ಎಐ ತಂತ್ರಜ್ಞಾನಕ್ಕೆ ಹೆಚ್ಚಿನ ಪ್ರಾಮುಖ್ಯತೆ ಇದೆ. ಭಾರತದ ಜನಸಂಖ್ಯೆ ಹೆಚ್ಚಾಗಿದೆ. ಇದರಲ್ಲಿ ಶೇ 25ರಷ್ಟು ಯುವಕರಿದ್ದಾರೆ. ಇವರಿಂದ ದೇಶವು ಹೊಸ–ಹೊಸ ಆವಿಷ್ಕಾರಗಳನ್ನು ನಿರೀಕ್ಷಿಸುತ್ತಿದೆ. ಮುಂದಿನ 5–10 ವರ್ಷಗಳಲ್ಲಿ ಸಾಕಷ್ಟು ಬದಲಾವಣೆಗಳಾಗಲಿವೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ರಾಮಯ್ಯ ತಾಂತ್ರಿಕ ಸಂಸ್ಥೆಯಲ್ಲಿ ಗುರುವಾರ ಆಯೋಜಿಸಿದ್ದ ರಾಷ್ಟ್ರಮಟ್ಟದ ಕಾರ್ಯಯೋಜನೆಗಳ ಪ್ರದರ್ಶನ ಮತ್ತು ಸ್ಪರ್ಧೆಯನ್ನು ಅಕ್ಸೆಂಚರ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಉಲ್ಲಾಸ್ ನಂಬಿಯಾರ್ ಉದ್ಘಾಟಿಸಿದರು. ಗೋಕುಲ ಎಜುಕೇಶನ್ ಫೌಂಡೇಶನ್‌ನ ಕಾರ್ಯದರ್ಶಿ ಎಂ.ಆರ್.ರಾಮಯ್ಯ, ಸೆಂಟರ್ ಫಾರ್ ಬ್ರೈನ್ ರಿಸರ್ಚ್‌ನ ನಿರ್ದೇಶನ ವೈ.ನರಹರಿ ಇದ್ದಾರೆ.

ಗೋಕುಲ ಎಜುಕೇಷನ್ ಫೌಂಡೇಶನ್ ಅಧ್ಯಕ್ಷ ಎಂ.ಆರ್. ಜಯರಾಂ ಮಾತನಾಡಿ, ‘ಎಲ್ಲ ಶಿಕ್ಷಣ ಸಂಸ್ಥೆಗಳು ಒಗ್ಗೂಡಿ ದೇಶದ ಪ್ರಗತಿಗೆ ಕೈಜೋಡಿಸಬೇಕಿದೆ. ಯುವಕರು ಆರ್ಥಿಕ ಪ್ರಗತಿ ಸಾಧಿಸುವಲ್ಲಿ ಭಾಗಿಯಾಗಬೇಕು. ಸಮಾಜದ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯಬೇಕು’ ಎಂದು ಅವರು ಹೇಳಿದರು.

ರಾಷ್ಟ್ರ ಮಟ್ಟದ ಕಾರ್ಯಯೋಜನೆಗಳ ಪ್ರದರ್ಶನ ಮತ್ತು ಸ್ಪರ್ಧೆಯಲ್ಲಿ ಇಪ್ಪತ್ತೊಂದು ರಾಜ್ಯಗಳ 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇವರಲ್ಲಿ ಐವತ್ತು ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಯಿತು. ಮೊದಲನೆಯ ಬಹುಮಾನವಾಗಿ ₹1.5 ಲಕ್ಷ, ಎರಡನೇ ಬಹುಮಾನ ₹1 ಲಕ್ಷ ಮತ್ತು ಮೂರನೇ ಬಹುಮಾನವಾಗಿ ₹50 ಸಾವಿರ ಮೊತ್ತದ ಬಹುಮಾನವನ್ನು ವಿತರಣೆ ಮಾಡಲಾಯಿತು.

ಗೋಕುಲ ಎಜುಕೇಶನ್ ಫೌಂಡೇಶನ್‌ನ ಕಾರ್ಯದರ್ಶಿ ಎಂ.ಆರ್. ರಾಮಯ್ಯ, ಮಿದುಳು ಸಂಶೋಧನಾ ಕೇಂದ್ರದ ನಿರ್ದೇಶಕ ವೈ.ನರಹರಿ, ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಪ್ರಾಂಶುಪಾಲ ಎನ್.ವಿ.ಆರ್. ನಾಯ್ಡು, ಜಿ.ಇ.ಎಫ್ ಮುಖ್ಯಕಾರ್ಯನಿರ್ವಾಹಕ ಬಿ.ಎಸ್. ರಾಮಪ್ರಸಾದ್ ಇದ್ದರು.

ಸಿನಿಮಾ ಪುರವಣಿ



‘ಇಂಗ್ಲಿಷ್ ಮಂಜ’ನ ಮನದಾಳ

ವಿನಾಯಕ ಕೆ.ಎಸ್.

‘ಗೀತಾ ಬ್ಯಾಂಗಲ್ ಸ್ಟೋರ್’ ಚಿತ್ರದಲ್ಲಿ ಭರವಸೆ ಮೂಡಿಸಿದ್ದ ನಟ ಪ್ರಮೋದ್ ಗುರುತಿಸಿಕೊಂಡಿದ್ದು ‘ರತ್ನನ್ ಪ್ರಪಂಚ’ ಸಿನಿಮಾದಲ್ಲಿ. ‘ಪ್ರೀಮಿಯರ್ ಪದ್ಮಿನಿ’ ಅವರಿಗೆ ಮೈಲೇಜ್ ನೀಡಿದ್ದು ಸುಳ್ಳಲ್ಲ. ‘ಇಂಗ್ಲಿಷ್ ಮಂಜ’ನಾಗಿ ಇಂದು ತೆರೆ ಮೇಲೆ ಬರುತ್ತಿರುವ ಅವರು ತಮ್ಮ ಸಿನಿ ಪಯಣದ ಸಿಹಿ–ಕಹಿಗಳನ್ನು ‘ಸಿನಿಮಾ ಪುರವಣಿ’ ಜೊತೆ ಹಂಚಿಕೊಂಡಿದ್ದಾರೆ.

- **‘ಇಂಗ್ಲಿಷ್ ಮಂಜ’ ಚಿತ್ರದಿಂದ ಪ್ರೇಕ್ಷಕ ಏನು ನಿರೀಕ್ಷಿಸಬಹುದು?**

ಇದು ಮಾಸ್ ಸಿನಿಮಾಗಳನ್ನು ಇಷ್ಟಪಡುವ ಪ್ರೇಕ್ಷಕರಿಗಾಗಿಯೇ ಮಾಡಿರುವ ಸಿನಿಮಾ. ರೌಡಿಸಂ ಹಿನ್ನೆಲೆಯಲ್ಲಿ ನಡೆಯುವ ಕಥೆಯಿದು. ನೈಜತೆಗೆ ಹತ್ತಿರವಿರುವ, ಪ್ರೀತಿಯ ಎಳೆ ಹೊಂದಿರುವ ಚಿತ್ರ. ಪ್ರೇಮ ಕಥೆಯಲ್ಲೊಂದು ತಿರುವಿದೆ. ಇಲ್ಲಿ ಎಲ್ಲರೂ ಅಚಾನಕ್ಕಾಗಿ ರೌಡಿಗಳಾಗುತ್ತಾರೆ. ಆದರೆ ಅದಕ್ಕೊಂದು ಬಲವಾದ ಕಾರಣವಿದೆ. ಕಣ್ಣು ತುಂಬಿಕೊಳ್ಳಬಹುದಾದ ಕ್ಲೈಮ್ಯಾಕ್ಸ್ ಇದೆ. ಜತೆಗೆ ಸಕ್ರಿಯ ರೌಡಿಸಂ ಮಾಡಿದರೆ ಬದುಕು ಏನಾಗಬಹುದೆಂಬ ಸಂದೇಶವೂ ಇದೆ.

- **ಹಾಗಿದ್ದರೆ ನೀವು ಮಾಸ್ ಸಿನಿಮಾಗಳನ್ನೇ ಎದುರು ನೋಡುತ್ತಿದ್ದೀರಾ?**

‘ರತ್ನನ್ ಪ್ರಪಂಚ’ಕ್ಕಿಂತ ಮೊದಲು ಒಪ್ಪಿಕೊಂಡ ಸಿನಿಮಾ ‘ಇಂಗ್ಲಿಷ್ ಮಂಜ’. ಅವಕಾಶಕ್ಕಾಗಿ ಎದುರು ನೋಡುತ್ತಿದ್ದಾಗ, ಅವಕಾಶ ಸಿಕ್ಕಾಗ ಮಾಡಿದ ಚಿತ್ರ. ಕಥೆ ಸ್ಥಳೀಯವಾಗಿದೆ. ನಾನು ಕೂಡ ಕಮರ್ಷಿಯಲ್ ಹೀರೋ ಎನ್ನಿಸಿಕೊಳ್ಳುವಂತಹ ಪಾತ್ರವಿದೆ. ಯಾಕೆ ಮಾಡಬಾರದು ಅನ್ನಿಸಿತು. ಖಂಡಿತ ನನಗೊಂದು ಮಾಸ್ ಪಟ್ಟ ನೀಡುವ ಸಿನಿಮಾ ಇದಾಗಿದೆ.

- **ನಟನೆ ಇಷ್ಟಪಟ್ಟು ಆಯ್ಕೆಮಾಡಿಕೊಂಡ ಕ್ಷೇತ್ರವೆ?**

ಪ್ರತಿ ಹಂತದಲ್ಲೂ ನಟನಾಗಬೇಕು ಎಂದು ಕನಸು ಕಾಣುತ್ತ, ಧಾರಾವಾಹಿಗಳಲ್ಲಿ ಸಣ್ಣ, ಪುಟ್ಟ ಪಾತ್ರಗಳನ್ನು ಮಾಡಿಕೊಂಡು ಬಂದವನು. ಬೇರೆ, ಬೇರೆ ರೀತಿಯ ಪಾತ್ರಗಳಲ್ಲಿ ನಟಿಸಿದರೆ ಎಲ್ಲೋ ಒಂದು ಕಡೆ ಅದು ಕೈ ಹಿಡಿಯುತ್ತದೆ ಎಂಬುದು ನಾನು ಕಂಡುಕೊಂಡ ಸತ್ಯ. ಧಾರಾವಾಹಿ ನಟನೆಯನ್ನು ಕಲಿಸಿಕೊಟ್ಟಿದೆ. ಇಲ್ಲಿ ಪ್ರತಿ ಹಂತದಲ್ಲೂ ಹಲವರು ಕೈ ಹಿಡಿದು ಎತ್ತಿದ್ದಾರೆ. ಆದಾಗ್ಯೂ ಕೆಲವೊಮ್ಮೆ ನಮ್ಮನ್ನು ಚಿತ್ರರಂಗದ ದೊಡ್ಡವರು ಯಾಕೆ ಕರೆಯುತ್ತಿಲ್ಲ? ಗುರುತಿಸುತ್ತಿಲ್ಲ? ಒಳ್ಳೊಳ್ಳೆ ನಿರ್ಮಾಣ ಸಂಸ್ಥೆಗಳಿಗೆ ಯಾಕೆ ಎಷ್ಟೋ ಪ್ರತಿಭಾವಂತ ನಟರು ಕಾಣಿಸುತ್ತಿಲ್ಲ? ಎಂಬ ಬೇಸರವಿದೆ. ಇನ್ನೊಂದೆಡೆ ನಾವು ಮಾಡಿದ ಕೆಲಸ ಗುರುತಿಸಿ ಪ್ರಶಾಂತ್ ನೀಲ್‌ರಂತಹ ನಿರ್ದೇಶಕರು ‘ಸಲಾರ್’ನಂತಹ ಸಿನಿಮಾದಲ್ಲಿ ಅವಕಾಶ ಕೊಟ್ಟಾಗ ತುಂಬ ಖುಷಿಯಾಗುತ್ತದೆ.

- **ಕಿರುತೆರೆಯಿಂದ ಹಿರಿತೆರೆವರೆಗೆ ನಿಮ್ಮ ಪಯಣ ಹೇಗಿತ್ತು?**

2009ರಲ್ಲಿ ಈ ವೃತ್ತಿಗೆ ಬಂದಿದ್ದು. ಮಿಲನ ಪ್ರಕಾಶ್ ಅವರ ‘ಲಕುಮಿ’ ಧಾರವಾಹಿಯಲ್ಲಿ ಪುಟ್ಟ ಪಾತ್ರ ಮಾಡಿದ್ದೆ. ನನ್ನ ನಟನೆ ನೋಡಿ ಅವರದೇ ಬೇರೆ ಧಾರಾವಾಹಿಗಳಲ್ಲಿಯೂ ಅವಕಾಶ ನೀಡಿದರು. ‘ಚುಕ್ಕಿ’, ‘ಪುನರ್ ವಿವಾಹ’ ಧಾರಾವಾಹಿಗಳಲ್ಲಿ ನಟಿಸಿದೆ. ಅಲ್ಲಿಂದ ಇಲ್ಲಿತನಕ ಸುಮಾರು 17 ಧಾರಾವಾಹಿಗಳಲ್ಲಿ ನಟಿಸಿರುವೆ. ‘ಗೀತಾ ಬ್ಯಾಂಗಲ್ ಸ್ಟೋರ್’ ಚಿತ್ರದಲ್ಲಿ ಅವಕಾಶ ಸಿಗುತ್ತದೆ. ಆದರೆ ಚಿತ್ರ ಗೆಲ್ಲುವುದಿಲ್ಲ. ಚಿತ್ರರಂಗದ ಕನಸಿಗೆ ಹಿನ್ನಡೆಯಾಗುತ್ತದೆ. ಬದುಕನ್ನು ಮುನ್ನಡೆಸಲು ಮತ್ತೆ ಧಾರಾವಾಹಿಗೆ 3 ದಿವಸದ ಪಾತ್ರಕ್ಕೆಂದು ಹೋಗುತ್ತೇನೆ. ಅದು 30 ದಿನಕ್ಕೆ ವಿಸ್ತರಣೆಯಾಗುತ್ತೆ. ಕಿರುತೆರೆಯಲ್ಲಿ ಮತ್ತೊಂದಷ್ಟು ಅವಕಾಶಗಳು ಸಿಗುತ್ತವೆ. ಆಮೇಲೆ ನನ್ನ ಧಾರಾವಾಹಿ ನಿರ್ದೇಶಕರಾದ ರಮೇಶ್ ಇಂದಿರಾ ‘ಪ್ರೀಮಿಯರ್ ಪದ್ಮಿನಿ’ಸಿನಿಮಾ ಮಾಡುತ್ತಾರೆ. ಜಗ್ಗೇಶ್ ಜತೆಗೆ ಅವಕಾಶ ನೀಡುತ್ತಾರೆ. ಅಲ್ಲಿಂದ ನಂತರ ಮತ್ತೆ ಚಿತ್ರರಂಗದಲ್ಲಿ ಅವಕಾಶದ ಬಾಗಿಲು ತೆರೆಯಿತು.

- **ನಿಮ್ಮ ಮುಂದಿನ ಯೋಜನೆಗಳ ಕುರಿತು ಹೇಳಿ...**

ಪ್ರಭಾಸ್ ನಟನೆಯ ‘ಸಲಾರ್’ ಚಿತ್ರದಲ್ಲೊಂದು ಒಳ್ಳೆಯ ಪಾತ್ರ ಮಾಡಿರುವೆ. ‘ಭುವನಂ ಗಗನಂ’ ನಟ ಪೃಥ್ವಿ ಅಂಬಾರ್ ಜತೆ ಸೇರಿ ಮಾಡುತ್ತಿರುವ ದೊಡ್ಡ ಬಜೆಟ್‌ನ ಸಿನಿಮಾ. ‘ಪ್ರೀಮಿಯರ್ ಪದ್ಮಿನಿ’ ತಂಡದಿಂದಲೇ ಮತ್ತೊಂದು ದೊಡ್ಡ ಸಿನಿಮಾ ಸದ್ಯದಲ್ಲೇ ಘೋಷಣೆಯಾಗಲಿದೆ. ನನ್ನ ವೃತ್ತಿ ಜೀವನಕ್ಕೊಂದು ತಿರುವು ನೀಡಬಲ್ಲ ಬೃಹತ್ ಬಜೆಟ್‌ನ ಸಿನಿಮಾವಿದು. ಇದಲ್ಲದೆ ಕೆಲವು ಕಥೆಗಳನ್ನು ಕೇಳಿರುವೆ. ಒಟ್ಟಿನಲ್ಲಿ ಸದ್ಯಕ್ಕಂತೂ ಉತ್ತಮ ಅವಕಾಶಗಳಿವೆ.

- **‘ರತ್ನನ್ ಪ್ರಪಂಚ’ ನಂತರದ ನಿಮ್ಮ ಪ್ರಪಂಚ ಹೇಗಿದೆ?**

ಶುರುವಿನಲ್ಲೇ ಸೋಲು, ನೋವು ಕಂಡಿರುವೆ. ಹೀಗಾಗಿ ಬಹಳ ಗಟ್ಟಿಯಾಗಿರುವೆ. ಸೋತಾಗ ಅಳುವುದು, ಗೆದ್ದಾಗ ಬೀಗುವುದು ಎರಡೂ ಇಲ್ಲ. ಸೋಲಿನಿಂದಲೇ ಬಂದವನಿಗೆ ಮತ್ತೆ ಸೋಲುವ ಭಯವಿರುವುದಿಲ್ಲ. ಈ ಪಯಣದಲ್ಲಿ ತುಂಬ ಖುಷಿಯಿದೆ, ಮುಂದಿನ ದಿನಗಳಲ್ಲಿ ಹುಷಾರಾಗಿ ಕಥೆ, ಪಾತ್ರ, ನಿರ್ಮಾಣ ಸಂಸ್ಥೆಗಳನ್ನು ಆಯ್ಕೆ ಮಾಡಿಕೊಳ್ಳಬೇಕು. ಅಂತಿಮವಾಗಿ ನಮ್ಮ ಸಮಯ ಬರಬೇಕಷ್ಟೆ. ನಮ್ಮ ಆಯ್ಕೆಯಲ್ಲಿಯೂ ಕೆಲವೊಮ್ಮೆ ತಪ್ಪಾಗಿರುತ್ತೆ. ಸಿನಿಮಾ ಎಂಬುದು ಒಂದು ತಂಡವಾಗಿ ಮಾಡುವ ಕೆಲಸ. ಎಷ್ಟೋ ಸಲ ಎಲ್ಲವೂ ಸರಿ ಇರುತ್ತದೆ. ಆದರೆ ನಿರ್ಮಾಣ ಸಂಸ್ಥೆಗೆ ಆ ಸಿನಿಮಾವನ್ನು ತಲುಪಿಸುವ ಶಕ್ತಿ ಇರುವುದಿಲ್ಲ. ಆದಾಗ್ಯೂ ನಾವು ಮಾಡಿದ ಕೆಲಸವನ್ನು ಮತ್ತೆಲ್ಲೋ ಗುರುತು ಹಿಡಿಯುತ್ತಾರೆ. ಅದೊಂದೇ ಕಾರಣಕ್ಕೆ ಅವಕಾಶ ಸಿಗುತ್ತಿರುವುದು. ನಮ್ಮ ಕೆಲಸ ಮಾಡಿಕೊಂಡು ಹೋಗಬೇಕಷ್ಟೆ. ❖



ಗಾಯಕಿಯ ಅಭಿನಯ ‘ಚೈತ್ರ’

ಅಭಿಲಾಷ್ ಪಿ.ಎಸ್.

ಸಂಗೀತ ಲೋಕದಿಂದ ಬಣ್ಣದ ಲೋಕಕ್ಕೆ ಮೊದಲ ಹೆಜ್ಜೆ ಇಟ್ಟಿರುವ ಗಾಯಕಿ ಚೈತ್ರ ಎಚ್.ಜಿ. ‘ಮಾವು–ಬೇವು’ ಸವಿದಿದ್ದಾರೆ. ಸುಚೇಂದ್ರ ಪ್ರಸಾದ್ ನಿರ್ದೇಶನದ ಹೊಸ ಚಿತ್ರದಲ್ಲಿ ‘ನೂಪುರ್’ ಎಂಬ ಪಾತ್ರ ನಿರ್ವಹಿಸಿರುವ ಚೈತ್ರ, ಒಳ್ಳೆಯ ಅವಕಾಶಗಳು, ಪಾತ್ರ ದೊರೆತರೆ ನಟನೆಯನ್ನು ಮುಂದುವರಿಸುವ ಅಭಿಲಾಷೆಯನ್ನೂ ಹೊಂದಿದ್ದಾರೆ. ನಾಲ್ಕು ದಶಕಗಳ ಹಿಂದಿನ ಖ್ಯಾತ ಗೀತಗುಚ್ಛ ‘ಮಾವು–ಬೇವು’ ಸಿನಿಮಾ ರೂಪ ಪಡೆದು ಇಂದು(ಏ.21) ಬಿಡುಗಡೆಯಾಗುವ ಹೊತ್ತಿನಲ್ಲಿ‘ಸಿನಿಮಾ ಪುರವಣಿ’ ಜೊತೆಗೆ ಮಾತಿಗಿಳಿದು ಚೈತ್ರ ಹೀಗಂದರು...

‘ನಮ್ಮದು ತೆರೆ ಹಿಂದಿನ ಕೆಲಸ. ಹಾಡುವುದೇ ಜೀವನ. ಕಳೆದ ವರ್ಷ ‘ಅಭಿನಯ ತರಂಗ’ ಸಂಸ್ಥೆಯಲ್ಲಿ ನಟನೆಯಲ್ಲಿ ಡಿಪ್ಲೊಮಾ ಕೋರ್ಸ್ ಮಾಡಿದ್ದೆ. ಬಣ್ಣದ ಲೋಕಕ್ಕೆ ಹೆಜ್ಜೆ ಇಡಬೇಕು ಎಂದುಕೊಂಡು ಈ ತರಬೇತಿ ಪಡೆದಿರಲಿಲ್ಲ. ನಟನೆ ನನ್ನ ಹವ್ಯಾಸವಾಗಿತ್ತು. ಈ ತರಬೇತಿ ಬಳಿಕ ಒಮ್ಮೆ ಸುಚೇಂದ್ರ ಪ್ರಸಾದ್ ಅವರು ಸುಚಿತ್ರ ಫಿಲ್ಮ್ ಸೊಸೈಟಿಯಲ್ಲಿ ಸಿಕ್ಕಿದ್ದರು. ಆ ಸಂದರ್ಭದಲ್ಲಿ ನಡೆದ ಮಾತುಕತೆ ವೇಳೆ ನಟನೆಯ ತರಬೇತಿ ಪಡೆದಿರುವ ಬಗ್ಗೆ ನಾನು ಉಲ್ಲೇಖಿಸಿದೆ. ಆ ವೇಳೆ ‘ನಟಿಸುವುದಕ್ಕೆ ಆಸಕ್ತಿ ಇದೆಯೇ’ ಎಂದು ತಕ್ಷಣದಲ್ಲೇ ಅವರು ಕೇಳಿದ್ದರು. ಆ ಕ್ಷಣದಲ್ಲಿ ನಾನು ಉತ್ತರ ನೀಡಿರಲಿಲ್ಲ. ಇದಾಗಿ 15–20 ದಿನದ ಬಳಿಕ ಕರೆ ಮಾಡಿ, ‘ಮಾವು–ಬೇವು’ ಸಿನಿಮಾ ಬಗ್ಗೆ ಪ್ರಸ್ತಾಪಿಸಿ, ‘ನಾಯಕಿಯಾಗಿ ನಟಿಸುತ್ತೀರಾ’ ಎಂದು ಕೇಳಿದರು. ಆ ಕ್ಷಣದಲ್ಲಿ ನಾನು ಹೆದರಿದ್ದೆ. ಏಕಾಏಕಿ ಈ ರೀತಿ ಅವಕಾಶ ಬಂದಾಗ ಹೇಗೆ ಸ್ವೀಕರಿಸಬೇಕು ಎನ್ನುವುದೂ ತಿಳಿದಿರಲಿಲ್ಲ. ಆದರೆ ನನ್ನ ನಟನೆಯ ಸಾಮರ್ಥ್ಯಕ್ಕಿಂತ ಸುಚೇಂದ್ರ ಪ್ರಸಾದ್ ಅವರ ಪ್ರತಿಭೆ, ಅವರ ನಿರ್ದೇಶನ ಸಾಮರ್ಥ್ಯದ ಬಗ್ಗೆ ನಂಬಿಕೆ ಇದ್ದ ಕಾರಣ ಒಪ್ಪಿಕೊಂಡೆ’ ಎನ್ನುತ್ತಾರೆ ಚೈತ್ರ.

> ಒಳ್ಳೆಯ ಅವಕಾಶ ಸಿಕ್ಕರೆ ನಟನೆಯ ಪ್ರಯೋಗ ಮುಂದುವರಿಸ್ತಾರಂತೆ ಚೈತ್ರ

‘ಚಿತ್ರಕ್ಕಾಗಿ ಕಲಾವಿದರ ನಡುವೆ ಹೊಂದಾಣಿಕೆ ಮೂಡಿಸಲು ಹಲವು ದಿನ ಕಾರ್ಯಾಗಾರ ಮಾಡಿದ್ದೆವು. ಆಂಗಿಕ ಅಭಿನಯ, ಸಂಭಾಷಣೆ, ಉಡುಗೆಯ ಬಗ್ಗೆ ವಿಸ್ತೃತವಾದ ಚರ್ಚೆ ಈ ಸಂದರ್ಭದಲ್ಲಿ ಆಯಿತು. ಇದಾದ ಬಳಿಕವಷ್ಟೇ ಚಿತ್ರೀಕರಣಕ್ಕೆ ಇಳಿದಿದ್ದೆವು. ಈ ರೀತಿಯ ಅಭಿನಯವೇ ಬೇಕು, ಪಾತ್ರ ಹೀಗಿಯೇ ಇರಬೇಕು; ವರ್ತಿಸಬೇಕು ಎಂಬ ಸ್ಪಷ್ಟ ಕಲ್ಪನೆ ಸುಚೇಂದ್ರ ಪ್ರಸಾದ್ ಅವರಲ್ಲಿದ್ದ ಕಾರಣ ನಟನೆ ಸುಲಭವಾಯಿತು. ವಾಸ್ತವದಲ್ಲಿ ಚಿತ್ರದಲ್ಲಿನ ನನ್ನ ಪಾತ್ರಕ್ಕೂ ವೈಯಕ್ತಿಕವಾದ ನನ್ನ ಬದುಕಿಗೂ ದೂರದೂರಕ್ಕೂ ಸಂಬಂಧವಿಲ್ಲ. ನಟನೆ ಎಂದರೆ ಉಡುಗೆ, ಮೇಕ್‌ಅಪ್ ಎನ್ನುವ ಭ್ರಮೆಯನ್ನು ಸುಚೇಂದ್ರ ಪ್ರಸಾದ್ ಅವರು ನಮ್ಮಿಂದ ತೊಡೆದು ಹಾಕಿದರು. ಪರಕಾಯ ಪ್ರವೇಶ ಎನ್ನುವ ಮಾತಿನ ಮೇಲೆ ಅವರಿಗೆ ನಂಬಿಕೆ ಇಲ್ಲ. ನಟನೇ ಅಲ್ಲಿ ಪಾತ್ರವನ್ನು ನಿರ್ವಹಿಸುತ್ತಾನೆ, ಆದರೆ ವೀಕ್ಷಕರಿಗೆ ಅದು ತಿಳಿಯಬಾರದು ಅಷ್ಟೇ ಎನ್ನುವುದು ಅವರ ಮಾತು. ಹೀಗೆ ಅವರು ನಮಗೆ ಸ್ಫೂರ್ತಿ ತುಂಬಿದರು’ ಎಂದು ಚಿತ್ರೀಕರಣದ ಸಮಯವನ್ನು ಮೆಲುಕಿ ಹಾಕಿದರು.

‘ಹಾಡುಗಾರಿಕೆಯಲ್ಲಿ ನಾವು ಕೇವಲ ಧ್ವನಿಯ ಏರಿಳಿತದ ಬಗ್ಗೆಯಷ್ಟೇ ಯೋಚನೆ ಮಾಡುತ್ತಿರುತ್ತೇವೆ. ಆದರೆ ತಲೆಯಿಂದ ಕಾಲಿನವರೆಗೂ ಮಾಡುವ ಅಭಿನಯವನ್ನು ವೀಕ್ಷಕರು ಗಮನಿಸುತ್ತಿರುತ್ತಾರೆ. ಇದು ನನಗೆ ಸವಾಲಾಗಿತ್ತು. ಈ ಸಿನಿಮಾ ಒಂದು ಹೊಸ ಪ್ರಯೋಗ. ಸಿದ್ಧವಿದ್ದ 10 ಹಾಡುಗಳನ್ನು ಇಟ್ಟುಕೊಂಡೇ ಇಲ್ಲಿ ಕಥೆ ಹೆಣೆಯಲಾಗಿದೆ. ಹಾಡುಗಳನ್ನು ಆಧರಿಸಿ ಸಿನಿಮಾವಿದೆ ಎನ್ನುವಾಗಲೇ ನಾನು ಈ ಪ್ರಾಜೆಕ್ಟ್ ಒಪ್ಪಿಕೊಂಡಿದ್ದೆ. ಏಕೆಂದರೆ ಸಿ.ಅಶ್ವಥ್ ಹಾಗೂ ಎಸ್.ಪಿ.ಬಿ. ಕಾಂಬಿನೇಷನ್‌ನಲ್ಲಿ ಮೂಡಿಬಂದಿದ್ದ ‘ಮಾವು–ಬೇವು’ ಇಂದಿಗೂ ಹಸಿರಾಗಿದೆ. ಇಂಥ ಹಾಡುಗಳು ಇರುವ ಸಿನಿಮಾದಲ್ಲಿ ನಟಿಸುವುದೇ ಭಾಗ್ಯ. ಈ ಕಥೆ ವಾಸ್ತವಕ್ಕೆ ಹತ್ತಿರವಾಗಿದೆ. ಹಾಡುಗಳು ಹಳೆಯದಾದರೂ ಸನ್ನಿವೇಷಗಳು ಪ್ರಸ್ತುತ. ಸದ್ಯದ ಸಮಾಜದಲ್ಲಿರುವ ಕುಟುಂಬ ವ್ಯವಸ್ಥೆ, ಪತಿ–ಪತ್ನಿ ನಡುವಿನ ಮನಃಸ್ತಾಪ, ವಿಚ್ಛೇದನ ಮುಂತಾದ ವಿಷಯಗಳು ಚರ್ಚೆಯಾಗಿವೆ. ಜನರು ಸಿನಿಮಾ ಬಗ್ಗೆ ಏನೇ ಅಭಿಪ್ರಾಯ ನೀಡಿದರೂ, ಇದೊಂದು ಕಾಲ್ಪನಿಕ ಕಥೆ ಅಷ್ಟೇ’ ಎಂದು ಹೇಳಲಿಚ್ಛಿಸುತ್ತೇನೆ ಎಂದರು ಚೈತ್ರ.

ನಟನೆ ಮತ್ತು ಸಂಗೀತ ಎನ್ನುವ ಎರಡು ದೋಣಿಯಲ್ಲಿ ನಿಮ್ಮ ಆಯ್ಕೆ ಯಾವುದು ಎನ್ನುವ ಪ್ರಶ್ನೆಗೆ, ‘ನಟನೆ ಎನ್ನುವುದು ನನ್ನ ಜೀವನದ ಹೊಸ ಪ್ರಯೋಗ. ಎರಡನೇ ವಯಸ್ಸಿನಿಂದಲೇ ನಾನು ಹಾಡುತ್ತಿದ್ದೇನೆ. ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ ಕಲಿತಿದ್ದೇನೆ. ಜೀವನದಲ್ಲಿ ಒಂದು ಟ್ವಿಸ್ಟ್ ದೊರಕಿ ನಟಿ ಆಗಿದ್ದೇನೆ. ಸಿನಿಮಾವಷ್ಟೇ ಅಲ್ಲದೆ ಧಾರಾವಾಹಿಗಳಲ್ಲೂ ನಟಿಸುವ ಆಫರ್‌ಗಳು ಬಂದಿದ್ದವು. ಮುಂದೆ ಒಳ್ಳೆಯ ಅವಕಾಶ, ಕಥೆ, ಪಾತ್ರ ದೊರಕಿದರೆ ಖಂಡಿತವಾಗಿಯೂ ನಟನೆ ಮುಂದುವರಿಸುತ್ತೇನೆ’ ಎನ್ನುತ್ತಾ ಮಾತಿಗೆ ವಿರಾಮವಿತ್ತರು. ❖

ಪ್ರಜಾವಾಣಿ ನೋಡಿಯೊ — ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಭಿನ್ನ ಪ್ರಯೋಗದ ‘ರಾಘು’

ಚಂದನವನದಲ್ಲೀಗ ಪ್ಯಾನ್ ಇಂಡಿಯಾ ಸಿನಿಮಾಗಳ ಜೊತೆ ಜೊತೆಗೇ ಪ್ರಯೋಗಾತ್ಮಕ ಚಿತ್ರಗಳೂ ವೀಕ್ಷಕರನ್ನು ಸೆಳೆಯುತ್ತಿವೆ. ಈ ಸಾಲಿಗೆ ಒಂದಿಷ್ಟು ಕೌತುಕಗಳನ್ನು ಇಟ್ಟುಕೊಂಡು ಬರುತ್ತಿದೆ ‘ರಾಘು’ ಸಿನಿಮಾ. ನಟ ವಿಜಯ ರಾಘವೇಂದ್ರ ಅವರೊಬ್ಬರೇ ನಟಿಸಿರುವ ‘ರಾಘು’ ಏಪ್ರಿಲ್ 28ರಂದು ತೆರೆಕಾಣುತ್ತಿದೆ.

ನಿರ್ದೇಶಕ ಎಂ. ಆನಂದ್ ರಾಜ್ ನಿರ್ದೇಶನದಲ್ಲಿ ಈ ಸಿನಿಮಾ ಮೂಡಿಬಂದಿದೆ. ಥ್ರಿಲ್ ನೀಡುವ ಈ ಸಿನಿಮಾ ಪೂರ್ತಿ ವಿಜಯ್ ರಾಘವೇಂದ್ರ ಒಬ್ಬರೇ ಇರಲಿದ್ದಾರೆ ಎಂದಿದೆ ಚಿತ್ರತಂಡ. ಇದು ಸೋಲೊ ಆ್ಯಕ್ಟಿಂಗ್ ಸಿನಿಮಾ. ಸಿನಿಮಾಗೆ ನಟ ಶಿವರಾಜ್‌ಕುಮಾರ್ ಸಾಥ್ ನೀಡಿದ್ದು, ‘ರಾಘು’ ಟ್ರೈಲರ್‌ಗೆ ಹ್ಯಾಟ್ರಿಕ್ ಹೀರೊ ಧ್ವನಿ ನೀಡಿದ್ದಾರೆ. ಶಿವರಾಜ್‌ಕುಮಾರ್ ಅವರ ಧ್ವನಿ, ವಿಜಯ್ ರಾಘವೇಂದ್ರ ನಟನೆ, ಉದಯ್ ಲೀಲಾ ಛಾಯಾಗ್ರಹಣ, ಸೂರಜ್ ಜೋಯಿಸ್ ಟ್ರೈಲರ್ ಮೂಲಕವೇ ವೀಕ್ಷಕರನ್ನು ಸೆಳೆದಿದೆ.

‘ಹಲವು ಕಲಾವಿದರನ್ನು ಹಾಕಿಕೊಂಡು ಸಿನಿಮಾ ಮಾಡಿದಾಗ ನಿರ್ಮಾಪಕರು ಸಿಗುವುದು ಕಷ್ಟ. ಇನ್ನು ಸೋಲೊ ಆ್ಯಕ್ಟರ್ ಇಟ್ಟುಕೊಂಡು ಕಥೆ ಹೆಣೆದು ಸಿನಿಮಾ ಮಾಡುವುದು ಕಷ್ಟವೇ. ಇದು ಸಂಪೂರ್ಣ ತಂತ್ರಜ್ಞರ ಸಿನಿಮಾ. ನಟನಾಗಿ ವಿಜಯ ರಾಘವೇಂದ್ರ ಅವರೊಬ್ಬರೇ ಇದ್ದರೂ, ಹಾಡುಗಳು, ಫೈಟ್ಸ್, ಕಥೆಯಲ್ಲಿ ತಿರುವು ಎಲ್ಲವೂ ಇದೆ’ ಎನ್ನುತ್ತಾರೆ ಆನಂದ್ ರಾಜ್.

ಡಿಕೆಎಸ್ ಸ್ಟುಡಿಯೊ, ಕೋಟಾ ಫಿಲಂ ಫ್ಯಾಕ್ಟರಿ ಪ್ರೊಡಕ್ಷನ್‌ನಡಿ ‘ರಾಘು’ ಸಿನಿಮಾವನ್ನು ರನ್ವಿತ್ ಶಿವಕುಮಾರ್ ಹಾಗೂ ಅಭಿಷೇಕ ಕೋಟ ನಿರ್ಮಾಣ ಮಾಡಿದ್ದಾರೆ. ಚಿತ್ರದ ಎರಡು ಹಾಡುಗಳಿಗೆ ವಾಸುಕಿ ವೈಭವ್ ಹಾಗೂ all ok ಧ್ವನಿಯಾಗಿದ್ದಾರೆ. ❖

ಬೆಳ್ಳಿತೆರೆ ಇಂದು ಹೊಸಬರಿಗೆ ಮೀಸಲು!

ಬೆಳ್ಳಿತೆರೆ ಈ ಶುಕ್ರವಾರ(ಏ.21) ಹೊಸಬರಿಗೆ ಮೀಸಲಾಗಿದೆ. ಚೊಚ್ಚಲ ನಿರ್ದೇಶಕರು, ಹೊಸ ತಂಡಗಳು ಗಾಂಧಿನಗರದಲ್ಲಿ ತಮ್ಮ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ.

ಇಂಗ್ಲಿಷ್ ಮಂಜ: ಆರ್ಯ ಎಂ. ಮಹೇಶ್ ನಿರ್ದೇಶನದ, ‘ರತ್ನನ್‌ಪ್ರಪಂಚ’ ಖ್ಯಾತಿಯ ಪ್ರಮೋದ್, ತೇಜಸ್ವಿನಿ ಶರ್ಮ, ಸುನೀಲ್ ಪುರಾಣಿಕ್, ವಿ.ನಾಗೇಂದ್ರ ಪ್ರಸಾದ್ ಮುಂತಾದವರು ಅಭಿನಯಿಸಿರುವ ‘ಇಂಗ್ಲಿಷ್ ಮಂಜ’ ಇಂದು ತೆರೆಕಾಣುತ್ತಿದೆ. ‘ಇದೊಂದು ಕಟೆಂಟ್ ಇರುವ ಕಮರ್ಷಿಯಲ್ ಸಿನಿಮಾ. ಈ ಚಿತ್ರದಲ್ಲಿ ನಾನೊಬ್ಬನೇ ನಿರ್ದೇಶಕನಾಗಿರಲಿಲ್ಲ. ಕಲಾವಿದರೆಲ್ಲರೂ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ’ ಎನ್ನುತ್ತಾರೆ ಆರ್ಯ. ‘ನಾನು ಈ ಚಿತ್ರದಲ್ಲಿ ‘ಕಮಲಿ’ ಎಂಬ ಮುಗ್ಧ ಹುಡುಗಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ‘ಮಂಜ’ನೇ ಅವಳ ಪ್ರಪಂಚ. ಚಿತ್ರವು ನನಗೆ ಒಳ್ಳೆಯ ಅನುಭವ ನೀಡಿದೆ. ಪ್ರಮೋದ್ ಅವರಂಥ ಅದ್ಭುತ ಕಲಾವಿದನ ಜೊತೆ ಕೆಲಸ ಮಾಡುವ ಅವಕಾಶ ನನಗೆ ಸಿಕ್ಕಿತ್ತು’ ಎಂದರು ತೇಜಸ್ವಿನಿ.



ತೇಜಸ್ವಿನಿ ಶರ್ಮ

‘ಚಾಂದಿನಿ ಬಾರ್’: ಹೊಸಬರೇ ಸೇರಿ ನಿರ್ಮಾಣ ಮಾಡಿರುವ ಸಿನಿಮಾ ‘ಚಾಂದಿನಿ ಬಾರ್’ ಇಂದು ತೆರೆ ಕಾಣುತ್ತಿದೆ. ಬಾರ್‌ನಲ್ಲಿ ಕೆಲಸ ಮಾಡುವವನೊಬ್ಬನ ಕಥೆಯಾಗಿದ್ದು, ರಾಘವೇಂದ್ರ ಕುಮಾರ್ ಚಿತ್ರದ ನಿರ್ದೇಶಕರು. ಜತೆಗೆ ಅವರೇ ನಾಯಕನಾಗಿಯೂ ನಟಿಸಿದ್ದಾರೆ.

ಮೈಸೂರು, ಚಾಮರಾಜನಗರ ಸುತ್ತಲೂ ಚಿತ್ರೀಕರಣಗೊಂಡಿರುವ ಚಿತ್ರ, ಬಾರ್ ಒಂದಕ್ಕೆ ಬಂದು ಹೋಗುವ ಒಂದಷ್ಟು ಜನರ ಕಥೆ ಹೇಳುತ್ತಿದೆ. ‘ಬಹುತೇಕ ರಂಗಭೂಮಿ ಕಲಾವಿದರು, ಹೊಸಬರೇ ಮಾಡಿರುವ ಚಿತ್ರವಿದು. ಸಂಕಲನಕಾರ ಕೆಂಪರಾಜ್ ಅವರೇ ಬೆನ್ನೆಲುಬು’ ಎಂದರು ನಿರ್ದೇಶಕ ರಾಘು. ರಂಗಭೂಮಿ ಹಿನ್ನೆಲೆ ಹೊಂದಿರುವ ಸುಕೃತಿ ಪ್ರಭಾಕರ್ ಚಿತ್ರದ ನಾಯಕಿ. ವಿಶಾಖ ನಾಗಲಾಪುರ ಹಾಗೂ ಕಾರ್ತಿಕ್ ನಾಗಲಾಪುರ ಸಹೋದರು ಈ ಸಿನಿಮಾಗೆ ಸಂಗೀತ ಸಂಯೋಜನೆ ಮಾಡಿದ್ದು, ರಿತ್ವಿಕ್ ಮುರಳಿಧರ್ ಅವರ ಹಿನ್ನೆಲೆ ಸಂಗೀತವಿದೆ.



ಹೃದಯಶಿವ



ಸಂಪತ್ ಮೈತ್ರೇಯ

ಛಾಯಾಗ್ರಹಣವನ್ನು ಚೇತನ್ ಶರ್ಮ ಮಾಡಿದ್ದಾರೆ.

‘ಬಿಸಿಲು ಕುದುರೆ’: ‘ಮಂಡ್ಯ’, ‘ಮುಂಗಾರು ಮಳೆ’, ‘ಗಾಳಿಪಟ’ ಸೇರಿದಂತೆ ಅನೇಕ ಹಿಟ್ ಚಿತ್ರಗಳಿಗೆ ಹಾಡು ಬರೆದಿರುವ ಸಾಹಿತಿ ಹೃದಯಶಿವ ನಿರ್ದೇಶನದ ‘ಬಿಸಿಲು ಕುದುರೆ’ ಇಂದು ತೆರೆಕಾಣುತ್ತಿದೆ.

‘ಕನ್ನಡ ಚಿತ್ರರಂಗದೊಂದಿಗೆ ನನಗೆ ಎರಡು ದಶಕಗಳ ನಂಟು. ಇದು ನನ್ನ ನಿರ್ದೇಶನದ ಮೊದಲ ಚಿತ್ರ. ಅರಣ್ಯದಂಚಿನಲ್ಲಿ ತುಂಡುಭೂಮಿ ಹೊಂದಿರುವ ರೈತನ ಬವಣೆಯ ಕುರಿತಾದ ಚಿತ್ರವಿದು. ಒಂದೇ ಸರ್ಕಾರದಡಿ ಕಾರ್ಯನಿರ್ವಹಿಸುವ ಅರಣ್ಯ ಇಲಾಖೆ ಹಾಗೂ ಕಂದಾಯ ಇಲಾಖೆಗಳ ನಡುವೆ ಸಮನ್ವಯತೆ ಇಲ್ಲದೆ ಹೋದಾಗ ಕಾಡಂಚಿನ ರೈತನ ಪಾಡು ಏನಾಗುತ್ತದೆ ಎಂಬುವುದೇ ಕಥಾಹಂದರ. ಸಂಪತ್ ಮೈತ್ರೇಯ, ಸುನೀತಾ, ಕರಿಸುಬ್ಬು, ಮಳವಳ್ಳಿ ಸಾಯಿಕೃಷ್ಣ, ವಿಕ್ಟರಿ ವಾಸು, ಜೊಸೈಮನ್ ಮುಂತಾದವರು ಚಿತ್ರದಲ್ಲಿ ನಟಿಸಿದ್ದಾರೆ’ ಎಂದರು ಹೃದಯಶಿವ. ❖

ಹರಪನಹಳ್ಳಿ, ಹೂವಿನಹಡಗಲಿಯಲ್ಲಿ ಆಲಿಕಲ್ಲು ಸಹಿತ ವರ್ಷಧಾರೆ • ತಾಪಮಾನದಲ್ಲಿ ಇಳಿಕೆ

ರಾಜ್ಯದ ಹಲವೆಡೆ ಗುಡುಗು ಸಹಿತ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಚಿಕ್ಕಮಗಳೂರು, ವಿಜಯನಗರ, ಶಿವಮೊಗ್ಗ, ಹಾಸನ ಸೇರಿದಂತೆ ವಿವಿಧೆಡೆ ಗುರುವಾರ ಸಾಧಾರಣದಿಂದ ಉತ್ತಮ ಮಳೆಯಾಗಿದೆ. ಅಲ್ಲಲ್ಲಿ ಗುಡುಗು ಸಹಿತ ಮಳೆಯಾಗಿದ್ದು, ವಾತಾವರಣವನ್ನು ತಂಪಾಗಿಸಿತು.

ಚಿಕ್ಕಮಗಳೂರು ವರದಿ: ಚಿಕ್ಕಮಗಳೂರಿನಲ್ಲಿ ಮಧ್ಯಾಹ್ನ ಮುಕ್ಕಾಲು ತಾಸು ಸಾಧಾರಣ ಮಳೆಯಾಗಿದ್ದು, ಗುಡುಗಿನ ಆರ್ಭಟ ಇತ್ತು. ಜಿಲ್ಲೆಯ ಆಲ್ದೂರು, ಕಡೂರು, ಅಲ್ಲಂಪುರ, ಕೈಮರ ಭಾಗದಲ್ಲಿ ಮಳೆಯಾಗಿದೆ.

ಕೊಪ್ಪಳ ವರದಿ: ಜಿಲ್ಲೆಯ ಕುಷ್ಟಗಿ ಸೇರಿದಂತೆ ಸುತ್ತಮುತ್ತಲ ಪ್ರದೇಶದಲ್ಲಿ ಬಿರುಗಾಳಿ ಸಹಿತ ಜೋರು ಮಳೆಯಾಯಿತು. ನಗರ ಸೇರಿದಂತೆ ಜಿಲ್ಲೆಯಾದ್ಯಂತ ಗುರುವಾರ ಮಧ್ಯಾಹ್ನದಿಂದ ಮೋಡ ಕವಿದ ವಾತಾವರಣವಿತ್ತು.

ಹೊಸಪೇಟೆ (ವಿಜಯನಗರ): ಜಿಲ್ಲೆಯ ಹರಪನಹಳ್ಳಿ, ಹೂವಿನಹಡಗಲಿ ತಾಲ್ಲೂಕಿನ ಕೆಲವೆಡೆ ಆಲಿಕಲ್ಲು ಸಹಿತ ಮಳೆಯಾದರೆ, ಕೂಡ್ಲಿಗಿಯಲ್ಲಿ ಗುಡುಗು, ಮಿಂಚು ಸಹಿತ ವರ್ಷಧಾರೆಯಾಗಿದೆ.

ಬಳ್ಳಾರಿ ಜಿಲ್ಲೆಯ ಸಂಡೂರಿನಲ್ಲೂ ಮಳೆ ಸುರಿದಿದೆ. ಹೊಸಪೇಟೆಯಲ್ಲಿ ಕಾರ್ಮೋಡ ಕವಿದಿದ್ದು, ಗುಡುಗು, ಮಿಂಚು ಇದ್ದು, ಬಿರುಗಾಳಿ ಬೀಸುತ್ತಿದೆ. ತಾಪಮಾನ ಗುರುವಾರ 40 ಡಿಗ್ರಿ ಸೆಲ್ಸಿಯಸ್‌ಗೆ ಇಳಿದಿತ್ತು.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಲೋಕದೊಳಲು, ಬೊಮ್ಮನಕಟ್ಟೆ, ಎಮ್ಮೆಹಟ್ಟಿ, ಗುಡ್ಡದ ಸಾಂತೇನಹಳ್ಳಿ ಸುತ್ತಮುತ್ತ ಗುರುವಾರ ಸಂಜೆ ಆಲಿಕಲ್ಲು ಸಹಿತ ಬಿರುಸಿನ ಮಳೆ ಸುರಿಯಿತು. ಆಲಿಕಲ್ಲುಗಳು ಸುರಿದವು.

ತಾಲ್ಲೂಕಿನಲ್ಲಿ ಇದು ಈ ವರ್ಷದ ಪ್ರಥಮ ಮಳೆಯಾಗಿದ್ದು, ರೈತರು ಸಂತಸಗೊಂಡರು. ಪಟ್ಟಣದಲ್ಲಿ ಮೋಡ ಕವಿದ ವಾತಾವರಣ ಇದ್ದು, ಸಂಜೆ ತುಂತುರು ಹನಿಗಳು ಮಾತ್ರ ಬಿದ್ದವು.

ದಾವಣಗೆರೆ ಜಿಲ್ಲೆಯಲ್ಲಿ ಚನ್ನಗಿರಿ ಪಟ್ಟಣ ಸೇರಿ ವಿವಿಧೆಡೆ 20 ನಿಮಿಷ ಮಳೆಯಾಗಿದೆ. ತಾಲ್ಲೂಕಿನ ದಿಗ್ಗೇನಹಳ್ಳಿ, ಮಲ್ಲಿಗೆರೆ, ಗಾಂಧಿನಗರ ಇತರೆಡೆ ಮಳೆಯಾಗಿದ್ದರಿಂದ ಬಿಸಿಲಿನಿಂದ ಬಸವಳಿದಿದ್ದ ಜನ ಹರ್ಷಗೊಂಡರು. ಶಿವಮೊಗ್ಗ ನಗರದಲ್ಲೂ ಮಳೆ ಸುರಿಯಿತು.



ಚಿಕ್ಕಮಗಳೂರು ನಗರದಲ್ಲಿ ಗುರುವಾರ ಮಳೆ ಸುರಿಯಿತು



ಹುಬ್ಬಳ್ಳಿಯಲ್ಲಿ ಗುರುವಾರ ಸಂಜೆ ಸುರಿದ ಮಳೆಯಲ್ಲಿ ವಾಹನಗಳು ಸಂಚರಿಸಿದವು

ಚನ್ನಕೇಶವ ದೇಗುಲದ ಗೋಪುರಕ್ಕೆ ಹಾನಿ

ಹಾಸನ: ನಗರದಲ್ಲಿ ಗುರುವಾರ ಮಧ್ಯಾಹ್ನ ಉತ್ತಮ ಮಳೆಯಾಯಿತು. ಗುಡುಗು ಸಹಿತ ಮಳೆ ಸುರಿಯಿತು. ಬೇಲೂರು ಚನ್ನಕೇಶವಸ್ವಾಮಿ ದೇಗುಲದ ಗೋಪುರಕ್ಕೆ ಸಿಡಿಲು ಬಡಿದು ಕಳಸದ ಪಕ್ಕದಲ್ಲಿರುವ ಗೋಪುರದ ತುದಿ ಭಾಗಶಃ ಕಿತ್ತು ಹೋಗಿದೆ.

ದೇಗುಲದ ಪ್ರಧಾನ ಅರ್ಚಕ ಶ್ರೀನಿವಾಸ್ ಭಟ್ ಹಾಗೂ ನರಸಿಂಹಪ್ರಿಯಭಟ್ ಅವರು, ಮಾತನಾಡಿ, 'ಸಿಡಿಲಿನಿಂದ ಸ್ವಲ್ಪ ಹಾನಿಯಾಗಿದೆ. ಭಕ್ತರು ಆತಂಕ ಪಡುವ ಅಗತ್ಯವಿಲ್ಲ. ಆಗಮಿಕರ ಸಲಹೆ ಪಡೆದು ಅಂಗೋದಕ ಶುದ್ಧಿ ಮಾಡಲಾಗುವುದು' ಎಂದರು.

ಜಿಲ್ಲೆಯ ಬೇಲೂರಿನಲ್ಲಿ ಉತ್ತಮ ಮಳೆಯಾಗಿದ್ದರೆ, ಹಳೇಬೀಡಿನಲ್ಲಿ ಮೋಡ ಕವಿದ ವಾತಾವರಣವಿತ್ತು. ಬೇಲೂರು ತಾಲ್ಲೂಕಿನ ಯಮಸಂಧಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 3.3 ಸೆಂ.ಮೀ ಮಳೆಯಾಗಿರುವುದು ದಾಖಲಾಗಿದೆ.

ಇಂದು, ನಾಳೆಯೂ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದಲ್ಲಿ ಬೆಂಗಳೂರು ಸೇರಿ ವಿವಿಧೆಡೆ ಶುಕ್ರವಾರ ಹಾಗೂ ಶನಿವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿಯ ದಕ್ಷಿಣ ಕನ್ನಡ, ಉಡುಪಿ, ಉತ್ತರ ಒಳನಾಡಿನ ಬೆಳಗಾವಿ, ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ ಹಾಗೂ ದಕ್ಷಿಣ ಒಳನಾಡಿನ ಚಿಕ್ಕಮಗಳೂರು, ಹಾಸನ, ಕೊಡಗು, ಬೆಂಗಳೂರು ಗ್ರಾಮಾಂತರ, ಮೈಸೂರು, ತುಮಕೂರು ಮತ್ತು ರಾಮನಗರ ಜಿಲ್ಲೆಯ ಒಂದೆರಡು ಕಡೆ ಗುಡುಗು ಸಹಿತ ಮಳೆಯಾಗಲಿದೆ. ಉಳಿದೆಡೆ ಒಣಹವೆ ಇರಲಿದೆ ಎಂದು ಇಲಾಖೆ ಹೇಳಿದೆ.

ಬೆಂಗಳೂರು ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಅಥವಾ ರಾತ್ರಿಯ ಅವಧಿಯಲ್ಲಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಕಲಬುರಗಿ, ಬಳ್ಳಾರಿ, ರಾಯಚೂರು, ಕೊಪ್ಪಳ ಸೇರಿ ಕೆಲ ಜಿಲ್ಲೆಗಳಲ್ಲಿ ಉಷ್ಣಾಂಶ ಗುರುವಾರ 40 ಡಿಗ್ರಿ ಸೆಲ್ಸಿಯಸ್ ದಾಟಿದೆ. ಮುಂದಿನ ಎರಡು ದಿನ ಗರಿಷ್ಠ ಉಷ್ಣಾಂಶವು ಕರಾವಳಿ, ಉತ್ತರ ಒಳನಾಡಿನ ಕೆಲವೆಡೆ ಸಾಮಾನ್ಯಕ್ಕಿಂತ 2–3 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗುವ ಸಾಧ್ಯತೆ ಎಂದಿದೆ.

ಕೆಂಡವಾಗಿದೆ ಕಾಫಿನಾಡು!

ಕೊಡಗು: ತಾಪಮಾನ ಮೂರು ದಶಕಗಳಲ್ಲೇ ಗರಿಷ್ಠ

• ಕೆ.ಎಸ್.ಗಿರೀಶ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಮೂರು ದಶಕಗಳಲ್ಲೇ ಅತ್ಯಂತ ಗರಿಷ್ಠ ತಾಪಮಾನ 36.1 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. 10 ದಿನಗಳಿಂದ ನಿರಂತರವಾಗಿ 35 ಡಿಗ್ರಿ ಸೆಲ್ಸಿಯಸ್‌ಗೂ ಅಧಿಕ ತಾಪಮಾನವಿದೆ. ಬಿಸಿಲ ಬೇಗೆಯಿಂದ ಜನ ಬಸವಳಿಯುತ್ತಿದ್ದಾರೆ.

ಕಾಫಿತೋಟಗಳು ಬೆಂದು ಹೋದಂತಿವೆ. ಗೋಣಿಕೊಪ್ಪಲು ಭಾಗದ ತಿತಿಮತಿ, ಮಾಯಮುಡಿ, ದೇವರಪುರ, ಹಾತೂರು, ಕುಂದ, ಕಿರುಗೂರು, ನಲ್ಲೂರು ಭಾಗಗಳಲ್ಲಿ ತುಂತುರು ನೀರಾವರಿ ಇರದ, ನೆರಳು ಕಡಿಮೆ ಇರುವ ತೋಟಗಳಲ್ಲಿ ಕಾಫಿ ಎಲೆಗಳು ಒಣಗಿ ತರಗಲೆಯಾಗಿವೆ. ಬೆಳೆಗಾರರು ಕಂಗಾಲಾಗಿದ್ದಾರೆ.

ಬಾಳೆಲೆ, ಕುಟ್ಟ, ಹುದಿಕೇರಿ, ಪೊನ್ನಂಪೇಟೆ, ಗೋಣಿಕೊಪ್ಪಲು, ತಿತಿಮತಿ, ಕುಂದ ಭಾಗಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದೆ.

ಕಳೆದ 85 ದಿನಗಳಿಂದ ಇಲ್ಲಿನ ಶೇ 75ರಷ್ಟು ಪ್ರದೇಶಗಳಲ್ಲಿ ಮಳೆಯಾಗಿಲ್ಲ. ಇನ್ನುಳಿದೆಡೆಯೂ ಹಗುರ ಮಳೆಯಷ್ಟೇ ಆಗಿದೆ. ಇದೇ ಪರಿಸ್ಥಿತಿ 2016ರಲ್ಲೂ ಕಂಡು ಬಂದಿತ್ತು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಇಲ್ಲಿನ ಗೋಣಿಕೊಪ್ಪಲುವಿನ ಕೃಷಿ ವಿಜ್ಞಾನ ಕೇಂದ್ರದಲ್ಲಿರುವ ಭಾರತೀಯ ಹವಾಮಾನ ಇಲಾಖೆಯ ಜಿಲ್ಲಾ ಕೃಷಿ ಹವಾಮಾನ ಘಟಕದ ಹವಾಮಾನ ಪರಿವೀಕ್ಷಕ ಎಸ್.ಕೆ.ಚಂಗಪ್ಪ, 'ಸಾಮಾನ್ಯವಾಗಿ ಬೇಸಿಗೆಯಲ್ಲಿ 33 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ ವಾರದಲ್ಲಿ ಒಮ್ಮೆ ಮಾತ್ರ ದಾಖಲಾಗುತ್ತಿತ್ತು. ಇನ್ನುಳಿದ ದಿನಗಳಲ್ಲಿ ಕಡಿಮೆ ಉಷ್ಣಾಂಶವಿರುತ್ತಿತ್ತು. ಆದರೆ, ಈ ಬಾರಿ ಏ. 14ರಂದು 36.1 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. 2016ರಲ್ಲಿ 35.6 ಡಿಗ್ರಿ ಗರಿಷ್ಠ ತಾಪಮಾನ ದಾಖಲಾಗಿತ್ತು' ಎಂದರು.

ಜನವರಿ–ಏಪ್ರಿಲ್‌ವರೆಗೆ 10 ಸೆಂ.ಮೀ ನಷ್ಟು ವಾಡಿಕೆ ಮಳೆಯಾಗಬೇಕಿತ್ತು. ಅದರಿಂದ ಕಾಫಿ ಹೂ ಅರಳಲು ಸಹಾಯವಾಗುತ್ತಿತ್ತು. ಆದರೆ, ಸದ್ಯ 3ಸೆಂ.ಮೀ ಮಾತ್ರವೇ ಮಳೆಯಾಗಿದೆ. ಜಿಲ್ಲೆಯ ಎಲ್ಲೆಡೆ ಜಲಮೂಲಗಳು ಬತ್ತಿವೆ.

2016ರಲ್ಲೂ ಬೇಸಿಗೆಯಲ್ಲಿ ಮಳೆ ಕಡಿಮೆಯಾಗಿತ್ತು. ಆ ವರ್ಷ ಎಲ್‌ನಿನೋ ಪರಿಣಾಮದಿಂದ ಮುಂಗಾರು ಮಳೆಯೂ ಕಡಿಮೆಯಾಗಿತ್ತು. ಸದ್ಯದ ಸ್ಥಿತಿ ನೋಡಿದರೆ ಈ ಬಾರಿಯೂ ಎಲ್‌ನಿನೋ ಏರ್ಪಡುವ ಸಂಶಯ ಮೂಡಿದೆ.

'ಪೆಸಿಫಿಕ್ ಸಾಗರದ ಮೇಲಿನ ತಾಪಮಾನದ ವ್ಯತ್ಯಾಸಗಳನ್ನು ಎಲ್‌ನಿನೋ ಹಾಗೂ ಲಾನಿನೋ ಎಂದು ಕರೆಯಲಾಗುತ್ತದೆ. ಇದು ಮುಂಗಾರು ಮಾರುತಗಳ ಮೇಲೆ ನೇರ ಪರಿಣಾಮ ಬೀರಲಿದೆ. 2018ರಿಂದ ಲಾನಿನೋ ಇತ್ತು. ಈ ವರ್ಷದ ಮುಂಗಾರಿನ ಮುನ್ಸೂಚನೆಯನ್ನು ಮೇ 15ರ ನಂತರ ಭಾರತೀಯ ಹವಾಮಾನ ಇಲಾಖೆ ಅಂದಾಜಿಸುತ್ತದೆ' ಎಂದು ಎಸ್.ಕೆ.ಚಂಗಪ್ಪ ಹೇಳಿದರು.



ಕೊಡಗು ಜಿಲ್ಲೆಯ ಗೋಣಿಕೊಪ್ಪಲು ಬಳಿಯ ಹಾತೂರಿನ ಕಾಫಿ ತೋಟದಲ್ಲಿ ಒಣಗಿ ತರಗೆಲೆಯಂತಾಗಿರುವ ಕಾಫಿ ಗಿಡಗಳು —ಚಿತ್ರ: ಜೆ.ಸೋಮಣ್ಣ

ಮುಖ್ಯಾಂಶಗಳು

- ಗರಿಷ್ಠ ತಾಪಮಾನ 36.1 ಡಿಗ್ರಿ ಸೆಲ್ಸಿಯಸ್ ದಾಖಲು
- ಕುಡಿಯುವ ನೀರಿಗೂ ಪರದಾಟ

ಕೋವಿಡ್: 2 ಸಾವಿರದತ್ತ ಸಕ್ರಿಯ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ ಗುರುವಾರ 429 ಕೋವಿಡ್ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ಸಕ್ರಿಯ ಪ್ರಕರಣಗಳ ಸಂಖ್ಯೆ 2 ಸಾವಿರದ ಗಡಿ (1,977) ಸಮೀಪಿಸಿದೆ.

ಬೆಂಗಳೂರಿನಲ್ಲಿ 281 ಹೊಸ ಪ್ರಕರಣಗಳು ದೃಢಪಟ್ಟಿವೆ. ಶಿವಮೊಗ್ಗ ಹಾಗೂ ದಾವಣಗೆರೆಯಲ್ಲಿ ತಲಾ 18, ವಿಜಯನಗರದಲ್ಲಿ 16, ಬಳ್ಳಾರಿ ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ ತಲಾ 15 ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ ಸಕ್ರಿಯ ಪ್ರಕರಣಗಳು 1,330ಕ್ಕೆ ತಲುಪಿದೆ. ಯಾದಗಿರಿ ಹೊರತುಪಡಿಸಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸಕ್ರಿಯ ಪ್ರಕರಣಗಳಿವೆ. ಸೋಂಕಿತರಲ್ಲಿ ಗುರುವಾರ 414 ಮಂದಿ ಚೇತರಿಸಿಕೊಂಡಿದ್ದಾರೆ. ಒಂದು ದಿನದ ಅವಧಿಯಲ್ಲಿ 16,457 ಪರೀಕ್ಷೆ ನಡೆಸಲಾಗಿದೆ.

ಪ್ರಜಾವಾಣಿ ಪ್ರಜಾಧ್ವನಿ — ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ



ಚುನಾವಣೆಯ ಅವಧಿಯಲ್ಲಿ, ಶಾಸನಸಭೆಯ ಹಾಲಿ ಸದಸ್ಯರು ಪಕ್ಷದಿಂದ ಪಕ್ಷಕ್ಕೆ ಜಿಗಿಯುವುದನ್ನು ತಡೆಯುವುದಕ್ಕಾಗಿ ಕಾನೂನು ರಚಿಸುವುದು ಅಗತ್ಯ ಎಂದು ನೀವು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ



ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಟ್ಟಾ ಜಗದೀಶ್ ಹೆಬ್ಬಾಳದಲ್ಲಿ ಮೆರವಣಿಗೆ ನಡೆಸಿದರು. ಬಿಜೆಪಿ ಮುಖಂಡ ಕಟ್ಟಾ ಸುಬ್ರಮಣ್ಯ ನಾಯ್ಡು, ಸಂಸದ ಡಿ.ವಿ. ಸದಾನಂದಗೌಡ ಇದ್ದರು –ಪ್ರಜಾವಾಣಿ ಚಿತ್ರಗಳು


ಬ್ಯಾಟರಾಯನಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೃಷ್ಣ ಬೈರೇಗೌಡ ಅವರು ನಾಮಪತ್ರ ಸಲ್ಲಿಸಲು ಮೆರವಣಿಗೆಯಲ್ಲಿ ಸಾಗಿದ ಸಂದರ್ಭದಲ್ಲಿ ಬೆಂಬಲಿಗರ ಕೈ ಕುಲುಕಿ ಸಂಭ್ರಮಿಸಿದರು


ಬೊಮ್ಮನಹಳ್ಳಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮಾಪತಿಗೌಡ ನಾಮಪತ್ರ ಸಲ್ಲಿಸುವ ವೇಳೆ ನೆರೆದಿದ್ದ ಜನ

ಅಭ್ಯರ್ಥಿಗಳ ರ್‍ಯಾಲಿ: ಸಂಚಾರ ದಟ್ಟಣೆ: ವಾಹನ ಸವಾರರ ಪರದಾಟ

ನಾಮಪತ್ರ: ಕೊನೆಯ ದಿನವೂ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮಾವಾಸ್ಯೆ ಮತ್ತು ‘ಸಮ್ಮಿಶ್ರ ಸೂರ್ಯ’ ಗ್ರಹಣದ ದಿನವೇ ನಾಮಪತ್ರ ಸಲ್ಲಿಕೆಗೆ ಗುರುವಾರ ಕೊನೆಯ ದಿನವಾಗಿದ್ದು, ಅಭ್ಯರ್ಥಿಗಳು ಬಿರುಸಿನಿಂದ ಉಮೇದುವಾರಿಕೆ ಸಲ್ಲಿಸಿದರು. ಬೆಂಬಲಿಗರೊಂದಿಗೆ ಬಂದ ಅಭ್ಯರ್ಥಿಗಳು ಕ್ಷೇತ್ರದಲ್ಲಿ ತಮ್ಮ ಶಕ್ತಿ ಪ್ರದರ್ಶಿಸಿದರು.

ಹೆಬ್ಬಾಳ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಬೈರತಿ ಸುರೇಶ್ ಅವರು ತಾವರಕೆರೆಯ ರಾಮೇದೇವರು ಹಾಗೂ ಬೈರತಿಯ ಆಂಜನೇಯ, ಬಸವಣ್ಣ ದೇವರಿಗೆ ಕುಟುಂಬ ಸಮೇತ ವಿಶೇಷ ಪೂಜೆ ಸಲ್ಲಿಸಿ ನಂತರ ಮೆರವಣಿಗೆ ಆರಂಭಿಸಿದರು. ಸಾವಿರಾರು ಬೆಂಬಲಿಗರೊಂದಿಗೆ ರೋಡ್‌ಶೋ ನಡೆಸಿ ತಮ್ಮ ಶಕ್ತಿ ಪ್ರದರ್ಶಿಸಿದರು.

ಎಚ್‌ಎಂಟಿ ಮೈದಾನದಿಂದ ಆರ್.ಟಿ. ನಗರದ ಮುಖ್ಯ ಮಾರ್ಗವಾಗಿ ಮುನಿರೆಡ್ಡಿಪಾಳ್ಯದ ಬಿಬಿಎಂಪಿ ಮುಖ್ಯ ಕಚೇರಿವರೆಗೆ ರ್‍ಯಾಲಿ ನಡೆಸಿದರು.

ಬಿಜೆಪಿಯಿಂದ ಜಗದೀಶ್ ಕಟ್ಟಾ ಅವರು ಸಾವಿರಾರು ಬೆಂಬಲಿಗರೊಂದಿಗೆ ಮೆರವಣಿಗೆ ನಡೆಸಿದರು. ಕಲಾತಂಡಗಳು ರ್‍ಯಾಲಿಯಲ್ಲಿ ಹೆಜ್ಜೆ ಹಾಕಿದವು. ಸಂಸದ ಸದಾನಂದಗೌಡ, ಚೆಲುವಾದಿ ನಾರಾಯಣಸ್ವಾಮಿ, ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಜತೆಯಲ್ಲಿದ್ದರು.

ಬ್ಯಾಟರಾಯನಪುರ ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿ ಕೃಷ್ಣಬೈರೇಗೌಡ, ಯಶವಂತಪುರ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಬಾಲರಾಜಗೌಡ, ಬೊಮ್ಮನಹಳ್ಳಿ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಉಮಾಪತಿಗೌಡ, ಯಲಹಂಕ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಕೇಶವ ರಾಜಣ್ಣ ರ್‍ಯಾಲಿ ನಡೆಸಿದರು.

ನಾಮಪತ್ರ ಸಲ್ಲಿಕೆಗೂ ಮುನ್ನ ಅಭ್ಯರ್ಥಿಗಳು ದೇವಸ್ಥಾನಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದ ನಂತರ ಕಾರ್ಯಕರ್ತರು, ಬೆಂಬಲಿಗರೊಂದಿಗೆ ರೋಡ್ ಶೋ ನಡೆಸಿದರು. ತೆರೆದ ವಾಹನಗಳಲ್ಲಿ ಕಾರ್ಯಕರ್ತರು ಮತ್ತು ಬೆಂಬಲಿಗರೊಂದಿಗೆ ಸಾಗಿ ಶಕ್ತಿ ಪ್ರದರ್ಶಿಸಿದರು.

ಅಮಾವಾಸ್ಯೆ ಕಾರಣಕ್ಕೆ ಮೊದಲೇ ನಾಮಪತ್ರ ಸಲ್ಲಿಸಿದ್ದ ಕೆಲವು ಅಭ್ಯರ್ಥಿಗಳು, ಗುರುವಾರ ರೋಡ್ ಶೋ ನಡೆಸಿ ಶಕ್ತಿ ಪ್ರದರ್ಶನವನ್ನಷ್ಟೇ ಮಾಡಿದರು.

ರ್‍ಯಾಲಿಗಳ ಸಂದರ್ಭದಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ವಾಹನಗಳು ಸಾಲುಗಟ್ಟಿ ನಿಂತಿದ್ದವು. ದಟ್ಟಣೆಯಲ್ಲಿ ಸಿಲುಕಿ ಜನ ಪರದಾಡಿದರು.

ಕ್ಷೇತ್ರ	ಬ್ಯಾಟರಾಯನಪುರ
ಅಭ್ಯರ್ಥಿ ಹೆಸರು	ಕೃಷ್ಣಬೈರೇಗೌಡ (50)
ಪಕ್ಷ	ಕಾಂಗ್ರೆಸ್
ಅಭ್ಯರ್ಥಿಯ ಕುಟುಂಬದ ಒಟ್ಟು ಆಸ್ತಿ	₹16.70 ಕೋಟಿ
ಎಷ್ಟು ಹೆಚ್ಚಳ	₹4 ಕೋಟಿ
ಅಭ್ಯರ್ಥಿಯ ಸಾಲ	₹95.21 ಲಕ್ಷ
ಅಪರಾಧ ಪ್ರಕರಣ	2
ಶಿಕ್ಷಣ	ಬಿಬಿಎಂ, ಎಂ.ಎ. (ಅಮೆರಿಕನ್ ಯೂನಿವರ್ಸಿಟಿ)
ಚರಾಸ್ತಿ	₹5.51 ಕೋಟಿ
ಸ್ಥಿರಾಸ್ತಿ	₹11.19 ಕೋಟಿ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹9.96 ಕೋಟಿ



ಯಲಹಂಕ: ಬಿಎಸ್‌ಪಿ ಅಭ್ಯರ್ಥಿ ನಾಮಪತ್ರ ಸಲ್ಲಿಕೆ

ಯಲಹಂಕ: ಯಲಹಂಕ ಕ್ಷೇತ್ರಕ್ಕೆ ಬಿಎಸ್‌ಪಿ ಅಭ್ಯರ್ಥಿಯಾಗಿ ಸಂದೀಪ್ ಮಾರಸಂದ್ರ ಮುನಿಯಪ್ಪ ನಾಮಪತ್ರ ಸಲ್ಲಿಸಿದ್ದಾರೆ.

ನೂರಾರು ಕಾರ್ಯಕರ್ತರೊಂದಿಗೆ ಮೆರವಣಿಗೆಯಲ್ಲಿ ಸಾಗಿ, ಚುನಾವಣಾಧಿಕಾರಿಗಳಿಗೆ ಉಮೇದುವಾರಿಕೆ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಬಿಎಸ್‌ಪಿ ರಾಜ್ಯ ಉಸ್ತುವಾರಿ ಮಾರಸಂದ್ರ ಮುನಿಯಪ್ಪ, ‘ಯಲಹಂಕ ವಿಧಾನಸಭಾ ಕ್ಷೇತ್ರವು ಅಭಿವೃದ್ಧಿಯಲ್ಲಿ ಇನ್ನೂ ಹಿಂದೆ ಉಳಿದಿದೆ. ಬಿಎಸ್‌ಪಿ ಅಭ್ಯರ್ಥಿಯನ್ನು ಗೆಲ್ಲಿಸಿದರೆ ಅಭಿವೃದ್ಧಿ ಕಾರ್ಯಗಳನ್ನು ತ್ವರಿತವಾಗಿ ಮಾಡಲಾಗುವುದು’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಎಸ್‌ಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಶೋಕ್ ಸಿದ್ಧಾರ್ಥ, ಮುಖಂಡರಾದ ಮಂಜುನಾಥ್, ನಟರಾಜ್, ಶ್ರೀಧರ್, ನಾಗರಾಜ್, ಸುಜೀತ್, ಬಿಳಿಜಾಜಿ ಕೃಷ್ಣ, ಗಂಗಾಧರ್, ನಂಜುಂಡಪ್ಪ, ರಾಮಾಂಜಿನಪ್ಪ ಇದ್ದರು.

ಮತದಾರರೇ ತಾರಾ ಪ್ರಚಾರಕರು: ಕೃಷ್ಣ ಬೈರೇಗೌಡ

ಯಲಹಂಕ: ಬ್ಯಾಟರಾಯನಪುರ ಕಾಂಗ್ರೆಸ್ ಅಭ್ಯರ್ಥಿ ಕೃಷ್ಣ ಬೈರೇಗೌಡ ಅವರು ಬೆಂಬಲಿಗರೊಂದಿಗೆ ರ್‍ಯಾಲಿಯಲ್ಲಿ ತೆರಳಿ ಶಕ್ತಿ ಪ್ರದರ್ಶಿಸಿದರು.

ಕೊಡಿಗೇಹಳ್ಳಿ ಗೇಟ್ ಸಮೀಪ ಗುಂಡಾಂಜನೇಯಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದರು. ನಂತರ ತಮ್ಮ ಸಾವಿರಾರು ಕಾರ್ಯಕರ್ತರೊಂದಿಗೆ ಕೊಡಿಗೇಹಳ್ಳಿ ಮುಖ್ಯರಸ್ತೆಯಿಂದ ಬ್ಯಾಟರಾಯನಪುರದವರೆಗೆ ಮೆರವಣಿಗೆ ನಡೆಸಿದರು. ಬಳಿಕ ನಾಮಪತ್ರ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ‘ಬಿಜೆಪಿ ರಾಜ್ಯದಲ್ಲಿ ಮುಳುಗುತ್ತಿರುವ ಹಡಗು. ಬಿಜೆಪಿ ಹಿಂದೆ ಹೋಗಿ ಕೆಲಸ ಮಾಡುವ ಸ್ಟಾರ್ ಪ್ರಚಾರಕರನ್ನೂ ಮುಳುಗಿಸುತ್ತಾರೆ. ನಮಗೆ ಯಾವ ಸ್ಟಾರ್ ಪ್ರಚಾರಕರ ಅಗತ್ಯವಿಲ್ಲ. ಮತದಾರರೇ ಸ್ಟಾರ್ ಪ್ರಚಾರಕರು’ ಎಂದರು.

ಮುಖಂಡರಾದ ಎನ್.ಎನ್.ಶ್ರೀನಿವಾಸಯ್ಯ, ಎಂ.ಜಯಗೋಪಾಲಗೌಡ, ಎನ್.ಕೆ.ಮಹೇಶ್‌ಕುಮಾರ್, ದಾನೇಗೌಡ, ಕೆ.ಅಶೋಕನ್, ರವಿಕುಮಾರ್, ಬಿ.ಕೆ.ಮಂಜುನಾಥಗೌಡ, ಎಂ.ಹನುಮಂತೇ ಗೌಡ, ಟಿ.ಜಿ. ಚಂದ್ರು ಇದ್ದರು.

ನಾಗರಾಜಗೌಡ ನಾಮಪತ್ರ: ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಪಿ.ನಾಗರಾಜಗೌಡ ಅವರು ಜೆಡಿಎಸ್ ಅಭ್ಯರ್ಥಿಯಾಗಿ ಗುರುವಾರ ನಾಮಪತ್ರ ಸಲ್ಲಿಸಿದರು.

ಕೆ.ಆರ್.ಪುರ: ಡಿ.ಕೆ.ಮೋಹನ್ ನಾಮಪತ್ರ

ಕೆ.ಆರ್.ಪುರ: ಕೆ.ಆರ್.ಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಮೋಹನ್ ಅವರು ಬೆಂಬಲಿಗರೊಂದಿಗೆ ತೆರಳಿ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಸಲ್ಲಿಕೆ ಮುನ್ನ ದೇವಸಂದ್ರದ ವೇಣುಗೋಪಾಲಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಅಪಾರ ಬೆಂಬಲಿಗರೊಂದಿಗೆ ತೆರೆದ ವಾಹನದಲ್ಲಿ ಬಿಬಿಎಂಪಿ ಕಚೇರಿಯವರೆಗೂ ರೋಡ್ ಶೋ ನಡೆಸಿದರು.

ಡಿ.ಕೆ.ಮೋಹನ್ ಅವರಿಗೆ ಸಾಥ್ ನೀಡಿದ್ದ ಶರತ್ ಬಚ್ಚೇಗೌಡ, ‘ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದ್ದು, ಅದಕ್ಕೆ ಕಡಿವಾಣ ಹಾಕಬೇಕಾದರೆ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು. ಆದ್ದರಿಂದ ಡಿ.ಕೆ.ಮೋಹನ್ ಅವರನ್ನು ಗೆಲ್ಲಿಸಬೇಕು’ ಎಂದು ಮನವಿ ಮಾಡಿದರು.

ಮುಖಂಡರಾದ ರಾಜೀವ್‌ಗೌಡ, ಎಂ.ನಾರಾಯಣಸ್ವಾಮಿ, ನಾಗರಾಜ್ ಯಾದವ್ ಇದ್ದರು.


ಕೆ.ಆರ್‌.ಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ಕೆ.ಮೋಹನ್ ಅವರು ನಾಮಪತ್ರ ಸಲ್ಲಿಕೆಗೂ ಮುನ್ನ ಮೆರವಣಿಗೆ ನಡೆಸಿದರು. ಶಾಸಕ ಶರತ್ ಬಚ್ಚೇಗೌಡ ಇದ್ದರು


ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಶ್ರೀಧರ ರೆಡ್ಡಿ ಅವರು ಮೆರವಣಿಗೆಯಲ್ಲಿ ಸಾಗಿ ನಾಮಪತ್ರ ಸಲ್ಲಿಸಿದರು. ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಇದ್ದರು

‘ದುರಾಡಳಿತ ಕೊನೆಗಾಣಿಸಿ’

ಬೊಮ್ಮನಹಳ್ಳಿ: ಬೊಮ್ಮನಹಳ್ಳಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಉಮಾಪತಿ ಶ್ರೀನಿವಾಸಗೌಡ ರೋಡ್ ಶೋ ನಡೆಸಿದರು.

ಬಳಿಕ ಮಾತನಾಡಿದ ಅವರು, ‘ಕ್ಷೇತ್ರದಲ್ಲಿ ನಡೆದಿರುವ ಕಳಪೆ ಕಾಮಗಾರಿಗಳಿಂದಾಗಿ ಶಾಸಕ ಸತೀಶ್ ರೆಡ್ಡಿ ಭಾರಿ ಆಸ್ತಿ ಮಾಡಿದ್ದಾರೆ. ಕಾಂಗ್ರೆಸ್ ಗೆಲುವಿನ ಮೂಲಕ ಕ್ಷೇತ್ರಕ್ಕೆ ಭ್ರಷ್ಟಾಚಾರದಿಂದ ಮುಕ್ತಿ ಸಿಗಲಿದೆ’ ಎಂದು ಹೇಳಿದರು.

ಎಚ್‌ಎಸ್‌ಆರ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಟಿ.ವಾಸುದೇವರೆಡ್ಡಿ ಮಾತನಾಡಿ ‘ಇದುವರೆಗಿನ ಸಮೀಕ್ಷೆಗಳು ರಾಜ್ಯದಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತ ಗಳಿಸಲಿದೆ ಎಂದಿವೆ. ಅದು ಬೊಮ್ಮನಹಳ್ಳಿಗೂ ಅನ್ವಯ ಆಗಲಿದ್ದು, ಕ್ಷೇತ್ರದಲ್ಲಿನ ಹದಿನೈದು ವರ್ಷಗಳ ದುರಾಡಳಿತ ಕೊನೆಯಾಗಲಿದೆ’ ಎಂದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಬೊಮ್ಮನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವೀಂದ್ರ, ಬಿಳೇಕಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶ್ವತ್ಥ ನಾರಾಯಣ, ಯುವ ಕಾಂಗ್ರೆಸ್ ಮುಖಂಡ ಅನಿಲ್ ರೆಡ್ಡಿ, ಸಯ್ಯದ್ ಸರ್ದಾರ್ ಇದ್ದರು.



ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಎಎಪಿ ಅಭ್ಯರ್ಥಿ ಕೀರ್ತನ್‌ಕುಮಾರ್ ಮಂಜಪ್ಪ ಅವರು ಮೆರವಣಿಗೆಯಲ್ಲಿ ಸಾಗಿ ನಾಮಪತ್ರ ಸಲ್ಲಿಸಿದರು. ರಾಜ್ಯಸಭೆ ಸದಸ್ಯ ರಾಘವ್ ಚಡ್ಡಾ, ಎಎಪಿ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿರೆಡ್ಡಿ, ಎಎಪಿ ಪ್ರಚಾರ ಸಮಿತಿ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು ಇದ್ದರು


ಹೆಬ್ಬಾಳ ವಿಧಾನಸಭೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಬೈರತಿ ಸುರೇಶ್ ಅವರು ಬೆಂಬಲಿಗರೊಂದಿಗೆ ಆರ್‌.ಟಿ. ನಗರದಲ್ಲಿ ರೋಡ್ ಶೋ ನಡೆಸಿದರು. ಈ ಸಂದರ್ಭದಲ್ಲಿ ಕಾರ್ಯಕರ್ತರು ಹೂಮಳೆ ಸುರಿಸಿದರು


ಬ್ಯಾಟರಾಯನಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಚ್‌.ಸಿ. ತಮ್ಮೇಶ್‌ಗೌಡ ಅವರು ಬೆಂಬಲಿಗರೊಂದಿಗೆ ಮೆರವಣಿಗೆ ನಡೆಸಿ ಬುಧವಾರ ನಾಮಪತ್ರ ಸಲ್ಲಿಸಿದರು. ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ, ಸಂಸದ ಡಿ.ವಿ. ಸದಾನಂದಗೌಡ, ಮುಖಂಡರಾದ ತಾರಾ ಅನೂರಾಧ, ಬಿ.ನಾರಾಯಣ, ಪಿ.ಕೆ. ರಾಜಗೋಪಾಲ್, ಟಿ.ಪಿ.ಪ್ರಕಾಶ್, ಮುನಿಹನುಮಯ್ಯ ಇದ್ದರು


ಯಶವಂತಪುರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್ ಬಾಲರಾಜಗೌಡ ಅವರು ಬೆಂಬಲಿಗರೊಂದಿಗೆ ಮೆರವಣಿಗೆಯಲ್ಲಿ ಸಾಗಿ ನಾಮಪತ್ರ ಸಲ್ಲಿಸಿದರು

ಪ್ರಚಾರಕ್ಕೆ ಶಾ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಮುಗಿಯುತ್ತಿದ್ದಂತೆ ರಾಜ್ಯಕ್ಕೆ ಕಾಲಿಡುತ್ತಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ, ಶುಕ್ರವಾರ ರೋಡ್ ಶೋ ನಡೆಸಲಿದ್ದಾರೆ. ಅದೇ ದಿನ ಸಂಜೆ ನಡೆಯಲಿರುವ ಸಭೆಯಲ್ಲಿ ಪಕ್ಷದ ಪ್ರಮುಖರ ಜತೆ ಚುನಾವಣಾ ಕಾರ್ಯತಂತ್ರದ ಬಗ್ಗೆ ಸಮಾಲೋಚನೆ ನಡೆಸಲಿದ್ದಾರೆ.

ಮಧ್ಯಾಹ್ನ 3.15ಕ್ಕೆ ಕೆಂಪೇಗೌಡ ವಿಮಾನ ನಿಲ್ದಾಣಕ್ಕೆ ಬರಲಿರುವ ಅವರು, ದೇವನಹಳ್ಳಿ ಕ್ಷೇತ್ರವ್ಯಾಪ್ತಿಯ ಶಿವಗಣೇಶ ಸರ್ಕಲ್‌ನಿಂದ 3.45ಕ್ಕೆ ರೋಡ್ ಶೋಗೆ ಚಾಲನೆ ನೀಡುವರು ಬಿಜೆಪಿ ಅಭ್ಯರ್ಥಿ ಪಿಳ್ಳ ಮುನಿಶಾಮಪ್ಪ ಪರ ಪ್ರಚಾರ ನಡೆಸುವ ರೋಡ್ ಶೋ ಸಂಜೆ 5.20ಕ್ಕೆ ವಿಜಯಪುರ ಪಟ್ಟಣದ ಚನ್ನರಾಯಪಟ್ಟಣ ಕ್ರಾಸ್‌ನಲ್ಲಿ ಮುಕ್ತಾಯವಾಗಲಿದೆ. ಸಂಜೆ 6.10ರಿಂದ ಹೋಟೆಲ್ ತಾಜ್ ವೆಸ್ಟ್ ಎಂಡ್‌ನಲ್ಲಿ ಪಕ್ಷದ ಪ್ರಮುಖರ ಸಭೆ ನಡೆಯಲಿದೆ. ಐವತ್ತು ಪ್ರಮುಖರಿಗೆ ಸಭೆಗೆ ಆಹ್ವಾನವಿದೆ ಎಂದು ಗೊತ್ತಾಗಿದೆ.

ಏ.22ಕ್ಕೆ ‘ದ ರಿಟ್ಜ್ ಕಾರ್ಲಟನ್’ನಲ್ಲಿ ಬೆಳಿಗ್ಗೆ ನಡೆಯುವ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವರು, 11.40ಕ್ಕೆ ದೆಹಲಿಗೆ ವಾಪಸ್ ತೆರಳುವರು.

ಮಾರ್ಗ ಬದಲಾವಣೆ

ಬೆಂಗಳೂರು: ಬಿಜೆಪಿ ಅಭ್ಯರ್ಥಿಗಳ ಪರವಾಗಿ ಕೇಂದ್ರ ಸಚಿವ ಅಮಿತ್ ಶಾ ಅವರು ಏಪ್ರಿಲ್ 21ರಂದು ನಗರದ ವಿವಿಧೆಡೆ ರೋಡ್ ಶೋ ನಡೆಸುತ್ತಿದ್ದು ವಿವಿಧ ಜಂಕ್ಷನ್ ಹಾಗೂ ರಸ್ತೆಗಳಲ್ಲಿ ವಾಹನ ಸಂಚಾರದ ಮಾರ್ಗ ಬದಲಾವಣೆ ಮಾಡಲಾಗಿದೆ. ಮಧ್ಯಾಹ್ನ 3ರಿಂದ ಸಂಜೆ 7ರ ತನಕ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆ, ಹೆಬ್ಬಾಳ ಜಂಕ್ಷನ್, ಮೇಖ್ರಿ ವೃತ್ತದ ಮೂಲಕ ತೆರಳುವ ವಾಹನಗಳು ಬದಲಿ ಮಾರ್ಗದಲ್ಲಿ ಸಂಚರಿಸುವಂತೆ ಸಂಚಾರ ಪೊಲೀಸರು ಕೋರಿದ್ದಾರೆ.

ವಿನಯ್ ಅರ್ಜಿ: ಸಿಬಿಐಗೆ ನೋಟಿಸ್

ಬೆಂಗಳೂರು: ‘ಧಾರವಾಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಕಾರಣ 50 ದಿನಗಳ ಕಾಲ ಧಾರವಾಡ ಜಿಲ್ಲೆಯಲ್ಲಿ ಇರಲು ಅನುಮತಿ ನೀಡಬೇಕು’ ಎಂದು ಕೋರಿ ಮಾಜಿ ಸಚಿವ ವಿನಯ್ ಕುಲಕರ್ಣಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಸಿಬಿಐಗೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಬಿಜೆಪಿ ಮುಖಂಡ ಯೋಗೀಶ್ ಗೌಡ ಗೌಡರ್ ಕೊಲೆ ಪ್ರಕರಣದ 15ನೇ ಆರೋಪಿಯಾಗಿರುವ ವಿನಯ ಕುಲಕರ್ಣಿ ಸಲ್ಲಿಸಿರುವ ಎರಡು ಕ್ರಿಮಿನಲ್ ಅರ್ಜಿಗಳನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ವಿನಯ್ ಕುಲಕರ್ಣಿ ಪರ ಹಿರಿಯ ವಕೀಲ ಸಿ.ಎಚ್ ಜಾಧವ್, ‘ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಜಾಮೀನು ಪಡೆದಿರುವ ಅರ್ಜಿದಾರರಿಗೆ, ಧಾರವಾಡ ಪ್ರವೇಶಿಸದಂತೆ ನ್ಯಾಯಾಲಯ ಷರತ್ತು ವಿಧಿಸಿದೆ. ಆದರೆ, ಸದ್ಯ ಚುನಾವಣೆಗೆ ಸ್ಪರ್ಧಿಸಿರುವ ಹಿನ್ನೆಲೆಯಲ್ಲಿ 50 ದಿನ ಧಾರವಾಡದಲ್ಲಿ ಇರಲು ಅನುಮತಿ ನೀಡುವಂತೆ ಅರ್ಜಿದಾರರು ಕೋರಿದ್ದ ಮನವಿಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ’ ಎಂದು ವಿವರಿಸಿದರು. ವಿಚಾರಣೆಯನ್ನು ಶುಕ್ರವಾರಕ್ಕೆ (ಏ.21) ಮುಂದೂಡಲಾಯಿತು.

ಕಾಂಗ್ರೆಸ್ ಸೇರಿದ ಬಿಜೆಪಿ ಕಾರ್ಯಕರ್ತರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ವಿರುದ್ಧ ಬಂಡಾಯದ ಬಾವುಟ ಬೀಸಿದ್ದ ಕೆಲ ಕಾರ್ಯಕರ್ತರು ಗುರುವಾರ ಸಾಮೂಹಿಕವಾಗಿ ಕಾಂಗ್ರೆಸ್ ಸೇರಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಅವರ ಲಕ್ಕಸಂದ್ರ ನಿವಾಸದಲ್ಲಿ 200ಕ್ಕೂ ಹೆಚ್ಚು ಬಿಜೆಪಿ ಕಾರ್ಯಕರ್ತರನ್ನು ರಾಮಲಿಂಗಾರೆಡ್ಡಿ ಬರ ಮಾಡಿಕೊಂಡರು.

‘ಮುಂದಿನ ಎರಡು –ಮೂರು ದಿನಗಳಲ್ಲಿ ಯುವ ನಾಯಕರು ಒಳಗೊಂಡಂತೆ ಸಾವಿರಾರು ಮಂದಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರಲಿದ್ದಾರೆ. ಬಿಜೆಪಿಯಲ್ಲಿ ನಾಯಕತ್ವದ ಕೊರತೆ ಎದ್ದು ಕಾಣುತ್ತಿದ್ದು, ಲಕ್ಷ್ಮಣ ಸವದಿ, ಜಗದೀಶ್ ಶೆಟ್ಟರ್ ಕಾಂಗ್ರೆಸ್ ಸೇರ್ಪಡೆಯಿಂದ ಕಾಂಗ್ರೆಸ್‌ಗೆ ಬಲ ಬಂದಿದೆ’ ಎಂದು ರಾಮಲಿಂಗಾರೆಡ್ಡಿ ಹೇಳಿದರು.

ಕಾಂಗ್ರೆಸ್ ಸೇರಿದ ಸಾಗರ್ ಬುಜ್ಜಿ ಮಾತನಾಡಿ, ‘ಐದು ವರ್ಷಗಳಿಂದ ಬಿಜೆಪಿ ಯುವ ಮೋರ್ಚಾದಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದು, ಕಾರ್ಯಕರ್ತರು ಬೆಳೆಯಲು ಬಿಜೆಪಿಯಲ್ಲಿ ಅವಕಾಶವಿಲ್ಲ’ ಎಂದು ಆರೋಪಿಸಿದರು.


ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ಕಾರ್ಯಕರ್ತರನ್ನು ರಾಮಲಿಂಗಾರೆಡ್ಡಿ ಬರ ಮಾಡಿಕೊಂಡರು

ಪುಲಕೇಶಿನಗರ: ಇಬ್ಬರ ಜಗಳದಿಂದ ಮೂರನೇ ವ್ಯಕ್ತಿಗೆ ಟಿಕೆಟ್!

ಪ್ರಜಾವಾಣಿ ವಾರ್ತೆ


ಎ.ಸಿ. ಶ್ರೀನಿವಾಸ್

ಬೆಂಗಳೂರು: ಪುಲಕೇಶಿನಗರ ಕ್ಷೇತ್ರದ ಟಿಕೆಟ್ ಯಾರಿಗೆ ನೀಡಬೇಕೆಂಬ ವಿಷಯದಲ್ಲಿ ಕೊನೆಕ್ಷಣದವರೆಗೂ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಪಟ್ಟು ಸಡಿಲಿಸದ ಕಾರಣ, ಈ ಕ್ಷೇತ್ರದ ಟಿಕೆಟ್ ಜಿ. ಪರಮೇಶ್ವರ ಅವರ ಆಪ್ತ ಎ.ಸಿ. ಶ್ರೀನಿವಾಸ್ ಪಾಲಾಗಿದೆ.

ದುಷ್ಕರ್ಮಿಗಳಿಂದ ಮನೆಗೆ ಬೆಂಕಿ ಬಿದ್ದು ಕಂಗೆಟ್ಟಿದ್ದ ಕ್ಷೇತ್ರದ ಹಾಲಿ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಮತ್ತು ಬೆಂಕಿ ಹಾಕಿದ ಆರೋಪಿಗಳಿಗೆ ಕುಮ್ಮಕ್ಕು ನೀಡಿದ ಆರೋಪದಲ್ಲಿ ಜೈಲು ಸೇರಿದ್ದ ಬಿಬಿಎಂಪಿ ಮಾಜಿ ಮೇಯರ್ ಸಂಪತ್ ರಾಜ್ ಅವರಿಗೂ ಟಿಕೆಟ್ ಸಿಕ್ಕಿಲ್ಲ.

ಕೆ.ಜಿ. ಹಳ್ಳಿ ಡಿ.ಜೆ.ಹಳ್ಳಿ ಗಲಾಟೆಯ ಸಂದರ್ಭದಲ್ಲಿ ಅಖಂಡ ಶ್ರೀನಿವಾಸ ಮೂರ್ತಿ ಅವರ ಮನೆಗೆ ಬೆಂಕಿ ಬಿದ್ದಿತ್ತು. ಈ ಘಟನೆಯ ಹಿಂದೆ ಸಂಪತ್ ರಾಜ್ ಕೈವಾಡದ ಆರೋಪ ಕೇಳಿಬಂದಿತ್ತು. ಈ ಘಟನೆಯ ಬಳಿಕ ಕ್ಷೇತ್ರದ ಮುಸ್ಲಿಂ ಸಮುದಾಯ ಅಖಂಡ ಅವರಿಗೆ ಟಿಕೆಟ್ ನೀಡದಂತೆ ಕಾಂಗ್ರೆಸ್ ಹೈಕಮಾಂಡ್ ಮೇಲೆ ಒತ್ತಡ ಹಾಕಿತ್ತು. ಹೀಗಾಗಿ ಕ್ಷೇತ್ರ ಟಿಕೆಟ್ ಹಂಚಿಕೆ ಕಾಂಗ್ರೆಸ್ ವರಿಷ್ಠರಿಗೆ ಕಗ್ಗಂಟಾಗಿತ್ತು.

ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಈ ಕ್ಷೇತ್ರದಲ್ಲಿ ಅನುಕಂಪದ ಆಧಾರದಲ್ಲಿ ಮತ್ತು ಹಾಲಿ ಶಾಸಕರೂ ಆಗಿರುವ ಶ್ರೀನಿವಾಸ ಮೂರ್ತಿ ಅವರಿಗೇ ಟಿಕೆಟ್ ನೀಡುವಂತೆ ಸಿದ್ದರಾಮಯ್ಯ ಲಾಬಿ ಮಾಡಿದ್ದರು. ಆದರೆ, ಅಖಂಡ ಅವರಿಗೆ ಟಿಕೆಟ್ ನೀಡುವ ವಿಷಯದಲ್ಲಿ ವಿರೋಧ ವ್ಯಕ್ತಪಡಿಸಿದ್ದ ಡಿ.ಕೆ. ಶಿವಕುಮಾರ್, ಸಂಪತ್ ರಾಜ್ ಪರ ಒಲವು ವ್ಯಕ್ತಪಡಿಸಿದ್ದರು.

ಈ ಇಬ್ಬರ ಹಗ್ಗಜಗ್ಗಾಟ ಪರಮೇಶ್ವರ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಎ.ಸಿ. ಶ್ರೀನಿವಾಸ್ ಅವರಿಗೆ ಟಿಕೆಟ್ ಸಿಗುವಂತೆ ಮಾಡಿದೆ. ಶ್ರೀನಿವಾಸ್ ಅವರು ದೇವನಹಳ್ಳಿ ಕ್ಷೇತ್ರದಿಂದ ಕಣಕ್ಕೆ ಇಳಿಯಲು ತಯಾರಿ ನಡೆಸಿದ್ದರು. ಆದರೆ, ಅಲ್ಲಿ ಮಾಜಿ ಸಂಸದ ಕೆ.ಎಚ್. ಮುನಿಯಪ್ಪ ಅವರಿಗೆ ಪಕ್ಷ ಟಿಕೆಟ್ ನೀಡಿತ್ತು. ಇದರಿಂದ ಶ್ರೀನಿವಾಸ್ ಅವರು ತೀವ್ರ ನಿರಾಶೆಗೆ ಒಳಗಾಗಿದ್ದರು.

ಕಾಂಗ್ರೆಸ್ ಬಿಡುಗಡೆ ಮಾಡಿದ್ದ ಮೂರನೇ ಪಟ್ಟಿಯಲ್ಲಿಯೂ ಹೆಸರು ಇಲ್ಲದೇ ಇದ್ದಾಗ, ಟಿಕೆಟ್ ಕೈ ತಪ್ಪಿರುವುದನ್ನು ಖಚಿತಪಡಿಸಿಕೊಂಡಿದ್ದ ಅಖಂಡ ಶ್ರೀನಿವಾಸಮೂರ್ತಿ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದರು.

ಸೆಲೆಬ್ರಿಟಿ ಮಾತು



ಭಾರತದ ಪ್ರಜೆಯ ಹೊಣೆ

ಅರ್ಜುನ್ ಹಾಲಪ್ಪ,
ಒಲಿಂಪಿಯನ್ ಹಾಕಿ ಆಟಗಾರ

ಮತದಾನವನ್ನು ಎಲ್ಲರೂ ಮಾಡಬೇಕು. ಇದು ಎಲ್ಲರ ಆದ್ಯ ಕರ್ತವ್ಯ. ನಾನು ಇರುವುದು ಬೆಂಗಳೂರಿನಲ್ಲಿ. ಮತಚಲಾವಣೆ ಹಕ್ಕು ಚಲಾಯಿಸಲು ನನ್ನ ತವರೂರಿಗೆ ಹೋಗುವುದನ್ನು ತಪ್ಪಿಸುವುದಿಲ್ಲ. ಭಾರತದ ಪ್ರಜೆಯಾಗಿ ಇದು ನನ್ನ ಜವಾಬ್ದಾರಿ. ಮತದಾನ ಪ್ರಮಾಣ ಹೆಚ್ಚಬೇಕು. ಅದಕ್ಕಾಗಿ ಎಲ್ಲರೂ ಕೈಜೋಡಿಸಬೇಕು.

ಎಸ್‌ಯುಸಿಐ: 14 ಕ್ಷೇತ್ರಗಳಲ್ಲಿ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭೆ ಚುನಾವಣೆಯಲ್ಲಿ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) (ಎಸ್‌ಯುಸಿಐ–ಸಿ) ಪಕ್ಷವು 14 ವಿಧಾನಸಭೆ ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ’ ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಕೆ. ಉಮಾ ತಿಳಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷಗಳು ಅಧಿಕಾರ ಪಡೆಯಲು ಹವಣಿಸುತ್ತಿವೆ. ಬಿಜೆಪಿಯ ದುರಾಡಳಿತ, ಭ್ರಷ್ಟಾಚಾರ, ಕೋಮುವಾದದ ವಿವಾದಗಳಿಂದ ಜನರ ತಿರಸ್ಕಾರಕ್ಕೆ ಗುರಿಯಾಗಿದೆ. ರಾಜ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ, ಅಮಿತಾ ಶಾ ಹತ್ತಾರು ಬಾರಿ ಬಂದರೂ ಬಿಜೆಪಿ ಕುರಿತು ಜನರಿಗೆ ಒಲವು ಮೂಡುತ್ತಿಲ್ಲ. ರಾಜ್ಯದಲ್ಲಿ ಬೆಲೆ ಏರಿಕೆ, ನಿರುದ್ಯೋಗ ಸಮಸ್ಯೆಗಳಿಂದ ಸಾರ್ವಜನಿಕರು ತತ್ತರಿಸಿದ್ದಾರೆ. ಸರ್ಕಾರದ ಸಾಲ ₹5 ಲಕ್ಷ ಕೋಟಿ ದಾಟಿದೆ. ಅಭಿವೃದ್ಧಿಯ ಹೆಸರಿನಲ್ಲಿ ಲೂಟಿ ಮಾಡಲಾಗಿದೆ’ ಎಂದು ಆರೋಪಿಸಿದರು.

‘ನಮ್ಮ ಪಕ್ಷವು ರಾಜ್ಯದ 14 ವಿಧಾನಸಭೆ ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದೆ. ಶಿಕ್ಷಣದ ಸಾರ್ವತ್ರಿಕರಣ, ಜನಪರ ಶಿಕ್ಷಣ ನೀತಿ ಜಾರಿಗೊಳಿಸುವುದು. ಉಚಿತ ಆರೋಗ್ಯ ಸೇವೆ ಮತ್ತು ಅದರ ಬಲವರ್ಧನೆ, ಪಡಿತರ ವ್ಯವಸ್ಥೆಯನ್ನು ಬಲಪಡಿಸುವುದು. ಜನಪರವಾದ ಕೃಷಿ ನೀತಿ ರಚನೆ, ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ, ಉದ್ಯೋಗ ಖಾತ್ರಿ ಯೋಜನೆಯನ್ನು ನಗರ ಪ್ರದೇಶಗಳಿಗೂ ವಿಸ್ತರಿಸುವುದು, ಆಶಾ, ಅಂಗನವಾಡಿ ಮತ್ತು ಬಿಸಿಯೂಟ ಕಾರ್ಯಕರ್ತೆಯರನ್ನು ಕಾಯಂಗೊಳಿಸಲು ಹೋರಾಟ ಮಾಡಲಾಗುವುದು’ ಎಂದರು.

28 ಕ್ಷೇತ್ರಗಳಲ್ಲಿ 72 ಮಹಿಳೆಯರು, ಶಿವಾಜಿನಗರ, ಪದ್ಮನಾಭನಗರದಲ್ಲಿ ಇಲ್ಲ

ಕೊನೆಯ ದಿನ 279 ನಾಮಪತ್ರ

ಪ್ರಜಾವಾಣಿ ವಾರ್ತೆ

715 ಒಟ್ಟು ನಾಮಪತ್ರ | **532** ಅಭ್ಯರ್ಥಿಗಳು

ಬೆಂಗಳೂರು: ನಗರದ 28 ವಿಧಾನಸಭೆ ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಗುರುವಾರ ಮುಗಿದಿದ್ದು, 532 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ಏ.13ರಿಂದ ಆರು ದಿನ ನಾಮಪತ್ರ ಸಲ್ಲಿಸಲು ಅವಕಾಶವಿದ್ದು, ಕೊನೆಯ ದಿನವಾದ ಗುರುವಾರ 279 ನಾಮಪತ್ರಗಳು ಸಲ್ಲಿಕೆಯಾದವು.

ರಾಜಾಜಿನಗರ, ಚಿಕ್ಕಪೇಟೆ, ಬ್ಯಾಟರಾಯನಪುರ ಕ್ಷೇತ್ರಗಳಲ್ಲಿ ತಲಾ 33 ನಾಮಪತ್ರಗಳು ಸಲ್ಲಿಕೆಯಾಗಿದ್ದು, ಇದು ಅತಿ ಹೆಚ್ಚಿನದ್ದಾಗಿವೆ. ನಂತರದಲ್ಲಿ, ಯಶವಂತಪುರ, ರಾಜರಾಜೇಶ್ವರಿನಗರ, ಕೆ.ಆರ್. ಪುರದಲ್ಲಿ ತಲಾ 31 ಹಾಗೂ ಗೋವಿಂದರಾಜನಗರದಲ್ಲಿ 29 ನಾಮಪತ್ರ ಸಲ್ಲಿಕೆಯಾಗಿವೆ.

ಪುಲಕೇಶಿನಗರ ಹಾಗೂ ಬ್ಯಾಟರಾಯನಪುರದಲ್ಲಿ ತಲಾ 28 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿರುವುದು ಅತಿ ಅಧಿಕವಾಗಿದೆ. ನಂತರ ಯಲಹಂಕ, ಚಿಕ್ಕಪೇಟೆಯಲ್ಲಿ ತಲಾ 27 ಅಭ್ಯರ್ಥಿಗಳು ಹಾಗೂ ಯಶವಂತಪುರದಲ್ಲಿ 26 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

ರಾಜರಾಜೇಶ್ವರಿನಗರ, ಜಯನಗರ ವಿಧಾನಸಭೆ ಕ್ಷೇತ್ರದಲ್ಲಿ ತಲಾ 6 ಮಹಿಳೆಯರು ನಾಮಪತ್ರ ಸಲ್ಲಿಸಿದ್ದಾರೆ. ಯಶವಂತಪುರ, ಚಿಕ್ಕಪೇಟೆಯಲ್ಲಿ ತಲಾ ಐವರು, ಗಾಂಧಿನಗರ, ಮಹಾಲಕ್ಷ್ಮಿ ಲೇಔಟ್, ಹೆಬ್ಬಾಳದಲ್ಲಿ ತಲಾ ನಾಲ್ವರು ಮಹಿಳೆಯರು ಉಮೇದುವಾರಿಕೆ ಸಲ್ಲಿಸಿದ್ದಾರೆ. 28 ಕ್ಷೇತ್ರಗಳಲ್ಲಿ 72 ಮಹಿಳೆಯರು ನಾಮಪತ್ರ ಸಲ್ಲಿಸಿದ್ದಾರೆ. ಶಿವಾಜಿನಗರ, ಪದ್ಮನಾಭನಗರದಲ್ಲಿ ಒಬ್ಬ ಮಹಿಳೆಯೂ ನಾಮಪತ್ರ ಸಲ್ಲಿಸಿಲ್ಲ. ಅಂತಿಮವಾಗಿ ಅಭ್ಯರ್ಥಿಗಳ ಅಂಕಿ–ಸಂಖ್ಯೆ ಬದಲಾವಣೆಯಾಗುವ ಸಾಧ್ಯತೆ ಇದೆ ಎಂದು ಆಯೋಗ ತಿಳಿಸಿದೆ.

ನಾಮಪತ್ರ ವಿವರ

ಕ್ಷೇತ್ರ	ಒಟ್ಟು ನಾಮಪತ್ರ	ಒಟ್ಟು ಅಭ್ಯರ್ಥಿಗಳು	ಮಹಿಳೆಯರು
ರಾಜರಾಜೇಶ್ವರಿನಗರ	31	23	6
ಶಿವಾಜಿನಗರ	23	22	0
ಶಾಂತಿನಗರ	19	15	1
ಗಾಂಧಿನಗರ	27	25	4
ರಾಜಾಜಿನಗರ	33	25	3
ಚಾಮರಾಜಪೇಟೆ	17	16	1
ಚಿಕ್ಕಪೇಟೆ	33	27	5
ಕೆ.ಆರ್.ಪುರ	31	19	3
ಮಹಾಲಕ್ಷ್ಮಿ ಲೇಔಟ್	23	19	4
ಮಲ್ಲೇಶ್ವರ	21	13	1
ಹೆಬ್ಬಾಳ	28	21	4
ಪುಲಕೇಶಿನಗರ	28	28	2
ಸರ್ವಜ್ಞನಗರ	27	19	2
ಸಿ.ವಿ. ರಾಮನ್‌ನಗರ	16	12	1
ಗೋವಿಂದರಾಜನಗರ	29	19	3
ವಿಜಯನಗರ	28	22	3
ಬಸವನಗುಡಿ	23	14	2
ಪದ್ಮನಾಭನಗರ	19	14	0
ಬಿಟಿಎಂ ಲೇಔಟ್	22	18	2
ಜಯನಗರ	26	23	6
ಬೊಮ್ಮನಹಳ್ಳಿ	24	18	3
ಯಲಹಂಕ	29	27	2
ಬ್ಯಾಟರಾಯನಪುರ	33	28	2
ಯಶವಂತಪುರ	31	26	5
ದಾಸರಹಳ್ಳಿ	25	24	3
ಮಹದೇವಪುರ	26	22	2
ಬೆಂಗಳೂರು ದಕ್ಷಿಣ	20	18	1
ಆನೇಕಲ್	23	20	1



ರ್‍ಯಾಲಿಯಲ್ಲಿ ನಟ ದರ್ಶನ್ ಭಾಗವಹಿಸಿ ಮಾತನಾಡಿದರು

ಕೇಶವರಾಜಣ್ಣ ನಾಮಪತ್ರ: ದರ್ಶನ್ ಸಾಥ್

ಪ್ರಜಾವಾಣಿ ವಾರ್ತೆ

ಯಲಹಂಕ: ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಬಿ.ಕೇಶವರಾಜಣ್ಣ ಗುರುವಾರ ನಾಮಪತ್ರ ಸಲ್ಲಿಸಿದರು. ರೋಡ್ ಶೋನಲ್ಲಿ ನಟ ದರ್ಶನ್ ಭಾಗವಹಿಸಿ ಕಾರ್ಯಕರ್ತರನ್ನು ಹುರಿದುಂಬಿಸಿದರು.

ಹಳೇನಗರದ ಕೊಂಡಪ್ಪ ಬಡಾವಣೆಯಲ್ಲಿರುವ ಗಣೇಶ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಕೇಶವರಾಜಣ್ಣ, ಕಾರ್ಯಕರ್ತರೊಂದಿಗೆ ಮೆರವಣಿಗೆ ನಡೆಸಿದರು. ಅದಕ್ಕೂ ಮುನ್ನ ಕೆಂಪೇಗೌಡರ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಚುನಾವಣಾಧಿಕಾರಿ ಕಚೇರಿ ತನಕ ಸಾವಿರಾರು ಕಾರ್ಯಕರ್ತರೊಂದಿಗೆ ರೋಡ್ ಶೋ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ದರ್ಶನ್, 'ಕೇಶವರಾಜಣ್ಣ ಒಳ್ಳೆಯ ವ್ಯಕ್ತಿಯಾಗಿದ್ದು, ಯಾರಿಗೂ ತೊಂದರೆ ಕೊಡುವವರಲ್ಲ. ಮತದಾರರು ಈ ಬಾರಿ ಅವರನ್ನು ಗೆಲ್ಲಿಸುವ ಮೂಲಕ ಈ ಕ್ಷೇತ್ರದ ಅಭಿವೃದ್ಧಿಗೆ ಸಹಕರಿಸಬೇಕು' ಎಂದು ಮನವಿ ಮಾಡಿದರು.

ಕೇಶವ ರಾಜಣ್ಣ ಮಾತನಾಡಿ, 'ಯಲಹಂಕ ಕ್ಷೇತ್ರದ ಬಿಜೆಪಿ ಆಡಳಿತದಲ್ಲಿ ದೌರ್ಜನ್ಯ ಹೆಚ್ಚಾಗಿದ್ದು, ಜನರು ಭಯದ ವಾತಾವರಣದಲ್ಲಿ ಜೀವನ ನಡೆಸಬೇಕಾದ ಪರಿಸ್ಥಿತಿಯಿದೆ. ಮುಂದಿನ ದಿನಗಳಲ್ಲಿ ಬದಲಾವಣೆಯ ಗಾಳಿ ಬೀಸಲಿದ್ದು, ಜನರು ಭಯಪಡುವ ಅಗತ್ಯವಿಲ್ಲ' ಎಂದು ತಿಳಿಸಿದರು.

ಸಾರಿಗೆ ಇಲಾಖೆಯ ವಿವರಣೆ ಕೇಳಿದ ಆಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪಕ್ಕೆ ಸಂಬಂಧಿಸಿದಂತೆ ಸಾರಿಗೆ ಇಲಾಖೆಯಿಂದ ಚುನಾವಣಾ ಆಯೋಗ (ಇ.ಸಿ) ವಿವರಣೆ ಕೇಳಿದೆ.

ಮಾರ್ಚ್ 29ರಂದು ಅಧಿಸೂಚನೆ ಹೊರಡಿಸಲಾಗಿದೆ. ಅದೇ ದಿನ ಮಧ್ಯಾಹ್ನ 3 ಗಂಟೆಗೆ ಸಾರಿಗೆ ಇಲಾಖೆಯು ಖಾಸಗಿ ವಾಹನಗಳಿಗೆ ಅನುಕೂಲವಾಗುವ 'ಹೊಸ ಸಮಗ್ರ ಮಾರ್ಗ ರಾಷ್ಟ್ರೀಕರ ಯೋಜನೆ'ಗೆ ಸಂಬಂಧಿಸಿದ ಅಧಿಸೂಚನೆ ಹೊರಡಿಸಿದೆ ಎಂದು ಆರೋಪಿಸಿ ಬ್ಯಾಟರಾಯನಪುರದ ಮಹದೇವ ಎಂಬುವರು ಚುನಾವಣಾ ಆಯೋಗಕ್ಕೆ ದೂರು ನೀಡಿದ್ದರು. ಅದನ್ನು ಆಧರಿಸಿ ಆಯೋಗವು ಈ ವಿವರಣೆ ಕೇಳಿದೆ.

ಮಾರ್ಚ್ ಮೊದಲ ವಾರದಲ್ಲಿ ಹೊಸ ಸಮಗ್ರ ಮಾರ್ಗ ರಾಷ್ಟ್ರೀಕರಣ ಯೋಜನೆಗೆ ಸಾರಿಗೆ ಇಲಾಖೆಯು ಆಕ್ಷೇಪಣೆಗಳನ್ನು ಆಹ್ವಾನಿಸಿತ್ತು. ಇದಕ್ಕೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು ಆಕ್ಷೇಪಣೆ ಸಲ್ಲಿಸಿದ್ದವು. ಹೊಸ ಯೋಜನೆಯು ಖಾಸಗಿ ಬಸ್‌ಗಳ ಕಾರ್ಯಾಚರಣೆಗೆ ಪೂರಕವಾಗಿದ್ದು, ಇದರಿಂದ ಸರ್ಕಾರಿ ಬಸ್‌ಗಳಿಗೆ ಹೊಡೆತ ಬೀಳಲಿದೆ. ನಿಗಮಗಳ ಬಸ್‌ಗಳು ಕಾರ್ಯಾಚರಣೆ ಮಾಡುವಲ್ಲಿ ಖಾಸಗಿ ಬಸ್‌ಗಳು ಸಂಚರಿಸುವಂತಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದ್ದವು.

ಶಿಡ್ಲಘಟ್ಟದ ಕಾಂಗ್ರೆಸ್ ಟಿಕೆಟ್ ₹30 ಕೋಟಿಗೆ ಮಾರಾಟ

ಶಿಡ್ಲಘಟ್ಟ (ಚಿಕ್ಕಬಳ್ಳಾಪುರ): 'ಶಿಡ್ಲಘಟ್ಟದ ಕಾಂಗ್ರೆಸ್ ಟಿಕೆಟ್ ₹30 ಕೋಟಿಗೆ ಮಾರಾಟವಾಗಿದೆ' ಎಂದು ಟಿಕೆಟ್ ವಂಚಿತ ಆಂಜಿನಪ್ಪ ಪುಟ್ಟು ಆರೋಪಿಸಿದ್ದಾರೆ.

ಕಾಂಗ್ರೆಸ್ ಬುಧವಾರ ತಡರಾತ್ರಿ ಬಿಡುಗಡೆ ಮಾಡಿದ ಪಟ್ಟಿಯಲ್ಲಿ ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರಕ್ಕೆ ಉದ್ಯಮಿ ರಾಜೀವ್ ಗೌಡ ಅವರಿಗೆ ಟಿಕೆಟ್ ಘೋಷಿಸಿದೆ. ಆಂಜಿನಪ್ಪ ಪುಟ್ಟು ಸಹ ಟಿಕೆಟ್ ಆಕಾಂಕ್ಷಿ ಆಗಿದ್ದರು.

'ಈ ಟಿಕೆಟ್ ಮಾರಾಟದ ಬಗ್ಗೆ ಈ ಹಿಂದೆ ಸುದ್ದಿ ಪ್ರಕಟವಾಗಿತ್ತು. ಆರು ತಿಂಗಳ ಹಿಂದೆ ರಾಜೀವ್ ಗೌಡ ಆಮಿಷ ಒಡ್ಡಿದ ₹30 ಕೋಟಿ ಹಣ ಬೇಡ ಎಂದಿದ್ದ ಶಿಡ್ಲಘಟ್ಟದ ಕಾಂಗ್ರೆಸ್ ಶಾಸಕ ವಿ.ಮುನಿಯಪ್ಪ ಈಗ ಎಷ್ಟು ಹಣಕ್ಕೆ ಮಾರಿಕೊಂಡರೊ?' ಎಂದು ಕಿಡಿಕಾರಿದರು.

'ಜನಸೇವೆ ಮಾಡುವ ಇಂದಿರಾ ಕಾಂಗ್ರೆಸ್ ಈಗಲೂ ಉಳಿದಿದೆ ಎಂದು ಭಾವಿಸಿದ್ದೆ. ಆದರೆ ಇದು ವ್ಯಾಪಾರಿಗಳ ಕಾಲ. ಉದ್ಯಮಿಯಿಂದ ಹಣ ಪಡೆದು 'ಬಿ' ಫಾರಂ ಕೊಡಿಸಿದ್ದಾರೆ. ನಾನು ನಾಮಪತ್ರ ಸಲ್ಲಿಸಿದ್ದು ಪಕ್ಷೇತರ ಅಭ್ಯರ್ಥಿಯಾಗಿ ಕಣದಲ್ಲಿ ಉಳಿಯುತ್ತೇನೆ' ಎಂದು ಹೇಳಿದರು.

ಶಿಡ್ಲಘಟ್ಟ ವಿಧಾನಸಭಾ ಕ್ಷೇತ್ರದಿಂದ ಆರು ಬಾರಿ ಕಾಂಗ್ರೆಸ್‌ನಿಂದ ಶಾಸಕರಾಗಿ ಆಯ್ಕೆಯಾಗಿದ್ದ ವಿ.ಮುನಿಯಪ್ಪ ಅವರು ಎರಡು ಬಾರಿ ಸಚಿವರಾಗಿದ್ದರು. ಈ ಬಾರಿ ವಯಸ್ಸಿನ ಕಾರಣದಿಂದ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಮುನಿಯಪ್ಪ ಮೊದಲೇ ಘೋಷಿಸಿದ್ದರು.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ರಾಜೀವ್ ಗೌಡ ಹಾಗೂ ವಿ.ಮುನಿಯಪ್ಪ ಅವರಿಗೆ ಹಲವು ಬಾರಿ ಕರೆ ಮಾಡಿದರೂ ಅವರು ಸ್ವೀಕರಿಸಲಿಲ್ಲ

ಪತ್ನಿ ನೆನೆದು ಕಣ್ಣೀರಿಟ್ಟ ರಮೇಶ್ ಕುಮಾರ್!

ಪ್ರಜಾವಾಣಿ ವಾರ್ತೆ

ಶ್ರೀನಿವಾಸಪುರ: ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವ ವೇಳೆ ಶಾಸಕ ಕೆ.ಆರ್.ರಮೇಶ್ ಕುಮಾರ್ ಅವರು ಸ್ಥಳೀಯ ಮುಸ್ಲಿಂ ಮುಖಂಡರ ಮುಂದೆ ಕಣ್ಣೀರಿಡುವ ವಿಡಿಯೊವೊಂದು ಗುರುವಾರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

'ನಾಮಪತ್ರ ಸಲ್ಲಿಸುವ ವೇಳೆ ಅಮ್ಮ (ರಮೇಶ್ ಕುಮಾರ್ ಪತ್ನಿ) ಇದ್ದಿದ್ದರೆ ಚೆನ್ನಾಗಿರುತಿತ್ತು' ಎಂದು ಮುಸ್ಲಿಂ ಮುಖಂಡರು ಹೇಳುತ್ತಾರೆ. ಈ ಮಾತು ಕೇಳಿ ಭಾವುಕರಾದ ರಮೇಶ್ ಕುಮಾರ್ ಅವರು ಉಮ್ಮಳಿಸಿ ಬಂದ ದುಃಖವನ್ನು ತಡೆಯಲಾಗದೆ ಕಣ್ಣೀರಿಟ್ಟಿದ್ದಾರೆ.

ಮಂಗಳವಾರ ನಾಮಪತ್ರ ಸಲ್ಲಿಸುವ ಮೊದಲು ಅವರು ಪತ್ನಿ ಸಮಾಧಿ ಹಾಗೂ ಅಡ್ಡಗಲ್‌ನಲ್ಲಿ ಮಸೀದಿಗೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದ್ದರು. ಆಗ ಈ ಘಟನೆ ನಡೆದಿದೆ.

ಫೆಬ್ರುವರಿಯಲ್ಲಿ ರಮೇಶ್ ಕುಮಾರ್ ಅವರ ಪತ್ನಿ ವಿಜಯಮ್ಮ ಅವರು ನಿಧನರಾಗಿದ್ದರು.



ಶ್ರೀನಿವಾಸಪುರ ತಾಲ್ಲೂಕಿನ ಅಡ್ಡಗಲ್ ಗ್ರಾಮದಲ್ಲಿ ಮುಸ್ಲಿಂ ಮುಖಂಡರ ಎದುರು ಕಣ್ಣೀರಿಟ್ಟ ಶಾಸಕ ಕೆ.ಆರ್.ರಮೇಶ್ ಕುಮಾರ್

'ರಾಜ್ಯದ ಜನರಿಗೆ ಶೆಟ್ಟರ್ ಟೋಪಿ'

ಹುಬ್ಬಳ್ಳಿ: 'ಪಕ್ಷವು ಶೆಟ್ಟರ್ ಅವರಿಗೆ ಯಾವ ರೀತಿಯಲ್ಲಿಯೂ ಅವಮಾನಿಸಿಲ್ಲ. ಟಿಕೆಟ್ ಸಿಗದೆ ಅಸಮಾಧಾನವಾದಾಗ ಪಕ್ಷದ ಹಿರಿಯ ನಾಯಕರು ಮನವೊಲಿಸಲು ಪ್ರಯತ್ನಿಸಿದರು. ಇಷ್ಟು ವರ್ಷ ಪಕ್ಷ ಕಟ್ಟಿದ್ದೀರಾ, ಜೊತೆಗೆ ಲಾಭವನ್ನೂ ಪಡೆದಿದ್ದೀರಿ. ಬಿಟ್ಟು ಹೋಗಬೇಡಿ ಎಂದು ಹೇಳಿದರು ಕೇಳಲಿಲ್ಲ. ಮುಸಲ್ಮಾನರ ಟೋಪಿ ಹಾಕಿಕೊಳ್ಳಲೇಬೇಕು ಎಂದು ಹೋದರೆ ನಾವೇನು ಮಾಡಲಿಕ್ಕಾಗುತ್ತದೆ' ಎಂದು ಪಕ್ಷದ ಹಿರಿಯ ಮುಖಂಡ ಕೆ.ಎಸ್. ಈಶ್ವರಪ್ಪ ಲೇವಡಿ ಮಾಡಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಶೆಟ್ಟರ್ ಪರವಾಗಿ ಇಷ್ಟು ವರ್ಷಗಳ ಕಾಲ ದುಡಿದ ಪಕ್ಷದ ಕಾರ್ಯಕರ್ತ ಮಹೇಶ ಟೆಂಗಿನಕಾಯಿ ಅವರನ್ನೇ ಈ ಸಲ ಚುನಾವಣೆಯಲ್ಲಿ ನಿಲ್ಲಿಸಿದ್ದೇವೆ. ನನಗೋಸ್ಕರ ದುಡಿದವರ ಪರ ಕೆಲಸ ಮಾಡುವೆ ಎಂದು ಅವರೇ ಮುಂದೆ ಬರಬೇಕಾಗಿತ್ತು, ಅಧಿಕಾರದ ಆಸೆಗಾಗಿ ಅವರೇ ಕಾಂಗ್ರೆಸ್ ಗೆ ಹೋಗಿದ್ದಾರೆ' ಎಂದು ದೂರಿದರು.

'ಕಾಂಗ್ರೆಸ್ ಜೊತೆಗೂಡಿ ರಾಜ್ಯದ ಜನರಿಗೆ ಶೆಟ್ಟರ್ ಟೋಪಿ ಹಾಕಲು ಹೊರಟಿದ್ದಾರೆ. ಇದಕ್ಕೆ ಬಿಜೆಪಿ ಅವಕಾಶ ನೀಡಲ್ಲ' ಎಂದು ಹೇಳಿದರು.

'ಹಿಂದೆ ವಿಧಾನಸಭೆಯಲ್ಲಿ ಗೋಹತ್ಯೆ ನಿಷೇಧದ ಪರ ಗಂಟೆಗಟ್ಟಲೆ ಮಾತನಾಡಿದ್ದರು. ಈಗ ಗೋಹತ್ಯೆ ನಿಷೇಧದ ವಿರುದ್ಧವಾಗಿ ಮಾತನಾಡುವರೇ?, ಹಿಂದೂಗಳ ಕಗ್ಗೊಲೆ ಮಾಡಿರುವ ಹಾಗೂ ನಿಷೇಧಕ್ಕೆ ಒಳಪಟ್ಟಿರುವ ಪಿಎಫ್‌ಐ ಪರವಾಗಿ ಮಾತನಾಡುವರೇ? ಸ್ವರ್ಗದಲ್ಲಿರುವ ಅವರ ತಂದೆ ಶಿವಪ್ಪ ಶೆಟ್ಟರ್ (ಜನಸಂಘ ಕಾರ್ಯಕರ್ತರಾಗಿದ್ದರು) ಅವರಿಗೆ ಏನು ಉತ್ತರ ಕೊಡುತ್ತಾರೆ' ಎಂದು ಪ್ರಶ್ನಿಸಿದರು.

ಪಕ್ಷದ ಒತ್ತಡದಿಂದ ಈಶ್ವರಪ್ಪ ಹೇಳಿಕೆ: ಶೆಟ್ಟರ್

ಹುಬ್ಬಳ್ಳಿ: 'ಪಕ್ಷದ ವರಿಷ್ಠರ ಒತ್ತಡದಿಂದಾಗಿ ನಾನು ಲಿಂಗಾಯತ ವಿರೋಧಿ ಎಂದು ಈಶ್ವರಪ್ಪ ಹೇಳಿಕೆ ನೀಡಿದ್ದಾರೆ. ನನ್ನನ್ನು ಅವಮಾನಿಸಿದ್ದಕ್ಕೆ ಸಮುದಾಯದ ಜನರು ಆಕ್ರೋಶಗೊಂಡಿದ್ದಾರೆ' ಎಂದು ಜಗದೀಶ ಶೆಟ್ಟರ್ ಪ್ರತಿಕ್ರಿಯಿಸಿದ್ದಾರೆ.

'ನನ್ನನ್ನು ಅವಮಾನಿಸಿದ್ದು ಇಡೀ ಸಮಾಜವನ್ನು ಅವಮಾನಿಸಿದ ಹಾಗೆ. ಸಮಾಜದವರನ್ನು ಬಳಸಿಕೊಂಡು ಕಸದಂತೆ ಬಿಸಾಡುತ್ತಿದ್ದಾರೆ. ಈ ಬಾರಿ ಅದಕ್ಕೆ ತಕ್ಕ ಪಾಠ ಕಲಿಸುತ್ತೇವೆ ಎಂದು ಜನರೇ ಹೇಳುತ್ತಿದ್ದಾರೆ' ಎಂದು ಹೇಳಿದರು.

'ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ವೈದ್ಯರ ನೇಮಕಾತಿ ನನೆಗುದಿಗೆ ಬಿದ್ದಿತ್ತು. ಈ ಬಗ್ಗೆ ನಾನು ಸದನದಲ್ಲಿ ಧ್ವನಿ ಎತ್ತಿದ ನಂತರ ನೇಮಕಾತಿ ಮಾಡಲಾಯಿತು. ಹಾವೇರಿಯಲ್ಲಿ ಇನ್ನೂ ನೇಮಕಾತಿ ಆಗಿಲ್ಲ. ಇದಕ್ಕೆ ಕಾರಣ ಏನು? ಅಲ್ಲಿ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ಜನರೇ ಮಾತನಾಡುತ್ತಿದ್ದಾರೆ' ಎಂದು ಬೊಮ್ಮಾಯಿ ವಿರುದ್ಧ ಕುಟುಕಿದರು.

ರೌಡಿಗಳ ಮನೆ ಮೇಲೆ ಪೊಲೀಸರ ದಾಳಿ: ಮಾರಕಾಸ್ತ್ರಗಳು ಪತ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಯ ಮತದಾನ ದಿನವು ಸಮೀಪಿಸುತ್ತಿದ್ದು, ರೌಡಿಪಟ್ಟಿಯಲ್ಲಿರುವ ವ್ಯಕ್ತಿಗಳ ಮನೆಗಳ ಮೇಲೆ ಕೇಂದ್ರ ವಿಭಾಗ, ದಕ್ಷಿಣ ವಿಭಾಗ, ಪಶ್ಚಿಮ ವಿಭಾಗ ಮತ್ತು ಉತ್ತರ ವಿಭಾಗದ ಪೊಲೀಸರು ದಾಳಿ ನಡೆಸಿ ಎಚ್ಚರಿಕೆ ನೀಡಿದ್ದಾರೆ.

ನಾಲ್ಕು ವಿಭಾಗಗಳಲ್ಲಿ 500ಕ್ಕೂ ಹೆಚ್ಚು ರೌಡಿಗಳ ಮನೆ ಮೇಲೆ ದಾಳಿ ನಡೆಸಲಾಗಿದೆ. ಪೊಲೀಸರ ದಾಳಿಯ ಮಾಹಿತಿ ಪಡೆದಿದ್ದ ಕೆಲವು ರೌಡಿಗಳು ಮನೆಗೇ ಬಂದಿರಲಿಲ್ಲ. ಇನ್ನು ಕೆಲವು ರೌಡಿ ಮನೆಗಳಲ್ಲಿ ಮಾರಕಾಸ್ತ್ರಗಳು ಪತ್ತೆಯಾಗಿವೆ. ವಾರಂಟ್ ಇದ್ದವರನ್ನು ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. 1,500ಕ್ಕೂ ಹೆಚ್ಚು ಪೊಲೀಸರು ಕಳೆದ ಎರಡು ದಿನಗಳಿಂದ ದಾಳಿ ನಡೆಸಿ ಎಚ್ಚರಿಕೆ ನೀಡಿದ್ದಾರೆ.

ಪಶ್ಚಿಮ ವಿಭಾಗ ಪೊಲೀಸರು 200ಕ್ಕೂ ಹೆಚ್ಚು ರೌಡಿಶೀಟರ್‌ಗಳ ಮನೆಗಳ ಮೇಲೆ ದಾಳಿ ನಡೆಸಿದ್ದಾರೆ. ಈ ವೇಳೆ ಜಾಮೀನು ರಹಿತ ವಾರೆಂಟ್ ಹೊರಡಿಸಿದ್ದರೂ ನಾಪತ್ತೆಯಾಗಿದ್ದ 67 ಮಂದಿಯನ್ನು ಬಂಧಿಸಲಾಗಿದೆ. ಹಾಗೆಯೇ ಇಬ್ಬರು ರೌಡಿಗಳ ಮನೆಗಳಲ್ಲಿ ಮಾರಕಾಸ್ತ್ರಗಳು ಪತ್ತೆಯಾಗಿದ್ದು, ಪ್ರಕರಣ ದಾಖಲಿಸಲಾಗಿದೆ. ಈ ಪ್ರಕ್ರಿಯೆ ಮುಂದುವರಿಯಲಿದೆ ಎಂದು ಪಶ್ಚಿಮ ವಿಭಾಗ ಡಿಸಿಪಿ ಲಕ್ಷ್ಮಣ್ ನಿಂಬರಗಿ ಮಾಹಿತಿ ನೀಡಿದರು.

'ಹೆಚ್ಚುವರಿ ಪೊಲೀಸ್ ಆಯುಕ್ತ ಸಂದೀಪ್ ಪಾಟೀಲ್ ಸೂಚನೆ ಮೇರೆಗೆ ಆಯಾ ವಿಭಾಗದ ಡಿಸಿಪಿಗಳ ನೇತೃತ್ವದಲ್ಲಿ ಈ ದಾಳಿ ನಡೆದಿದೆ. ಚುನಾವಣೆ ವೇಳೆ ಅಭ್ಯರ್ಥಿಗಳ ಪರವಾಗಿ ಗಲಾಟೆ ನಡೆಸುವುದು, ರೌಡಿಸಂ ನಡೆಸುವುದು ಮಾಡುವಂತಿಲ್ಲ' ಎಂದು ರೌಡಿಗಳಿಗೆ ಎಚ್ಚರಿಕೆ ನೀಡಿದ್ದಾರೆ.

ರಮೇಶ ಜಾರಕಿಹೊಳಿ ಆಸ್ತಿ ₹72.25 ಕೋಟಿ ಕುಸಿತ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಗೋಕಾಕ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಮೇಶ ಜಾರಕಿಹೊಳಿ ಅವರ ಆಸ್ತಿ ಕಳೆದ ಐದು ವರ್ಷಗಳಲ್ಲಿ ₹72.25 ಕೋಟಿ ಕಡಿಮೆಯಾಗಿದೆ. ಗುರುವಾರ ಅವರು ಸಲ್ಲಿಸಿದ ಅಫಿಡವಿಟ್‌ನಲ್ಲಿ ಈ ಅಂಶ ಬೆಳಕಿಗೆ ಬಂದಿದೆ.

2018ರಲ್ಲಿ ₹122 ಕೋಟಿ ಆಸ್ತಿ ಘೋಷಿಸಿಕೊಂಡಿದ್ದ ಅವರು, ಈ ಬಾರಿ ₹49.25 ಕೋಟಿ ಆಸ್ತಿ ಹೊಂದಿದ್ದಾಗಿ ನಮೂದಿಸಿದ್ದಾರೆ. ಇಷ್ಟು ದೊಡ್ಡ ಪ್ರಮಾಣದ ಇಳಿಕೆಗೆ ಕಾರಣ ಏನು ಎಂದು ನಮೂದಿಸಿಲ್ಲ.

2018ರಲ್ಲಿ ರಮೇಶ ತಮ್ಮ ಜೊತೆಗೆ, ಪತ್ನಿ ಜಯಶ್ರೀ, ಇಬ್ಬರು ಪುತ್ರರಾದ ಅಮರನಾಥ ಹಾಗೂ ಸಂತೋಷ ಅವರ ಆಸ್ತಿ ವಿವರ ನೀಡಿದ್ದರು. ಆದರೆ, ಈ ಬಾರಿ ತಮ್ಮ, ಪತ್ನಿ ಹಾಗೂ ಒಬ್ಬ ಪುತ್ರನ ಆಸ್ತಿ ಮಾತ್ರ ಘೋಷಿಸಿದ್ದಾರೆ. ಇನ್ನೊಬ್ಬ ಪುತ್ರ ಸಂತೋಷ ಆಸ್ತಿ ವಿವರ ನೀಡಿಲ್ಲ.

2013ರ ಚುನಾವಣೆ ವೇಳೆ ಒಟ್ಟು ₹57 ಕೋಟಿ ಆಸ್ತಿ ಘೋಷಿಸಿದ್ದರು. ಈಗ ಘೋಷಿಸಿದ ಆಸ್ತಿ ಅದಕ್ಕಿಂತಲೂ ಕಡಿಮೆ ಆಗಿದೆ.

'ರಮೇಶ ಅವರ ಕುಟುಂಬದ ಒಡೆತನದ ಸಕ್ಕರೆ ಕಾರ್ಖಾನೆಗಳನ್ನು ನಿರ್ವಹಿಸುತ್ತಿರುವ ಕಿರಿಯ ಪುತ್ರ ಸಂತೋಷ ಜಾರಕಿಹೊಳಿ ಈಗ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಆಸ್ತಿ ಮೊತ್ತ ಕಡಿಮೆ ಆಗಲು ಇದೂ ಒಂದು ಕಾರಣವಾಗಿರಬಹುದು. ಅಮರನಾಥ ಅವರು ತಮ್ಮ ಹೆತ್ತವರೊಂದಿಗೆ ವಾಸಿಸುತ್ತಿದ್ದಾರೆ. ಸಹೋದರರ ನಡುವೆ ಆಸ್ತಿ ಹಂಚಿಕೆಯಾಗಿರುವ ಸಾಧ್ಯತೆ ಇದೆ' ಎಂದು ಜಾರಕಿಹೊಳಿ ಕುಟುಂಬದ ಆಪ್ತರಾದ ವಕೀಲರೊಬ್ಬರು ಹೇಳಿದರು.

ಲೈಂಗಿಕ ಪ್ರಕರಣ: ಈ ಅಫಿಡವಿಟ್‌ನಲ್ಲಿ ರಮೇಶ ಜಾರಕಿಹೊಳಿ ತಮ್ಮ ವಿರುದ್ಧ ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯಲ್ಲಿ ಲೈಂಗಿಕ ದೌರ್ಜನ್ಯದ ಆರೋಪದ ಒಂದು ಕ್ರಿಮಿನಲ್ ಮೊಕದ್ದಮೆ ಇದೆ ಎಂದು ಉಲ್ಲೇಖಿಸಿದ್ದಾರೆ. ವಿಶೇಷ ತನಿಖಾ ತಂಡವು ಈ ಪ್ರಕರಣದಲ್ಲಿ ಬಿ ರಿಪೋರ್ಟ್ ಸಲ್ಲಿಸಿದೆ. ಆದರೆ, ಎದುರು ಪಕ್ಷವು ಎಸ್‌ಐಟಿಯ ಸಂವಿಧಾನವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದೆ ಎಂದು ಬರೆದುಕೊಂಡಿದ್ದಾರೆ.



ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಹಳೆಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 85ನೇ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ಶಿವಶ್ರೀ ಸ್ಕಂದಪ್ರಸಾದ್ ಮತ್ತು ತಂಡ ನಾಮಸಂಕೀರ್ತನೆ ಪ್ರಸ್ತುತಪಡಿಸಿದರು.

–ಪ್ರಜಾವಾಣಿ ಚಿತ್ರ

ರೈತರ ಪ್ರಣಾಳಿಕೆ ಒಪ್ಪಿಕೊಳ್ಳಲು 30ರ ಗಡುವು

ಪ್ರಜಾವಾಣಿ ವಾರ್ತೆ

ಧಾರವಾಡ: 'ರೈತರ ಪ್ರಣಾಳಿಕೆ ಕುರಿತು ಸ್ಪಷ್ಟ ನಿರ್ಧಾರ ಕೈಗೊಳ್ಳಲು ಪಕ್ಷಗಳಿಗೆ ಇನ್ನಷ್ಟು ಕಾಲಾವಕಾಶ ನೀಡುವ ಕುರಿತು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾದ ಕಾರಣ, ಏ.30ರ ಗಡುವು ನೀಡಲಾಗಿದೆ' ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಅವರು ಹೇಳಿದರು.

ರೈತರ ಚುನಾವಣಾ ಪ್ರಣಾಳಿಕೆ ಒಪ್ಪಿಗೆ ನೀಡುವ ಪಕ್ಷಕ್ಕೆ ರಾಜ್ಯದ ರೈತರ ಬೆಂಬಲ ಕುರಿತಂತೆ ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಹಾಗೂ ರಾಜ್ಯ ಕಬ್ಬು ಬೆಳೆಗಾರರ ಸಂಘ ಸೇರಿದಂತೆ ವಿವಿಧ ರೈತ ಪರ ಸಂಘಟನೆಗಳ ಸಹಯೋಗದಲ್ಲಿ ನಗರದಲ್ಲಿ ಗುರುವಾರ ನಡೆದ ಸಭೆಯ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ರೈತರ ಪ್ರಣಾಳಿಕೆ ಬಗ್ಗೆ ಯಾವುದೇ ಪಕ್ಷಗಳು ಬದ್ಧತೆ ತೋರಿಲ್ಲ. ಹಳ್ಳಿ ಹಳ್ಳಿಗಳಲ್ಲಿ ಎಲ್ಲಾ ಪಕ್ಷದ ಅಭ್ಯರ್ಥಿಗಳನ್ನು ಪ್ರಶ್ನಿಸಲು 'ರೈತರ ನಡಿಗೆ ಜಾಗೃತಿ ಕಡೆಗೆ' ಎಂಬ ಜಾಥಾ ನಡೆಸಲಾಗುವುದು. ಮೇ 2ರಂದು ಬೆಂಗಳೂರಿನಲ್ಲಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಹೇಳಿದರು.

'ಚುನಾವಣೆಯನ್ನೇ ಬಹಿಷ್ಕಾರ, ನೋಟಾ ಕುರಿತು ಚರ್ಚಿಸಲಾಯಿತು. 'ನೋಟಾ'ಗೆ ಮೌಲ್ಯ ನಿಗದಿ ಪಡಿಸದಿದ್ದಲ್ಲಿ ಯಾವುದೇ ಉಪಯೋಗವಾಗದು. ನೋಟವಾನ್ನೂ ಗಂಭೀರವಾಗಿ ಪರಿಗಣಿಸಲು ಚುನಾವಣಾ ಆಯೋಗಕ್ಕೆ ಒತ್ತಾಯಿಸಲಾಗುವುದು' ಎಂದು ಹೇಳಿದರು.

'ವಿವಿಧ ಪಕ್ಷಗಳ ಮುಖಂಡರೊಂದಿಗೆ ಈವರೆಗೂ ನಡೆದ ಸಭೆಯಲ್ಲಿ ರೈತರ ಪ್ರಣಾಳಿಕೆಯ ಶೇ 60ರಿಂದ ಶೇ 70ರಷ್ಟು ಅಂಶಗಳನ್ನು ಅಳವಡಿಸಿಕೊಂಡಿರುವುದಾಗಿ ಕಾಂಗ್ರೆಸ್, ಜೆಡಿಎಸ್ ಹಾಗೂ ಎಎಪಿಗಳು ತಿಳಿಸಿವೆ. ಆದರೆ ಈ ಕುರಿತು ಬಿಜೆಪಿ ಚಕಾರವನ್ನೇ ಎತ್ತಿಲ್ಲ. ಇದು ಕೆಲವೆಡೆ ಸುದ್ದಿಯಾದ ನಂತರ ಕೇಂದ್ರ ಸಚಿವ ಭಗವಂತ ಖೂಬಾ ಕರೆ ಮಾಡಿ, ಈ ಕುರಿತು ಚರ್ಚಿಸೋಣ ಎಂದಿದ್ದಾರೆ. ಅಂತಿಮವಾಗಿ ರೈತರ ಬೇಡಿಕೆಗಳನ್ನು ಸಂಪೂರ್ಣವಾಗಿ ಸ್ಪಂದಿಸುವ ಪಕ್ಷಕ್ಕೆ ಬೆಂಬಲಿಸಲಾಗುವುದು' ಎಂದು ಶಾಂತಕುಮಾರ್ ಹೇಳಿದರು.



ಐಪಿಎಲ್ ಟಿಕೆಟ್

ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ರಾಜಸ್ಥಾನ ರಾಯಲ್ಸ್ ತಂಡಗಳ ನಡುವೆ ಭಾನುವಾರ (ಏಪ್ರಿಲ್ 23) ನಡೆಯಲಿರುವ ಐಪಿಎಲ್ ಕ್ರಿಕೆಟ್ ಪಂದ್ಯದ ಟಿಕೆಟ್ ಖರೀದಿಗೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ಸೇರಿದ್ದ ಅಭಿಮಾನಿಗಳು –ಪ್ರಜಾವಾಣಿ ಚಿತ್ರ

ಮಲಗಿದ್ದಾಗ ಹಾವು ಕಚ್ಚಿ ಬಾಲಕ ಸಾವು

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ಮನೆಯಲ್ಲಿ ಮಲಗಿದ್ದ ಸಮಯದಲ್ಲಿ ನಾಗರಹಾವು ಕಚ್ಚಿದ ಪರಿಣಾಮ ಏಳು ವರ್ಷದ ಬಾಲಕ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬೈರಾಪುರ ತಾಂಡದಲ್ಲಿ ನಡೆದಿದೆ.



ಮೌನಿಕ್ ಎಂ.ನಾಯ್ಕ್

ಮೃತ ಬಾಲಕ ಬೈರಾಪುರ ತಾಂಡದ ಮಂಜುನಾಥ್ ನಾಯಕ್ ಮತ್ತು ಸುಮಿತ್ರಾ ದಂಪತಿಯ ಎರಡನೇ ಪುತ್ರ ಮೌನಿಕ್ ಎಂ.ನಾಯ್ಕ್ ಆಗಿದ್ದು, ತಂದೆ ತಾಯಿಯೊಡನೆ ಮನೆಯಲ್ಲಿ ಮಲಗಿದ್ದ ವೇಳೆ ಹಾವು ಕಚ್ಚಿದೆ ಎಂದು ಮಾಹಿತಿ ನೀಡಲಾಗಿದೆ.

ಹಾವು ಕಚ್ಚಿರುವ ವಿಷಯ ತಿಳಿಯುತ್ತಿದ್ದಂತೆ ಕೂಡಲೇ ಮೌನಿಕ್‌ನನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ, ಆದರೆ ಆತ ಬದುಕಿ ಉಳಿಯಲಿಲ್ಲ

ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಹೇಳಿಕೆ

'ಶೂದ್ರ, ದ್ವಿಜವೆಂದು ಧರ್ಮ ಇಬ್ಭಾಗವಾಗಲಿ'

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ಧರ್ಮವನ್ನು ಶೂದ್ರ ಹಾಗೂ ದ್ವಿಜವೆಂದು ಇಬ್ಭಾಗ ಮಾಡಬೇಕು. ಆಗ ತಾಕಲಾಟಗಳು ತಪ್ಪಲಿವೆ' ಎಂದು ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಹೇಳಿದರು.

ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ನಗರದಲ್ಲಿ ಗುರುವಾರ ಆಯೋಜಿಸಿದ ಕಾರ್ಯಕ್ರಮದಲ್ಲಿ ಎಚ್.ಟಿ. ಪೋತೆ ಅವರ 'ಎಲ್ಲರ ಅಂಬೇಡ್ಕರ್' ಪುಸ್ತಕ ಬಿಡುಗಡೆ ಮಾಡಿ, ಮಾತನಾಡಿದರು. 'ದಲಿತರನ್ನು ಅಕ್ಷರ, ಅಧಿಕಾರ, ಸಂಪತ್ತಿನಿಂದ ವಂಚಿಸಿದ್ದರಿಂದ ಅವರು ಜಡತ್ವ ರೂಢಿಸಿಕೊಂಡಿದ್ದಾರೆ. ಅಸ್ಪೃಶ್ಯತೆ ನಿವಾರಣೆಗೆ ಕಾನೂನುಗಳನ್ನು ರೂಪಿಸಲಾಗಿದೆ. ಆದರೆ, ಅವು ಎಷ್ಟರ ಮಟ್ಟಿಗೆ ಜಾರಿಯಾಗಿವೆ? ಸಮಾಜದಲ್ಲಿ ಅಸ್ಪೃಶ್ಯತೆ, ಮರ್ಯಾದೆ ಹತ್ಯೆ ಇನ್ನೂ ಜೀವಂತವಾಗಿರುವುದು ವಿಪರ್ಯಾಸ' ಎಂದು ಬೇಸರ ವ್ಯಕ್ತಪಡಿಸಿದರು.

'ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ನಾವಿದ್ದು, ಚುನಾವಣೆಯಲ್ಲಿ ಜಾತಿ ಹಾಗೂ ಹಣ ಕಣ್ಣಿಗೆ ರಾಚುತ್ತಿದೆ' ಎಂದು ಹೇಳಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್, 'ಅಂಬೇಡ್ಕರ್ ಅವರು ನೀಡಿದ ಸಂವಿಧಾನ ಕಳೆದುಕೊಂಡರೆ ಬಹುತ್ವವನ್ನೇ ಕಳೆದುಕೊಂಡಂತಾಗುತ್ತದೆ. ಅಂಬೇಡ್ಕರ್ ನೀಡಿರುವ ಸಂವಿಧಾನದಲ್ಲಿ ಸಾಮಾಜಿಕ ನ್ಯಾಯ, ಜಾತ್ಯತೀತತೆ, ಕಲ್ಯಾಣ ಸಮಾಜಕ್ಕೆ ಆದ್ಯತೆ ನೀಡಲಾಗಿದ್ದು, ಬಹುತ್ವವನ್ನು ಒಳಗೊಂಡಿದೆ. ನಾವು ಅವರ ಜಯಂತಿ ಆಚರಿಸಿದರಷ್ಟೇ ಸಾಲದು, ಅವರ ಅರಿವು, ತಿಳಿವಳಿಕೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು. ಅಂಬೇಡ್ಕರ್ ತಿಳಿವಳಿಕೆ ಓದಿದರೆ ಸಂವಿಧಾನ ಓದಿದಂತೆ. ಗಣತಂತ್ರದ ನಂತರ ಭಾರತ ಏನೂ ಸಾಧಿಸಿಲ್ಲ ಎಂಬುದು ಸುಳ್ಳು. ಪರಿಶಿಷ್ಟ ಜಾತಿ ಮತ್ತು ಪಂಗಡದವರು ಎಲ್ಲಾ ಕ್ಷೇತ್ರದಲ್ಲೂ ಪ್ರವೇಶ ಪಡೆದಿದ್ದು, ತಮ್ಮದೇ ಆದ ಕೊಡುಗೆ ನೀಡಿದ್ದಾರೆ' ಎಂದರು.

ಲೇಖಕ ಎಚ್.ಟಿ. ಪೋತೆ, 'ಅಂಬೇಡ್ಕರ್ ಅವರು ಜಗತ್ತಿನ ವಿದ್ವಾಂಸರ ಕೊಂಡಿಯಾಗಿದ್ದಾರೆ. ಇವತ್ತಿಗೂ ನಾವು ಅಸಮಾನತೆಯ ಅಪಮಾನಕ್ಕೊಳಗಾಗುತ್ತಿರುವುದು ವಿಪರ್ಯಾಸ. ಬಾಬಾ ಸಾಹೇಬರನ್ನು ನಾವೂ ಮನಸಾರೆ ಓದುವುದರಿಂದ ಸ್ವಾಭಿಮಾನ ಹೆಚ್ಚಾಗಿ, ಬಿಡುಗಡೆಗೆ ಮಾರ್ಗ ಸಿಗಲಿದೆ' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ 'ಎಲ್ಲರ ಅಂಬೇಡ್ಕರ್' ಪುಸ್ತಕ ಬಿಡುಗಡೆ ಮಾಡಲಾಯಿತು. (ಎಡದಿಂದ) ಎಚ್.ಟಿ. ಪೋತೆ, ನ್ಯಾ.ಎಚ್.ಎನ್. ನಾಗಮೋಹನದಾಸ್, ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಹಾಗೂ ಮೂಡ್ನಾಕೂಡು ಚಿನ್ನಸ್ವಾಮಿ ಇದ್ದಾರೆ.

ಕ್ರೀಡಾ ಸುದ್ದಿಗಳು

ಎಸ್‌ಜೆಸಿಐಟಿ ತಂಡಕ್ಕೆ ಜಯ

ಬೆಂಗಳೂರು: ಎಸ್‌ಜೆಸಿಐಟಿ ತಂಡವು ಇಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ ಎಂಜಿನಿಯರಿಂಗ್ ಕಾಲೇಜುಗಳ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಗುರುವಾರ 3 ವಿಕೆಟ್‌ಗಳಿಂದ ಡಿಬಿಐಟಿ ತಂಡದ ಮೇಲೆ ಜಯಗಳಿಸಿತು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಆರ್‌ಐಟಿ) ವಜ್ರಮಹೋತ್ಸವ ಹಾಗೂ ಡಾ.ಎಂ.ಎಸ್. ರಾಮಯ್ಯ ಅವರ ಜನ್ಮಶತಮಾನೋತ್ಸವ ಅಂಗವಾಗಿ ಟೂರ್ನಿ ನಡೆಯುತ್ತಿದೆ. ಮೊದಲು ಬ್ಯಾಟ್ ಮಾಡಿದ ಡಿಬಿಐಟಿ 30 ಓವರ್‌ಗಳಲ್ಲಿ 9 ವಿಕೆಟ್‌ಗೆ 169 ರನ್ ಗಳಿಸಿತು. ಎಸ್‌ಜೆಸಿಐಟಿ ಈ ಗುರಿಯನ್ನು 26 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು ತಲುಪಿತು.

ಮತ್ತೊಂದು ಪಂದ್ಯದಲ್ಲಿ ಬಿಎಂಎಸ್‌ಸಿಇ 19 ರನ್‌ಗಳಿಂದ ಎಸ್‌ಐಟಿ ತಂಡಕ್ಕೆ ಸೋಲುಣಿಸಿತು. ಬಿಎಂಎಸ್‌ಸಿಇ 28.3 ಓವರ್‌ಗಳಲ್ಲಿ 205 ರನ್ ಗಳಿಸಿ ಆಲೌಟ್ ಆದರೆ, ಎಸ್‌ಐಟಿ 29.4 ಓವರ್‌ಗಳಲ್ಲಿ 186 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು.

ಕ್ರಿಕೆಟ್: ತೇಜಲ್ ಶಿರಗುಪ್ಪಿ ಅಕಾಡೆಮಿಗೆ ಜಯ

ಬೆಂಗಳೂರು: ಆರ್ಯ ರಾಜ್ (112, 75 ಎ) ಗಳಿಸಿದ ಶತಕದ ಬಲದಿಂದ ತೇಜಲ್ ಶಿರಗುಪ್ಪಿ ಕ್ರಿಕೆಟ್ ಅಕಾಡೆಮಿ ತಂಡವು ಟೈಗರ್ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಗ್ಲೋಬಲ್ ತಾಂತ್ರಿಕ ಅಕಾಡೆಮಿ ಕಾಲೇಜು ಮೈದಾನದಲ್ಲಿ ನಡೆಯುತ್ತಿರುವ ಟೂರ್ನಿಯ ಪಂದ್ಯದಲ್ಲಿ ಗುರುವಾರ ತೇಜಲ್ ಶಿರಗುಪ್ಪಿ ಅಕಾಡೆಮಿ 186 ರನ್ ಗಳಿಂದ ಗೋಪಾಲನ್ ತಂಡವನ್ನು ಸೋಲಿಸಿತು.

ಇನ್ನೊಂದು ಪಂದ್ಯದಲ್ಲಿ ಪ್ಲೇ ಸ್ಮಾರ್ಟ್ ತಂಡವು 131 ರನ್‌ಗಳಿಂದ ಪಿಇಎಸ್‌ಸಿಎ ಎದುರು ಗೆದ್ದಿತು.

ಸಂಕ್ಷಿಪ್ತ ಸ್ಕೋರು: ತೇಜಲ್ ಶಿರಗುಪ್ಪಿ ಅಕಾಡೆಮಿ: 30 ಓವರ್‌ಗಳಲ್ಲಿ 3 ವಿಕೆಟ್‌ಗೆ 307 (ಆರ್ಯ ರಾಜ್ 112, ಸಾಮ್ರಾಟ್ ಆದಿತ್ಯ 81). ಗೋಪಾಲನ್: 22.5 ಓವರ್‌ಗಳಲ್ಲಿ 121 ಆಲೌಟ್ (ಪದ್ಮೇಶ್ ತ್ರಿಪಾಠಿ 37, ಆರವ್ ಸಿನ್ಹಾ 22; ಅಲೋಕ್ ಜಪನ್ನವರ್ 28ಕ್ಕೆ 2, ಅಥರ್ವ್ 25ಕ್ಕೆ 2, ಅಕ್ಷನ್ 6ಕ್ಕೆ 2). ಫಲಿತಾಂಶ: ತೇಜಲ್ ಶಿರಗುಪ್ಪಿ ಅಕಾಡೆಮಿಗೆ 186 ರನ್ ಜಯ.

ಪ್ಲೇ ಸ್ಮಾರ್ಟ್: 30 ಓವರ್‌ಗಳಲ್ಲಿ 6 ವಿಕೆಟ್‌ಗೆ 294 (ಸೋಹುಮ್ ಜೋಶಿ 83, ಪವನದೀಪ್ 73, ಲಿತಿಕ್ ರೆಡ್ಡಿ 31, ಸಚಿತ್ ಶೆಟ್ಟಿ 31; ಅದ್ವೈತ್ 52ಕ್ಕೆ 4). ಪಿಇಎಸ್‌ಸಿಎ: 30 ಓವರ್‌ಗಳಲ್ಲಿ 7 ವಿಕೆಟ್‌ಗೆ 163 (ಕೃಷ್ಣ ಕುಮಾರ್ 60, ಸಮರ್ ಮಾಥೆ 41; ಸೋಹುಮ್ ಜೋಷಿ 19ಕ್ಕೆ 3, ಅಥರ್ವ್ ಕರಡಿ 10ಕ್ಕೆ 2). ಫಲಿತಾಂಶ: ಪ್ಲೇ ಸ್ಮಾರ್ಟ್‌ಗೆ 131 ರನ್‌ಗಳ ಜಯ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❤ ಸುಭಾಷಿತ ❤

ವ್ಯಕ್ತಿಯ ಪ್ರಸ್ತುತ ಪರಿಸ್ಥಿತಿಯನ್ನು ಆಧರಿಸಿ ಆತನ ಭವಿಷ್ಯದ ಬಗ್ಗೆ ನಿರ್ಣಯಕ್ಕೆ ಬರಬೇಡಿ. ಏಕೆಂದರೆ, ಕಪ್ಪು ಕಲ್ಲಿದ್ದಲನ್ನು ಹೊಳೆಯುವ ವಜ್ರವನ್ನಾಗಿ ಮಾಡುವ ಶಕ್ತಿ ಕಾಲಕ್ಕೆ ಇದೆ.

–ಚಾಣಕ್ಯ

ಕಡಿಮೆ ಪ್ರಮಾಣದ ಆರ್ಥಿಕ ಬೆಳವಣಿಗೆ ಇಂದಿನ ವಾಸ್ತವ

ಜಗತ್ತಿನ ಹಾಗೂ ಭಾರತದ ಆರ್ಥಿಕ ಬೆಳವಣಿಗೆ ಮುನ್ನೋಟದ ಕುರಿತು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಈಚೆಗೆ ಪ್ರಕಟಿಸಿರುವ ವರದಿಯು ಈ ಹಿಂದಿನ ಕೆಲವು ವರದಿಗಳಿಗೆ ಹೋಲಿಸಿದರೆ ಅಷ್ಟೇನೂ ಆಶಾದಾಯಕವಲ್ಲದ ಚಿತ್ರಣವೊಂದನ್ನು ನೀಡಿದೆ. ಐಎಂಎಫ್ ಅಂದಾಜಿನ ಪ್ರಕಾರ, ವಿಶ್ವದ ಆರ್ಥಿಕ ಬೆಳವಣಿಗೆ ದರ 2023ರಲ್ಲಿ ಶೇಕಡ 2.8ಕ್ಕೆ ಕುಸಿಯುವ ಸಾಧ್ಯತೆ ಇದೆ. 2022ರಲ್ಲಿ ಜಾಗತಿಕ ಆರ್ಥಿಕ ಬೆಳವಣಿಗೆ ದರ ಶೇ 3.4ರಷ್ಟು ಇತ್ತು. ಅರ್ಥ ವ್ಯವಸ್ಥೆಯಲ್ಲಿನ ಮಂದಗತಿಯು ಮುಂದುವರಿದ ದೇಶಗಳ ಅರ್ಥ ವ್ಯವಸ್ಥೆ ಮೇಲೆ ಹೆಚ್ಚಿನ ಪರಿಣಾಮ ಉಂಟುಮಾಡಲಿದೆ. ಈ ದೇಶಗಳ ಅರ್ಥ ವ್ಯವಸ್ಥೆಯ ಬೆಳವಣಿಗೆಯು ಈ ವರ್ಷದಲ್ಲಿ ಶೇ 1.3ಕ್ಕೆ ಇಳಿಕೆ ಕಾಣಬಹುದು. ಇದು 2022ರಲ್ಲಿ ಶೇ 2.7ರಷ್ಟು ಇತ್ತು. ಬ್ರಿಟನ್ ಮತ್ತು ಐರೋಪ್ಯ ವಲಯದ ಅರ್ಥ ವ್ಯವಸ್ಥೆಗಳು ಹೆಚ್ಚಿನ ಪರಿಣಾಮ ಎದುರಿಸಲಿವೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಅರ್ಥ ವ್ಯವಸ್ಥೆಗಳು ತುಸು ಉತ್ತಮ ಸ್ಥಿತಿಯಲ್ಲಿ ಇರಲಿವೆ. ಇಲ್ಲಿ ಶೇ 3.9ರಷ್ಟು ಆರ್ಥಿಕ ಬೆಳವಣಿಗೆ ಇರಲಿದೆ ಎಂದು ಅಂದಾಜು ಮಾಡಲಾಗಿದೆ. ಈ ಪ್ರಮಾಣವು ಕಳೆದ ವರ್ಷದಲ್ಲಿ ಆಗಿದ್ದ ಬೆಳವಣಿಗೆಗೆ ಹೋಲಿಸಿದರೆ ಅಲ್ಪಮಟ್ಟಿಗೆ ಕಡಿಮೆ. ಅಭಿವೃದ್ಧಿ ಹೊಂದಿರುವ ದೇಶಗಳ ಆರ್ಥಿಕ ಬೆಳವಣಿಗೆ ದರ, ಅಂದಾಜು ಮಾಡಿರುವುದಕ್ಕಿಂತ ಕೆಟ್ಟದಾಗಿಯೂ ಇರುವ ಸಾಧ್ಯತೆ ಇದೆ ಎಂದು ಐಎಂಎಫ್ ವರದಿ ಹೇಳಿದೆ. ಅಂದರೆ, ವರದಿಯಲ್ಲಿನ ಕೆಲವು ಅಂದಾಜುಗಳು ತಪ್ಪಾಗುವ ಸಾಧ್ಯತೆ ಇರುತ್ತದೆ. ಉದಾಹರಣೆಗೆ, ಕೆಲವು ಪ್ರಮುಖ ಬ್ಯಾಂಕ್‌ಗಳು ದಿವಾಳಿ ಎದ್ದ ನಂತರದಲ್ಲಿ ಹಣಕಾಸು ವ್ಯವಸ್ಥೆಯಲ್ಲಿ ಉಂಟಾಗಿದ್ದ ಸಮಸ್ಯೆಗಳು ಒಂದಿಷ್ಟು ಬಗೆಹರಿದಿವೆ ಎಂದು ಭಾವಿಸಲಾಗಿದೆಯಾದರೂ, ಮುಂದಿನ ದಿನಗಳಲ್ಲಿ ಈ ವಲಯದಲ್ಲಿ ಇನ್ನಷ್ಟು ಬಿಕ್ಕಟ್ಟುಗಳು ಎದುರಾಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಜಗತ್ತಿನ ವಿವಿಧ ಕೇಂದ್ರೀಯ ಬ್ಯಾಂಕ್‌ಗಳು ಕೈಗೊಂಡ ಕ್ರಮದ ಪರಿಣಾಮವಾಗಿ ಹಣದುಬ್ಬರ ದರವು ಮುಂದಿನ ದಿನಗಳಲ್ಲಿ ಕಡಿಮೆ ಆಗುವ ನಿರೀಕ್ಷೆ ಇದೆಯಾದರೂ, ಹಣದುಬ್ಬರದ ಕುರಿತು ಒಂದಿಷ್ಟು ಕಳವಳ ಇದ್ದೇ ಇದೆ.




ಈಗಿನ ಪರಿಸ್ಥಿತಿಯಲ್ಲಿ ಹೂಡಿಕೆಯು ಸರ್ಕಾರಗಳ ಕಡೆಯಿಂದ ಬರಬೇಕಿದೆ

ಉಕ್ರೇನ್‌ನಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮಗಳು ಹಾಗೂ ಅಮೆರಿಕ–ಚೀನಾ ನಡುವಿನ ವಾಣಿಜ್ಯ ಸಮರದ ಪರಿಣಾಮಗಳು ಇನ್ನೂ ಕೆಲ ಕಾಲದವರೆಗೆ ಆರ್ಥಿಕ ಚಟುವಟಿಕೆಗಳ ಮೇಲೆ ಪ್ರಭಾವ ಬೀರುತ್ತ ಇರಲಿವೆ. 2023–24ರಲ್ಲಿ ಭಾರತದ ಅರ್ಥ ವ್ಯವಸ್ಥೆಯು ಶೇ 6.1ರಷ್ಟು ಬೆಳವಣಿಗೆ ಕಾಣಲಿದೆ ಎಂದು ಈ ಮೊದಲು ಅಂದಾಜು ಮಾಡಿದ್ದ ಐಎಂಎಫ್ ಈಗ ಅದನ್ನು ತಗ್ಗಿಸಿದೆ. ದೇಶದ ಅರ್ಥ ವ್ಯವಸ್ಥೆಯು ಶೇ 5.9ರಷ್ಟು ಮಾತ್ರ ಬೆಳೆಯಲಿದೆ ಎಂದು ಅದು ಹೇಳಿದೆ. ಬೇಡಿಕೆ ಕಡಿಮೆ ಆಗಿರುವುದು ಹಾಗೂ ಇತರ ಕೆಲವು ನಕಾರಾತ್ಮಕ ದತ್ತಾಂಶಗಳನ್ನು ಆಧರಿಸಿ, ಬೆಳವಣಿಗೆಯ ಅಂದಾಜನ್ನು ತಗ್ಗಿಸಲಾಗಿದೆ. ಐಎಂಎಫ್ ಪ್ರಕಾರ, ಈಗ ಅರ್ಥ ವ್ಯವಸ್ಥೆಯ ಬೆಳವಣಿಗೆಗೆ ಪ್ರಮುಖ ಚಾಲಕ ಶಕ್ತಿಗಳು ಎಂದರೆ ಹೂಡಿಕೆ ಮತ್ತು ವ್ಯಾಪಾರ. ಈಗಿನ ಪರಿಸ್ಥಿತಿಯಲ್ಲಿ ಹೂಡಿಕೆಯು ಸರ್ಕಾರಗಳ ಕಡೆಯಿಂದ ಬರಬೇಕಿದೆ. ಸರ್ಕಾರಗಳು ಬಂಡವಾಳ ಹೂಡಿಕೆ ವಿಚಾರವಾಗಿ ಕೆಲವು ಪ್ರಮುಖ ಯೋಜನೆಗಳನ್ನು ಸಿದ್ಧಪಡಿಸಿವೆಯಾದರೂ, ಅವು ಅನುಷ್ಠಾನಕ್ಕೆ ಬರುತ್ತವೆಯೇ ಎಂಬುದರಲ್ಲಿ ಅನುಮಾನ ಇದೆ. ವ್ಯಾಪಾರ ವಹಿವಾಟಿನ ವಿಚಾರಕ್ಕೆ ಬರುವುದಾದರೆ, ಸೇವಾ ವಲಯದಲ್ಲಿನ ರಫ್ತು ಪ್ರಮಾಣ ಚೆನ್ನಾಗಿ ಇದೆ. ಆದರೆ ಸರಕುಗಳ ರಫ್ತು ಅಷ್ಟೇನೂ ದೊಡ್ಡ ಪ್ರಮಾಣದಲ್ಲಿ ಆಗಿಲ್ಲ.

ಪ್ರಸಕ್ತ ವರ್ಷದಲ್ಲಿ ಜಾಗತಿಕ ಮಟ್ಟದಲ್ಲಿ ವ್ಯಾಪಾರ ವಹಿವಾಟು ಕಡಿಮೆ ಆಗುವ ಸಾಧ್ಯತೆ ಇದೆ. ಜಾಗತಿಕ ಮಟ್ಟದಲ್ಲಿ ಆರ್ಥಿಕ ಬೆಳವಣಿಗೆ ಕಡಿಮೆ ಇರುವ ಕಾಲಘಟ್ಟದಲ್ಲಿ ಭಾರತವು ತಾನು ಮಾತ್ರ ವ್ಯಾಪಾರ ವಹಿವಾಟಿನಲ್ಲಿ ಹೆಚ್ಚಿನ ಸಾಧನೆ ಮಾಡಲು ಸಾಧ್ಯ ಎಂದು ನಿರೀಕ್ಷಿಸಲಾಗದು. ಐಎಂಎಫ್, ಭಾರತದ ಆರ್ಥಿಕ ಬೆಳವಣಿಗೆ ವಿಚಾರವಾಗಿ ಮಾಡಿರುವ ಅಂದಾಜು, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಮಾಡಿರುವ ಶೇ 6.5ರ ಅಂದಾಜಿಗಿಂತ ಬಹಳ ಕಡಿಮೆ ಇದೆ ಎಂಬುದು ಗಮನಾರ್ಹ. ಆರ್‌ಬಿಐ ಮತ್ತು ಐಎಂಎಫ್ ಮಾತ್ರವೇ ಅಲ್ಲದೆ, ಇತರ ಕೆಲವು ಸಂಸ್ಥೆಗಳು ಕೂಡ ತಮ್ಮದೇ ಆದ ಮುನ್ನೋಟವನ್ನು ನೀಡಿವೆ. ಕೆಲವು ಅಂದಾಜುಗಳು ಹೆಚ್ಚು ಬೆಳವಣಿಗೆಯನ್ನು, ಇನ್ನು ಕೆಲವು ಅಂದಾಜುಗಳು ಕಡಿಮೆ ಬೆಳವಣಿಗೆಯನ್ನು ಹೇಳುತ್ತಿವೆ. ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಪ್ರಕಾರ, ಬೆಳವಣಿಗೆ ದರ ಶೇ 6.4ರಷ್ಟು ಇರಲಿದೆ. ಕ್ರಿಸಿಲ್ ಸಂಸ್ಥೆಯು ಶೇ 6ರ ಬೆಳವಣಿಗೆ ದರದ ನಿರೀಕ್ಷೆ ಹೊಂದಿದೆ. ಅವೇನೇ ಇದ್ದರೂ, ಈಗಿನ ಜಾಗತಿಕ ವಿದ್ಯಮಾನಗಳನ್ನು ಅವಲೋಕಿಸಿದರೆ, ಆರ್ಥಿಕ ಬೆಳವಣಿಗೆ ದರ ದೊಡ್ಡ ಮಟ್ಟದಲ್ಲಿ ಇರಲಿದೆ ಎಂದು ನಿರೀಕ್ಷೆ ಮಾಡುವುದು ಅವಾಸ್ತವಿಕ ಆಗಬಹುದು.

ದಿನದ ಟ್ವೀಟ್

ನಿಜವಾದ ಸವಾಲೆಂದರೆ...



ಭಾರತವು ಒಟ್ಟು ಜನಸಂಖ್ಯೆಯಲ್ಲಿ ಚೀನಾವನ್ನು ಹಿಂದಿಕ್ಕಿರುವುದು ಸಂಭ್ರಮಾಚರಣೆಯ ಸಂಗತಿಯಲ್ಲ. ತಲಾ ಆದಾಯದಲ್ಲಿ ಚೀನಾವನ್ನು ಹಿಂದಿಕ್ಕುವುದು ನಿಜವಾದ ಸವಾಲು. ತಲಾ ಆದಾಯದ ಜಾಗತಿಕ ಶ್ರೇಯಾಂಕದಲ್ಲಿ ಭಾರತವು 147ನೇ ಸ್ಥಾನದಲ್ಲಿ ಇದ್ದರೆ, ಚೀನಾ 63ನೇ ಸ್ಥಾನದಲ್ಲಿದೆ. ಸರಾಸರಿ ಆದಾಯದ ಲೆಕ್ಕದಲ್ಲಿ ಚೀನಾದ ಪ್ರಜೆಯು ಭಾರತದ ಪ್ರಜೆಗಿಂತ 5.4 ಪಟ್ಟು ಹೆಚ್ಚು ಸಿರಿವಂತನಾಗಿದ್ದಾನೆ.

ಥಾಮಸ್ ಐಸಾಕ್, ಸಿಪಿಎಂ ಕೇಂದ್ರ ಸಮಿತಿ ಸದಸ್ಯ

ಕಿಡಿನುಡಿ



ಗುಜರಾತ್‌ನಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳು ಹೆಚ್ಚಾಗಿವೆ. ವಿದ್ಯಾರ್ಥಿಗಳು ಮತ್ತೆ ತೊಂದರೆ ಅನುಭವಿಸಿದ್ದಾರೆ. 'ಉತ್ತಮ ಆಡಳಿತದ ಮಾದರಿ'ಯು ಪ್ರಶ್ನೆಪತ್ರಿಕೆ ಸೋರಿಕೆ ಪಿಡುಗಿಗೆ ಗುಜರಾತ್‌ನಲ್ಲಿ ಹಾಗೂ ಭಾರತದಾದ್ಯಂತ ಕೊನೆ ಹಾಡುವುದನ್ನು ಖಾತರಿಪಡಿಸಬೇಕು. ಇಲ್ಲದಿದ್ದರೆ, ಹೆಚ್ಚಿನ ಸಂಖ್ಯೆಯಲ್ಲಿರುವ ಯುವಜನರನ್ನು ಒಂದು ಸಂಪನ್ಮೂಲವಾಗಿ ಬಳಸಿಕೊಳ್ಳಲು ಸಾಧ್ಯವಾಗದೆ, ವಿಪತ್ತಿಗೆ ಸಿಲುಕುತ್ತೇವೆ.

ರಾಜ್‌ದೀಪ್ ಸರ್ದೇಸಾಯಿ, ಪತ್ರಕರ್ತ

25 ವರ್ಷಗಳ ಹಿಂದೆ

ಮಂಗಳವಾರ, 21-4-1998

• ರಾಜೀನಾಮೆಗೆ ನಕಾರ ಬೂಟಾ ಸಿಂಗ್ ವಜಾ

ನವದೆಹಲಿ, ಏ. 20– ಜೆಎಂಎಂ ಪ್ರಕರಣದ ಸಂಬಂಧ ಆರೋಪಿಯಾಗಿದ್ದು, ಕಾನೂನು ಕ್ರಮ ಎದುರಿಸಬೇಕಾಗಿರುವ ಬೂಟಾ ಸಿಂಗ್ ರಾಜೀನಾಮೆ ನೀಡಲು ನಿರಾಕರಿಸಿದ್ದರಿಂದ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಇಂದು ಮಧ್ಯಾಹ್ನ ಸಂಪುಟದಿಂದ ಅವರನ್ನು ವಜಾ ಮಾಡುವ ಮೂಲಕ ಜಯಲಲಿತಾ ಅವರ ಒತ್ತಾಯಕ್ಕೆ ಕೊನೆಗೂ ಮಣಿದಂತಾಯಿತು.

ವಾಜಪೇಯಿ ಅವರ ಸಲಹೆ ಮೇರೆಗೆ ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರು ಬೂಟಾ ಸಿಂಗ್ ಅವರನ್ನು ಸಂಪುಟದಿಂದ ವಜಾ ಮಾಡಿದ್ದಾರೆ. ಬೂಟಾ ನಿರ್ವಹಿಸುತ್ತಿದ್ದ ಸಂಪರ್ಕ ಖಾತೆಯನ್ನು ಪ್ರಸಾರ ಖಾತೆ ಸಚಿವೆ ಸುಷ್ಮಾ ಅವರಿಗೆ ವಹಿಸಲಾಗಿದೆ.

• ಬಾಹುಬಲಿಗೆ 'ಅಗ್ನಿಪರೀಕ್ಷೆ'

ಶ್ರವಣಬೆಳಗೊಳ, ಏ.20– ಈ ಬಾರಿಯ ಬೇಸಿಗೆಯ ಬಿಸಿಲು ಮನುಷ್ಯರನ್ನು ಮಾತ್ರ ಸುಡುತ್ತಿಲ್ಲ, ವಿಗ್ರಹಗಳನ್ನೂ ಸುಡುತ್ತಿದೆ. ಮಹಾಬಲಶಾಲಿಯಾದ ಶ್ರವಣಬೆಳಗೊಳದ 'ಬಾಹುಬಲಿ'ಯೂ ಈ ಬಿಸಿಲಿನಲ್ಲಿ ತಲ್ಲಣಗೊಳ್ಳುತ್ತಿದ್ದಾನೆ.

ಬಾಹುಬಲಿಯ ತಲ್ಲಣ ಹೊರನೋಟಕ್ಕೆ ಕಾಣದೇ ಹೋಗಬಹುದು. ಆದರೆ ಈ ಬಾಹುಬಲಿಯ ರಕ್ಷಣೆಯ ಹೊಣೆ ಹೊತ್ತಿರುವ ಪುರಾತತ್ವ ಇಲಾಖೆಯ ಅಧಿಕಾರಿಗಳ ತಲ್ಲಣವಂತೂ ಬೇಸಿಗೆಯ ಉಷ್ಣಾಂಶ ಹೆಚ್ಚಿದಂತೆಲ್ಲ ಹೆಚ್ಚುತ್ತಿದೆ.

50 ವರ್ಷಗಳ ಹಿಂದೆ

ಶನಿವಾರ, 21-4-1973

• ಜಂಟಿ ಸಲಹೆಯ 'ತೊಡರುಗಳ' ಚರ್ಚೆಗೆ ಭಾರತಕ್ಕೆ ಪಾಕ್ ಆಹ್ವಾನ

ರಾವಲ್ಪಿಂಡಿ, ಏ. 20– ಭಾರತ–ಬಾಂಗ್ಲಾದೇಶ ಮಂಗಳವಾರ ನೀಡಿದ ಸಂಯುಕ್ತ ಹೇಳಿಕೆಯಲ್ಲಿನ 'ತೊಡರುಗಳ ಬಗೆಗೆ ಸ್ಪಷ್ಟೀಕರಣ'ಕ್ಕಾಗಿ ಭಾರತದ ಪ್ರತಿನಿಧಿಗಳನ್ನು ಇಸ್ಲಾಮಾಬಾದ್‌ಗೆ ಆಹ್ವಾನಿಸಲು ಪಾಕಿಸ್ತಾನ ನಿರ್ಧರಿಸಿದೆ.

ದೆಹಲಿ ಹೇಳಿಕೆಯು, 'ಪಾಕಿಸ್ತಾನ ತನ್ನ ತತ್ವಗಳನ್ನು ಬಿಟ್ಟುಕೊಡುವಂತೆ ಆಮಂತ್ರಿಸುವ' ಕ್ರಮವೆಂದು ಅದು ವರ್ಣಿಸಿದರೂ, 'ಅದರಲ್ಲಿ ಉಭಯ ರಾಷ್ಟ್ರಗಳ ನಡುವೆ ಮತ್ತಷ್ಟು ಮಾತುಕತೆ ನಡೆಯಬೇಕೆಂಬ ತನ್ನ ಆಕಾಂಕ್ಷೆಗಳಿಗೆ ತಕ್ಕ ಮನೋಭಾವ ಇರುವುದೆಂದು ಭಾವಿಸುವುದಾಗಿ' ತಿಳಿಸಿದೆ.

• ಜಿಲ್ಲಾಮಟ್ಟದ 7ನೇ ತರಗತಿ ಪಬ್ಲಿಕ್ ಪರೀಕ್ಷೆಗಳು ರದ್ದಾಗುವ ಸಂಭವ

ಬೆಂಗಳೂರು, ಏ. 20– ಜಿಲ್ಲಾ ಮಟ್ಟದಲ್ಲಿ ಏರ್ಪಡಿಸುತ್ತಿರುವ ಏಳನೇ ತರಗತಿಯ ಪಬ್ಲಿಕ್ ಪರೀಕ್ಷೆಗಳು ರದ್ದಾಗುವ ಸಂಭವ ಇದೆ.

ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತನ್ನ ಬೇಡಿಕೆಗಳನ್ನು ಶಿಕ್ಷಣ ಸಚಿವರೊಂದಿಗೆ ಪ್ರಸ್ತಾಪಿಸಿದಾಗ, 'ಜಿಲ್ಲಾ ಮಟ್ಟದ ಏಳನೇ ತರಗತಿಯ ಪಬ್ಲಿಕ್ ಪರೀಕ್ಷೆಯನ್ನು ಶಾಲಾ ಪರೀಕ್ಷೆಯನ್ನಾಗಿ ಪರಿವರ್ತಿಸುವುದರಿಂದ ಉತ್ತರ ಪತ್ರಿಕೆಯ ಮೌಲ್ಯಮಾಪನದ ದರವನ್ನು ಹೆಚ್ಚಿಸುವ ಪ್ರಶ್ನೆಯೇ ಉದ್ಭವಿಸಲಾರದು' ಎಂದು ಸಚಿವರು ತಿಳಿಸಿದರೆಂದು ಸಂಘದ ಪ್ರಕಟಣೆಯೊಂದು ತಿಳಿಸಿದೆ.

ಬಿಜೆಪಿ ಸಿದ್ಧಾಂತಕ್ಕೆ ಇಲ್ಲಿ ಪಕ್ಷ ಕಟ್ಟಿದವರೇ ಪೂರ್ಣ ಬದ್ಧರಾಗಿರಲಿಲ್ಲ; ಬದ್ಧರಾಗಿದ್ದವರು ನಾಯಕರಾಗಲಿಲ್ಲ

ಒಲಿಯದ ನೆಲದಲ್ಲಿ ಬೆಳೆಯಲಾಗದ ಕತೆ



ಅನುರಣನ

ನಾರಾಯಣ ಎ.

ಮಾಮೂಲು ಎನ್ನಬಹುದಾದ ಚುನಾವಣಾ ಕಾಲದ ಪಕ್ಷಾಂತರ ಪ್ರಕರಣಗಳಲ್ಲೂ ಬಹುವಿಧಗಳಿವೆ. ಬೇರೆ ಪಕ್ಷಗಳನ್ನು ಬಿಟ್ಟು ಯಾರಾದರೂ ಬಿಜೆಪಿ ಸೇರಿದರೆ ಅದು ಹೆಚ್ಚು ಸುದ್ದಿಯಾಗುವುದಿಲ್ಲ. ಆದರೆ ಬಿಜೆಪಿಯಲ್ಲಿ ಬಹುಕಾಲದಿಂದ ಇದ್ದವರು ಒಮ್ಮಿಂದೊಮ್ಮೆಗೇ ಬೇರೆ ಪಕ್ಷವೊಂದನ್ನು ಸೇರಿದರೆ, ಅದರಲ್ಲೂ ಕಾಂಗ್ರೆಸ್ ಸೇರಿಕೊಂಡರೆ ಅದು ದೊಡ್ಡ ಮಟ್ಟದಲ್ಲಿ ಸುದ್ದಿ ಆಗುತ್ತದೆ. ಇನ್ನು ಆರ್‌ಎಸ್‌ಎಸ್‌ನ ಸಂಸ್ಕಾರ ಪಡೆದು ಬಿಜೆಪಿಯಲ್ಲಿ ಬೆಳೆದವರು ಕಾಂಗ್ರೆಸ್ ಸೇರಿದರಂತೂ ಅದೂ ಇನ್ನೂ ವಿಶೇಷ ಸುದ್ದಿ. ಅದಕ್ಕೆ ಕಾರಣವಿದೆ.

ಸ್ವಾತಂತ್ರ್ಯಪೂರ್ವದಲ್ಲಿಯುವಕರನ್ನುತಮ್ಮಕಲ್ಪನೆಯ ಹಿಂದೂರಾಷ್ಟ್ರದ ಸಾಕ್ಷಾತ್ಕಾರಕ್ಕಾಗಿ ತೊಡಗಿಸಲೆಂದೇ ಈ ಆರ್‌ಎಸ್‌ಎಸ್ ಮತ್ತು ಅದರ ಸಹವರ್ತಿ ರಾಜಕೀಯ ಸಂಘಟನೆಗಳು ಹುಟ್ಟಿಕೊಂಡಿರುವುದು. ಕಾಂಗ್ರೆಸ್ಸಿನ ಕಲ್ಪನೆಯ ರಾಷ್ಟ್ರ ಮತ್ತು ಬಿಜೆಪಿಯ ಕಲ್ಪನೆಯ ರಾಷ್ಟ್ರಗಳು ಮೂಲದಲ್ಲಿ ಬೇರೆಬೇರೆಯೇ ಆಗಿವೆ. ಹಾಗಾಗಿಯೇ ಸಂಘದ ಅಂಗಳದಲ್ಲಿ ನಿಂತು ಅಂಗೈಯನ್ನು ಊರ್ಧ್ವಮುಖವಾಗಿ ಎದೆಮಟ್ಟ ಹಿಡಿದು 'ಪ್ರಭೋ ಶಕ್ತಿಮಾನ್ ಹಿಂದೂ ರಾಷ್ಟ್ರಾಂಗ ಭೂತ' ಎಂದು ಪಠಿಸಿದ ಯಾರೂ ಕಾಂಗ್ರೆಸ್ ಸೇರುವುದು ಬಿಡಿ, ಅವರವರ ಊರಿನ ಕಾಂಗ್ರೆಸ್ ಕಚೇರಿಯ ಕಡೆ ತಲೆ ಹಾಕಿ ಮಲಗುವುದೂ ನಿಷಿದ್ಧ ಎಂಬ ಪರಿಸ್ಥಿತಿ ಇರುವುದು.

ಸಂಘದ ಸಹಜ ವಾಸನೆಯುಳ್ಳವರು ಮತ್ತು ಮೂಲ ಬಿಜೆಪಿಗರು ಮಾತ್ರವಲ್ಲ, ಆ ಪಕ್ಷದ ಕಡೆಗೆ ಒಮ್ಮೆ ಹೋಗಿ, ಅದರ ಸಿದ್ಧಾಂತಕ್ಕೆ ಯಥಾಶಕ್ತಿ-ಯಥಾಭಕ್ತಿ ತಮ್ಮ ಮಿದುಳನ್ನು ಸಮರ್ಪಿಸಿದವರು ಕೂಡಾ ಯಾವತ್ತಿಗೂ ಮತ್ತೆ ಕಾಂಗ್ರೆಸ್ಸಿಗೆ ಮರಳಿದ ಪ್ರಕರಣಗಳು ವಿರಳಾತಿವಿರಳ. ಆದರೆ, ಕರ್ನಾಟಕದಲ್ಲಿ ಈ ಬಾರಿಯ ಚುನಾವಣಾ ಕಣ ನೋಡುತ್ತಿದ್ದರೆ ಚರಿತ್ರೆ ಗತಿ ಬದಲಿಸುತ್ತಿರುವಂತಿದೆ.

ಹಾಗೆಂದು ಈತನಕ ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರಿದವರು ಇಲ್ಲವೇ ಇಲ್ಲ ಎಂದೇನಲ್ಲ. ಎ.ಕೆ.ಸುಬ್ಬಯ್ಯ ಅವರ ಒಂದು ಪ್ರಕರಣ, ಧನಂಜಯ ಕುಮಾರ್ ಅವರ ಇನ್ನೊಂದು ಪ್ರಕರಣ, ಹಾಗೆಯೇ ಮೈಸೂರು ಮತ್ತು ಶಿವಮೊಗ್ಗದ ಮಾಜಿ ಎಂಪಿಗಳಿಬ್ಬರ ಮತ್ತು ಪುತ್ತೂರಿನ ಮಾಜಿ ಶಾಸಕಿಯೊಬ್ಬರ ಪಕ್ಷಾಂತರ ಪ್ರಕರಣ ಇತ್ಯಾದಿಗಳೆಲ್ಲಾ ನಡೆದುಹೋಗಿವೆ. ಆದರೆ ಇವೆಲ್ಲವೂ ಬಿಡಿ ಪ್ರಕರಣಗಳು. ಬಿಜೆಪಿ ಇನ್ನೂ ಕರ್ನಾಟಕದಲ್ಲಿ ಸರಿಯಾದ ನೆಲೆಯನ್ನು ಕಂಡುಕೊಳ್ಳುವ ಹಾದಿಯಲ್ಲಿದ್ದಾಗ ಘಟಿಸಿದ ನಿರೀಕ್ಷಿತ ಪ್ರಕರಣಗಳು. ಈ ಬಾರಿ ಆಗುತ್ತಿರುವುದು ಭಿನ್ನವಾದ ರೀತಿಯ ಮರುವಲಸೆ (reverse migration). ಇದನ್ನು ಹಿಂದಿನ ಪ್ರಕರಣಗಳಿಗೆ ಹೋಲಿಸಲಾಗದು.

ಈಗ ಬಿಜೆಪಿ ಎನ್ನುವುದು ಬಲಭಯಂಕರ ರಾಷ್ಟ್ರೀಯ ಪಕ್ಷ. ಪ್ರಬಲ ನಾಯಕತ್ವದ ಆಸರೆ ಇರುವ ಪಕ್ಷ. ಬೇಕಾದವರನ್ನು ಸೆಳೆಯಲು, ಬಿಟ್ಟು ಹೋದವರನ್ನು ಮಣಿಸಲು ಯಾವ ಮಟ್ಟಕ್ಕೂ ಇಳಿಯಲು ಸಿದ್ಧವಿರುವ ಪಕ್ಷ. ಇಂತಹ ಪಕ್ಷವೊಂದರಲ್ಲಿ ಬಹುಕಾಲ ಆಯಕಟ್ಟಿನ ಸ್ಥಾನದಲ್ಲಿದ್ದವರು, ಆರ್‌ಎಸ್‌ಎಸ್ ಸಿದ್ಧಾಂತದಲ್ಲಿ ತಮ್ಮ ಆತ್ಮವನ್ನು ಅದ್ದಿ ತೆಗೆದವರು ಆ ಪಕ್ಷವನ್ನು ಬಿಡುತ್ತಿರುವುದು ಮಾತ್ರವಲ್ಲ, ಬಿಟ್ಟವರು ಕಾಂಗ್ರೆಸ್ ಸೇರುತ್ತಿರುವ ಬೆಳವಣಿಗೆ ಏನಿದೆ ಇದನ್ನು ವಿಶೇಷವಾಗಿ ಪರಿಶೀಲಿಸಬೇಕಿದೆ.

ಬಿಜೆಪಿಯಲ್ಲಿ ಪ್ರಶ್ನಾತೀತ ನಾಯಕರೆನಿಸಿಕೊಂಡವರು ಮುಂದಿನ ತಿಂಗಳ ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಲ್ಲಿ ಮಾಡಿದ ಒಂದು ಸಣ್ಣ ಪ್ರಮಾಣದ ಪ್ರಯೋಗವು ಪಕ್ಷದೊಳಗೆ ಉಂಟು ಮಾಡಿದ ತಲ್ಲಣಕ್ಕೆ ಓರ್ವ ಮಾಜಿ ಮುಖ್ಯಮಂತ್ರಿ, ಓರ್ವ ಮಾಜಿ ಉಪ ಮುಖ್ಯಮಂತ್ರಿ ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರಿ ಆ ಪಕ್ಷದ ಅಭ್ಯರ್ಥಿಗಳೇ ಆಗಿಬಿಟ್ಟರು. ಇದಕ್ಕೆ ಮೊದಲೇ ಹಲವು ಬೆಳವಣಿಗೆಗಳಾಗಿವೆ. ತೀರಾ ಇತ್ತೀಚಿನವರೆಗೆ ಕಟ್ಟಾ ಹಿಂದುತ್ವವಾದಿ ಬಿಜೆಪಿಗರಂತೆ ಮೆರೆಯುತ್ತಿದ್ದ ಇಬ್ಬರು–ಮೂವರು ಈಗ ಕಾಂಗ್ರೆಸ್ಸಿನ ಅಭ್ಯರ್ಥಿಗಳು. ಇನ್ನು ಮಾಜಿ ಶಾಸಕರನ್ನು ಒಳಗೊಂಡಂತೆ ಬಿಜೆಪಿಯ ಕೆಲವರ ನಡೆ ಈ ಬಾರಿ ಕಾಂಗ್ರೆಸ್ಸಿನ ಕಡೆಗೆ ಆಗಿದೆ. ಈ ಬೆಳವಣಿಗೆಗಳು ಏನೇನೋ ಕತೆ ಹೇಳುತ್ತವೆ. ಅವು ಚುನಾವಣೆಯ ಕಾಲದ ಸಾಮಾನ್ಯ ರಾಜಕೀಯ ಕತೆಗಳಲ್ಲ. ಆಲಿಸಿದವರಿಗೆ ಅಲ್ಲಿ ಕನ್ನಡದ ಮಣ್ಣಿನ ಗುಣಕ್ಕೂ ಬಿಜೆಪಿಯ ಸೈದ್ಧಾಂತಿಕ ನಿಲುವಿಗೂ ಕೂಡಿಬಾರದ ವಿರಸದ ಕತೆಯೊಂದು ಕೇಳಿಸುತ್ತದೆ.


ಎಲ್ಲರಿಗೂ ತಿಳಿದಿರುವಂತೆ, 1962ರಲ್ಲೇ ತನ್ನ ಹಿಂದಿನ ಅವತಾರವಾದ ಜನಸಂಘದ ಹೆಸರಲ್ಲಿ ನಾಲ್ಕು ಸ್ಥಾನಗಳನ್ನು ಗೆದ್ದು, 1983ರಲ್ಲಿ 18 ಸ್ಥಾನಗಳನ್ನು ಗೆದ್ದು, 1994 ಮತ್ತು 1999ರಲ್ಲಿ 40ರ ಆಸುಪಾಸಿನ ಸಂಖ್ಯೆಯ ಸ್ಥಾನಗಳನ್ನು ಗಳಿಸುವಲ್ಲಿಗೆ ಕರ್ನಾಟಕದಲ್ಲಿ ಆ ಪಕ್ಷದ ಬೆಳವಣಿಗೆಯ ಒಂದು ಹಂತ ಇಲ್ಲಿಗೆ ಮುಗಿದುಹೋಗಿತ್ತು. ಆನಂತರ ಕರ್ನಾಟಕದಲ್ಲಿ ಬಿಜೆಪಿ ಬೆಳೆದದ್ದಲ್ಲ. ಆನಂತರ ಅದು ಕೃತಕವಾಗಿ ಕೊಬ್ಬಿದ್ದು, ಅಸಹಜವಾಗಿ ಉಬ್ಬಿದ್ದು. ಹಾಗೆ ಉಬ್ಬುವಷ್ಟು ಉಬ್ಬಿಸಿಕೊಂಡು ಕೊಬ್ಬುವಷ್ಟು ಕೊಬ್ಬಿಸಿಕೊಂಡ ಮೇಲೂ ಅದಕ್ಕೆ ರಾಜ್ಯದಲ್ಲಿ ಸರಳ ಬಹುಮತವನ್ನೂ ಈತನಕ ಪಡೆಯಲಾಗಿಲ್ಲ ಎಂದರೆ ಅದರಿಂದ ತಿಳಿಯುವುದಾದರೂ ಏನು? ಬಿಜೆಪಿಗೆ ಎಲ್ಲವೂ ಇತ್ತು. ಜನರನ್ನು ಸಮ್ಮೋಹನಗೊಳಿಸಬಲ್ಲ ಸಿದ್ಧಾಂತವಿತ್ತು. ಕೈತುಂಬಾ ಕಾಸಿತ್ತು. ಊರೂರಲ್ಲಿ ಮೂರ್ನಾಲ್ಕು ಮಾದರಿಯಲ್ಲಿ ತಯಾರಾಗಿರುವ ಕಾರ್ಯಕರ್ತರ ಪಡೆ ಇತ್ತು. ಭಯಾನಕ ಐಟಿ ಸೆಲ್‌ನ ನೆರವಿತ್ತು. ಏನನ್ನೂ ಹೇಳಲು ಏನನ್ನೂ ಮಾಡಲು ಸಿದ್ಧರಿರುವ ದೊಡ್ಡ ನಾಯಕರಿದ್ದರು. ಇಷ್ಟೆಲ್ಲಾ ಇದ್ದು ಕೂಡಾ ಆ ಪಕ್ಷಕ್ಕೆ ಈತನಕ ಸ್ವಂತ ಶಕ್ತಿಯಿಂದ ಅಧಿಕಾರಕ್ಕೆ ಬರಲಾಗಲಿಲ್ಲ ಎಂದರೆ ಅದರರ್ಥ ಬಿಜೆಪಿಯ ಸ್ವಭಾವ ಮತ್ತು ಕರ್ನಾಟಕದ ಅಂತಃಸತ್ವಗಳ ಮಧ್ಯೆ ಏನೋ ಒಂದು ಅನಿರ್ವಚನೀಯ ಅಂತರವಿದೆ ಎಂದು ತಾನೇ.

ಇದನ್ನರಿತ ಬಿಜೆಪಿ, ಕನ್ನಡ ಮಣ್ಣಿನ ಗುಣವನ್ನೇ ಕೆಡಿಸಿ ತನ್ನ ಸಿದ್ಧಾಂತವನ್ನು ಸ್ಥಾಪಿಸಿಬಿಡಬೇಕೆಂದು ಹಟ ಹಿಡಿದು ಹೊರಟಿರುವ ಸಂದರ್ಭದಲ್ಲಿ, ಅದಕ್ಕೆ ಕರ್ನಾಟಕದ ಕುರಿತಾದ ಇನ್ನೊಂದು ಸತ್ಯ ಮುಖಾಮುಖಿಯಾಗಿದೆ. ಅದೇನೆಂದರೆ, ಮತದಾರರ ವಿಚಾರ ಅಂತಿರಲಿ, ಆ ಪಕ್ಷದ ಸಿದ್ಧಾಂತ ಏನಿದೆ ಅದು ಕರ್ನಾಟಕದಲ್ಲಿ ಬಿಜೆಪಿಯ ಮುಂಚೂಣಿ ನಾಯಕರ ಅಂತರಂಗದ ಆಳಕ್ಕೆ ಕೂಡಾ ಪೂರ್ತಿಯಾಗಿ ಇಳಿದಿಲ್ಲ ಎನ್ನುವುದು. ಹಾಗಾಗಿಯೇ ಅಂದು ಯಡಿಯೂರಪ್ಪ ಸಲೀಸಾಗಿ ಪಕ್ಷದಿಂದ ಹೊರನಡೆದದ್ದು (ಆನಂತರ ಅವರು ಮರಳಿ ಬಂದರು ಎನ್ನುವುದು ಇಲ್ಲಿ ಅಪ್ರಸ್ತುತ). ಹಾಗಾಗಿಯೇ, ಜಗದೀಶ ಶೆಟ್ಟರ್ ಅಂತಹವರು ಇಂದು ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರಲು ಸಾಧ್ಯವಾಗಿದ್ದು. ಪಕ್ಷವನ್ನು ಮೂಲದಿಂದ ಕಟ್ಟಿ ಬೆಳೆಸಿದ, ಆರ್‌ಎಸ್‌ಎಸ್‌ನ ಸಾರಸರ್ವದಲ್ಲಿ ಮಿಂದೆದ್ದಿದ್ದ ಇವರಂತಹವರು ಕೂಡ ಬಿಜೆಪಿಗೆ ಪೂರ್ಣ ಬದ್ಧರಾಗಿ ಉಳಿಯಲು ಸಿದ್ಧರಿರಲಿಲ್ಲ. ಒಂದು ವೇಳೆ ಬಿಜೆಪಿಯ ಸಿದ್ಧಾಂತ ಅವರೀರ್ವರನ್ನು ಸಂಪೂರ್ಣವಾಗಿ ಹಿಡಿದಿಟ್ಟುಕೊಂಡಿದ್ದರೆ, ಅಧಿಕಾರದಿಂದ ಇಳಿಸುವುದು ಬಿಡಿ, ಅಕ್ಷರಶಃ ಅವರನ್ನು ನೆಲಕ್ಕೆ ಕೆಡವಿದ್ದರೂ ಅವರು 'ನೆನೆವುದೆನ್ನ ಮನಂ ಹಿಂದೂ ರಾಷ್ಟ್ರಮಂ' ಅಂತ ಅಲ್ಲೇ ಇರುತ್ತಿದ್ದರು. ಅವರನ್ನು ಪಕ್ಷದ ಜತೆ ಬೆಸೆದದ್ದು ಅಧಿಕಾರವೇ ವಿನಾ ಸಿದ್ಧಾಂತವಲ್ಲ.

ಇದೇ ವೇಳೆ ಬಿಜೆಪಿಯ ಸಿದ್ಧಾಂತವನ್ನು ಪೂರ್ಣವಾಗಿ ಮೈಗೂಡಿಸಿಕೊಂಡ ಯಾರೊಬ್ಬರಿಗೂ ಇಲ್ಲಿ ನಾಯಕರಾಗಿ ಮೆರೆಯಲು ಸಾಧ್ಯವಾಗಿಲ್ಲ. ಕರ್ನಾಟಕದ ಮಣ್ಣಿಗೂ ಬಿಜೆಪಿಯ ರಾಜಕೀಯ ಮಾದರಿಗೂ ಕೂಡಿಬರುತ್ತಿಲ್ಲ ಎನ್ನುವ ಕಾರಣಕ್ಕೆ ಹೀಗಾಗಿದ್ದು. ಈಗಲಾದರೂ ಬಿಜೆಪಿಗೆ ಈ ಸತ್ಯ ಅರ್ಥವಾಗಿ ಅದರ ಸಿದ್ಧಾಂತವನ್ನು ಈ ನೆಲದ ಅಪೇಕ್ಷೆಗನುಗುಣವಾಗಿ ಸಡಿಲಗೊಳಿಸಿ ರಾಜಕೀಯ ನಡೆಸಿದರೆ ಅದಕ್ಕೆ ಇಲ್ಲಿ ಸದೃಢವಾಗಿ ಬೇರೂರಲು ಸಾಧ್ಯವಾಗಬಹುದೇನೋ? ಬಿಜೆಪಿ ಆ ಹಾದಿ ಆರಿಸಿಕೊಂಡ ಹಾಗೆ ಕಾಣಿಸುತ್ತಿಲ್ಲ. ಬದಲಿಗೆ ಅದು ತನ್ನ ಸೈದ್ಧಾಂತಿಕ ಅಸ್ತ್ರಗಳಾದ ಧರ್ಮಾಂಧತೆಯ ವಿಷ ಮತ್ತು ಕೋಮುವಾದಿ ರಾಷ್ಟ್ರೀಯತೆಯ ಅಮಲುಗಳ ಮಿತಿಯನ್ನು ಸರಿದೂಗಿಸಲು ಜಾತಿ ಸಮೀಕರಣ, ದೆಹಲಿ ನಾಯಕರ ವರ್ಚಸ್ಸಿನಂತಹವುಗಳನ್ನೆಲ್ಲ ಬಳಸಿ ಹೇಗೋ ಅಧಿಕಾರ ಹಿಡಿದು, ಆ ಅಧಿಕಾರದ ಮೂಲಕ ಕರ್ನಾಟಕದಲ್ಲಿ ಅದರ ಬೆಳವಣಿಗೆಗೆ ಅಡ್ಡಿಯಾಗಿರುವ ಕನ್ನಡ ಜನಮಾನಸದ ರಾಜಕೀಯ ವಿವೇಕವನ್ನೇ ಹೊಸಕಿಹಾಕುವ ಸನ್ನಾಹದಲ್ಲಿದ್ದಂತಿದೆ. ಇದನ್ನೇ ಅದು ಪ್ರಯೋಗ ಎಂದು ಕರೆಯುವುದು.



ಚುರುಮುರಿ



ಐದು ವರ್ಷ, ಆರು ಪಟ್ಟು!

• ಬಿ.ಎನ್.ಮಲ್ಲೇಶ್

'ಏನ್ರಲೆ, ಹೆಂಗೈತಿ ಎಲೆಕ್ಷನ್ನು?' ಮಂಜಮ್ಮನ ಚಾದಂಗಡಿಯಲ್ಲಿ ಚಾ ಕುಡಿಯುತ್ತ ದುಬ್ಬೀರ ಕೇಳಿದ.

'ಎಲೆಕ್ಷನ್ನಾ? ತೆಲಿ ಕೆಟ್ ಮೊಸರಾಗೇತಪ, ಯಾರು ಯಾವ ಪಕ್ಷದಿಂದ ನಿಂತಾರೆ ಅನ್ನೋದೇ ತಿಳೀವಲ್ದು. ಆದ್ರೆ ಎಲ್ಲರತ್ರನೂ ಕೋಟಿ ಕೋಟಿ ರೊಕ್ಕ...' ಎಂದ ಗುಡ್ಡೆ.

'ಲೇ ಗುಡ್ಡೆ, ಕೋಟಿಗೆ ಎಷ್ಟ್ ಸೊನ್ನೆಲೆ?' ತೆಪರೇಸಿ ಕೇಳಿದ.

'ಒಂದ್ ಏಳೋ ಎಂಟೋ ಇರಬೇಕು, ಯಾಕೆ?'

'ಅಲ್ಲ, ಈ ಅಭ್ಯರ್ಥಿಗಳು ಸಾವ್ ಸಾವುರ ಕೋಟಿ ಆಸ್ತಿ ಘೋಷಿಸ್ತಾರಲ್ಲ, ಅಟಾಕಂದು ರೊಕ್ಕ ಹೆಂಗೆ ಮಾಡ್ತಾರೆ ಅಂತ... ಹೋದ ಎಲೆಕ್ಷನ್‌ನಲ್ಲಿ ಹದಿನೈದು ಕೋಟಿ ಆಸ್ತಿ ಘೋಷಿಸಿದೋರು ಈ ಎಲೆಕ್ಷನ್‌ಗೆ ತೊಂಬತ್ತು ಕೋಟಿ ಘೋಷಿಸ್ತಾರೆ ಅಂದ್ರೆ ಏನರ್ಥ? ಆರು ಪಟ್ಟು ಜಾಸ್ತಿ! ಯಾವ ಬ್ಯಾಂಕಲ್ಲಿ ಅಷ್ಟು ಬಡ್ಡಿ ಕೊಡ್ತಾರೆ?'

'ಯಾವ ಬ್ಯಾಂಕಲ್ಲೂ ಕೊಡಲ್ಲ, ಬೇರೆ ಏನೇನರೆ ಮಾಡಿ ರೊಕ್ಕ ಮಾಡ್ತಾರೆ ಅನುಸ್ತತಿ...'

'ಈಗ ಒಂದ್ ಐಡಿಯಾ, ಈ ಅಭ್ಯರ್ಥಿಗಳು ಕುಕ್ಕರು, ಸೀರೆ ಹಂಚಾಕೆ ಬರ್ತಾರಲ್ಲ, ಆಗ ನಮಿಗೆ ಇವೆಲ್ಲ ಬ್ಯಾಡ, ನಾವೇ ನಿಮಿಗೆ ಒಂದು ಲಕ್ಷ ಕೊಡ್ತೀವಿ, ಐದು ವರ್ಷಕ್ಕೆ ಆರು ಪಟ್ಟು ಮಾಡ್ಕೊಡಿ ಅಂತ ಕೇಳಿದ್ರೆ ಹೆಂಗೆ?' ಕೊಟ್ರೇಶಿ ಎಲ್ಲರ ಮುಖ ನೋಡಿದ.

'ಬಪ್ಪರೆ ಮಗನೆ, ನಿಂಗೂ ತೆಲಿ ಐತಿ ಬಿಡಲೆ... ಅಲ್ಲ, ಅವರು ನಮಿಗೆ ರೊಕ್ಕ ಮಾಡ್ಕೊಡಾಕೆ ಎಲೆಕ್ಷನ್‌ಗೆ ನಿಲ್ತಾರೆ ಅಂತ ತಿಳಿದೀ ಏನು?'

'ಹೌದು ಮತ್ತೆ, ನಮ್ ವೋಟಿಂದ ಗೆದ್ದು ರೊಕ್ಕ ಮಾಡ್ತಾರೆ ಅಂದಮ್ಯಾಲೆ ನಮಗೂ ಕೇಳಾಕೆ ಹಕ್ಕು ಇರತತಿ...' ಕೊಟ್ರೇಶಿ ವಾದಿಸಿದ.

'ಆತಾತು, ಅವ್ರು ಕೊಟ್ಟಂಗಾತು, ನೀ ಇಸ್ಕಂಡಂಗಾತು. ಈಗ ನಿಂದೂ ಐದು ಪಟ್ಟು ಜಾಸ್ತಿ ಆಗೇತಪ, ಇಲ್ಲೀತನ ನೀ ಕೊಟ್ಟೀ ಏನು?' ಮಂಜಮ್ಮ ಕೇಳಿದಳು.

'ಏನು? ಕೊಟ್ರಂದೂ ಐದು ಪಟ್ಟು ಜಾಸ್ತಿ ಆಗೇತಾ? ಏನು?'

'ನನ್ ಚಾದಂಗಡಿ ಉದ್ರಿ ಬಾಕಿ...!'

ಮಂಜಮ್ಮನ ಮಾತಿಗೆ ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಬಟ್ಟೆ ಬರಿದಾಗಿಸೀತು ಭುವಿಯ ಸಂಪತ್ತು!

ಅತ್ಯಂತ ಮಾಲಿನ್ಯಕಾರಕ ಉದ್ಯಮಗಳಲ್ಲಿ ಫ್ಯಾಷನ್ ಉಡುಪು ಉದ್ಯಮವೂ ಒಂದು

• ಆರ್.ಬಿ.ಗುರುಬಸವರಾಜ

ನೀವು ಯಾವುದೇ ಬಟ್ಟೆ ಅಂಗಡಿಗೆ ಹೋದರೂ ಅಲ್ಲಿ ಕಾಣುವುದು ಗಾಢ ಬಣ್ಣದ ಆಕರ್ಷಕ ಉಡುಪುಗಳು. ವಿವಿಧ ವಿನ್ಯಾಸದ, ವಿವಿಧ ಬಣ್ಣದ ಉಡುಪುಗಳು ಇಂದಿನವರ ಟ್ರೆಂಡ್ ಆಗಿವೆ. ಉಡುಪಿನ ವಿಷಯದಲ್ಲಿ ಪ್ರತಿಯೊಬ್ಬರಿಗೂ ತಮ್ಮದೇ ಆದ ಅಭಿರುಚಿ ಇರುತ್ತದೆ. ನಮಗಿಷ್ಟವಾದ ಉಡುಪು ಖರೀದಿಸಿ, ಅದನ್ನು ಧರಿಸಿ ಖುಷಿಪಡುತ್ತೇವೆ, ನಿಜ. ಆದರೆ ಫ್ಯಾಷನ್ ಉಡುಪುಗಳ ಹಿಂದಿರುವ ಕರಾಳ ಸತ್ಯವನ್ನು ಅರಿಯಬೇಕಾದ ಕಾಲ ಈಗ ಬಂದಿದೆ.

ಉಡುಪಿನ ವಿಷಯದಲ್ಲಾದ ಕ್ರಾಂತಿಯು ಪರಿಸರಕ್ಕೆ ಪೂರಕವಾಗಿಲ್ಲ ಎಂಬುದು ಮಾತ್ರ ದುರದೃಷ್ಟಕರ. ವಾಸ್ತವವಾಗಿ ಬಟ್ಟೆ ಉದ್ಯಮವು ಎರಡನೇ ಅತಿದೊಡ್ಡ ಮಾಲಿನ್ಯಕಾರಕ ಉದ್ಯಮ. ನಾವಿಂದು ಧರಿಸುವ ಪ್ರತಿಯೊಂದು ಫ್ಯಾಷನ್ ಉಡುಪೂ ಭೂಮಿಯ ಸೀಮಿತ ಸಂಪನ್ಮೂಲವನ್ನು ಕಸಿದುಕೊಳ್ಳುತ್ತಿದೆ.

ವೇಗವಾಗಿ ಬೆಳೆಯುತ್ತಿರುವ ಫ್ಯಾಷನ್ ಉಡುಪು ಉದ್ಯಮವು ಬೃಹತ್ ಪ್ರಮಾಣದ ತ್ಯಾಜ್ಯಕ್ಕೆ ಕಾರಣ ಆಗುತ್ತಿದೆ. ಅದು ಭೂಮಿಯ ಮೇಲಿನ ಆರೋಗ್ಯಕರ ಮಣ್ಣನ್ನು ನಾಶ ಮಾಡುತ್ತಿದೆ. ಶುದ್ಧ ನೀರಿನ ಮೂಲಗಳನ್ನು ಕಲುಷಿತಗೊಳಿಸುತ್ತಿದೆ. ಗಾಳಿಯನ್ನು ಕಲುಷಿತಗೊಳಿಸುತ್ತಿದೆ. ನಮ್ಮ ಸಾಗರಗಳನ್ನು ಮಲಿನಗೊಳಿಸುತ್ತಿದೆ. ಕಾಡುಗಳನ್ನು ನಾಶಪಡಿಸುತ್ತಿದೆ. ಪರಿಸರ ವ್ಯವಸ್ಥೆ ಮತ್ತು ಅದನ್ನು ಅವಲಂಬಿಸಿರುವ ಜೀವವೈವಿಧ್ಯದ ಆರೋಗ್ಯಕ್ಕೆ ಹಾನಿಯುಂಟು ಮಾಡುತ್ತಿದೆ. ಇದನ್ನೆಲ್ಲಾ ಕೇಳಿ ಅಚ್ಚರಿಯಾಗುತ್ತಿದೆಯೇ?ಆದರೂ ಇದು ಸತ್ಯ ಎಂಬುದನ್ನು ನಾವು ಒಪ್ಪಿಕೊಳ್ಳಲೇಬೇಕಾದ ಸ್ಥಿತಿಯನ್ನು ಕೆಲವು ಅಂಕಿಅಂಶಗಳು ನಮಗೆ ಸ್ಪಷ್ಟಪಡಿಸುತ್ತವೆ.

ಫ್ಯಾಷನ್ ಉದ್ಯಮವು ವರ್ಷಕ್ಕೆ 15,000 ಕೋಟಿ ಉಡುಪುಗಳನ್ನು ಉತ್ಪಾದಿಸುತ್ತದೆ ಎಂಬುದು ಖುಷಿಯ ವಿಚಾರ. ಆದರೆ ತಿರಸ್ಕರಿಸಲಾದ ಅಥವಾ ತೊಟ್ಟು ಬಿಸಾಡುವ ಶೇಕಡ 87ರಷ್ಟು, ಅಂದರೆ 4 ಕೋಟಿ ಟನ್‌ಗಳಷ್ಟು ಉಡುಪುಗಳು ಮಣ್ಣನ್ನು ಸೇರುತ್ತವೆ. ಹೀಗೆ ಮಣ್ಣಿಗೆ ಎಸೆಯಲಾದ ಬಹುತೇಕ ಉಡುಪುಗಳು ಬೆಂಕಿಗೆ ಆಹುತಿಯಾಗುತ್ತವೆ. ಬೆಂಕಿಗೆ ಬಿದ್ದ ಬಟ್ಟೆಗಳು ಹೊಗೆಯ ಮೂಲಕ ಗಾಳಿಯನ್ನು ಕಲುಷಿತಗೊಳಿಸುತ್ತವೆ.

ಇನ್ನು ಉತ್ಪಾದನೆಯಾಗುವ ಹೊಸ ಉಡುಪುಗಳ ಕತೆ ಮತ್ತೊಂದು ತೆರನಾದುದು. ಫ್ಯಾಷನ್ ಉಡುಪು ಉದ್ಯಮವು ಶೇಕಡ 4ರಷ್ಟು ಹಸಿರುಮನೆ ಅನಿಲ ಹೊರಸೂಸುವಿಕೆಗೆ ಕಾರಣವಾಗಿದೆ. ಬಹುತೇಕ ಬಟ್ಟೆಗಳನ್ನು ಹೆಚ್ಚು ವಿಷಕಾರಿ ಬಣ್ಣಗಳು ಮತ್ತು ಭಾರವಾದ ಲೋಹಗಳಿಂದ ತಯಾರಿಸಲಾಗುತ್ತದೆ. ಬಟ್ಟೆ ಉದ್ಯಮದಿಂದ ಶುದ್ಧ ನೀರಿನ ತೊರೆಗಳು, ನದಿಗಳು ಮತ್ತು ಜಲಚರಗಳಿಗೆ ಹಾನಿಯಾಗುತ್ತದೆ. ಕಲುಷಿತ ನೀರು ಜನರು ಮತ್ತು ಪ್ರಾಣಿಗಳ ಅನಾರೋಗ್ಯಕ್ಕೆ ಕಾರಣವಾಗುತ್ತದೆ.

ನಾವು ಧರಿಸುವ ಶೇಕಡ 62ರಷ್ಟು ಬಟ್ಟೆಗಳನ್ನು ಸಿಂಥೆಟಿಕ್ ಫೈಬರ್‌ಗಳಿಂದ ತಯಾರಿಸಲಾಗುತ್ತದೆ. ಫ್ಯಾಷನ್ ಉದ್ಯಮದ ಭಾಗವಾದ ಪಾಲಿಯೆಸ್ಟರ್ ಉತ್ಪಾದನೆಯಿಂದ ಶೇಕಡ 40ರಷ್ಟು ಇಂಗಾಲದ ಹೊರಸೂಸುವಿಕೆ ಉಂಟಾಗುತ್ತಿದೆ. ಪಾಲಿಯೆಸ್ಟರ್ ಉತ್ಪಾದನೆಯು ಮುಂದಿನ 10 ವರ್ಷಗಳಲ್ಲಿ ಶೇ 47ರಷ್ಟು ಬೆಳೆಯುವ ನಿರೀಕ್ಷೆಯಿದೆ. ನೈಲಾನ್ ಮತ್ತೊಂದು ಹಾನಿಕಾರಕ ವಸ್ತುವಾಗಿದ್ದು, ಇದು ಭೂಮಿಯನ್ನು ಇಂಗಾಲದ ಡೈ ಆಕ್ಸೈಡ್‌ಗಿಂತ 300 ಪಟ್ಟು ಹೆಚ್ಚು ಬೆಚ್ಚಗಾಗಿಸುತ್ತದೆ. ಸಾಗರದಲ್ಲಿನ ಮೈಕ್ರೊಪ್ಲಾಸ್ಟಿಕ್‌ನಲ್ಲಿ ಶೇಕಡ 35ರಷ್ಟು ನಾವು ಬಳಸಿ ಬಿಸಾಕಿದ ಸಿಂಥೆಟಿಕ್ ಉಡುಪುಗಳಿಂದ ಆಗಿದೆ ಎಂಬುದು ಇನ್ನೂ ದುರಂತ. ಈಗಾಗಲೇ ಈ ಮೈಕ್ರೊಪ್ಲಾಸ್ಟಿಕ್ ನಮ್ಮ ಆಹಾರ ಸರಪಳಿಯಲ್ಲಿ ನುಸುಳುತ್ತಿದೆ ಎಂಬುದನ್ನೂ ಮರೆಯುವಂತಿಲ್ಲ.

ಭೂಮಿ ಹಾಗೂ ಪರಿಸರವನ್ನು ಸಂರಕ್ಷಿಸುವಲ್ಲಿ ಉಡುಪುಗಳ ಮರುಬಳಕೆ ಎಲ್ಲಕ್ಕಿಂತ ಅಗತ್ಯ ಎಂಬುದು ಗೊತ್ತಾಗುತ್ತಿದೆ. ಈ ಕಾರ್ಯ ನಡೆಯಬೇಕಾದರೆ ಬಟ್ಟೆಗಳನ್ನು ಸಂಗ್ರಹಿಸಬೇಕು, ವಿಂಗಡಿಸಬೇಕು ಮತ್ತು ಮರುಬಳಕೆ ಮಾಡುವವರಿಗೆ ವಿತರಿಸಬೇಕು. ಆದರೆ ಈ ವ್ಯವಸ್ಥೆ ಶೈಶವಾವಸ್ಥೆಯಲ್ಲಿದೆ. ಪ್ಲಾಸ್ಟಿಕ್ ಬಳಕೆಗೆ ನಿರ್ಬಂಧ ಇರುವಂತೆ ಸಿಂಥೆಟಿಕ್ ಬಟ್ಟೆ ಉತ್ಪಾದನೆಗೆ ನಿರ್ಬಂಧಗಳನ್ನು ರೂಪಿಸಬೇಕಾದ ಅನಿವಾರ್ಯ ಇದೆ. ಫ್ಯಾಷನ್ ಉದ್ಯಮವು ಬಹುತೇಕ ಅನಿಯಂತ್ರಿತವಾಗಿದೆ. ಇದನ್ನು ನಿಯಂತ್ರಣಕ್ಕೆ ಒಳಪಡಿಸಿದರೆ ಮಾತ್ರ ಭೂಮಿಯ ಸಂಪತ್ತನ್ನು ರಕ್ಷಿಸಬಹುದು.



ಬಟ್ಟೆಯ ಸಮಸ್ಯೆಯಿಂದ ಭೂಮಿಯನ್ನು ರಕ್ಷಿಸಲು ನಮ್ಮ ಮುಂದೆ ಒಂದಿಷ್ಟು ಆಯ್ಕೆಗಳಿವೆ. ಅವುಗಳಲ್ಲಿ ಮೊದಲನೆಯದು, ಉಡುಪುಗಳ ಕುರಿತಾದ ನಮ್ಮ ಮೋಹವನ್ನು ಮರುಚಿಂತನೆಗೆ ಒಳಪಡಿಸುವುದು. ಅಂದರೆ ವೇಗವಾಗಿ ಹಾಳಾಗುವ ಬಟ್ಟೆಯ ಬದಲಿಗೆ ಹೆಚ್ಚು ಬಾಳಿಕೆ ಬರುವ ಅಥವಾ ಪರಿಸರಕ್ಕೆ ಪೂರಕವಾದ ಉಡುಪುಗಳನ್ನು ಖರೀದಿಸುವುದು ಹಾಗೂ ಮರುಬಳಕೆಗೆ ಹೆಚ್ಚು ಪ್ರಾಶಸ್ತ್ಯ ನೀಡುವುದು ನಮ್ಮ ಆದ್ಯತೆಯಾಗಬೇಕು.

ಬೃಹತ್ ಉದ್ಯಮದ ಉಡುಪುಗಳ ಬದಲಿಗೆ ಸ್ಥಳೀಯ ಉಡುಪಿನ ಉದ್ಯಮಕ್ಕೆ ಬೆಂಬಲ ನೀಡುವುದು. ಸಾಧ್ಯವಾದಷ್ಟೂ ಮರುಬಳಕೆಗೆ ಆದ್ಯತೆ ನೀಡುವುದು. ಬಟ್ಟೆಗಳನ್ನು ಬಿಸಾಡುವ ಬದಲು ಅವಶ್ಯಕತೆ ಇದ್ದವರಿಗೆ ನೀಡುವುದು ಅಥವಾ ಆನ್‌ಲೈನ್‌ನಲ್ಲಿ ಉಚಿತವಾಗಿ ಮಾರಾಟ ಮಾಡುವುದು. ಚೆನ್ನಾಗಿ ಕಾಣಬೇಕು ಎಂಬುದಕ್ಕಷ್ಟೇ ಆದ್ಯತೆ ನೀಡಿ ಫ್ಯಾಷನ್ ಉಡುಪುಗಳನ್ನು ಧರಿಸುವ ಬದಲು, ಪರಿಸರಕ್ಕೆ ಪೂರಕವಾಗುವಂತಹ ಉಡುಪುಗಳನ್ನು ಧರಿಸಬೇಕು. ಪರಿಸರ ಸಂರಕ್ಷಣೆಯ ವಿಷಯದಲ್ಲಿ ಪ್ರತಿಯೊಬ್ಬರ ಪಾಲೂ ಇರುತ್ತದೆ. ಗ್ರಾಹಕರಾದ ನಾವು ತಯಾರಕರ ನಿರ್ಧಾರಗಳನ್ನು ನಿರ್ಧರಿಸುತ್ತೇವೆ. ನಮ್ಮ ಬಳಕೆಯ ಕ್ರಮ ಮತ್ತು ಖರ್ಚಿನ ಅಭ್ಯಾಸವು ಉದ್ಯಮಗಳು ಕಾರ್ಯನಿರ್ವಹಿಸುವ ವಿಧಾನವನ್ನು ಬದಲಾಯಿಸಬಹುದು.

ಭೂಮಿಯನ್ನು ಮುಂದಿನ ಪೀಳಿಗೆಗೆ ಸುಸ್ಥಿರವಾಗಿ ಇಡಲು ನಮ್ಮ ಬಳಕೆಯ ವಿಧಾನಗಳು ಬದಲಾಗಬೇಕು. ಅಲ್ಲವೇ?

ವಾಚಕರ ವಾಣಿ

ಜಾತಿ ಆಧಾರಿತ ಮುಖ್ಯಮಂತ್ರಿ ಚರ್ಚೆ ತರವೇ?

ಸಂವಿಧಾನದ ಪೂರ್ವ ಪೀಠಿಕೆಯಲ್ಲಿ ಜಾತ್ಯತೀತ, ಸಮಾನತೆಯನ್ನು ಒಪ್ಪಿಕೊಂಡಿದ್ದೇವೆ. ಅದರಂತೆ ನಡೆದುಕೊಳ್ಳುತ್ತೇವೆ ಎಂದು ಹೇಳಿಕೊಳ್ಳುತ್ತೇವೆ. ಆದರೆ ಇದು ಸುಳ್ಳು ಎನ್ನುವುದು ಆಗಾಗ ರುಜುವಾತು ಆಗುತ್ತಿರುತ್ತದೆ. ಮುಖ್ಯಮಂತ್ರಿ ಸ್ಥಾನಕ್ಕೆ ಜಾತಿ ಹೆಸರನ್ನು ಮುನ್ನೆಲೆಗೆ ತಂದು ಪಕ್ಷಗಳು ಆರೋಪ, ಪ್ರತ್ಯಾರೋಪ ಮಾಡುತ್ತಲೇ ಇರುತ್ತವೆ. ಅದರಲ್ಲೂ ರಾಜ್ಯದ ಅಧಿಕಾರಕ್ಕೇರಲು ಹೊರಟಿರುವ ಪಕ್ಷಗಳ ನಾಯಕರು ಈಗ ಈ ಬಗ್ಗೆ ಹೆಚ್ಚು ಚರ್ಚೆ ಮಾಡುತ್ತಿದ್ದಾರೆ. ಲಿಂಗಾಯತ, ಬ್ರಾಹ್ಮಣ, ಒಕ್ಕಲಿಗ, ಕುರುಬ, ದಲಿತ ಜಾತಿಯವರನ್ನು ಮುಖ್ಯಮಂತ್ರಿ ಮಾಡಿ ಎಂದು ಎದುರಾಳಿ ಪಕ್ಷಕ್ಕೆ ಆಗಾಗ ಸವಾಲು ಎಸೆಯುತ್ತಾ ಕಿಡಿ ಹೊತ್ತಿಸುತ್ತಿರುತ್ತಾರೆ. ಮುಖ್ಯಮಂತ್ರಿಯಾದವರು ತಮ್ಮ ತಮ್ಮ ಜಾತಿಗಷ್ಟೇ ಸೀಮಿತವಾಗಿ ಇರುತ್ತಾರೆಯೇ? ರಾಜ್ಯದಲ್ಲಿ ಬೇರೆ ಜಾತಿಗಳು ಇಲ್ಲವೇ?

ಸಣ್ಣಮಾರಪ್ಪ, ಚಂಗಾವರ, ಶಿರಾ

ಸಾಮಾನ್ಯ ಜ್ಞಾನದ ಕೊರತೆಯಾದರೆ...

ಯಂಕಪ್ಪ ದೇವೀಂದ್ರಪ್ಪ ರಾಮಸಮುದ್ರ ಎಂಬುವರು, ಯಾದಗಿರಿ ಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವ ವೇಳೆ ತಾವು ಗ್ರಾಮಸ್ಥರಿಂದ ಸಂಗ್ರಹಿಸಿದ್ದ ₹ 1 ಮುಖಬೆಲೆಯ 10 ಸಾವಿರ ರೂಪಾಯಿ ಮೊತ್ತದ ನಾಣ್ಯಗಳನ್ನು ಚುನಾವಣಾಧಿಕಾರಿಗೆ ಠೇವಣಿಯಾಗಿ ನೀಡಿರುವುದು ಚಿತ್ರಸಹಿತ ವರದಿಯಾಗಿದೆ (ಪ್ರ.ವಾ., ಏ. 19). ಚುನಾವಣಾಧಿಕಾರಿ ಚಿಲ್ಲರೆ ರೂಪದಲ್ಲಿ ಬಂದ ಈ ಠೇವಣಿ ಹಣವನ್ನು ಮೇಜಿನ ಮೇಲೆ ಹಾಕಿಕೊಂಡು ಎಣಿಸುತ್ತಿರುವುದನ್ನು ನೋಡಿದರೆ ಅಧಿಕಾರಿಯ ಬಗ್ಗೆ ಮರುಕ ಉಂಟಾಗುತ್ತದೆ. ಅಭ್ಯರ್ಥಿ ಸಾರ್ವಜನಿಕರಿಂದ ಒಂದೊಂದು ರೂಪಾಯಿಯ ನಾಣ್ಯಗಳನ್ನು ಸಂಗ್ರಹಿಸಿದ್ದರೂ ಅವುಗಳನ್ನು ಚುನಾವಣಾಧಿಕಾರಿಗೆ ಹಾಗೆಯೇ ಕೊಡಬೇಕಾಗಿರಲಿಲ್ಲ. ಅವುಗಳನ್ನು 100 ರೂಪಾಯಿಗೋ 500 ರೂಪಾಯಿಗೋ ಬದಲಾಯಿಸಿ ಕೊಡಬೇಕಾಗಿತ್ತು.

ನಮ್ಮ ಆದರ್ಶದ ಪ್ರದರ್ಶನ ಇತರರಿಗೆ ಸಂಕಟ ಉಂಟು ಮಾಡಬಾರದು. ರಾಜ್ಯಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿರುವ ಹಾಗೂ ಜನಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಈ ಅಭ್ಯರ್ಥಿಗೆ, ಚುನಾವಣಾಧಿಕಾರಿ ನಾಣ್ಯಗಳನ್ನು ಎಣಿಸಿ ತೆಗೆದುಕೊಳ್ಳುವ ಮತ್ತು ಅವುಗಳನ್ನು ಬ್ಯಾಂಕಿಗೆ ಜಮಾ ಮಾಡಿದಾಗ, ಬ್ಯಾಂಕಿನ ನಗದು ಗುಮಾಸ್ತ ಎಣಿಕೆ ಮಾಡಿ ತೆಗೆದುಕೊಳ್ಳುವ ಕಷ್ಟದ ಅರಿವು ಇರಬೇಕಿತ್ತು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಬೇಡ ಈ ಪಟ್ಟ

ವಿಶ್ವ ಜನಸಂಖ್ಯೆಯಲ್ಲಿ
ಭಾರತ ಅಗ್ರಪಟ್ಟ ಪಡೆದದ್ದಕ್ಕೆ
ನಗುವುದೋ ಅಳುವುದೋ
ತಿಳಿಯದಾಗಿದೆ!
ಇನ್ನುಮೇಲೆ ನಮ್ಮ ಗುರಿ
ಈ ಹಿರಿಮೆಯಿಂದ ಹಿಂದಕ್ಕೆ
ಸರಿದು ಮತ್ತೆ ಎರಡನೇ
ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳುವುದೇ
ಆಗಿರಬೇಕು... ಅಲ್ಲವೇ?

ವಿ.ವಿಜಯೇಂದ್ರ ರಾವ್
ಬೆಂಗಳೂರು

ನಾಮಪತ್ರ ಪ್ರತಿ: ನಿಯಮ ಬದಲಾವಣೆ ಸೂಕ್ತ

ಚುನಾವಣೆ ಸಂದರ್ಭದಲ್ಲಿ ಅಭ್ಯರ್ಥಿಗಳು ತಮ್ಮ ಉಮೇದುವಾರಿಕೆಯ ಕುರಿತಂತೆ ಚುನಾವಣೆ ಅಧಿಕಾರಿಗಳಿಗೆ ಒಂದಕ್ಕಿಂತ ಹೆಚ್ಚು ಪ್ರತಿಗಳಲ್ಲಿ ನಾಮಪತ್ರ ಸಲ್ಲಿಸುವ ಪರಿಪಾಟ ಇತ್ತೀಚೆಗೆ ಹೆಚ್ಚಾಗುತ್ತಿದೆ. ಉಕ್ರೇನ್ ಯುದ್ಧ ಮತ್ತು ಇತರ ಕಾರಣಗಳಿಂದ ಕಾಗದದ ಬೆಲೆ ಮುಗಿಲೆತ್ತರಕ್ಕೆ ಜಿಗಿದಿದೆ. ಕಾಗದರಹಿತ ಕಚೇರಿ ಮಾಡುವ ಇರಾದೆ ಸರ್ಕಾರಕ್ಕೆ ಇರುವಾಗ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಮುನ್ನವೇ ಪರಾಮರ್ಶಿಸಿ ಒಂದೇ ಪ್ರತಿಯಲ್ಲಿ ಅರ್ಜಿ ಸಲ್ಲಿಸುವ ವಿಧಾನದಿಂದ ಚುನಾವಣೆ ಅಧಿಕಾರಿಗಳಿಗೂ ತಮಗಿರುವ ಕಡಿಮೆ ಸಮಯದಲ್ಲಿ ಅರ್ಜಿಗಳಲ್ಲಿರುವ ನ್ಯೂನತೆಗಳನ್ನು ಪತ್ತೆ ಹಚ್ಚಲು ಸಹಕಾರಿಯಾಗುತ್ತದೆ. ಅಭ್ಯರ್ಥಿಗಳಿಗೆ ಸಮಯ, ಖರ್ಚುವೆಚ್ಚ ಕೂಡ ಕಡಿಮೆ ಆಗುತ್ತದೆ.

ಒಂದೇ ಪ್ರತಿ ಸಲ್ಲಿಸುವ ಪರಿಪಾಟದಿಂದ ಅರ್ಜಿ ಕುರಿತು ಅಭ್ಯರ್ಥಿಗಳಿಗೆ ದೃಢತೆ ಬರುತ್ತದೆ. ಈ ವಿಷಯವಾಗಿ ಚುನಾವಣಾ ಆಯೋಗ ಪರಿಶೀಲನೆ ನಡೆಸಿ, ನಿಯಮ ಬದಲಾವಣೆ ಮಾಡುವುದು ಸೂಕ್ತ.

ಎ.ಎಸ್.ಮಕಾನದಾರ, ಗದಗ

ಇದು ನಮ್ಮ ಪ್ರಜಾಪ್ರಭುತ್ವ ಪದ್ಧತಿ!

ಹಣ, ಮದ್ಯ, ಸೀರೆ, ಕುಕ್ಕರ್ ನೀಡಿ ಮತ ಪಡೆಯುತ್ತಾರೆಂದು ಆಡಿಕೊಳ್ಳುತ್ತಾರೆ. ಇದರಿಂದ ಎಷ್ಟು ಮಹಾ ಮತ ಬಂದೀತು, ಅಷ್ಟರಲ್ಲೇ ಇಡೀ ಕ್ಷೇತ್ರವನ್ನು ಗೆಲ್ಲುವುದು ಸಾಧ್ಯವೇ ಎಂದೆಲ್ಲಾ ನಾನೂ ಮೊದಮೊದಲು ಉಡಾಫೆ ಮಾಡುತ್ತಿದ್ದೆ. ಗಮನವಿಟ್ಟು ಆಲೋಚಿಸಿದ ಮೇಲೆ ಮನವರಿಕೆಯಾಯಿತು, ನಮ್ಮ ಪ್ರಸಕ್ತ ಚುನಾವಣಾ ವ್ಯವಸ್ಥೆಯಲ್ಲಿ ಇದು ಖಂಡಿತಾ ಸಾಧ್ಯ ಎಂದು! ಪಬ್ಲಿಕ್ ಪರೀಕ್ಷೆಯಲ್ಲಾದರೋ ಪಾಸಾಗಲು ಇಂತಿಷ್ಟು ಕನಿಷ್ಠ ಅಂಕ ಗಳಿಸಬೇಕೆಂಬ ನಿಯಮವಿರುತ್ತದೆ. ಚುನಾವಣೆಯಲ್ಲಿ ಅಂಥದ್ದೇನೂ ಇರುವುದಿಲ್ಲ. ಹೀಗಾಗಿ ಚುನಾವಣೆಯಲ್ಲಿ ಗೆಲ್ಲಲು, ಚೇಲಾಗಳು, ಮದ್ಯಕ್ಕೆ ಮತ ಮಾರಿಕೊಳ್ಳುವವರು, ಆಮಿಷಗಳಿಗೆ ಬಲಿಯಾಗುವವರು, ಸುಳ್ಳುಕೋರರು, ಸೋಂಬೇರಿಗಳು, ಜೂಜುಕೋರರ ಮತಗಳೇ ಬೇಕುಬೇಕಾದಷ್ಟಾಗುತ್ತವೆ. ಅದಕ್ಕಾಗಿಯೇ ಪೈಪೋಟಿ ನಡೆಯುವುದು ಮತ್ತು ಘನತೆವೆತ್ತ ಸಂಸದ, ಶಾಸಕ ಮಹೋದಯರು ಅವರುಗಳನ್ನು ಮಾತ್ರವೇ ಹೆಚ್ಚಾಗಿ ಪ್ರತಿನಿಧಿಸುವುದು!

ಸಮಾಜದಲ್ಲಿ ಈ ಮಹತ್ವಪೂರ್ಣರ ಸಂಖ್ಯೆ ಗಣನೀಯ. ಅವರೇ ಗೆಲುವು ತಂದುಕೊಡುವವರು. ಗೆದ್ದವರು ರಚಿಸುವ ಘನ ಸರ್ಕಾರಗಳೆಲ್ಲಾ ಈ ಜನರ ಸಂಖ್ಯಾಮಟ್ಟವನ್ನು ಆದಷ್ಟೂ ಹಾಗೇ ಉಳಿಸಿಕೊಂಡು ಹೋಗುವ ಕೆಲಸವನ್ನಷ್ಟೇ ಮಾಡುವುದು ಯಥಾ ಸಹಜವೇ ಆಗಿರುತ್ತದೆ! ಉಳಿದಂತೆ ನಮ್ಮ ಸಮಾಜದಲ್ಲಿ ಅರ್ಧಕ್ಕೂ ಹೆಚ್ಚು ಮಂದಿ ಸಂಭಾವಿತರೇ ಇರುತ್ತಾರೆ ಎಂದುಕೊಳ್ಳೋಣ. ಅವರು ವೋಟು ಹಾಕಿದರೂ, ನೋಟಾ ಒತ್ತಿದರೂ, ವೋಟೇ ಹಾಕದಿದ್ದರೂ ಶಾಸಕಾಂಗದಲ್ಲಾಗಲೀ ಆಡಳಿತ ವ್ಯವಸ್ಥೆಯಲ್ಲಾಗಲೀ ಅವರ ದನಿಯಾದರೂ ಎಲ್ಲಿರುತ್ತದೆ? ಇದು, ನಾನು ಹಿಂದಿನ 50 ವರ್ಷಗಳಿಂದ ಕಂಡನುಭವಿಸಿರುವ ಪ್ರಜಾಪ್ರಭುತ್ವ ಪದ್ಧತಿ!

ಆರ್.ಕೆ.ದಿವಾಕರ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಸಲಿಂಗ ವಿವಾಹಕ್ಕೆ ಕಾನೂನು ಮಾನ್ಯತೆ

ಬೇಕು ಬೇಡಗಳ ಸುತ್ತ

ಸಲಿಂಗ ವಿವಾಹವನ್ನು ಕಾನೂನುಬದ್ಧಗೊಳಿಸಬೇಕೇ ಅಥವಾ ಬೇಡವೇ ಎಂಬುದರ ವಾದ ಮತ್ತು ಪ್ರತಿವಾದವು ಸುಪ್ರೀಂ ಕೋರ್ಟ್‌ನ ಅಂಗಳದಲ್ಲಿದೆ. ಸಲಿಂಗ ವಿವಾಹಕ್ಕೆ ಸಮಾಜದಲ್ಲಿ ಮಾನ್ಯತೆ ಇಲ್ಲ, ಇದು ದೇಶದ ಕುಟುಂಬ ವ್ಯವಸ್ಥೆಗೆ ಧಕ್ಕೆ ತರುತ್ತದೆ. ಹೀಗಾಗಿ ಇದನ್ನು ಕಾನೂನುಬದ್ಧಗೊಳಿಸಬಾರದು ಎಂಬುದು ಕೇಂದ್ರ ಸರ್ಕಾರದ ವಾದ. ದೇಶದಲ್ಲಿ ಸಲಿಂಗಕಾಮಕ್ಕೆ ಅವಕಾಶವಿದ್ದರೂ ಸಲಿಂಗ ವಿವಾಹವನ್ನು ಮಾನ್ಯ ಮಾಡದೇ ಇರುವುದು ಪ್ರತಿಗಾಮಿ ನಿಲುವು ಎಂಬುದು ಸಲಿಂಗ ವಿವಾಹವನ್ನು ಮಾನ್ಯ ಮಾಡಬೇಕು ಎನ್ನುವವರ ವಾದ. ಈ ವಿಚಾರಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠದಲ್ಲಿ ನಡೆಯುತ್ತಿರುವ ವಿಚಾರಣೆಯಲ್ಲಿ, ಗುರುವಾರವಷ್ಟೇ ವಾದ ಮತ್ತು ಪ್ರತಿವಾದಗಳು ಪೂರ್ಣಗೊಂಡಿವೆ. ಸಂವಿಧಾನ ಪೀಠದ ತೀರ್ಪಷ್ಟೇ ಬಾಕಿ ಇದೆ

ಅರ್ಜಿದಾರರ ಪ್ರತಿಪಾದನೆ

'ಸರ್ಕಾರ ಹೇಳುತ್ತಿರುವ 'ಭಾರತೀಯ' ಎಂಬ ಪರಿಕಲ್ಪನೆಯು ಎಲ್ಲರನ್ನೂ ಒಳಗೊಳ್ಳುವುದಿಲ್ಲ ಮತ್ತು ಅದು ಮಡುಗಟ್ಟಿದೆ. ಮಾನವ ಹಕ್ಕುಗಳ ವಿಶಾಲ ವ್ಯಾಪ್ತಿಯ ಮಟ್ಟಕ್ಕೆ ಏರಲೂ ಆ ಪರಿಕಲ್ಪನೆ ಬಯಸುತ್ತಿಲ್ಲ'– ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಲು ಸಾಧ್ಯವಿಲ್ಲ ಎಂದು ಸರ್ಕಾರವು ಮಂಡಿಸಿದ ವಾದಕ್ಕೆ ಎಲ್‌ಜಿಬಿಟಿ ಹಕ್ಕುಗಳ ಕಾರ್ಯಕರ್ತ ಒನಿರ್ ನೀಡಿದ್ದ ಪ್ರತಿಕ್ರಿಯೆ ಇದು.

ಸಲಿಂಗಕಾಮವು ಅಪರಾಧವಲ್ಲ ಎಂದು ಸುಪ್ರೀಂ ಕೋರ್ಟ್ 2018ರಲ್ಲೇ ಆದೇಶ ನೀಡಿದೆ. ದೇಶದಾದ್ಯಂತ ಸಾವಿರಾರು ಮಂದಿ ಈ ಸ್ವರೂಪದ ಸಂಬಂಧದಲ್ಲಿ ಇದ್ದಾರೆ. ಅಂತಹ ಸಂಬಂಧಕ್ಕೆ ವಿವಾಹದ ಮಾನ್ಯತೆ ಇಲ್ಲ. ಇದರಿಂದ ಆ ಜನರು ತಮ್ಮ ಸಂಬಂಧದ ಬಗ್ಗೆ, ತಮ್ಮ ಸಂಗಾತಿಗಳ ಬಗ್ಗೆ ಸಮಾಜದಲ್ಲಿ ಮುಕ್ತವಾಗಿ ಮಾತನಾಡಲು ಆಗುತ್ತಿಲ್ಲ. ಈ ರೀತಿಯ ಸಂಬಂಧಕ್ಕೂ ಗೌರವ ಸಲ್ಲಬೇಕು ಎಂಬುದು ಅರ್ಜಿದಾರರ ವಾದ.

ಈ ರೀತಿಯ ಸಂಬಂಧಕ್ಕೆ ವಿವಾಹದ ಮಾನ್ಯತೆ ಇಲ್ಲದೇ ಇರುವ ಕಾರಣ ಹಲವಾರು ತೊಡಕುಗಳು ಎದುರಾಗುತ್ತಿವೆ. ಅಂತಹ ಜೋಡಿಗಳು ಯಾವುದೇ ರೀತಿಯ ವಿಮೆ ಮಾಡಿಸಿದಾಗ, ತಮ್ಮ ಸಂಗಾತಿಯನ್ನು ನಾಮಿನಿ ಪಟ್ಟಿಯಲ್ಲಿ ಸೇರಿಸಲು ಅವಕಾಶವಿಲ್ಲ. ಆ ಜೋಡಿಯು ತಾವೇ ಮಕ್ಕಳನ್ನು ಪಡೆಯಲು ಸಾಧ್ಯವಿಲ್ಲ. ಆದರೆ, ಅವರು ಮಕ್ಕಳನ್ನು ದತ್ತು ಪಡೆಯಲೂ ಅವಕಾಶವಿಲ್ಲ. ಸಣ್ಣ–ಪುಟ್ಟ ಕ್ಲಬ್‌ಗಳ ಸದಸ್ಯತ್ವ ಪಡೆಯಲೂ ಸಾಧ್ಯವಿಲ್ಲ. ಸಲಿಂಗ ವಿವಾಹವನ್ನು ಕಾನೂನುಬದ್ಧಗೊಳಿಸಿದರೆ, ಈ ತೊಡಕುಗಳೆಲ್ಲಾ ನಿವಾರಣೆಯಾಗುತ್ತವೆ ಎಂಬುದು ಅರ್ಜಿದಾರರ ವಾದ.

ಸಲಿಂಗಕಾಮವು ಕಳಂಕ ಎಂಬ ಅಭಿಪ್ರಾಯ ಸಮಾಜದಲ್ಲಿದೆ. ಪಾಶ್ಚಾತ್ಯರು ಭಾರತಕ್ಕೆ ಬಂದ ನಂತರ ಸಲಿಂಗ ಕಾಮ, ಇಲ್ಲಿಗೆ ಪರಿಚಯವಾಯಿತು ಎಂಬ ವಾದವೂ ಇದೆ. ಇದರಲ್ಲಿ ಹುರುಳಿಲ್ಲ. ಖಜುರಾಹೊ ದೇವಾಲಯದ ಮಿಥುನ ಶಿಲ್ಪಗಳಲ್ಲಿ ಸಲಿಂಗಕಾಮದ ಶಿಲ್ಪಗಳೂ ಇವೆ. ಭಾರತದಲ್ಲಿ ಬಹಳ ಹಿಂದೆಯೇ ಸಲಿಂಗಕಾಮ ಇತ್ತು ಎಂಬುದನ್ನು ಅದು ಸೂಚಿಸುತ್ತದೆ. ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಿದರೆ, ಸಲಿಂಗಕಾಮದ ಜತೆಗಿರುವ ಕಳಂಕವನ್ನೂ ತೊಳೆಯಬಹುದು ಎಂಬುದು ಅರ್ಜಿದಾರರ ವಾದ.



ಸರ್ಕಾರದ ವಾದ

ಭಾರತೀಯ ಸಮಾಜದಲ್ಲಿ ಸಲಿಂಗ ವಿವಾಹಕ್ಕೆ ಮಾನ್ಯತೆ ಇಲ್ಲ. ಭಾರತೀಯ ಸಮಾಜವು ಇದನ್ನು ಒಪ್ಪುವುದಿಲ್ಲ ಎಂಬುದು ಕೇಂದ್ರ ಸರ್ಕಾರದ ವಾದ. ಇದು ನಗರ ಪ್ರದೇಶಕ್ಕೆ ಮತ್ತು ಸಮಾಜದ 'ಎಲೀಟ್' ಜನರಿಗೆ ಸೀಮಿತವಾದ ವ್ಯವಸ್ಥೆಯಾಗಿದೆ. ಸಲಿಂಗ ವಿವಾಹಕ್ಕೆ ಕಾನೂನಿನ ಅಡಿಯಲ್ಲಿ ಮಾನ್ಯತೆ ನೀಡುವುದರಿಂದ ಸಮಾಜದ ಸ್ವಾಸ್ಥ್ಯ ಹಾಳಾಗುತ್ತದೆ. ದೇಶದ ಕೌಂಟುಬಿಕ ವ್ಯವಸ್ಥೆಗೆ ಧಕ್ಕೆಯಾಗುತ್ತದೆ. ಇಂತಹ ವಿವಾಹದಲ್ಲಿ ನಡೆಯುವ ದೌರ್ಜನ್ಯಗಳನ್ನು ನಿರ್ವಹಣೆ ಮಾಡುವುದು ಕಷ್ಟವಾಗುತ್ತದೆ. ಅಂತಹ ದೌರ್ಜನ್ಯಗಳ ನಿರ್ವಹಣೆಗೆ ಕಾನೂನಿನಲ್ಲಿ ಅವಕಾಶವಿಲ್ಲ. ಸಲಿಂಗ ವಿವಾಹದಿಂದ ಇಷ್ಟೆಲ್ಲಾ ಸಮಸ್ಯೆಗಳು ತಲೆದೋರುತ್ತವೆ. ಹೀಗಾಗಿ ಅದನ್ನು ಕಾನೂನುಬದ್ಧಗೊಳಿಸಬಾರದು ಎಂಬುದು ಸರ್ಕಾರದ ವಾದ.

ಯಾವುದೇ ವ್ಯಕ್ತಿ ತನ್ನ ಇಚ್ಛೆಯಂತೆ, ಯಾವುದೇ ವ್ಯಕ್ತಿಯ ಜತೆಗೆ ಬದುಕಬಹುದು. ಸಲಿಂಗಕಾಮವು ಅಪರಾಧ ಅಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಅದಕ್ಕೆ ಅವಕಾಶವಿದೆಯೇ ಹೊರತು, ಎಲ್ಲಾ ರೀತಿಯ ಸಂಬಂಧಗಳಿಗೆ ಕಾನೂನಿನ ಮಾನ್ಯತೆ ನೀಡಲೇಬೇಕು ಎಂದೇನಿಲ್ಲ. ಈಗ ಇರುವ ಸ್ಥಿತಿಯೇ ಮುಂದುವರಿದರೆ ಅಡ್ಡಿಯಿಲ್ಲ. ಒಂದೊಮ್ಮೆ ಸಲಿಂಗ ವಿವಾಹಕ್ಕೆ ಕಾನೂನಿನ ಮಾನ್ಯತೆ ನೀಡಿದರೆ, ಆ ವೈವಾಹಿಕ ಸಂಬಂಧದಲ್ಲಿ 'ಪತಿ' ಎಂದು ಯಾರನ್ನು ಗುರುತಿಸುವುದು ಮತ್ತು 'ಪತ್ನಿ' ಎಂದು ಯಾರನ್ನು ಗುರುತಿಸುವುದು ಎಂಬುದು ಸರ್ಕಾರದ ಪ್ರಶ್ನೆ.

ಸಲಿಂಗ ವಿವಾಹವನ್ನು ಕಾನೂನುಬದ್ಧಗೊಳಿಸಬೇಕೇ ಅಥವಾ ಬೇಡವೇ ಎಂಬುದು ಸಂಸತ್ತು ನಿರ್ಧರಿಸಬೇಕಾದ ವಿಷಯ. ನ್ಯಾಯಾಂಗವು ಈ ವಿಚಾರದಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ ಎಂದೂ ಸರ್ಕಾರವು ಸಂವಿಧಾನ ಪೀಠದ ಎದುರು ವಾದ ಮಂಡಿಸಿತ್ತು.

ಹಿಂದೂಗಳ ಮದುವೆ ಪದ್ಧತಿ ಮತ್ತು ಕಾನೂನಿನಲ್ಲಿ ಸಲಿಂಗ ವಿವಾಹಕ್ಕೆ ಅವಕಾಶವಿಲ್ಲ. ಮುಸ್ಲಿಮರ ಮದುವೆ ಪದ್ಧತಿಯಲ್ಲೂ ಸಲಿಂಗ ವಿವಾಹಕ್ಕೆ ಅವಕಾಶವಿಲ್ಲ. ಹೀಗಿರುವಾಗ ಸಲಿಂಗ ವಿವಾಹಕ್ಕೆ ಅವಕಾಶಮಾಡಿಕೊಟ್ಟರೆ, ಈ ವಿವಾಹ ಪದ್ಧತಿಗಳಿಗೆ ಧಕ್ಕೆಯಾಗುತ್ತದೆ. ಹೀಗಾಗಿ ಸಲಿಂಗ ವಿವಾಹಕ್ಕೆ ಅವಕಾಶ ಮಾಡಿಕೊಡಬಾರದು ಎಂಬುದು ಸರ್ಕಾರದ ವಾದ.

ಸಂವಿಧಾನ ಪೀಠದ ಅಭಿಪ್ರಾಯ

'ಈ ವಿಚಾರವನ್ನು ಯಾವುದೇ ಧರ್ಮದ ವೈಯಕ್ತಿಕ ಕಾನೂನುಗಳ ಮೂಲಕ ಪರಾಮರ್ಶೆ ನಡೆಸಲು ಸಾಧ್ಯವಿಲ್ಲ. ಇದನ್ನು ವಿಶೇಷ ವಿವಾಹ ಕಾಯ್ದೆಯ ಅಡಿಯಲೇ ಪರಿಶೀಲಿಸಬೇಕು. ಆ ಕಾನೂನಿನ ಅಡಿಯಲ್ಲಿ ಯಾವ ಅವಕಾಶವಿದೆ ಎಂಬುದನ್ನು ನಾವು ಪರಿಶೀಲಿಸುತ್ತೇವೆ' ಎಂದು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ಈಗಾಗಲೇ ಹೇಳಿದೆ.



ಹಲವು ದಿನ ನಿರಂತರವಾಗಿ ನಡೆದ ವಿಚಾರಣೆಯಲ್ಲಿ, ಸರ್ಕಾರದ ವಾದಗಳನ್ನು ಸುಪ್ರೀಂ ಕೋರ್ಟ್ ನಿರಾಕರಿಸುತ್ತಲೇ ಬಂದಿದೆ. ಆದರೆ, ತೀರ್ಪನ್ನು ಇನ್ನಷ್ಟೇ ನೀಡಬೇಕಿದೆ. ಈ ವಿಚಾರದಲ್ಲಿ ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುವಂತಿಲ್ಲ ಎಂಬ ಸರ್ಕಾರದ ವಾದವನ್ನು ಪೀಠವು ತಳ್ಳಿಹಾಕಿತ್ತು. ತನ್ನ ವಿಶೇಷಾಧಿಕಾರ ಬಳಸಿ, ವಿಚಾರಣೆ ಮುಂದುವರಿಸಿತ್ತು. ವಿವಾಹ ಎಂಬುದು ಕೇವಲ ದೇಹಕ್ಕೆ ಸಂಬಂಧಿಸಿದ್ದಲ್ಲ. ದೇಹ ಮತ್ತು ಲಿಂಗದ ಹೊರತಾಗಿಯೂ ವಿವಾಹಕ್ಕೆ ಹಲವು ಆಯಾಮಗಳಿವೆ. ಅವೆಲ್ಲವನ್ನೂ ಪರಿಗಣಿಸಬೇಕಾಗುತ್ತದೆ. ಸಲಿಂಗ ವಿವಾಹವು ನಗರ ಪ್ರದೇಶ ಮತ್ತು 'ಎಲೀಟ್' ಜನರಿಗೆ ಸೀಮಿತವಾದ ವಿಚಾರ ಎಂಬ ಸರ್ಕಾರದ ವಾದದಲ್ಲಿ ಹುರುಳಿಲ್ಲ. ತನ್ನ ವಾದವನ್ನು ಬಲಪಡಿಸುವಂತಹ ಯಾವುದೇ ದತ್ತಾಂಶಗಳನ್ನು ಸರ್ಕಾರವು ನ್ಯಾಯಾಲಯದ ಮುಂದೆ ಇಟ್ಟಿಲ್ಲ. ಹೀಗಾಗಿ ಈ ವಾದವನ್ನು ಪರಿಗಣಿಸಲು ಸಾಧ್ಯವಿಲ್ಲ ಎಂದು ಸಂವಿಧಾನ ಪೀಠವು ಹೇಳಿತ್ತು.

ವಿಶೇಷ ವಿವಾಹ ಕಾಯ್ದೆ: ವಿಶೇಷ ವಿವಾಹ ಕಾಯ್ದೆಯ 2ಬಿ ಸೆಕ್ಷನ್‌ನಲ್ಲಿ 'ನಿಷೇಧಿತ ಸಂಬಂಧಗಳು' ಎಂದು ಹೆಸರಿಸಲಾಗಿದೆ. ನಿಷೇಧಿತ ಸಂಬಂಧಗಳ ಅಡಿಯಲ್ಲಿ ಗುರುತಿಸಲಾದ ವ್ಯಕ್ತಿಗಳು ಮದುವೆಯಾಗುವಂತಿಲ್ಲ ಎಂದು ಈ ಸೆಕ್ಷನ್ ಹೇಳುತ್ತದೆ. ಈ ನಿಷೇಧಿತ ಸಂಬಂಧಗಳು ಯಾವುವು ಎಂಬುದನ್ನು ಈ ಕಾಯ್ದೆಯ ಮೊದಲ ಷೆಡ್ಯೂಲ್‌ನ ಭಾಗ–1 ಮತ್ತು ಭಾಗ–2ರಲ್ಲಿ ಸ್ಪಷ್ಟವಾಗಿ ನಮೂದಿಸಲಾಗಿದೆ. 'ಭಾಗ–1ರಲ್ಲಿ ಹೆಸರಿಸಲಾಗಿರುವ ವ್ಯಕ್ತಿಗಳ ಜತೆಗೆ ಯಾವುದೇ ಪುರುಷ ಅಥವಾ ಯಾವುದೇ ವ್ಯಕ್ತಿ ವಿವಾಹವಾಗುವಂತಿಲ್ಲ. ಭಾಗ–2ರಲ್ಲಿ ಹೆಸರಿಸಲಾಗಿರುವ ವ್ಯಕ್ತಿಗಳ ಜತೆಗೆ ಯಾವುದೇ ಮಹಿಳೆ ಅಥವಾ ಯಾವುದೇ ವ್ಯಕ್ತಿ ವಿವಾಹವಾಗುವಂತಿಲ್ಲ' ಎಂದು ಈ ಕಾಯ್ದೆಯ 2ಬಿ ಸೆಕ್ಷನ್‌ನಲ್ಲಿ ವಿವರಿಸಲಾಗಿದೆ.

ಮೊದಲ ಷೆಡ್ಯೂಲ್‌ನ ಭಾಗ–1ರಲ್ಲಿ ಪುರುಷನೊಬ್ಬ ತನ್ನ ತಾಯಿ, ಮಗಳು, ಅಜ್ಜಿ, ಮೊಮ್ಮಗಳು, ಮರಿಮೊಮ್ಮಗಳು ಸೇರಿ ಈ ಸ್ವರೂಪದ 37 ಸಂಬಂಧದ ಮಹಿಳೆಯರನ್ನು ಮದುವೆಯಾಗುವಂತಿಲ್ಲ ಎಂದು ಹೇಳಿದೆ. ಭಾಗ–2ರಲ್ಲಿ ಮಹಿಳೆಯೊಬ್ಬಳು ತನ್ನ ತಂದೆ, ಅಜ್ಜ, ಮಗ, ಮೊಮ್ಮಗ, ಮರಿಮೊಮ್ಮಗ ಸೇರಿ ಈ ಸ್ವರೂಪದ 37 ಸಂಬಂಧದ ಪುರುಷರನ್ನು ಮದುವೆಯಾಗುವಂತಿಲ್ಲ ಎಂದು ಹೇಳಿದೆ.

ಮೃದು ಧೋರಣೆ

ಸಲಿಂಗಕಾಮ ವಿಚಾರವೂ ಬಹುಚರ್ಚಿತ ವಿಷಯ. ಸಲಿಂಗಕಾಮ ವಿಚಾರದಲ್ಲಿ ಹೆಚ್ಚಿನ ದೇಶಗಳು ಇತ್ತೀಚಿನ ದಿನಗಳಲ್ಲಿ ಮೃದುಧೋರಣೆ ತಳೆದಿವೆ. ಸಲಿಂಗಕಾಮವನ್ನು ಅಪರಾಧ ಎಂದು 64 ದೇಶಗಳು ಪರಿಗಣಿಸಿದ್ದರೆ, 133 ದೇಶಗಳು ಅಪರಾಧವಲ್ಲ ಎಂದು ವ್ಯಾಖ್ಯಾನಿಸಿವೆ. ಭಾರತದಲ್ಲೂ ಇದನ್ನು ಅಪರಾಧದ ಪರಿಧಿಯಿಂದ ಕೈಬಿಡಲಾಗಿದೆ. 2018ರಲ್ಲಿ ಸುಪ್ರೀಂ ಕೋರ್ಟ್ ಈ ಕುರಿತು ತೀರ್ಪು ನೀಡಿತ್ತು. ಸಿಂಗಪುರ ಸರ್ಕಾರವು ಇತ್ತೀಚೆಗೆ ಇದೇ ನಿಲುವು ತೆಗೆದುಕೊಂಡಿದೆ. ಸಲಿಂಗಕಾಮ ಹಾಗೂ ಸಲಿಂಗ ವಿವಾಹವನ್ನು ಅಪರಾಧ ಎಂದು ಪರಿಗಣಿಸಿರುವ ದೇಶಗಳಲ್ಲಿ ಲೈಂಗಿಕ ಅಲ್ಪಸಂಖ್ಯಾತ ಸಮುದಾಯಗಳು ನಿರಂತರವಾಗಿ ಹೋರಾಟ ನಡೆಸುತ್ತಿವೆ.

34 ದೇಶಗಳಲ್ಲಿ ಕಾನೂನಿನ ಮಾನ್ಯತೆ

ಸಲಿಂಗ ವಿವಾಹ ಪದ್ಧತಿ ಬಗ್ಗೆ ಜಗತ್ತಿನ ವಿವಿಧ ದೇಶಗಳಲ್ಲಿ ಭಿನ್ನ ನಿಲುವುಗಳಿವೆ. ಸಲಿಂಗ ವಿವಾಹವನ್ನು ಒಪ್ಪುವ ಸಮಾಜಗಳ ಸಂಖ್ಯೆ ಕಡಿಮೆ. ಜಗತ್ತಿನ 34 ದೇಶಗಳಲ್ಲಿ ಮಾತ್ರ ಇಂತಹ ಪದ್ಧತಿಗೆ ಕಾನೂನಿನ ಮಾನ್ಯತೆಯಿದೆ. ಈ ಪೈಕಿ 23 ದೇಶಗಳು ದೇಶದಾದ್ಯಂತ ನಡೆಸಿದ ಜನಮತಗಣನೆಯ ಆಧಾರದಲ್ಲಿ ಸಂಸತ್ತಿನಲ್ಲಿ ಕಾಯ್ದೆ ಜಾರಿಗೊಳಿಸುವ ಮೂಲಕ ಅನುಮತಿ ನೀಡಿವೆ. 10 ದೇಶಗಳಲ್ಲಿ ಅಲ್ಲಿನ ಉನ್ನತ ನ್ಯಾಯಾಲಯಗಳು ಸಲಿಂಗ ವಿವಾಹದ ಪರವಾಗಿ ತೀರ್ಪು ಪ್ರಕಟಿಸಿವೆ. ದಕ್ಷಿಣ ಆಫ್ರಿಕಾ ಮತ್ತು ತೈವಾನ್ ಸರ್ಕಾರಗಳು ಕೋರ್ಟ್ ತೀರ್ಪಿನ ನಂತರ ಕಾನೂನು ಜಾರಿ ಮಾಡಿವೆ. ಇಂತಹ ವಿವಾಹಗಳನ್ನು ಕೆಲವು ದೇಶಗಳು ನಿಷೇಧಿಸಿಯೂ ಇಲ್ಲ, ಮಾನ್ಯತೆಯನ್ನೂ ನೀಡಿಲ್ಲ.

ಸಲಿಂಗ ವಿವಾಹಕ್ಕೆ ಮೊದಲಿಗೆ ಮಾನ್ಯತೆ ನೀಡಿದ್ದು ದಿ ನೆದರ್ಲೆಂಡ್ಸ್. 2000ನೇ ಇಸ್ವಿಯಲ್ಲಿ ಸಂಸತ್ತಿನಲ್ಲಿ ಕಾನೂನು ತರುವುದರ ಮೂಲಕ ಕಾಯ್ದೆಯನ್ನು ಜಾರಿಗೆ ತಂದಿತು. ಈ ಕಾಯ್ದೆಯ ಪ್ರಕಾರ, ಒಂದೇ ಲಿಂಗಕ್ಕೆ ಸೇರಿದ ಇಬ್ಬರು ವಿವಾಹವಾಗಲು, ವಿಚ್ಛೇದನ ಪಡೆಯಲು ಹಾಗೂ ಮಗುವನ್ನು ದತ್ತು ಪಡೆಯಲು ಶಾಸನಾತ್ಮಕ ಬಲವನ್ನು ನೀಡಲಾಗಿದೆ. ಇಂತಹ ವಿವಾಹ ವ್ಯವಸ್ಥೆಯನ್ನು ಇತ್ತೀಚೆಗೆ ಒಪ್ಪಿಕೊಂಡಿದ್ದು ಐರೋಪ್ಯ ಖಂಡದ ಪುಟ್ಟ ದೇಶ ಆ್ಯಂಡೊರಾ. ಇಲ್ಲಿನ ಸರ್ಕಾರವು 2023ರ ಫೆಬ್ರುವರಿ 17ರಂದು ಸಲಿಂಗ ವಿವಾಹಕ್ಕೆ ಅನುಮೋದನೆ ನೀಡಿತು. ಏಷ್ಯಾದಲ್ಲಿ ತೈವಾನ್ ದೇಶ ಮಾತ್ರ ಇಂತಹ ವಿವಾಹವನ್ನು ಒಪ್ಪಿಕೊಂಡಿದೆ. ದಕ್ಷಿಣ ಏಷ್ಯಾದಲ್ಲಿ ಯಾವ ದೇಶವೂ ಇದನ್ನೂ ಅಂಗೀಕರಿಸಿಲ್ಲ.

ಹ್ಯೂಮನ್ ರೈಟ್ಸ್ ಕ್ಯಾಂಪೇನ್ ಫೌಂಡೇಷನ್‌ನ 'ಮ್ಯಾರೇಜ್ ಇಕ್ವಾಲಿಟಿ ಅರೌಂಡ್ ದಿ ವರ್ಲ್ಡ್' ವರದಿಯ ಪ್ರಕಾರ, ಉತ್ತರ ಅಮೆರಿಕ, ಆಸ್ಟ್ರೇಲಿಯಾ, ಐರೋಪ್ಯ ಖಂಡದ ಬಹುತೇಕ ದೇಶಗಳಲ್ಲಿ ಸಲಿಂಗ ಮದುವೆಗೆ ಮಾನ್ಯತೆ ನೀಡಲಾಗಿದೆ. ದಕ್ಷಿಣ ಅಮೆರಿಕದ ಕೆಲವು ದೇಶಗಳಲ್ಲಿ ಮಾನ್ಯತೆ ಸಿಕ್ಕಿಲ್ಲ. ಆದರೆ, ಆಫ್ರಿಕಾ ಹಾಗೂ ಏಷ್ಯಾದ ಹೆಚ್ಚಿನ ದೇಶಗಳು ಇನ್ನು ಒಪ್ಪಿಕೊಂಡಿಲ್ಲ.

ಎಲ್ಲೆಲ್ಲಿ ಮಾನ್ಯತೆ: ಆ್ಯಂಡೊರಾ, ಅರ್ಜೆಂಟೀನಾ, ಆಸ್ಟ್ರೇಲಿಯಾ, ಆಸ್ಟ್ರಿಯಾ, ಬೆಲ್ಜಿಯಂ, ಬ್ರೆಜಿಲ್, ಕೆನಡ, ಚಿಲಿ, ಕೊಲಂಬಿಯಾ, ಕೋಸ್ಟರಿಕಾ, ಕ್ಯೂಬಾ, ಡೆನ್ಮಾರ್ಕ್, ಈಕ್ವೆಡಾರ್, ಫಿನ್ಲೆಂಡ್, ಫ್ರಾನ್ಸ್, ಜರ್ಮನಿ, ಐಸ್ಲೆಂಡ್, ಐರ್ಲೆಂಡ್, ಲಕ್ಸೆಂಬರ್ಗ್, ಮಾಲ್ಟಾ, ಮೆಕ್ಸಿಕೊ, ದಿ ನೆದರ್ಲೆಂಡ್ಸ್, ನ್ಯೂಜಿಲೆಂಡ್, ನಾರ್ವೆ, ಪೋರ್ಚುಗಲ್, ಸ್ಲೊವೇನಿಯಾ, ದಕ್ಷಿಣ ಆಫ್ರಿಕಾ, ಸ್ಪೇನ್, ಸ್ವೀಡನ್, ಸ್ವಿಟ್ಜರ್ಲೆಂಡ್, ತೈವಾನ್, ಬ್ರಿಟನ್, ಅಮೆರಿಕ ಹಾಗೂ ಉರುಗ್ವೆ ದೇಶಗಳಲ್ಲಿ ಸಲಿಂಗ ಮದುವೆಗೆ ಮಾನ್ಯತೆಯಿದೆ.



ಆಧಾರ: ಪಿಟಿಐ, ವಿಶೇಷ ವಿವಾಹ ಕಾಯ್ದೆ–1954, ಹ್ಯೂಮನ್ ರೈಟ್ಸ್ ಕ್ಯಾಂಪೇನ್ ಫೌಂಡೇಷನ್

'ಶೇ 90ರಷ್ಟು ಭಾರತೀಯರಿಗೆ ಬಿಸಿಗಾಳಿಯ ತಾಪ'

ಕೇಂಬ್ರಿಜ್ ವಿ.ವಿ. ಅಧ್ಯಯನ ವರದಿ

ಬಿಸಿಗಾಳಿ ಮತ್ತು ಅಧಿಕ ತಾಪಮಾನದ ಕಾರಣದಿಂದ ಶೇ 90ರಷ್ಟು ಭಾರತೀಯರು ಆರೋಗ್ಯದ ಸಮಸ್ಯೆ, ಆಹಾರದ ಕೊರತೆ ಎದುರಿಸಲಿದ್ದಾರೆ. ಕೆಲವರು ಸಾವಿನ ಅಪಾಯವನ್ನೂ ಎದುರಿಸಲಿದ್ದಾರೆ ಎಂದು ಕೇಂಬ್ರಿಜ್ ವಿಶ್ವವಿದ್ಯಾಲಯವು ನಡೆಸಿರುವ ಅಧ್ಯಯನ ವರದಿಯು ಅಂದಾಜಿಸಿದೆ. ಜತೆಗೆ ಈ ಸ್ವರೂಪದ ಅಪಾಯಗಳನ್ನು ಅಂದಾಜಿಸಲು ಭಾರತ ಬಳಸುತ್ತಿರುವ ಅಧ್ಯಯನ ವಿಧಾನದಲ್ಲಿ ನ್ಯೂನತೆಗಳಿವೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಈ ವರದಿಯು 'ಪಿಎಲ್‌ಒಎಸ್ ಕ್ಲೈಮೇಟ್' ನಿಯತಕಾಲಿಕದಲ್ಲಿ ಪ್ರಕಟವಾಗಿದೆ. ಭಾರತದಾದ್ಯಂತ ಬಿರು ಬೇಸಿಗೆ ಇರುವಾಗ ಈ ವರದಿ ಪ್ರಕಟವಾಗಿದೆ. ದೇಶದ 'ಹವಾಮಾನ ಅಪಾಯ ಸೂಚ್ಯಂಕ (ಸಿವಿಐ)' ಮತ್ತು 'ಸುಸ್ಥಿರ ಅಭಿವೃದ್ಧಿ ಗುರಿ–ಎಸ್‌ಡಿಜಿ' ಸೂಚ್ಯಂಕಗಳನ್ನು ಆಧರಿಸಿ ಈ ಅಧ್ಯಯನ ನಡೆಸಲಾಗಿದೆ.

ಹವಾಮಾನದಲ್ಲಿನ ಬದಲಾವಣೆ ಮತ್ತು ಪ್ರಕೃತಿ ವಿಕೋಪಗಳ ಸಾಧ್ಯತೆಯನ್ನು ಅಧರಿಸಿ ಸಿವಿಐ ವರದಿಯನ್ನು ಸಿದ್ಧಪಡಿಸಲಾಗುತ್ತದೆ. ಅತಿಮಳೆ, ಪ್ರವಾಹ, ಚಂಡಮಾರುತ, ಭೂಕಂಪ ಮತ್ತು ಭೂಕುಸಿತ, ಕಾಳ್ಗಿಚ್ಚು ಮೊದಲಾದ ಪ್ರಾಕೃತಿಕ ವಿಕೋಪಗಳು ಹೆಚ್ಚು ಸಂಭವಿಸುವ ಜಿಲ್ಲೆಗಳನ್ನು ಗುರುತಿಸಿ, ಅವುಗಳಿಗೆ ಸೂಚ್ಯಂಕವನ್ನು ನೀಡಲಾಗುತ್ತದೆ. ಹೆಚ್ಚು ಅಂಕಗಳನ್ನು ಪಡೆಯುವ ಜಿಲ್ಲೆಗಳಿಗೆ ಹೆಚ್ಚು ಪರಿಹಾರೋಪಾಯಗಳನ್ನು ಒದಗಿಸಲಾಗುತ್ತದೆ. ಆದರೆ, ಈ ಸೂಚ್ಯಂಕವನ್ನು ಸಿದ್ಧಪಡಿಸುವಲ್ಲಿ ಬಿಸಿಗಾಳಿ ಮತ್ತು ಅಧಿಕ ತಾಪಮಾನವನ್ನು ಪರಿಗಣಿಸುವುದಿಲ್ಲ. ಹೀಗಾಗಿ ಬಿಸಿಗಾಳಿಯ ಪರಿಣಾಮಗಳಿಗೆ ಗುರಿಯಾಗುವ ಜನರ ನೈಜಸಂಖ್ಯೆ ಸರ್ಕಾರಕ್ಕೆ ಸಿಗುವುದೇ ಇಲ್ಲ ಎಂದು ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ.



ಸಿವಿಐ ಅಂದಾಜಿನ ಪ್ರಕಾರ, ಪಶ್ಚಿಮ ಬಂಗಾಳ, ಈಶಾನ್ಯ ಭಾರತದ ಕೆಲವು ರಾಜ್ಯಗಳು ಮತ್ತು ಕರಾವಳಿ ಮತ್ತು ಪಶ್ಚಿಮ ಘಟ್ಟದ ಜಿಲ್ಲೆಗಳು ಮಾತ್ರ ಪ್ರಾಕೃತಿಕ ವಿಕೋಪದ ಅಪಾಯವನ್ನು ಎದುರಿಸುತ್ತಿವೆ. ಆದರೆ, ವಾಸ್ತವದಲ್ಲಿ ದೇಶದ ಬಹುತೇಕ ರಾಜ್ಯಗಳು ಅಂತಹ ಅಪಾಯವನ್ನು ಎದುರಿಸುತ್ತಿವೆ ಎಂದು ಅಧ್ಯಯನ ವರದಿಯು ಹೇಳಿದೆ.

ಬಿಸಿಗಾಳಿ ಮತ್ತು ಅಧಿಕ ತಾಪಮಾನದ ಅಪಾಯಗಳು ಮತ್ತು ಅದಕ್ಕೆ ಗುರಿಯಾಗಲಿರುವ ಜನರನ್ನು ಗುರುತಿಸಲು ಇದೇ ಮೊದಲ ಬಾರಿಗೆ, ಭಾರತಕ್ಕೆ ಸಂಬಂಧಿಸಿದಂತೆ 'ಬಿಸಿಗಾಳಿ ಸೂಚ್ಯಂಕ'ವನ್ನು ಕೇಂಬ್ರಿಜ್ ವಿಜ್ಞಾನಿಗಳ ತಂಡವು ರೂಪಿಸಿದೆ. ದೇಶದ ಜನರ ಆರೋಗ್ಯ ಸ್ಥಿತಿ, ಅವರ ಜೀವನಮಟ್ಟ, ದೇಶದ ಎಲ್ಲಾ ಪ್ರದೇಶಗಳಲ್ಲಿ ಇರುವ ಅಧಿಕ ತಾಪಮಾನದ ಪ್ರಮಾಣ ಮತ್ತು ಅದು ಆ ಜನರ ಆರೋಗ್ಯದ ಮೇಲೆ ಬೀರುವ ಪರಿಣಾಮಗಳನ್ನು ಪರಿಗಣಿಸಿ ಈ ಸೂಚ್ಯಂಕವನ್ನು ಸಿದ್ಧಪಡಿಸಲಾಗಿದೆ ಎಂದು ಅಧ್ಯಯನ ವರದಿಯಲ್ಲಿ ವಿಜ್ಞಾನಿಗಳು ವಿವರಿಸಿದ್ದಾರೆ.

ಸಿವಿಐ ದತ್ತಾಂಶಗಳ ಜತೆಗೆ ಬಿಸಿಗಾಳಿ ಸೂಚ್ಯಂಕದ ದತ್ತಾಂಶವನ್ನು ಸಂಯೋಜಿಸಿದರೆ, ದೇಶದ ಶೇ 90ರಷ್ಟು ಜನರು ಅಪಾಯವನ್ನು ಎದುರಿಸುತ್ತಿರುವುದು ಗೊತ್ತಾಗುತ್ತದೆ. ಜಮ್ಮು–ಕಾಶ್ಮೀರ, ಲಡಾಖ್, ಹಿಮಾಚಲ ಪ್ರದೇಶದ ಕೆಲವು ಭಾಗಗಳನ್ನು ಹೊರತುಪಡಿಸಿ, ದೇಶದ ಬೇರೆಲ್ಲಾ ಕಡೆ ಈ ಅಪಾಯವಿದೆ. ತಮಿಳುನಾಡು, ಆಂಧ್ರಪ್ರದೇಶ, ಪಶ್ಚಿಮ ಬಂಗಾಳ, ಬಿಹಾರ, ಈಶಾನ್ಯ ಭಾರತದ ರಾಜ್ಯಗಳಲ್ಲಿ ಬಿಸಿಗಾಳಿ ಮತ್ತು ಅಧಿಕ ತಾಪಮಾನದ ದುಷ್ಪರಿಣಾಮಗಳ ಸಾಧ್ಯತೆ ಅತ್ಯಧಿಕ ಎಂದು ವರದಿಯಲ್ಲಿ ಅಂದಾಜಿಸಲಾಗಿದೆ.

ಭಾರತದಲ್ಲಿ ಈ ಎಲ್ಲಾ ಅಂಶಗಳನ್ನು ಸಮಗ್ರವಾಗಿ ವಿಶ್ಲೇಷಿಸದೇ ಇರುವ ಕಾರಣಕ್ಕೆ, ಪರಿಣಾಮಕಾರಿಯಾದ ಪರಿಹಾರೋಪಾಯಗಳನ್ನು ರೂಪಿಸಲು ಸಾಧ್ಯವಾಗುತ್ತಿಲ್ಲ. ಜತೆಗೆ ಪರಿಣಾಮಕಾರಿಯಾದ ನೀತಿಯನ್ನು ರಚಿಸಲು ಸಾಧ್ಯವಾಗುತ್ತಿಲ್ಲ. ಇದು ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅಪಾಯವನ್ನು ತಂದೊಡ್ಡಲಿದೆ ಮತ್ತು ಅಭಿವೃದ್ಧಿಯನ್ನು ಕುಂಠಿತಗೊಳಿಸಲಿದೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಆಧಾರ: ಪಿಟಿಐ, ಪಿಎಲ್‌ಒಎಸ್ ಕ್ಲೈಮೇಟ್ ನಿಯತಕಾಲಿಕೆ ವರದಿ

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪ್ರಯಾಗ್‌ರಾಜ್‌ನಲ್ಲಿ ಇತ್ತೀಚೆಗೆ ನಡೆದ ಗುಂಡಿನ ದಾಳಿಯಲ್ಲಿ ಪಾತಕಿ ಅತೀಕ್ ಅಹ್ಮದ್ ಹತ್ಯೆಯಾಗಿತ್ತು. ಪತ್ರಕರ್ತರ ಸೋಗಿನಲ್ಲಿ ಬಂದಿದ್ದ ಆಗಂತುಕರು ಪೊಲೀಸರ ಸಮ್ಮುಖದಲ್ಲೇ ಗುಂಡು ಹಾರಿಸಿದ್ದರು. ಹತ್ಯೆಯ ಬಳಿಕ ದಾಳಿಕೋರರು 'ಜೈಶ್ರೀರಾಮ್' ಘೋಷಣೆ ಕೂಗಿದ್ದರು. ಆದರೆ, ದಾಳಿಕೋರರು ಜೈಶ್ರೀರಾಮ್ ಘೋಷಣೆ ಕೂಗಿಲ್ಲ ಎಂದು ಕೆಲವರು ಟ್ವೀಟ್ ಮಾಡಿದ್ದಾರೆ. ಅರುಣ್ ಪುದುರ್ ಎಂಬವರು 'ದಾಳಿಕೋರರು ಜೈಶ್ರೀರಾಮ್ ಘೋಷಣೆ ಕೂಗಿದ್ದಾರೆ ಎಂದು ಐಎಸ್ಐ ವದಂತಿ ಹಬ್ಬಿಸುತ್ತಿದೆ' ಎಂದು ಬರೆದಿದ್ದಾರೆ. ಉತ್ತರ ಪ್ರದೇಶ ಬಿಜೆಪಿ ಸಾಮಾಜಿಕ ಜಾಲತಾಣ ವಿಭಾಗದ ಸಹ ಸಂಚಾಲಕ ಶಶಿಕುಮಾರ್ ಅವರು 'ಜೈಶ್ರೀರಾಮ್ ಘೋಷಣೆ ಕೂಗಲಾಗಿದೆ ಎಂಬ ವಿಡಿಯೊಗಳನ್ನು ತಿರುಚಲಾಗಿದೆ' ಎಂದು ಹೇಳಿದ್ದಾರೆ. ಆದರೆ ದಾಳಿಕೋರರು ಘೋಷಣೆ ಕೂಗಿದ್ದು ನಿಜ.



ಅತೀಕ್ ಅಹ್ಮದ್ ಹತ್ಯೆ ಮಾಡಿದವರು 'ಜೈಶ್ರೀರಾಮ್' ಘೋಷಣೆ ಕೂಗಿದ್ದು ನಿಜ ಎಂದು 'ಆಲ್ಟ್ ನ್ಯೂಸ್' ವರದಿ ಮಾಡಿದೆ. ಈ ಕುರಿತಂತೆ ಸಾಮಾಜಿಕ ಜಾಲತಾಣಗಳು ಹಾಗೂ ಕೆಲವು ಸುದ್ದಿ ವಾಹಿನಿಗಳಲ್ಲಿ ಇರುವ ವಿಡಿಯೊಗಳಲ್ಲಿ ಘೋಷಣೆ ಕೇಳಿಸುತ್ತದೆ. ಘಟನಾ ಸ್ಥಳದಲ್ಲಿದ್ದ ಪಿಟಿಐ ವರದಿಗಾರರು ಸೇರಿದಂತೆ ಹಲವು ಪತ್ರಕರ್ತರು ಇದನ್ನು ಖಚಿತಪಡಿಸಿದ್ದಾರೆ. ಹಿಂದೂಸ್ತಾನ್ ಟೈಮ್ಸ್, ನ್ಯೂಸ್ 18 ಸೇರಿದಂತೆ ಹಲವು ಸುದ್ದಿತಾಣಗಳು ಇದನ್ನು ವರದಿ ಮಾಡಿವೆ. ದಾಳಿಕೋರರು ಘೋಷಣೆ ಕೂಗಿದ್ದಾರೆ ಎಂದು ಸುಳ್ಳು ಸುದ್ದಿ ಹಬ್ಬಿಸಲಾಗುತ್ತಿದೆ ಎಂಬುದೇ ಸುಳ್ಳು ಎಂದು 'ಆಲ್ಟ್ ನ್ಯೂಸ್' ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಯತ್ನವೇ ಜೀವನ ಶಿಕ್ಷಣ

ಯತನಂ ಕರ್ತವ್ಯವದು, ನಮಗೆ ವಿದ್ಯಾಭ್ಯಾಸ |
ಹಿತಪರಿಜ್ಞಾನ ಯತ್ನಾನುಭವ ಫಲಿತ ||
ಸತತಯತ್ನದಿನಾತ್ಮಶಕ್ತಿ ಪರಿವರ್ಧಿಪುದು |
ಯತನ ಜೀವನಶಿಕ್ಷೆ – ಮಂಕುತಿಮ್ಮ || 867 ||

ಪದ-ಅರ್ಥ: ಯತನ = ಯತ್ನ, ಯತ್ನಾನುಭವ = - ಯತ್ನ + ಅನುಭವ, ಫಲಿತ = ಫಲ, ಪ್ರಯೋಜನ, ಸತತಯತ್ನದಿನಾತ್ಮಶಕ್ತಿ = ಸತತ + ಯತ್ನದಿನ್ + ಆ-ತ್ಮಶಕ್ತಿ, ಪರಿವರ್ಧಿಪುದು = ವೃದ್ಧಿಸುವುದು.

ವಾಚ್ಯಾರ್ಥ: ಪ್ರಯತ್ನ ನಮ್ಮ ಕರ್ತವ್ಯ. ಅದು ನಮಗೆ ಕಲಿಕೆಯ ವಿಧಾನ. ಪ್ರಯತ್ನಗಳ ಅನುಭವದಿಂದ ದೊರೆಯುವುದೆ ಹಿತವಾವುದು ಎಂಬುದರ ಪರಿಜ್ಞಾನ. ಸತತ ಪ್ರಯತ್ನದಿಂದಲೇ ಆತ್ಮಶಕ್ತಿಯ ವೃದ್ಧಿ. ಪ್ರಯತ್ನವೇ ನಮಗೆ ಜೀವನ ಶಿಕ್ಷಣ.

ವಿವರಣೆ: ಶರಣ ಆಯ್ದಕ್ಕಿ ಮಾರಯ್ಯನ ವಚನ ಹೀಗೆ. ಕಾಯಕದಲ್ಲಿ ನಿರತನಾದಡೆ, ಗುರುದರ್ಶನ-ವಾದಡೂ ಮರೆಯಬೇಕು. ಲಿಂಗಪೂಜೆಯಾದಡೂ ಮರೆಯಬೇಕು. ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು. ಕಾಯಕವೇ ಕೈಲಾಸವಾದ ಕಾರಣ. ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು. ಎಲ್ಲಕ್ಕಿಂತ ಕಾಯಕ, ಕರ್ತವ್ಯ ಬಹಳ ಮುಖ್ಯವಾದದ್ದು. ಯಾಕೆಂದರೆ ಕಾಯಕವೇ ಕೈಲಾಸ. ಅದು ಯತ್ನವಿಲ್ಲದೆ ಸಾಧ್ಯವಾಗಲಾ-ರದು. ಆದ್ದರಿಂದ ಪ್ರಯತ್ನ ಅವಶ್ಯಮಾತ್ರವಲ್ಲ, ಅದು ನಮ್ಮ ಕರ್ತವ್ಯ. ಕರ್ತವ್ಯದಿಂದಲೇ ನಮಗೆ ತಿಳುವಳಿಕೆ, ಜ್ಞಾನ ಬರುವುದು. "ನೀನು ಸದಾ ಕರ್ಮವನ್ನು ಮಾಡುತ್ತಲೇ ಇರಬೇಕು. ಕರ್ಮವಿಲ್ಲದೆ ಮುಕ್ತಿಯಿಲ್ಲ" ಎನ್ನುತ್ತದೆ ಭಗವದ್ಗೀತೆ. ಸತತವಾಗಿ ಪ್ರಯತ್ನ ಮಾಡುತ್ತಲೇ ಇರುವಾಗ ಯಶಸ್ಸು ಬರಬಹುದು, ಸೋಲೂ ಆಗಬಹುದು. ಈ ಯಶಸ್ಸು, ಸೋಲುಗಳು ಜೀವನದ ಪಾಠಗಳು. ಯಾವುದು ನನಗೆ ಹಿತವಾದದ್ದು, ಯಾವುದು ಅಹಿತವಾದದ್ದು ಎಂಬುದು ತಿಳಿಯುವುದು ಈ ಕರ್ಮ ಮಾಡುವಾಗಲೇ. ಮನುಷ್ಯ ಸತತ ಪ್ರಯತ್ನ ಮಾಡುವಾಗ ಅವನ ಕೈ ಮನಸ್ಸು ಬುದ್ಧಿಗಳೆಲ್ಲ ಸಂಲ-ಗ್ನಗೊಳ್ಳಬೇಕು. ಆಗಲೇ ಮನುಷ್ಯ ದೈವತ್ವಕ್ಕೇರು-ವುದು. ಹೀಗೆ ಮೈಮರೆತು ಪ್ರಯತ್ನ ಮಾಡಿದಾಗಲೇ ಜಗತ್ತು ತನ್ನ ಹೃದಯವನ್ನು ತೆರೆಯುತ್ತದೆ. ಉಳಿದವರಿಗೆ ಅಸಾಧ್ಯವೆನ್ನಿಸಿದ್ದ ಎವರೆಸ್ಟ್, ಹಿಲರಿ ಮತ್ತು ತೇನ್‌ಸಿಂಗ್‌ರಿಗೆ ಒಲಿದದ್ದು ಹೇಗೆ? ದಾರಿಯಲ್ಲಿದ್ದ ಹುಡುಗನನ್ನು ಹುರಿಗೊಳಿಸಿ ಸಾಮ್ರಾ-ಟನನ್ನಾಗಿಸಿದ ಚಾಣಕ್ಯನ ಹಿಂದಿದ್ದ ಶಕ್ತಿ ಯಾವುದು? ಪಕ್ಷಿಯಂತೆ ಗಾಳಿಯಲ್ಲಿ ಹಾರಬೇಕೆಂದು ಕನಸು ಕಂಡ ಮನುಷ್ಯನನ್ನು, ವಿಮಾನದಲ್ಲಿ ಹಾರಿಸಿದ ರೈಟ್ ಸಹೋದರರ ಸಾಧನೆಯ ಮೂಲ ಶಕ್ತಿ ಯಾವುದು? ಇವೆಲ್ಲವುಗಳ ಉತ್ತರ ಒಂದೇ ಸತತ ಪ್ರಯತ್ನ. ಅದಕ್ಕೆ ಕಗ್ಗ, ಯತ್ನವೇ ವಿದ್ಯಾಭ್ಯಾಸ, ಅದೇ ನಮಗೆ ಹಿತದ ಜ್ಞಾನ ನೀಡುವುದು, ಅದರಿಂದಲೇ ಆತ್ಮಶಕ್ತಿಯ ವೃದ್ಧಿ ಮತ್ತು ಅದೇ ನಮಗೆ ಜೀವನ ಶಿಕ್ಷಣ ಎಂದು ಪ್ರಯತ್ನದ ಅಗತ್ಯತೆಯನ್ನು ಒತ್ತಿ ಹೇಳುತ್ತದೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಏಪ್ರಿಲ್ 21, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಶುದ್ಧ ಪ್ರತಿಪದ್ ಗಂ. 08-29 ನಕ್ಷತ್ರ: ಭರಣಿ ಗಂ. 23-00 ಯೋಗ: ಪ್ರೀತಿ ಗಂ. 10-59, ಕರಣ: ಬವ ಗಂ. 08-29, ಮೇಷ ಮಾಸದ 07 ನೇ ದಿನ, ಮಳೆನಕ್ಷತ್ರ: ಅಶ್ವಿನಿ 3, ರಾಹುಕಾಲ : ಬೆಳಿಗ್ಗೆ 10-30 – 12-00, ಸೂರ್ಯೋದಯ : 06-18 ಸೂರ್ಯಾಸ್ತ : 06-41, ಮುಸ್ಲಿಂ ದಿನಾಂಕ : 29 ರಂಜಾನ್. ದಿನ ವಿಶೇಷ : ಗುರು ನಿರಯನ ಮೇಷ ರಾಶಿ ಪ್ರವೇಶ ಗಂ. 29-14, ಜಮತ್-ಉಲ್-ವಿದಾ (ಮುಸ್ಲಿಂ)
ಅದೃಷ್ಟ ಸಂಖ್ಯೆ : 1, 6

ಮೇಷ: ಆತ್ಮೀಯರೊಂದಿಗೆ ವ್ಯವಹಾರಗಳ ಕುರಿತು ಅತ್ಯಂತ ಆಳವಾದ ಚರ್ಚೆಯನ್ನು ನಡೆಸಿ. ಕೆಲ ನಿರ್ಧಾರಗಳು ಸರಿಯಾಗಿ ಕಂಡು ಬಂದರೂ ಸಭೆಯಲ್ಲಿ ಇತರರ ದೃಷ್ಟಿಕೋನವನ್ನು ನೋಡಿ ಬದಲಿಸಿಕೊಳ್ಳಬೇಕಾಗಬಹುದು.

ವೃಷಭ: ಸಂಬಂಧಿಕರಲ್ಲಿ ಹಾಗೂ ಸ್ನೇಹಿತರಲ್ಲಿ ಸಂಪರ್ಕದಲ್ಲಿರುವುದು ಆನಂದ ನೀಡಲಿದೆ. ಕೆಲಸ ಮತ್ತು ದುಡಿಮೆ ಸಮೃದ್ಧಿಯಾಗಿ ಇಲ್ಲವಾದರೂ ಕೌಟುಂಬಿಕ ನೆಮ್ಮದಿಗೆ ಕೊರತೆ ಕಾಣುವುದಿಲ್ಲ. ವಿಶೇಷ ವ್ಯಕ್ತಿಗಳನ್ನು ಭೇಟಿಯಾಗುವಿರಿ.

ಮಿಥುನ: ಮಿತ್ರರಲ್ಲಿ ಸ್ನೇಹವೂ ಬಂಧುಗಳಲ್ಲಿ ಸಂಬಂಧವೂ ಉಳಿಸಿಕೊಂಡು ಹೋಗುವುದು ಇಹಕ್ಕೂ ಪರಕ್ಕೂ ಒಳಿತು ಉಂಟುಮಾಡುತ್ತದೆ. ಗೋವುಗಳ ಪಾಲನೆಯಿಂದ ಪುಣ್ಯ ಪ್ರಾಪ್ತಿ. ಮಕ್ಕಳ ಮೇಲೆ ಗಮನ ನೀಡಿ.

ಕರ್ಕಾಟಕ: ಯಶಸ್ಸು ಹಾಗೂ ಹೆಸರು ನಿಮ್ಮ ಪ್ರಯತ್ನ ಬೇಕಾದಷ್ಟೇ ಇದ್ದರೂ ಒಲಿದು ಬರುವುದು ಕಷ್ಟಕರ ಸಂಗತಿ. ಸಂಘ ಸಂಸ್ಥೆಗಳಲ್ಲಿ ಅಧಿಕಾರ ಹೊಂದಿದವರು ಲೆಕ್ಕ ಪತ್ರಗಳ ಪರಿಶೋಧನೆ ಮಾಡುವುದು ಉತ್ತಮ.

ಸಿಂಹ: ಮೇಲಧಿಕಾರಿಗಳಿಂದ ಅಪೇಕ್ಷಿಸುವ ಸಹಕಾರಗಳು ದೊರೆತಂತೆ ಕಂಡರೂ ಸಂತೃಪ್ತಕರ ರೀತಿಯಲ್ಲಿರುವುದಿಲ್ಲ. ಗಾರ್ಮೆಂಟ್ಸ್ ನೌಕರರಿಗೆ ಹೆಚ್ಚಿನ ಕೆಲಸವಿರುವುದು. ತುರ್ತು ಕಾರ್ಯಗಳ ನಿರ್ವಹಣೆ ಮಾಡಬೇಕಾಗಬಹುದು.

ಕನ್ಯಾ: ಮಹತ್ವಾಕಾಂಕ್ಷೆಯಿಂದ ಗುರಿಯನ್ನು ತಲುಪುವುದು ಕಷ್ಟವೇನಲ್ಲವಾ-ದರು ಪ್ರಯತ್ನ ಮುಖ್ಯ. ಗಂಭೀರ ಚಿತ್ತ ಹಾಗೂ ದೃಢ ಮನಸ್ಸಿನಿಂದ ಕೈಗೊಂಡ ಕೆಲಸಗಳು ಖಂಡಿತ ಕಾರ್ಯಗತವಾಗಲಿದೆ.

ತುಲಾ: ಯಾವ ಒತ್ತಡಗಳಿಗೂ, ಯಾರ ದಬ್ಬಾಳಿಕೆಗೂ ಒಳಗಾಗದೆ ಸ್ವತಂತ್ರವಾ-ಗಿರಲು ಬಯಸುವಿರಾದರೂ ಸಾಧ್ಯವಾಗುವುದಿಲ್ಲ. ಕೃಷಿ ಕಾರ್ಯಗಳು ಈ ದಿನ ಬಿಡುವಿಲ್ಲದೆ ನಡೆಯಲಿದೆ. ಈಶ್ವರನನ್ನು ಆರಾಧಿಸಿ ಶುಭವಾಗುವುದು.

ವೃಶ್ಚಿಕ: ಉದ್ಯೋಗದ ವಿಚಾರದ ಬಗ್ಗೆ ಹೆಚ್ಚಿನ ತರಬೇತಿ ಪಡೆದುಕೊಳ್ಳುವು-ದರಿಂದ ಬಡ್ತಿಯ ಬಗ್ಗೆ ಯೋಚಿಸಬಹುದು. ವೈಯಕ್ತಿಕ ವಿಚಾರ ಆಪ್ತರೊಬ್ಬರ ಬಳಿ ಹೇಳಿಕೊಳ್ಳುವುದರಿಂದ ಮಾನಸಿಕ ದುಃಖ ಕಡಿಮೆಯಾಗಲಿದೆ.

ಧನು: ಕೆಲವೊಂದು ಅನಿರೀಕ್ಷಿತ ಘಟನೆಗಳಿಂದ ಸುತ್ತಮುತ್ತಲಿನ ವಾತಾವರಣವೂ ಧನಾತ್ಮಕವಾಗಿ ಬದಲಾವಣೆಯಾಗುವುದು. ಭೂಮಿ ಬಿಟ್ಟು ಎತ್ತರದಲ್ಲಿ ಕೆಲಸ ಮಾಡುವವರು ಜಾಗ್ರತೆಯಿಂದಿರಿ.

ಮಕರ: ಶಿಕ್ಷಕ ವೃಂದಕ್ಕೆ ಕೆಲಸದ ಒತ್ತಡ ಕಡಿಮೆಯಾಗಲಿದೆ. ಕುಟುಂಬ ದೊಂದಿಗೆ ಹೆಚ್ಚಿನ ಸಮಯ ಕಳೆಯಲು ಸಾಧ್ಯವಾಗುತ್ತದೆ. ನಿಮ್ಮ ಕಾರ್ಯ ವೈಖರಿ ನೋಡಿದ ಕೆಲವರು ಮತ್ಸರ ಪಡುವಂತಾಗುತ್ತದೆ.

ಕುಂಭ: ಅನಗತ್ಯ ವಿಷಯಗಳಿಂದ ದೂರವಿರುವುದು ನಿಮ್ಮ ಯೋಜನೆಗಳನ್ನು ಗಂಭೀರವಾಗಿ ಪರಿಗಣಿಸಲು ಅನುಕೂಲವಾಗುವುದು. ಕೃಷಿಗೆ ಸಂಬಂಧಿಸಿ ದಂತೆ ಕೆಲಸಗಳು ಅಡೆತಡೆಗಳಿಲ್ಲದೆ ಮುಂದುವರಿಯುವುದು.


ಮೀನ: ಬಹಳ ದಿನಗಳಿಂದ ನಿರೀಕ್ಷಿಸಿದ ರೀತಿಯಲ್ಲಿ ಉದ್ಯೋಗ ಸಿಕ್ಕದಿದ್ದರೂ, ಸಣ್ಣ ಮಟ್ಟದ ಉದ್ಯೋಗ ಸಿಕ್ಕಿರುವುದು ಸಂತೋಷ ಪಡುವ ವಿಚಾರ. ತಾಳ್ಮೆಯು ಜೀವನದ ಮೂಲಮಂತ್ರವಾಗಿರಲಿ.

ಪದಬಂಧ 5295

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಉಷ್ಣವನ್ನು ಅಳೆಯುವ ಸಾಧನ (5)
3.ಆಳು ಕರೆದುಕೊಂಡು ಬಂದಿರುವ ಹಸು (3)
5.ಮಾನಸಿಕ ಪ್ರಭಾವ ಬೀರಿ ವಶಪಡಿಸಿಕೊಳ್ಳುವುದು (5)
7.ನಿರಾಕರಣವನ್ನುಸೂಚಿಸುವಿಕೆ (3)
9.ನೆನಪು ಮಾಡಿಕೊಂಡು ತೋರಿದ ಒಯ್ಯಾರ (3)
11.ರುಚಿಯಿಲ್ಲದಿರುವುದು (3)
13.ನೆತ್ತರಿನಿಂದಿರಿಸಿದ ಬೊಟ್ಟು (5)
15.ಚಿನ್ನಬೆಳ್ಳಿಗಳನ್ನು ಪರೀಕ್ಷಿಸುವ ಕಲ್ಲು (3)
16.ಮೃಗದ ನಡುವಳಿಕೆ (5)

ಮೇಲಿಂದ ಕೆಳಕ್ಕೆ
1.ಪ್ರಕೃತವಾದ ವಿಷಯಕ್ಕೆ ಕೊಡುವ ಹೋಲಿಕೆ ವಸ್ತು (4)
2.ಚಿಗುರು ಇಲ್ಲಿ ಕಾಣುತ್ತಿದೆ (3)
4.ಕಣದಲ್ಲಿ ನೆರವೇರಿದ ಲಗ್ನ (3)
6.ಕದಕ್ಕೆ ಒರಗಿಸಿರುವ ಕೆನ್ನೆ (3)
8.ಕಾದಾಡುವಾಗ ಕಾಣಿಸಿದ ಅರಣ್ಯ (2)
9.ಒಡನೆಯೇ ಹತ್ತಿರ ಬಂದಿರುವ ಯಜಮಾನಿತಿ (3)
10.ನಾಗರೀಕರು ಹಿಡಿದಿರುವ ಗುಂಜು (2)
12.ಮನದ ಗೋಡೆ (4)
13.ವಿಷಯಾಸಕ್ತನಿವನು (3)
14.ಕೊಳೆಯಿಂದ ಕೂಡಿದುದು (3)



5294ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುರಾಗ 3.ಮಲೆನಾಡು 5.ಯಾತ್ರಿಕ 6.ಅಪಕಾರ 8.ರಿಕ್ತಹಸ್ತ 10.ಆಕಳಿಸು 12.ಅವಾಂತರ 13.ದಡಿಯ 16.ಬಿಗು ಮಾನ 17.ತಲೆಮಾರು

ಮೇಲಿಂದ ಕೆಳಕ್ಕೆ:
1.ಅಣ್ಣ 2.ಗಡಿಯಾರ 3.ಮಧುಕರಿ 4.ಡುಬ್ಬ 7.ಪದಕ 9.ಹರಿತ 11.ಸುದರ್ಶನ 12.ಅಯಸ್ಕಾಂತ 14.ಕಂಬಿ 15.ಕರು

ಸುಡೊಕು 5681

			4		3	9	6	
7		8						5
4			5		8	7		1
		9						7
	3	7	1		6	4	5	
8						2	1	
6		5		2			3	4
3						5		2
	8	2		5			7	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5680 ಸುಡೊಕು

3	4	8	2	7	9	6	5	1
9	6	1	5	8	3	2	7	4
5	7	2	1	6	4	3	9	8
6	9	4	7	3	5	1	8	2
2	8	5	6	9	1	7	4	3
1	3	7	4	2	8	9	6	5
8	5	9	3	1	6	4	2	7
7	1	6	8	4	2	5	3	9
4	2	3	9	5	7	8	1	6

ಬಿಜೆಪಿಗೆ ಮತಬ್ಯಾಂಕ್ ಛಿದ್ರದ ಭೀತಿ: ಕಮಲದ ಅಸ್ತ್ರವನ್ನೇ ತಿರುಗುಬಾಣ ಮಾಡಹೊರಟ 'ಕೈ'

ಲಿಂಗಾಯತ ಮತ ರಾಜಕಾರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲಿಂಗಾಯತ ಸಮುದಾಯದ ನಾಯಕರನ್ನು ಬಿಜೆಪಿ ಕಡೆಗಣಿಸುತ್ತಿದೆ' ಎಂಬ ಕಾಂಗ್ರೆಸ್ ನಾಯಕರ ಆರೋಪದಿಂದಾಗಿ ಕಳೆದ ಮೂರು ಚುನಾವಣೆಗಳಲ್ಲಿ ತಮ್ಮ ಬೆನ್ನಿಗೆ ನಿಂತಿದ್ದ ಮತಬ್ಯಾಂಕ್ ಛಿದ್ರಗೊಳ್ಳಬಹುದೆಂಬ ಆತಂಕಕ್ಕೆ ಬಿದ್ದಿರುವ ಬಿಜೆಪಿ ನಾಯಕರು, ಮತಭದ್ರಗೊಳಿಸಿಕೊಳ್ಳುವ ಕಸರತ್ತು ಆರಂಭಿಸಿದ್ದಾರೆ.

ಟಿಕೆಟ್ ಕೈತಪ್ಪಿದ ಕಾರಣಕ್ಕೆ ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ ಬಿಜೆಪಿ ತೊರೆದು ಕಾಂಗ್ರೆಸ್ ಪಾಳೆಯಕ್ಕೆ ಜಿಗಿದಿದ್ದಾರೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಆಗಿದ್ದವರನ್ನೇ ಬಿಜೆಪಿ ಅವಮಾನಿಸಿದೆ ಎಂದು ಪ್ರತಿಪಾದಿಸಿದ ಕಾಂಗ್ರೆಸ್ ನಾಯಕರು, ಇದನ್ನೇ ಕಮಲ ಪಕ್ಷದ ವಿರುದ್ಧದ ಅಸ್ತ್ರವಾಗಿ ಬಳಸಿದರು. 'ಲಿಂಗಾಯತರನ್ನು ವ್ಯವಸ್ಥಿತವಾಗಿ ತುಳಿಯಲಾಗುತ್ತಿದೆ' ಎಂದು ಹೇಳಿದ ಶೆಟ್ಟರ್ ಇದಕ್ಕೆ ಧ್ವನಿಯನ್ನು ಕೊಟ್ಟರು. ತಮ್ಮಿಂದ ಅಂತರ ಕಾಯ್ದುಕೊಂಡಿದ್ದ ರಾಜಕೀಯವಾಗಿ ಪ್ರಬಲ ಸಮುದಾಯವನ್ನು ಸೆಳೆಯಲು ಮುಂದಾದ ಡಿ.ಕೆ.ಶಿವಕುಮಾರ್ ಇದನ್ನೇ ಬಿಜೆಪಿ ವಿರುದ್ಧದ ಬಾಣವಾಗಿ ಬಳಸಿದರು.

ಕಾಂಗ್ರೆಸ್‌ನ ಈ ನಡೆಯ ಗಂಭೀರತೆ ಅರಿತ ಬಿಜೆಪಿಯು ತನ್ನ ಮತ ಬ್ಯಾಂಕ್ ಭದ್ರಪಡಿಸಿಕೊಳ್ಳಲು ಮತ್ತು ಸಂಭವಿಸಬಹುದಾದ ಹಾನಿಯನ್ನು ತಡೆಯಲು ಕಾರ್ಯಪ್ರವೃತ್ತವಾಗಿದೆ. ಶೆಟ್ಟರ್ ಬಂಡಾಯದ ಬೆನ್ನಲ್ಲೇ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ನೇರ ಹುಬ್ಬಳಿಗೆ ಬಂದಿದ್ದೂ ಅಲ್ಲದೇ, ಹಾನಿ ತಡೆಗೆ ಕೆಲವು ಕಾರ್ಯತಂತ್ರಗಳನ್ನು ರೂಪಿಸಿದರು. ಅದರ ಭಾಗವಾಗಿ ಲಿಂಗಾಯತ ಸಮುದಾಯಕ್ಕೆ ಸೇರಿದ ಶಾಸಕರು, ಸಂಸದರು, ಸಚಿವರ ಸಭೆ ನಡೆಸಲು ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರಿಗೆ ಸೂಚಿಸಿದರು.

ಬಿಜೆಪಿಯ ಕಾರ್ಯತಂತ್ರದ ಭಾಗವಾಗಿ ಲಿಂಗಾಯತ ಸಮುದಾಯರವರನ್ನೇ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸುವಂತೆ ಕಾಂಗ್ರೆಸ್‌ಗೆ ಸವಾಲು ಹಾಕುವುದರ ಜತೆಗೆ, ಜಗದೀಶ ಶೆಟ್ಟರ್ ಅವರನ್ನೇ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸುವಂತೆಯೂ ದಾಳ ಉರುಳಿಸಿದೆ. ಇದನ್ನು ಸಚಿವ ವಿ.ಸೋಮಣ್ಣ ಅವರು ಚಾಮರಾಜನಗರದಲ್ಲಿ ಪ್ರಸ್ತಾಪಿಸಿದ್ದಾರೆ.

ಅಲ್ಲದೇ, ನಿಜಲಿಂಗಪ್ಪ ಬಿಟ್ಟರೆ ವೀರೇಂದ್ರ ಪಾಟೀಲ ಅವರನ್ನು ಮಾತ್ರ ಕಾಂಗ್ರೆಸ್ ಪಕ್ಷ ಮುಖ್ಯಮಂತ್ರಿ ಮಾಡಿದೆ. ಕಳೆದ 50 ವರ್ಷಗಳಲ್ಲಿ (ವೀರೇಂದ್ರ ಪಾಟೀಲರನ್ನು 9 ತಿಂಗಳು ಬಿಟ್ಟರೆ) ಯಾರನ್ನೂ ಮುಖ್ಯಮಂತ್ರಿ ಮಾಡಲಿಲ್ಲ. ವೀರೇಂದ್ರ ಪಾಟೀಲ ಅವರನ್ನು ಅವಮಾನಕರ ರೀತಿಯಲ್ಲಿ ಕೆಳಗಿಳಿಸಲಾಯಿತು ಎಂಬುದಾಗಿ ಪ್ರಸ್ತಾಪಿಸುವ ಮೂಲಕ ಬಿಜೆಪಿ ಆ ಸಮುದಾಯಕ್ಕೆ ತನ್ನದೇ ಆದ ಸಂದೇಶ ನೀಡಲಾರಂಭಿಸಿದೆ.

ಬಹಳ ಕಾಲದ ಬಳಿಕ ಲಿಂಗಾಯತ ಅಸ್ತ್ರ: ವೀರೇಂದ್ರ ಪಾಟೀಲ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಬಲವಂತವಾಗಿ ಇಳಿಸಿದ ಮೇಲೆ ಲಿಂಗಾಯತ ಸಮುದಾಯ ಕಾಂಗ್ರೆಸ್‌ನಿಂದ ದೂರ ಸರಿದಿತ್ತು. ಇದರಿಂದ ಆದ ನಷ್ಟವನ್ನು ಸರಿದೂಗಿಸಿಕೊಳ್ಳಲು ಕಾಂಗ್ರೆಸ್ ನಾಯಕರು ಪ್ರಯತ್ನಿಸಿದರೂ ಅದು ಸಾಧ್ಯವಾಗಿರಲಿಲ್ಲ. ಲಿಂಗಾಯತ ಅಭ್ಯರ್ಥಿಗಳು ಕಾಂಗ್ರೆಸ್‌ನಿಂದ ಸ್ಪರ್ಧಿಸಿ, ಗೆಲುವು ಸನಿಹವಿದ್ದ ಕಡೆಗಳಲ್ಲಷ್ಟೇ, ಈ ಸಮುದಾಯದ ಮತಗಳು 'ಕೈಗೆ ದಕ್ಕುತ್ತಿದ್ದವು.

ಯಡಿಯೂರಪ್ಪ ಅವರು ಮುಖ್ಯಮಂತ್ರಿ ಸ್ಥಾನದಿಂದ ಇಳಿದ ಬಳಿಕ ಲಿಂಗಾಯತರನ್ನು ನಿರ್ಲಕ್ಷಿಸಲಾಗುತ್ತಿದೆ, ಆ ಸಮುದಾಯದ ನಾಯಕರನ್ನು ಅವಮಾನಿಸಲಾಗುತ್ತಿದೆ ಎಂಬ ಆರೋಪದ ಮೂಲಕ ಕಾಂಗ್ರೆಸ್ ನಾಯಕರು ಲಿಂಗಾಯತ ಮತ ಚದುರಿಸುವ ಯತ್ನವನ್ನು ಆರಂಭಿಸಿದರು. ಶೆಟ್ಟರ್, ಸವದಿ ರಾಜೀನಾಮೆ ನೀಡಿದ್ದರಿಂದಾಗಿ ತಮ್ಮ ವಾದ ಸತ್ಯವೆಂದು ಬಿಂಬಿಸುವ ಅವಕಾಶವನ್ನು ಕಾಂಗ್ರೆಸ್ ನಾಯಕರಿಗೆ ಅನಾಯಾಸವಾಗಿ ಕಲ್ಪಿಸಿತು.

> **ಯಡಿಯೂರಪ್ಪ ನೇತೃತ್ವದಲ್ಲಿ ನಡೆದ ಲಿಂಗಾಯತ ನಾಯಕರ ಸಭೆಯಲ್ಲಿ, ಲಿಂಗಾಯತ ಮುಖ್ಯಮಂತ್ರಿ ಘೋಷಣೆ ಬಗ್ಗೆ ಯಾವುದೇ ನಿರ್ಣಯ ಆಗಿಲ್ಲ**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> **ಕಾಂಗ್ರೆಸ್ ಪಕ್ಷ ಜಗದೀಶ್ ಶೆಟ್ಟರ್ ಅವರನ್ನು ಜಾತಿ ಕಾರಣಕ್ಕೆ ಪಕ್ಷಕ್ಕೆ ಸೇರಿಸಿಕೊಂಡಿದೆಯೇ ಹೊರತು ಮುಖ್ಯಮಂತ್ರಿ ಮಾಡಲು ಅಲ್ಲ**
> **ಶೋಭಾ ಕರಂದ್ಲಾಜೆ,** ಕೇಂದ್ರ ಸಚಿವೆ

ಸಮುದಾಯವನ್ನು ಒಡೆಯಲು ಕಾಂಗ್ರೆಸ್ ಯತ್ನ: ಬೊಮ್ಮಾಯಿ

'ಕಾಂಗ್ರೆಸ್ ಪಕ್ಷ ಲಿಂಗಾಯತ ಸಮಾಜವನ್ನು ಒಡೆಯುವ ಕೆಲಸ ಮಾಡಿದೆ. ಆದರೆ, ನಾವು ಲಿಂಗಾಯತ ಸಮಾಜವೂ ಸೇರಿ ಎಲ್ಲ ಸಮುದಾಯಗಳಿಗೂ ನ್ಯಾಯ ಕೊಡುವ ಕೆಲಸವನ್ನು ಮಾಡಿದ್ದೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬೆಂಗಳೂರು ಮತ್ತು ಭಾಲ್ಕಿಯಲ್ಲಿ ಸುದ್ದಿಗಾರರ ಜತೆ ಪ್ರತ್ಯೇಕವಾಗಿ ಮಾತನಾಡಿದ ಅವರು, 'ಎಲ್ಲ ಸಮುದಾಯಗಳಿಗೂ ಬಿಜೆಪಿ ಆದ್ಯತೆ ನೀಡಿದೆ. ಈ ಬಾರಿ 68 ಕ್ಷೇತ್ರಗಳಲ್ಲಿ ಲಿಂಗಾಯತ ಸಮುದಾಯದವರಿಗೆ ಟಿಕೆಟ್ ನೀಡಲಾಗಿದೆ' ಎಂದು ಪ್ರತಿಪಾದಿಸಿದರು.

'ಯಡಿಯೂರಪ್ಪ ಅವರ ಮನೆಯಲ್ಲಿ ನಡೆದ ಲಿಂಗಾಯತ ಶಾಸಕರು, ಸಂಸದರ ಸಭೆಯಲ್ಲಿ ಸದ್ಯದ ರಾಜಕೀಯ ಸ್ಥಿತಿಗತಿಗಳ ಬಗ್ಗೆ ಮತ್ತು ಕಾಂಗ್ರೆಸ್ ಅಪಪ್ರಚಾರಗಳ ಬಗ್ಗೆ ಹೇಗೆ ತಿರುಗೇಟು ನೀಡಬೇಕು ಎಂಬ ಬಗ್ಗೆ ಚರ್ಚೆ ನಡೆಯಿತು' ಎಂದರು.

ಲಿಂಗಾಯತ ಮುಖ್ಯಮಂತ್ರಿ ಬಗ್ಗೆಯೂ ಕೆಲವರು ಸಲಹೆ ಕೊಟ್ಟಿದ್ದಾರೆ. ಸಭೆಯಲ್ಲಿ ಧರ್ಮೇಂದ್ರ ಪ್ರಧಾನ್ ಕೂಡಾ ಇದ್ದರು. ಸಭೆಯಲ್ಲಿ ವ್ಯಕ್ತವಾಗಿರುವ ಭಾವನೆಗಳನ್ನು ವರಿಷ್ಠರಿಗೆ ತಿಳಿಸುವುದಾಗಿ ಅವರು ಹೇಳಿದ್ದಾರೆ ಎಂದರು.

ಕಾಂಗ್ರೆಸ್‌ನದ್ದು ಲಿಂಗಾಯತ ವಿರೋಧಿ ನಡೆ: '50 ವರ್ಷದಲ್ಲಿ ಒಬ್ಬ ಲಿಂಗಾಯತನನ್ನೂ ಕಾಂಗ್ರೆಸ್ ಮುಖ್ಯಮಂತ್ರಿ ಮಾಡಿಲ್ಲ. ಈ ಮಧ್ಯೆ, ವೀರೇಂದ್ರ ಪಾಟೀಲರು ಒಂಬತ್ತು ತಿಂಗಳು ಮುಖ್ಯಮಂತ್ರಿಗಳಾಗಿದ್ದರು. ಅವರನ್ನೂ ಕಾಂಗ್ರೆಸ್ ಸರಿಯಾಗಿ ನಡೆಸಿಕೊಳ್ಳಲಿಲ್ಲ. ಮುಖ್ಯಮಂತ್ರಿ ಹುದ್ದೆಯಿಂದ ಅವರನ್ನು ತೆಗೆದುಹಾಕುವ ತೀರ್ಮಾನವನ್ನು ವಿಮಾನ ನಿಲ್ದಾಣದಲ್ಲಿಯೇ ಕೈಗೊಳ್ಳಲಾಯಿತು. ಕಾಂಗ್ರೆಸ್ ಪಕ್ಷವು ಲಿಂಗಾಯತ ಸಮಾಜದ ರಾಜಶೇಖರ ಮೂರ್ತಿ ಅವರನ್ನು ನಡೆಸಿಕೊಂಡ ರೀತಿಯೂ ಸರಿಯಲ್ಲ' ಎಂದರು.

'ಪ್ರತ್ಯೇಕ ಧರ್ಮದ ಹೆಸರಿನಲ್ಲಿ ವೀರಶೈವರು– ಲಿಂಗಾಯತರನ್ನು ಒಡೆಯಲು ಕಾಂಗ್ರೆಸ್ ಪ್ರಯತ್ನಿಸಿತ್ತು. ಮತ ಬ್ಯಾಂಕ್‌ಗಾಗಿ ಸಮುದಾಯವನ್ನು ಒಡೆಯಲು ಮುಂದಾಗಿದ್ದ ಧೋರಣೆಯನ್ನು ಜನ ಮರೆಯುವುದಿಲ್ಲ. ಕಾಂಗ್ರೆಸ್‌ನವರು ದಲಿತರು, ಹಿಂದುಳಿದವರು ಮತ್ತು ಲಿಂಗಾಯತರಿಗೆ ಮೋಸ ಮಾಡಿದ್ದಾರೆ' ಎಂದು ಬೊಮ್ಮಾಯಿ ಆರೋಪಿಸಿದರು.

ಶೆಟ್ಟರನ್ನು ಸಿ.ಎಂ. ಮಾಡಲಿ: ಸೋಮಣ್ಣ ಸವಾಲು

ಚಾಮರಾಜನಗರ: 'ಲಿಂಗಾಯತರ ಬಗ್ಗೆ ಚರ್ಚಿಸುತ್ತಿರುವ ಕಾಂಗ್ರೆಸ್‌ನವರು ಜಗದೀಶ ಶೆಟ್ಟರ್ ಅವರನ್ನು ಮುಖ್ಯಮಂತ್ರಿ ಮಾಡಲಿ' ಎಂದು ಸಚಿವ, ಚಾಮರಾಜನಗರ ಮತ್ತು ವರುಣ ಕ್ಷೇತ್ರಗಳ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಗುರುವಾರ ಸವಾಲು ಹಾಕಿದರು.

ಕ್ಷೇತ್ರದ ಶಿವಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, 'ವೀರಶೈವ–ಲಿಂಗಾಯತರನ್ನು ಮುಖ್ಯಮಂತ್ರಿ ಮಾಡುತ್ತೇವೆ ಎಂದು ಕಾಂಗ್ರೆಸ್ ಘೋಷಿಸಲಿ. ಶೆಟ್ಟರ್, ಸವದಿ ಅಂತಿದ್ದಾರಲ್ಲ, ಶೆಟ್ಟರ್ ಅವರನ್ನೇ ಮುಖ್ಯಮಂತ್ರಿ ಮಾಡಲಿ. ಲಿಂಗಾಯತರು ಸ್ವಾಭಿಮಾನಿಗಳು, ಬುದ್ಧಿವಂತರು ಮತ್ತು ಪ್ರಜ್ಞಾವಂತರು. ಅವರನ್ನು ಬ್ಲಾಕ್ ಮೇಲ್ ಮಾಡಲು ಹೊರಟರೆ ಕಾಂಗ್ರೆಸ್‌ಗೆ ನಿರಾಸೆಯಾಗುತ್ತದೆ' ಎಂದರು.

'ವೀರಶೈವ–ಲಿಂಗಾಯತ ಸಮುದಾಯದವರನ್ನು ಬಳಸಿ ಬಿಸಾಡುವ ತಂತ್ರಗಾರಿಕೆ ಬೇಡ. ವೀರೇಂದ್ರ ಪಾಟೀಲ ಅವರನ್ನು ತೆಗೆದವರು ಯಾರು? ರಾಜಶೇಖರ ಮೂರ್ತಿಯವರನ್ನು ಓಡಿಸಿದವರು ಯಾರು' ಎಂದು ಪ್ರಶ್ನಿಸಿದರು.

'ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಸಂತೋಷ್ 24x7 ಸಕ್ರಿಯ ಕಾರ್ಯಕರ್ತರು. ಅವರಿಗೆ ಆಸೆ–ಆಕಾಂಕ್ಷೆಗಳಿಲ್ಲ. ಇಡೀ ರಾಷ್ಟ್ರದಲ್ಲಿ ಪಕ್ಷ ಸಂಘಟಿಸುತ್ತಿದ್ದಾರೆ. ಅವರು ನಮ್ಮ ರಾಜ್ಯದವರೆಂದು ಹೆಮ್ಮೆ ಪಡಬೇಕು' ಎಂದರು.

ಮುಖ್ಯಮಂತ್ರಿ ಅಭ್ಯರ್ಥಿ ಯಾರು?: ಪ್ರತಿಕ್ರಿಯೆಗೆ ಅರುಣ್ ಸಿಂಗ್ ನಿರಾಕರಣೆ

ಬೆಳಗಾವಿ: 'ಈ ಬಾರಿ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯ ಮುಖ್ಯಮಂತ್ರಿ ಅಭ್ಯರ್ಥಿ ಯಾರು' ಎಂಬ ಪ್ರಶ್ನೆಗೆ, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ ಸ್ಪಷ್ಟವಾಗಿ ಉತ್ತರಿಸಲು ನಿರಾಕರಿಸಿದರು.

ಇಲ್ಲಿ ಗುರುವಾರ ಸಂಜೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿ.ಎಸ್.ಯಡಿಯೂರಪ್ಪ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಾಧನೆಗಳೊಂದಿಗೆ ಜನರ ಮುಂದೆ ಹೋಗುತ್ತಿದ್ದೇವೆ. ಬೊಮ್ಮಾಯಿ ಅವರನ್ನು ರಾಜ್ಯದ ಪ್ರಚಾರ ಸಮಿತಿ ಅಧ್ಯಕ್ಷರಾಗಿ ನೇಮಿಸಲಾಗಿದೆ. ಅವರ ನೇತೃತ್ವದಲ್ಲಿ ಚುನಾವಣೆ ಎದುರಿಸುತ್ತಿದ್ದು, 150 ಸ್ಥಾನ ಗೆಲ್ಲುವ ವಿಶ್ವಾಸವಿದೆ. ರಾಜ್ಯದಲ್ಲಿ ಕಾಂಗ್ರೆಸ್ ಐತಿಹಾಸಿಕವಾಗಿ ಸೋಲು ಕಾಣಲಿದೆ' ಎಂದು ಟೀಕಿಸಿದರು.

ಇದಕ್ಕೂ ಮುನ್ನ ಬೆಳಿಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದಾಗ ಅವರು, 'ಬಿಜೆಪಿಯಲ್ಲಿ ಲಿಂಗಾಯತರೇ ಮುಖ್ಯಮಂತ್ರಿಯಾಗುತ್ತಾರಾ?' ಎಂಬ ಪ್ರಶ್ನೆಗೆ, 'ಯಾರಾಗ್ತಾರೆ ಎಂಬುದು ಎಲ್ಲರಿಗೂ ಗೊತ್ತು. ಇದು ಸಾರ್ವತ್ರಿಕ ಸತ್ಯ' ಎಂದರು. ಮಾಧ್ಯಮದವರು ಮರುಪ್ರಶ್ನಿಸಿದಾಗ, 'ಲಿಂಗಾಯತರೇ ಆಗುತ್ತಾರೆ. ನೀವು ನೋಡಿ' ಎಂದು ಉತ್ತರಿಸಿದರು.



ಹಾಸನದಲ್ಲಿ ಜೆಡಿಎಸ್ ಅಭ್ಯರ್ಥಿ ಸ್ವರೂಪ್ ಪ್ರಕಾಶ್ ಪರವಾಗಿ ಎಚ್‌.ಡಿ. ದೇವೇಗೌಡ ಅವರು ಗುರುವಾರ ರೋಡ್ ಶೋ ನಡೆಸಿದರು. ಭವಾನಿ ರೇವಣ್ಣ, ಸಂಸದ ಪ್ರಜ್ವಲ್ ರೇವಣ್ಣ, ಶಾಸಕರಾದ ಎಚ್‌.ಡಿ. ರೇವಣ್ಣ, ಎಚ್‌.ಡಿ. ಕುಮಾರಸ್ವಾಮಿ, ಸೂರಜ್ ರೇವಣ್ಣ ಇದ್ದರು

ಹಾಸನ, ಅರಸೀಕೆರೆ ಅಭ್ಯರ್ಥಿ ಪರ ಮತಯಾಚನೆ

ಗೌಡರ ಕುಟುಂಬದ ರೋಡ್ ಶೋ

ಪ್ರಜಾವಾಣಿ ವಾರ್ತೆ

ಹಾಸನ: ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡರ ನೇತೃತ್ವದಲ್ಲಿ ಜಿಲ್ಲೆಯ ಹಾಸನ ಮತ್ತು ಅರಸೀಕೆರೆ ವಿಧಾನಸಭಾ ಕ್ಷೇತ್ರಗಳ ಜೆಡಿಎಸ್ ಅಭ್ಯರ್ಥಿ ಪರ ಗುರುವಾರ ಇಡೀ ಕುಟುಂಬವೇ ರೋಡ್ ಶೋ ನಡೆಸುವ ಮೂಲಕ ಮತಯಾಚನೆ ಮಾಡಿತು.

ಅರಸೀಕೆರೆಯಲ್ಲಿ ಮಾತನಾಡಿದ ದೇವೇಗೌಡ, 'ಶಿವಲಿಂಗೇಗೌಡರನ್ನು ಕರೆತಂದು ಸತತ ಮೂರು ಬಾರಿ ಶಾಸಕರನ್ನಾಗಿ ಆಯ್ಕೆ ಮಾಡಲಾಯಿತು. ಆದರೆ, ಅವರು ನನಗೆ ಅವಮಾನ ಮಾಡಿದರು. ನನ್ನ ಮುಖ ನೋಡಿ ಯಾರೂ ಮತ ಹಾಕಲ್ಲ ಎಂದು ಹೇಳಿದ್ದು ನೋವುಂಟು ಮಾಡಿದೆ. ಅದಕ್ಕಾಗಿ ಈ ಬಾರಿ ಜೆಡಿಎಸ್ ಅಭ್ಯರ್ಥಿ ಎನ್.ಆರ್. ಸಂತೋಷ್ ಅವರನ್ನು ಗೆಲ್ಲಿಸಬೇಕು' ಎಂದು ಮನವಿ ಮಾಡಿದರು.

'ಹಾಸನ ಜಿಲ್ಲೆ ಜೆಡಿಎಸ್‌ನ ತವರೂರು. ಅರಸೀಕೆರೆ, ಹಾಸನ ಸೇರಿದಂತೆ ಜಿಲ್ಲೆಯ ಎಲ್ಲ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲ್ಲಬೇಕು' ಎಂದರು.

ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಮಾತನಾಡಿ, 'ದೇವೇಗೌಡರ ಕುಟುಂಬ ಎಂದರೆ ಹುಡುಗಾಟ ಅಲ್ಲ. ನಮ್ಮ ಅಭ್ಯರ್ಥಿಯನ್ನು ಗೆಲ್ಲಿಸಲು ಕುಟುಂಬದವರೆಲ್ಲ ಒಂದಾಗಿದ್ದೇವೆ' ಎಂದರು.

ಭವಾನಿ ರೇವಣ್ಣ ಮಾತನಾಡಿ, 'ಐದು ವರ್ಷಗಳಿಂದ ಜನ ಸಾಕಷ್ಟು ತೊಂದರೆ ಅನುಭವಿಸಿದ್ದು, ಜೆಡಿಎಸ್ ಗೆಲುವಿಗೆ ಪ್ರತಿಜ್ಞೆ ಮಾಡಿದ್ದಾರೆ. ಈ ಬಾರಿ ಹಾಸನ ಸೇರಿದಂತೆ ಏಳು ಕ್ಷೇತ್ರಗಳಲ್ಲಿ ಪಕ್ಷದ ಗೆಲುವು ನಿಶ್ಚಿತ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸ್ವಂತ ಬಲದಿಂದ ಗೆಲ್ಲುತ್ತೇನೆ– ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಸ್ಪರ್ಧಿಸುತ್ತಿರುವ ಶಿಗ್ಗಾವಿ ಕ್ಷೇತ್ರದಲ್ಲಿ ಯಾರು, ಯಾರ ಜತೆಗಾದರೂ ಹೊಂದಾಣಿಕೆ ಮಾಡಿಕೊಳ್ಳಲಿ. ನನಗೆ ಭಯ ಇಲ್ಲ. ನಾನು ನನ್ನ ಸ್ವಂತ ಬಲದಿಂದ ಗೆಲ್ಲುತ್ತೇನೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು.

'ವರುಣ ಕ್ಷೇತ್ರದಲ್ಲಿ ಬಿಜೆಪಿ– ಜೆಡಿಎಸ್ ಒಳಮೈತ್ರಿ ಮಾಡಿಕೊಂಡಿದೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾಡಿರುವ ಆರೋಪಕ್ಕೆ ಗುರುವಾರ ಪ್ರತಿಕ್ರಿಯಿಸಿದ ಬೊಮ್ಮಾಯಿ, 'ಯಾರೂ ಸೇರಿಕೊಂಡರೂ ಸಿದ್ದರಾಮಯ್ಯ ಅವರಿಗೆ ಸ್ವಂತ ಬಲ ಇದ್ದರೆ, ಅವರು ಗೆಲ್ಲುತ್ತಾರೆ. ಇಲ್ಲದಿದ್ದರೆ ಗೆಲ್ಲುವುದಿಲ್ಲ' ಎಂದರು.

'ಒಳ ಮೈತ್ರಿ, ಹೊರ ಮೈತ್ರಿ ಎಂದು ಮಾತನಾಡುತ್ತಿರುವ ಸಿದ್ದರಾಮಯ್ಯ ಅವರಿಗೆ ಭಯ ಹುಟ್ಟಿಕೊಂಡಿದೆ. ಎಲ್ಲ ಪಕ್ಷಗಳ ಅಭ್ಯರ್ಥಿಗಳು ಹೊಂದಾಣಿಕೆ ಮಾಡಿಕೊಂಡಿದ್ದಾರೆ ಎಂಬ ಭಯವಿದೆ. ಆದರೆ, ಎಲ್ಲ ಅಭ್ಯರ್ಥಿಗಳು ತಾವೇ ಗೆಲ್ಲಬೇಕೆಂದು ಚುನಾವಣೆಗೆ ನಿಲ್ಲುತ್ತಾರೆ' ಎಂದರು.

'ನನ್ನ ಕ್ಷೇತ್ರ ಶಿಗ್ಗಾವಿಯಲ್ಲೂ ಕಾಂಗ್ರೆಸ್ ಮತ್ತು ಜೆಡಿಎಸ್‌ನವರು ಒಂದಾಗಿದ್ದಾರೆ. ಇದರಿಂದ ನನಗೇನೂ ಭಯವಿಲ್ಲ. ಕಾಂಗ್ರೆಸ್ ಅಭ್ಯರ್ಥಿ ಬದಲಾಯಿಸಿದ್ದು ನನ್ನ ಮೇಲೆ ವ್ಯತ್ಯಾಸ ಆಗುವುದಿಲ್ಲ. ಕಾಂಗ್ರೆಸ್‌ನ ಒಬ್ಬರಿಗೆ ಜೆಡಿಎಸ್ ಟಿಕೆಟ್ ನೀಡಿದೆ. ಅದನ್ನು ನಾನು ಕಾಂಗ್ರೆಸ್– ಜೆಡಿಎಸ್ ಮೈತ್ರಿ ಎಂದು ಹೇಳಲಾ' ಎಂದು ಪ್ರಶ್ನಿಸಿದರು.



ಮೆರವಣಿಗೆ

ಬೆಂಗಳೂರಿನ ಯಶವಂತಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್. ಬಾಲರಾಜ್ ಗೌಡ ಅವರು ಗುರುವಾರ ನಾಮಪತ್ರ ಸಲ್ಲಿಸಿದ್ದು, ಈ ಸಂಬಂಧ ಹಮ್ಮಿಕೊಂಡಿದ್ದ ಮೆರವಣಿಗೆಯಲ್ಲಿ ಕಾಂಗ್ರೆಸ್ ಧ್ವಜ ಹಿಡಿದಿದ್ದ ಗೊಂಬೆ ವೇಷಧಾರಿಗಳು ಗಮನ ಸೆಳೆದವು

ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಕೊತ್ತೂರು ಒತ್ತಡಕ್ಕೆ ಮಣಿದ ಕಾಂಗ್ರೆಸ್ • ಟಿಕೆಟ್ ಪ್ರಕಟಿಸಿದ 12 ಗಂಟೆಯೊಳಗೆ ಅಭ್ಯರ್ಥಿ ಬದಲು

ಮುಳಬಾಗಿಲು 'ಕೈ' ಅಭ್ಯರ್ಥಿ ದಿಢೀರ್ ಬದಲು!

ಪ್ರಜಾವಾಣಿ ವಾರ್ತೆ

ಕೋಲಾರ: ಮಾಜಿ ಶಾಸಕ ಹಾಗೂ ಕೋಲಾರ ಕಾಂಗ್ರೆಸ್ ಅಭ್ಯರ್ಥಿ ಕೊತ್ತೂರು ಮಂಜುನಾಥ್ ಒತ್ತಡಕ್ಕೆ ಮಣಿದ ಕಾಂಗ್ರೆಸ್ ಹೈಕಮಾಂಡ್ ಮುಳಬಾಗಿಲು ಮೀಸಲು ಕ್ಷೇತ್ರದ ಟಿಕೆಟ್ ಪ್ರಕಟಿಸಿದ 12 ಗಂಟೆಯೊಳಗೆ ಅಭ್ಯರ್ಥಿಯನ್ನು ದಿಢೀರ್ ಬದಲಾಯಿಸಿದೆ.

ಬುಧವಾರ ರಾತ್ರಿ 8.30ರ ಸುಮಾರಿಗೆ ಎಐಸಿಸಿ ಪ್ರಕಟಿಸಿದ ಐದನೇ ಪಟ್ಟಿಯಲ್ಲಿ ಡಾ.ಬಿ.ಸಿ. ಮುದ್ದು ಗಂಗಾಧರ್ ಎಂಬುವರಿಗೆ ಕಾಂಗ್ರೆಸ್ ಟಿಕೆಟ್ ಘೋಷಿಸಲಾಗಿತ್ತು. 'ಬಿ' ಫಾರಂ ಕೂಡ ನೀಡಲಾಗಿತ್ತು.

ಇದರಿಂದ ಕೋಪಗೊಂಡ ಕೊತ್ತೂರು ಮಂಜುನಾಥ್, 'ಮುದ್ದು ಗಂಗಾಧರ್ ಯಾರು ಎಂಬುವುದೇ ಕ್ಷೇತ್ರದ ಜನರಿಗೆ ಗೊತ್ತಿಲ್ಲ. ಅಭ್ಯರ್ಥಿ ಬದಲಾಯಿಸದಿದ್ದರೆ ಕೋಲಾರದಲ್ಲಿ ನಾಮಪತ್ರ ಸಲ್ಲಿಸುವುದಿಲ್ಲ' ಎಂದು ಪಟ್ಟು ಹಿಡಿದರು ಎಂದು ಗೊತ್ತಾಗಿದೆ.

ಇದರ ಜೊತೆಗೆ ಮುಳಬಾಗಿಲು ಕ್ಷೇತ್ರದಲ್ಲೂ ಸ್ಥಳೀಯ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರಿಂದಲೂ ಡಾ.ಮುದ್ದು ಗಂಗಾಧರ್ ಅಭ್ಯರ್ಥಿಯಾಗುವುದಕ್ಕೆ ಭಾರಿ ವಿರೋಧ ವ್ಯಕ್ತವಾಯಿತು.



ಆದಿನಾರಾಯಣ



ಕೊತ್ತೂರು ಮಂಜುನಾಥ್



ಡಾ.ಮುದ್ದು ಗಂಗಾಧರ್

ಹೀಗಾಗಿ, ಡಾ.ಮುದ್ದು ಗಂಗಾಧರ್ ಬದಲಿಗೆ ಬೋವಿ ಸಮುದಾಯದ ಆದಿನಾರಾಯಣ ಎಂಬುವರಿಗೆ ಮುಳಬಾಗಿಲು ಟಿಕೆಟ್ ಘೋಷಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ 'ಬಿ' ಫಾರಂ ನೀಡಿದರು. ಬಾಗೇಪಲ್ಲಿಯ ಆದಿನಾರಾಯಣ ಬೆಂಗಳೂರಿನಲ್ಲಿ ನೆಲೆಸಿದ್ದು, ಕೊತ್ತೂರು ಮಂಜುನಾಥ ಅವರ ಆಪ್ತರಾಗಿದ್ದಾರೆ.

ಗುರುವಾರ ಕೋಲಾರದಲ್ಲಿ ನಾಮಪತ್ರ ಸಲ್ಲಿಸಿದ ಕೊತ್ತೂರು, ತಕ್ಷಣವೇ ಮುಳಬಾಗಿಲಿಗೆ ತೆರಳಿ ಆದಿನಾರಾಯಣ ನಾಮಪತ್ರ ಸಲ್ಲಿಕೆಗೆ ಸಹಕರಿಸಿದರು. ಆಗ ಉಮೇದುವಾರಿಕೆ ಸಲ್ಲಿಕೆ ಪ್ರಕ್ರಿಯೆ ಕೊನೆಗೊಳ್ಳಲು ಕೇವಲ ಒಂದು ತಾಸು ಬಾಕಿ ಇತ್ತು. ಕೊತ್ತೂರು ಭಾವುಕರಾಗಿ ಅಭ್ಯರ್ಥಿ ಹಾಗೂ ಸ್ಥಳೀಯ ಮುಖಂಡರನ್ನು ತಬ್ಬಿಕೊಂಡು ಅತ್ತರು.

> **ಮುಳಬಾಗಿಲು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಮುದ್ದು ಗಂಗಾಧರ್ ಸ್ವಯಂ ಪ್ರೇರಣೆಯಿಂದ ಹಿಂದೆ ಸರಿದರು. ಆದಿನಾರಾಯಣ ಅವರಿಗೆ 'ಬಿ' ಫಾರಂ ನೀಡಿದ್ದು, ನಾಮಪತ್ರ ಸಲ್ಲಿಸಿದ್ದಾರೆ**
> **ಸಿ.ಲಕ್ಷ್ಮಿನಾರಾಯಣ,** ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ

ಮುಳಬಾಗಿಲು ಅಭ್ಯರ್ಥಿ ದಿಢೀರ್ ಬದಲಾವಣೆ ಬಗ್ಗೆ 'ಪ್ರಜಾವಾಣಿ' ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಈ ಹಿಂದೆ ಟಿಕೆಟ್ ಪಡೆದಿದ್ದ ಮನುಷ್ಯ ಯಾರೆಂಬುದೇ ಗೊತ್ತಿಲ್ಲವೆಂದು ಹೇಳಿದ್ದೆವು. ಅದಕ್ಕೆ ಬದಲಾವಣೆ ಮಾಡಿ ಕೊಟ್ಟಿದ್ದಾರೆ' ಎಂದರು.

ಆರಂಭದಲ್ಲಿ ತಮ್ಮನ ಪತ್ನಿಗೆ ಟಿಕೆಟ್ ಕೊಡಬೇಕೆಂದು ಕೊತ್ತೂರು ಪಟ್ಟು ಹಿಡಿದಿದ್ದರು. ಅದಕ್ಕಾಗಿ ಕೋಲಾರ ಕ್ಷೇತ್ರದ ಟಿಕೆಟ್ ತ್ಯಾಗ ಮಾಡಲು ಸಿದ್ಧರಾಗಿದ್ದರು. ಆದರೆ, ಒಂದೇ ಕುಟುಂಬಕ್ಕೆ ಕೋಲಾರ ಹಾಗೂ ಮುಳಬಾಗಿಲು ಎರಡೂ ಕಡೆ ಕೊಡಲು ಸಾಧ್ಯವಿಲ್ಲವೆಂದು ಹೈಕಮಾಂಡ್ ಹೇಳಿತ್ತು.

ಬೆಂಗಳೂರಿನಲ್ಲಿ ವರಿಷ್ಠರ ಸಮ್ಮುಖದಲ್ಲಿ ಮಂಗಳವಾರ ಮಧ್ಯರಾತ್ರಿವರೆಗೆ ನಡೆದ ಸಭೆಯಲ್ಲಿ ಅದಕ್ಕೆ ಒಪ್ಪಿದ್ದ ಕೊತ್ತೂರು, ತಮ್ಮ ಆಪ್ತರಿಗಾದರೂ ಟಿಕೆಟ್ ಕೊಡಿ ಎಂದು ಕೋರಿದ್ದರು. ಮಾರನೇ ದಿನ ಪ್ರಕಟವಾದ ಪಟ್ಟಿಯಲ್ಲಿ ಬೇರೆಯವರ ಹೆಸರು ಇತ್ತು.

ಚಿಕ್ಕಬಳ್ಳಾಪುರ ಜಿಲ್ಲೆಯ ತಿಪ್ಪೇನಹಳ್ಳಿ ಗ್ರಾಮದ ಡಾ.ಮುದ್ದು ಗಂಗಾಧರ್, ಬೆಂಗಳೂರಿನಲ್ಲಿ ದಂತ ವೈದ್ಯರಾಗಿದ್ದಾರೆ. ಡಾ.ಜಿ.ಪರಮೇಶ್ವರ ಅವರ ಬೆಂಬಲಿಗ ಎಂಬುದು ಗೊತ್ತಾಗಿದೆ.

ಆದಿನಾರಾಯಣ ನಾಮಪತ್ರ ಸಲ್ಲಿಸುವಾಗ ಜೊತೆಗಿದ್ದ ಮುದ್ದು ಗಂಗಾಧರ್ ಅವರು ಪಕ್ಷದ ಅಧಿಕೃತ ಅಭ್ಯರ್ಥಿಗೆ ಬೆಂಬಲ ನೀಡುವುದಾಗಿ ಹೇಳಿದ್ದಾರೆ.

ಆದಿನಾರಾಯಣ 2013ರಲ್ಲಿ ಮುಳಬಾಗಿಲು ಕ್ಷೇತ್ರದ ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ, ಮುನಿ ಆಂಜಿನಪ್ಪ ಎಂಬುವರಿಗೆ ಟಿಕೆಟ್ ಸಿಕ್ಕಿದ್ದರಿಂದ ಕೊತ್ತೂರು ಮಂಜುನಾಥ್ ಬಣ ಸೇರ್ಪಡೆಯಾದರು. 10 ವರ್ಷಗಳಿಂದ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು.

ಮುಳಬಾಗಿಲು ಜೊತೆಗೆ ದೇವನಹಳ್ಳಿ ಮೀಸಲು ಕ್ಷೇತ್ರದ ಟಿಕೆಟ್‌ಗೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎ.ಸಿ. ಶ್ರೀನಿವಾಸ್ ಕೂಡ ಆಕಾಂಕ್ಷಿಯಾಗಿದ್ದರು. ಟಿಕೆಟ್ ಸಿಗದೆ ಮುನಿಸಿಕೊಂಡಿದ್ದ ಅವರಿಗೆ ಕೊನೆಗೆ ಬೆಂಗಳೂರಿನ ಪುಲಿಕೇಶಿನಗರದ ಟಿಕೆಟ್ ಕೊಡಲಾಗಿದೆ.

'ಎಐಸಿಸಿ ಸೂಚನೆ ಮೇರೆಗೆ ನಾಮಪತ್ರ'

ಪ್ರಜಾವಾಣಿ ವಾರ್ತೆ

ರಾಮನಗರ: 'ಎಐಸಿಸಿ ಸೂಚನೆ ಮೇರೆಗೆ ಕನಕಪುರದಲ್ಲಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದೇನೆ' ಎಂದು ಸಂಸದ ಡಿ.ಕೆ. ಸುರೇಶ್ ಹೇಳಿದರು.


ನಾಮಪತ್ರ ಸಲ್ಲಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಶಿವಕುಮಾರ್ ನಾಮಪತ್ರ ಕ್ರಮಬದ್ಧವಾಗಿದೆ. ಆದರೆ ಕುತಂತ್ರ ನಡೆಸಿ ಅವರ ನಾಮಪತ್ರ ತಿರಸ್ಕೃತ ಆಗಲೂ ಬಹುದು. ಆ ಮಾಹಿತಿ ಇರುವ ಕಾರಣ ನಾನು ಸಹ ಕಾಂಗ್ರೆಸ್ ಅಭ್ಯರ್ಥಿಯಾಗಿ 'ಬಿ' ಫಾರಂ ಸಹಿತ ನಾಮಪತ್ರ ಸಲ್ಲಿಸಿದ್ದೇನೆ' ಎಂದರು.

'ಚುನಾವಣಾ ಆಯೋಗದ ಅಧಿಕಾರಿಗಳು ಸಹ ಸರ್ಕಾರಿ ಅಧಿಕಾರಿಗಳೇ ಆಗಿದ್ದಾರೆ. ಅವರು ಸರ್ಕಾರದ ಸೂಚನೆಯಂತೆ ಏನು ಬೇಕಾದರೂ ಮಾಡಬಹುದು. ಹೀಗಾಗಿ ನಾವು ಸಹ ಎಚ್ಚರಿಕೆ ಇಟ್ಟಿದ್ದೇವೆ. ಮುಂದಿನ ಬೆಳವಣಿಗೆಗಳನ್ನು ನೀವೇ ಕಾದು ನೋಡಿ' ಎಂದರು.

ಬಿಜೆಪಿ ಕನಕಪುರದಲ್ಲಿ ಜನಬೆಂಬಲ ಗಳಿಸಿ ಗೆಲ್ಲಲು ಸಾಧ್ಯವಿಲ್ಲ. ಇಂತಹ ಸಂದರ್ಭದಲ್ಲಿ ವಾಮಮಾರ್ಗ ಹಿಡಿಯಲು ಮುಂದಾಗಿದೆ. ಬಿಜೆಪಿ ವಿರೋಧ ಪಕ್ಷಗಳ ಮೇಲೆ ಯಾವ್ಯಾವ ಸಂದರ್ಭದಲ್ಲಿ ಏನೇನು ಮಾಡುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ ಎಂದರು.

ಐ.ಟಿ. ನೋಟಿಸ್: 'ಐದು ದಿನದ ಹಿಂದೆ ಆದಾಯ ತೆರಿಗೆ ಇಲಾಖೆ ಹೊಸ ನೋಟಿಸ್ ನೀಡಿದ್ದು, ಚೆನ್ನೈನಲ್ಲಿ ವಿಚಾರಣೆಗೆ ಖುದ್ದು ಹಾಜರಾಗುವಂತೆ ನಮಗೆ ಸೂಚಿಸಿದೆ. ಸದ್ಯ ಚುನಾವಣೆ ಇದ್ದು, ಪಕ್ಷ ಜವಾಬ್ದಾರಿ ನೀಡಿದೆ. ಹೀಗಾಗಿ ಖುದ್ದು ಹಾಜರಾಗಲು ಸಾಧ್ಯವಿಲ್ಲ ಎಂದು ಹೇಳಿದ್ದೇವೆ. ಬಿಜೆಪಿಯು ಅಧಿಕಾರ ದುರುಪಯೋಗಪಡಿಸಿಕೊಂಡು ಏನು ಬೇಕಾದರೂ ಮಾಡಬಹುದು' ಎಂದು ಅವರು ಆರೋಪಿಸಿದರು.

ಕ್ಷೇತ್ರ	ಕನಕಪುರ
ಅಭ್ಯರ್ಥಿ ಹೆಸರು	ಡಿ.ಕೆ. ಸುರೇಶ್
ಪಕ್ಷ	ಕಾಂಗ್ರೆಸ್
ಅಭ್ಯರ್ಥಿಯ ಕುಟುಂಬದ ಒಟ್ಟು ಆಸ್ತಿ	₹353.7 ಕೋಟಿ
ಅಪರಾಧ ಪ್ರಕರಣ	10
ಶಿಕ್ಷಣ	ದ್ವಿತೀಯ ಪಿ.ಯು.
ಚರಾಸ್ತಿ	₹55.23 ಕೋಟಿ
ಸ್ಥಿರಾಸ್ತಿ	₹298.47 ಕೋಟಿ
ಎಷ್ಟು ಹೆಚ್ಚಳ	₹15 ಕೋಟಿ
ಅಭ್ಯರ್ಥಿಯ ಹೆಸರಿನಲ್ಲಿರುವ ಆಸ್ತಿ	₹353.70 ಕೋಟಿ
ಪತ್ನಿ ಹೆಸರಿನಲ್ಲಿರುವ ಆಸ್ತಿ	ಇಲ್ಲ
ಮಕ್ಕಳ ಹೆಸರಿನಲ್ಲಿರುವ ಆಸ್ತಿ	ಇಲ್ಲ
ಕುಟುಂಬದ ಒಟ್ಟು ಸಾಲ	₹88.30 ಕೋಟಿ



ಮುರುಗೇಶ ನಿರಾಣಿ ಸಹೋದರ ನಾಮಪತ್ರ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಜಿಲ್ಲೆಯ ಬೀಳಗಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮುರುಗೇಶ ನಿರಾಣಿ ಅವರ ಸಹೋದರ ಸಂಗಮೇಶ ನಿರಾಣಿ ಗುರುವಾರ ನಾಮಪತ್ರ ಸಲ್ಲಿಸಿದರು.

'ಯಾವುದೇ ತೆರಿಗೆ ಕಟ್ಟುವುದು ಬಾಕಿ ಇರುವುದಿಲ್ಲ ಎಂದು ಸಚಿವ ನಿರಾಣಿ ಅಫಿಡವಿಟ್‌ನಲ್ಲಿ ಘೋಷಿಸಿದ್ದಾರೆ. ಆದರೆ, ಲೋಕಾಯುಕ್ತದಲ್ಲಿ ನಿರಾಣಿ ಅವರ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ಮುಧೋಳದ ಸಕ್ಕರೆ ಕಾರ್ಖಾನೆಯ ತೆರಿಗೆಯನ್ನು ನಗರಸಭೆ, ಗ್ರಾಮ ಪಂಚಾಯ್ತಿಗೆ ಕಟ್ಟಿಲ್ಲ ಎಂದು ದೂರು ದಾಖಲಾಗಿದೆ. ಈ ಬಗ್ಗೆ ಶುಕ್ರವಾರ ಚುನಾವಣಾಧಿಕಾರಿಗೆ ದೂರು ಸಲ್ಲಿಸಲಾಗುವುದು' ಎಂದು ರೈತರ ಸಂಘದ ಬೆಂಬಲಿತ ಅಭ್ಯರ್ಥಿ ಯಲ್ಲಪ್ಪ ಹೆಗಡೆ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಆಕ್ಷೇಪ ವ್ಯಕ್ತವಾದ ಹಿನ್ನೆಲೆಯಲ್ಲಿ ಮಂಜಾಗ್ರತಾ ಕ್ರಮವಾಗಿ ಸಂಗಮೇಶ ನಿರಾಣಿ ಕೂಡ ನಾಮಪತ್ರ ಸಲ್ಲಿಸಿದ್ದಾರೆ ಎನ್ನಲಾಗುತ್ತಿದೆ. ಈ ಕುರಿತು ಪ್ರತಿಕ್ರಿಯೆಗೆ ಸಚಿವ ನಿರಾಣಿ ಸಂಪರ್ಕಕ್ಕೆ ಸಿಗಲಿಲ್ಲ.

ಸಂಕ್ಷಿಪ್ತ ಸುದ್ದಿ

ಬಾವ, ಮಾಲಕರಡ್ಡಿಗೆ ಜೆಡಿಎಸ್ ಟಿಕೆಟ್

ಬೆಂಗಳೂರು: ನಾಮಪತ್ರ ಸಲ್ಲಿಕೆಯ ಕೊನೆಯ ದಿನ 13 ಅಭ್ಯರ್ಥಿಗಳ ನಾಲ್ಕನೇ ಪಟ್ಟಿ ಬಿಡುಗಡೆ ಮಾಡಿದ ಜೆಡಿಎಸ್, ಕೊನೆ ಕ್ಷಣದಲ್ಲಿ ಕಾಂಗ್ರೆಸ್ ತೊರೆದು ಬಂದ ಮೊಹಿಯುದ್ದೀನ್ ಬಾವ ಅವರಿಗೆ ಮಂಗಳೂರು ನಗರ ಉತ್ತರ ಕ್ಷೇತ್ರದ ಟಿಕೆಟ್ ನೀಡಿದೆ.

ಬಿಜೆಪಿ ತೊರೆದು ಬಂದ ಮಾಜಿ ಸಚಿವ ಎ.ಬಿ.ಮಾಲಕರಡ್ಡಿ ಅವರಿಗೆ ಯಾದಗಿರಿ ಕ್ಷೇತ್ರದ ಟಿಕೆಟ್ ನೀಡಲಾಗಿದೆ. ಚನ್ನಬಸಪ್ಪ ಬಾಳಪ್ಪ ಗಿದ್ದಣ್ಣನವರ್ (ಗೋಕಾಕ), ಅಶ್ವಿನಿ ಸಿಂಗಯ್ಯ ಪೂಜೇರಾ (ಕಿತ್ತೂರು), ರವೂಫ್ ಪಟೇಲ್ (ಭಾಲ್ಕಿ), ಶಶಿಧರ್ ಚನ್ನಬಸಪ್ಪ ಯಲಿಗಾರ್ (ಶಿಗ್ಗಾವಿ), ಮಹದೇವಪ್ಪ (ಮೊಳಕಾಲ್ಮುರು), ಅನುರಾಧ (ಪುಲಕೇಶಿನಗರ), ಅಬ್ದುಲ್ ಜಫರ್ ಅಲಿ (ಶಿವಾಜಿ ನಗರ), ಮಂಜುನಾಥ್ ಗೌಡ (ಶಾಂತಿನಗರ), ಅಶ್ರಫ್ ಅಲಿ ಕುಂಞ (ಬೆಳ್ತಂಗಡಿ), ಅಲ್ತಾಫ್ ಕುಂಪಲ (ಮಂಗಳೂರು), ಪ್ರಕಾಶ್ ರಫಾಯಲ್ ಗೋಮ್ಸ್ (ಬಂಟ್ವಾಳ) ಅವರನ್ನು ಅಭ್ಯರ್ಥಿಗಳೆಂದು ಘೋಷಿಸಿದ್ದು, ಎಲ್ಲರೂ ಗುರುವಾರ ನಾಮಪತ್ರ ಸಲ್ಲಿಸಿದರು.

ಡಾ. ಚಂದ್ರು ಲಮಾಣಿ ನಾಮಪತ್ರ ಸಲ್ಲಿಕೆ

ಗದಗ: ಶಿರಹಟ್ಟಿ ಮೀಸಲು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ. ಚಂದ್ರು ಲಮಾಣಿ ಶಿರಹಟ್ಟಿಯಲ್ಲಿ ಗುರುವಾರ ನಾಮಪತ್ರ ಸಲ್ಲಿಸಿದರು. ವಿಧಾನ ಪರಿಷತ್ ಸದಸ್ಯ ಪ್ರದೀಪ್ ಶೆಟ್ಟರ್ ಜತೆಗಿದ್ದರು

ಶಿರಹಟ್ಟಿ ತಾಲ್ಲೂಕು ಆಸ್ಪತ್ರೆಯಲ್ಲಿ ತಜ್ಞ ವೈದ್ಯರಾಗಿದ್ದ ಡಾ. ಚಂದ್ರು ಲಮಾಣಿ ಮೇಲೆ ಲೋಕಾಯುಕ್ತ ಪ್ರಕರಣವಿದೆ. ಅದರಿಂದ ಪಾರಾಗಲು ಅವರು 2021 ಆಗಸ್ಟ್ 31ರಂದು ವೈದ್ಯ ವೃತ್ತಿಗೆ ರಾಜೀನಾಮೆ ನೀಡಿದ್ದರು. ಆದರೆ, ಪ್ರಕರಣ ವಿಚಾರಣೆ ಹಂತದಲ್ಲಿದ್ದ ಕಾರಣ ಅವರ ರಾಜೀನಾಮೆ ಅಂಗೀಕಾರಗೊಳ್ಳದೇ ಚುನಾವಣೆಯಲ್ಲಿ ಸ್ಪರ್ಧಿಸುವ ಅವಕಾಶದಿಂದ ವಂಚಿತರಾಗುವ ಭೀತಿ ಎದುರಾಗಿತ್ತು.

ಕರ್ನಾಟಕ ಆಡಳಿತ ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿ, ಷರತ್ತುಗಳಿಗೆ ಬದ್ಧಗೊಳಿಸಿ ರಾಜೀನಾಮೆ ಅಂಗೀಕರಿಸುವಂತೆ ಮನವಿ ಮಾಡಿದ್ದರು. ಇವರ ಅರ್ಜಿ ಪುರಸ್ಕರಿಸಿದ ನ್ಯಾಯಮಂಡಳಿಯು ರಾಜೀನಾಮೆ ಅಂಗೀಕರಿಸುವಂತೆ ಆದೇಶಿಸಿತ್ತು. ಅದರಂತೆ, ಆರೋಗ್ಯ ಇಲಾಖೆಯು ಏ.19ರಂದು 2021 ಆಗಸ್ಟ್ 31ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ರಾಜೀನಾಮೆ ಅಂಗೀಕರಿಸಿ ಆದೇಶಿಸಿತ್ತು.


ಮಂಡ್ಯ ಜೆಡಿಎಸ್ ಬಂಡಾಯ: ಮೂವರಿಂದ ನಾಮಪತ್ರ

ಮಂಡ್ಯ: ಶಾಸಕ ಸ್ಥಾನಕ್ಕೆ ರಾಜೀನಾಮೆ ಘೋಷಿಸಿ ಜೆಡಿಎಸ್ ವಿರುದ್ಧ ಬಂಡಾಯ ಸಾರಿರುವ ಎಂ.ಶ್ರೀನಿವಾಸ್ ಈಗ 'ಸ್ವಾಭಿಮಾನಿ ಪಡೆ'ಯ ನಾಯಕರಾಗಿದ್ದಾರೆ. ಅವರ ನೇತೃತ್ವದಲ್ಲಿ ಗುರುವಾರ ಮೂವರು ಪಕ್ಷೇತರ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದ್ದಾರೆ.

ಶ್ರೀನಿವಾಸ್ ಅಳಿಯ ಎಚ್.ಎನ್.ಯೋಗೇಶ್, ದಿವಂಗತ ಕೆ.ವಿ. ಶಂಕರಗೌಡ ಅವರ ಮೊಮ್ಮಗ ಕೆ.ಎಸ್.ವಿಜಯ್ ಆನಂದ್, ಮುಖಂಡ ಮುದ್ದನಘಟ್ಟ ಮಹಾಲಿಂಗೇಗೌಡ ನಾಮಪತ್ರ ಸಲ್ಲಿಸಿದರು.

'ಮೊದಲ ಪಟ್ಟಿಯಲ್ಲಿ ಟಿಕೆಟ್ ಘೋಷಣೆ ಮಾಡಿ ಈಗ ಬೇರೆಯವರಿಗೆ ಬಿ.ಫಾರಂ ಕೊಟ್ಟಿರುವುದು ನನ್ನ ಗೌರವಕ್ಕೆ ಚ್ಯುತಿ ಬಂದಿದೆ, ನಾನು ಈ ಬಾರಿ ಸ್ಪರ್ಧಿಸುತ್ತಿಲ್ಲ. ನನ್ನ ಬೆಂಬಲಿಗರು, ಹಿತೈಷಿಗಳು ಸ್ವಾಭಿಮಾನಿ ಪಡೆ ರಚಿಸಿದ್ದು ಮೂವರು ಬೆಂಬಲಿಗರು ನಾಮಪತ್ರ ಸಲ್ಲಿಸಿದ್ದಾರೆ. ಅಂತಿಮವಾಗಿ ಅವರಲ್ಲಿ ಒಬ್ಬರು ಕಣದಲ್ಲಿ ಉಳಿಯಲಿದ್ದಾರೆ, ಅವರನ್ನು ಗೆಲ್ಲಿಸಿಕೊಂಡು ಬರುವುದೇ ನನ್ನ ಗುರಿ' ಎಂದು ಎಂ.ಶ್ರೀನಿವಾಸ್ ಹೇಳಿದರು.

ಕ್ಷೇತ್ರ	ಹೆಬ್ಬಾಳ
ಅಭ್ಯರ್ಥಿ ಹೆಸರು	ಸುರೇಶ್ ಬಿ.ಎಸ್. (ಬೈರತಿ ಸುರೇಶ್)
ಪಕ್ಷ	ಕಾಂಗ್ರೆಸ್
ಅಭ್ಯರ್ಥಿಯ ಕುಟುಂಬದ ಒಟ್ಟು ಆಸ್ತಿ	₹728.28 ಕೋಟಿ
ಕುಟುಂಬದ ಒಟ್ಟು ಸಾಲ	₹114.86 ಕೋಟಿ
ಶಿಕ್ಷಣ	ಪಿಯುಸಿ
ಚರಾಸ್ತಿ	₹64.09 ಕೋಟಿ
ಸ್ಥಿರಾಸ್ತಿ	₹664.19 ಕೋಟಿ
ಅಭ್ಯರ್ಥಿಯ ಹೆಸರಿನಲ್ಲಿರುವ ಆಸ್ತಿ	₹695.55 ಕೋಟಿ
ಅಭ್ಯರ್ಥಿಯ ಸಾಲ	₹103.86 ಕೋಟಿ
ಪತ್ನಿ ಹೆಸರಿನಲ್ಲಿರುವ ಆಸ್ತಿ	₹28.73 ಕೋಟಿ
ಪತ್ನಿಯ ಸಾಲ	₹11 ಕೋಟಿ



ಮಣಿಕಂಠ ರಾಠೋಡ ಪತ್ನಿ ನಾಮಪತ್ರ

ಪ್ರಜಾವಾಣಿ ವಾರ್ತೆ

ಚಿತ್ತಾಪುರ (ಕಲಬುರಗಿ ಜಿಲ್ಲೆ): ವಿಧಾನಸಭೆ ಚುನಾವಣೆಯಲ್ಲಿ ಚಿತ್ತಾಪುರ ಮೀಸಲು ಮತಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ಮಣಿಕಂಠ ರಾಠೋಡ್ ಅವರ ಪತ್ನಿ ಭಾರತಿ ಕೂಡ ಗುರುವಾರ ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದರು.



ಭಾರತಿ ರಾಠೋಡ

ಬಿಜೆಪಿ ಅಭ್ಯರ್ಥಿ ಮಣಿಕಂಠ ರಾಠೋಡ ಬುಧವಾರ ನಾಮಪತ್ರ ಸಲ್ಲಿಸಿದ್ದಾರೆ. ಆದರೆ, ಅವರ ವಿರುದ್ಧ ರಾಜ್ಯ ಮತ್ತು ಹೊರರಾಜ್ಯಗಳ ವಿವಿಧ ಪೊಲೀಸ್ ಠಾಣೆಗಳಲ್ಲಿ 40 ಪ್ರಕರಣ ದಾಖಲಾಗಿವೆ. ಶುಕ್ರವಾರ ನಾಮಪತ್ರ ಪರಿಶೀಲನೆ ವೇಳೆ ಏನಾದರೂ ಸಮಸ್ಯೆ ಆಗಬಹುದು ಎಂಬ ಆತಂಕವಿರುವ ಕಾರಣ ಮಣಿಕಂಠ ಅವರ ಪತ್ನಿ ಭಾರತಿ ಅವರು ಕೂಡ ನಾಮಪತ್ರ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಹದಾಯಿ: ಮತಗಳ ಪೊರೆವ ಮಹಾತಾಯಿ

• ರಶ್ಮಿ ಎಸ್

ಹುಬ್ಬಳ್ಳಿ: ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಆಗಬೇಕಾಗಿದ್ದ ಯೋಜನೆಯೊಂದು 47 ವರ್ಷಗಳಿಂದಲೂ ಕಡತಗಳಲ್ಲಿಯೇ ಉಸಿರಾಡುತ್ತಿದೆ. ಧಾರವಾಡ, ಬೆಳಗಾವಿ, ಗದಗ ಹಾಗೂ ಬಾಗಲಕೋಟೆ ಜಿಲ್ಲೆಗಳ ನೂರಾರು ಗ್ರಾಮಗಳಲ್ಲಿ ಎರಡು ತಲೆಮಾರುಗಳೇ ದಾಟಿ ಹೋಗಿವೆ. ಆದರೂ ಮಹದಾಯಿಯ ನೀರು ಸಿಕ್ಕಿಯೇ ಇಲ್ಲ.

2002ರಲ್ಲಿ ಕಳಸಾ–ಬಂಡೂರಿ ನಾಲಾ ತಿರುವು ಯೋಜನೆಯ ಹೆಸರಿನಲ್ಲಿ ಆಗಿನ ನೀರಾವರಿ ಸಚಿವ ಎಚ್‌.ಕೆ. ಪಾಟೀಲರು ಈ ಯೋಜನೆಗೆ ಮರುಜೀವ ಕೊಟ್ಟರು. ಆ ಬಳಿಕ ಕುಡಿಯುವ ನೀರಿನ ಸಮಸ್ಯೆಯೊಂದು ರಾಜಕೀಯ ಪಕ್ಷಗಳಿಗೆ ಮತ ಗಳಿಕೆಯ ದಾಳವಾಗುತ್ತಲೇ ಇದೆ.

ನಾಲ್ಕು ಜಿಲ್ಲೆಗಳ ಒಂಬತ್ತು ತಾಲ್ಲೂಕುಗಳಿಗೆ ಕುಡಿಯುವ ನೀರಿನ ಯೋಜನೆಯಾಗಿ ಇದನ್ನು ಪರಿಚಯಿಸಿದ್ದು ಎಚ್‌.ಕೆ.ಪಾಟೀಲರು. ಕಳಸಾ–ಬಂಡೂರಿ ನಾಲೆಗಳಿಂದ ನದಿ ತಿರುವು ಯೋಜನೆ ಮಾಡಿ ಕುಡಿಯುವ ನೀರಿಗೆ ವ್ಯವಸ್ಥೆ ಆಗುವುದು ಎಂಬ ಪ್ರಸ್ತಾಪವಿರಿಸಿದ್ದರು. ಎಸ್‌.ಎಂ. ಕೃಷ್ಣ ಸರ್ಕಾರ ಇದಕ್ಕೆ ಒಪ್ಪಿಗೆಯನ್ನೂ ನೀಡಿತ್ತು. ಕೇಂದ್ರ ಸರ್ಕಾರವೂ ಅನುಮೋದನೆ ನೀಡಿತ್ತು.

ಆದರೆ ಪಶ್ಚಿಮಘಟ್ಟದ ನದಿಗಳ ತಿರುವು ಯೋಜನೆಯಿಂದಾಗಿ ಅಲ್ಲಿಯ ಸಸ್ಯ ಸಂಕುಲ, ಜೀವವೈವಿಧ್ಯಕ್ಕೆ ಧಕ್ಕೆ ಯಾಗುವುದು ಎಂದು ಗೋವಾ ಸರ್ಕಾರ ನದಿ ತಿರುವಿನ ಹರಿವಿಗೆ ಒಡ್ಡು ಕಟ್ಟಿತು. ಆಗ ಗೋವಾ ಸರ್ಕಾರದ ವಿರುದ್ಧ ಸಮರ ವೀರರಂತೆ ಕಂಕಣ ಕಟ್ಟಿದ ಜೆಡಿಯುನ ಸಿ.ಸಿ. ಪಾಟೀಲ ಮತ್ತು ಬಸವರಾಜ ಬೊಮ್ಮಾಯಿ ಹೋರಾಟವನ್ನು ತೀವ್ರಗೊಳಿಸಿದರು. 2004ರಲ್ಲಿ ಇವರು ಬಿಜೆಪಿ ಸೇರ್ಪಡೆಯಾದರು. ಅಲ್ಲಿಂದ ಇದನ್ನು ಜನಾಂದೋಲನವಾಗಿ ಬೆಳೆಸಿದರು. 69 ದಿನಗಳ ಸತತ ಹೋರಾಟವಾಯಿತು. ಪಾದಯಾತ್ರೆ ನಡೆಸಿದರು. ರಕ್ತದಲ್ಲಿ ಮನವಿಪತ್ರ ಬರೆದರು.

ಕುಡಿಯುವ ನೀರಿಗಾಗಿ ಬಂಡೆದ್ದ ಈ ನಾಯಕರು ಮತ್ತೆ ವಿಧಾನಸೌಧಕ್ಕೆ ಹೋದರು. ಹೋರಾಟ ತಣ್ಣಗಾಯಿತು. ಮತ್ತೊಂದು ಚುನಾವಣೆ ಬರುವವರೆಗೂ ಕಡತಗಳಲ್ಲಿಯೇ ಓಡಾಟವಾಗುತ್ತಿತ್ತು.

ಇಷ್ಟೇ ಅಲ್ಲ, 2007ರಲ್ಲಿ ಗೋವಾದಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ, ಕರ್ನಾಟಕದವರಿಗೆ ಒಂದು ಹನಿ ನೀರೂ ಕೊಡೆವು ಎಂದು ಘೋಷಿಸಿದರು.



ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಕಣಕುಂಬಿ ಬಳಿಯ ಮಹದಾಯಿ ನದಿ (ಸಂಗ್ರಹ ಚಿತ್ರ)

ಅಲ್ಲಿ ಚುನಾವಣೆ ಇತ್ತು. ಆಗ ವೇಗ ಪಡೆದ ಯೋಜನೆಗೆ 2008ರಲ್ಲಿ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿ ಎಚ್‌.ಡಿ. ಕುಮಾರಸ್ವಾಮಿ ಅಡಿಗಲ್ಲು ಹಾಕಿದರು. ಇದೂ ಯೋಜನೆಗೆ ವೇಗ ತರಲಿಲ್ಲ.

2010ರಲ್ಲಿ ಮತ್ತೆ ಜನಾಂದೋಲನ ರೂಪಿತವಾಯಿತು. ಈ ಸಲ ರೈತ ಸಂಘದವರೂ ಕೈಜೋಡಿಸಿದರು. ಎಲ್ಲ ನಾಯಕರನ್ನೂ ತರಾಟೆಗೆ ತೆಗೆದುಕೊಳ್ಳುವಂಥ ಹೋರಾಟ ಆರಂಭವಾಯಿತು. 2013 ರಲ್ಲಿ ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದಿತು. ಈಗ ಎರಡು ವರ್ಷಗಳಲ್ಲಿ ಯೋಜನೆ ಪೂರ್ಣಗೊಳಿಸುವುದಾಗಿ ಹೇಳುತ್ತಿರುವ ಸಿದ್ದರಾಮಯ್ಯ ಅವರೇ ಆಗ ಮುಖ್ಯಮಂತ್ರಿಯಾಗಿದ್ದರು.

ಟ್ರಿಬ್ಯುನಲ್‌ನಲ್ಲಿ ವಿಚಾರಣೆ, ವಾದ–ಪ್ರತಿವಾದ ಮುಗಿಯುವಾಗ ಕರ್ನಾಟಕದಲ್ಲಿ ಮತ್ತೆ 2018ರಲ್ಲಿ ಚುನಾವಣೆಯ ಕಾವು ಹೊತ್ತಿ ಉರಿಯುತ್ತಿತ್ತು. ನ್ಯಾಯಾಧೀ ಕರಣದ ತೀರ್ಪು ಅದೇ ವರ್ಷ ಹೊರ ಬಂದಿತು. ಆದರೆ ಅಧಿಕಾರ ಚುಕ್ಕಾಣಿ ಹಿಡಿದ ಬಿಜೆಪಿ ಮಾತ್ರ ಗೆಜೆಟ್ ನೋಟಿಫಿಕೇಷನ್ ಮಾಡಲು ಭರ್ತಿ ಎರಡು ವರ್ಷ ತೆಗೆದುಕೊಂಡಿತು.

ಕರ್ನಾಟಕ ರಾಜ್ಯ ರೈತಸೇನಾ ಅಧ್ಯಕ್ಷ, ಪ್ರಸ್ತುತ ಗದಗ ಜಿಲ್ಲೆ ನರಗುಂದ ವಿಧಾನಸಭಾ ಕ್ಷೇತ್ರದ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವ ರೈತ ನಾಯಕ ವೀರೇಶ ಸೊಬರದಮಠ, ವಿರೋಧ ಪಕ್ಷದಲ್ಲಿದ್ದ ಕಾಂಗ್ರೆಸ್ ನಾಯಕರು ಮಹದಾಯಿ ಕುರಿತು ಪ್ರಶ್ನಿಸುತ್ತಲೇ ಇದ್ದರು. ಈ ತೀರ್ಪು ಆಚೆ ಬಂದಾಗ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರದಲ್ಲಿತ್ತು. 2019 ರಲ್ಲಿ ಆಪರೇಷನ್ ಕಮಲದ ನಂತರ ಅಧಿಕಾರವನ್ನು ಸುಭದ್ರಗೊಳಿಸುವಲ್ಲಿ ನಿರತವಾಯಿತು. ಇದೇ ಕಾವಿನಲ್ಲಿ 2020ರಲ್ಲಿ ಗೆಜೆಟ್ ನೋಟಿಫಿಕೇಷನ್ ಮಾಡಿದರು. ಗೆಲುವಿನ ನಂತರ ಮತ್ತೆ ಮಹದಾಯಿ ನೆನಪಿಗೆ ಬರಲಿಲ್ಲ. ತೀರ್ಪಿನ ಬಳಿಕ 24 ಗಂಟೆಗಳಲ್ಲಿ ನೀರು ಹರಿಸುವುದಾಗಿ ಅಶ್ವಾಸನೆ ನೀಡಿದ್ದ, ರಕ್ತದಲ್ಲಿ ಬರೆದು ಕೊಡುವೆನೆಂದು ಪ್ರಮಾಣ ಮಾಡಿದವರು ತಮ್ಮ ಮಾತು ಮರೆತರು.

2022ರ ಅಂತ್ಯದಲ್ಲಿ ಕಾಂಗ್ರೆಸ್ ಮತ್ತೆ ಮಹದಾಯಿ ವಿಷಯಕ್ಕಾಗಿ ಜಲ ಆಂದೋಲನ ರೂಪಿಸುವ ತಯಾರಿಯಲ್ಲಿದ್ದಾಗ, ಕಡತಗಳೆಲ್ಲ ದೂಳು ಕೊಡವಿಕೊಂಡವು. ಆದೇಶವಾಗಿ ಆರು ತಿಂಗಳವರೆಗೂ ಅರಣ್ಯ ಇಲಾಖೆಯ ಅನುಮತಿ ಪಡೆಯದ ಸರ್ಕಾರ, ಇದ್ದಕ್ಕಿದ್ದಂತೆ ಮೈಕೊಡವಿಕೊಂಡು ಎದ್ದಿತು.

‘ಡಬಲ್ ಎಂಜಿನ್’ ಸರ್ಕಾರದ ಚಮತ್ಕಾರ ಎಂದು ಬಿಂಬಿಸುತ್ತ ಡಿಪಿಆರ್ ಅನುಮೋದನೆ ಪಡೆಯಿತು. ಗೋವಾದಲ್ಲಿಯೂ ತಮ್ಮದೇ ಪಕ್ಷ, ಮಹಾರಾಷ್ಟ್ರದ ಆಡಳಿತದಲ್ಲಿಯೂ ಪಾಲುದಾರ ಪಕ್ಷವಾಗಿದೆ ಎಂಬುದು ಮರೆತಂತೆ ವರ್ತಿಸಿತು.

ಈ ಮಾತುಗಳಿಗೆ ಸಡ್ಡುಹೊಡೆದಂತೆ ತೊಡೆ ತಟ್ಟಿ, ಭುಜ ತಟ್ಟಿ ‘ವರ್ಷದೊಳಗೆ ಕಾಮಗಾರಿ ಪೂರ್ಣಗೊಳ್ಳದಿದ್ದರೆ ನಾನು ಕಾರಜೋಳ ಅಲ್ಲ’ ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ತಮ್ಮ ಹೆಸರನ್ನೆ ಬದಲಿಸುವುದಾಗಿ ಸವಾಲು ಹಾಕಿದರು.

ನವಲಗುಂದದ ಶಾಸಕ ಶಂಕರ ಪಾಟೀಲ ಮುನೇನಕೊಪ್ಪ, ‘ನುಡಿದಂತೆ ನಡೆದಿದ್ದೇವೆ. ನೀರು ತರಲು ಅನುಮತಿ ಪಡೆದೇ ಮತ ಕೇಳುತ್ತಿದ್ದೇವೆ’ ಎನ್ನುತ್ತಿದ್ದಾರೆ. ಹೋರಾಟದಲ್ಲಿ ಪರಿಶ್ರಮಿಸಿದ ವಿಜಯ ಕುಲಕರ್ಣಿ ಸಹ ಇವರಿಗೆ ಬೆಂಬಲ ಸೂಚಿಸಿದ್ದಾರೆ.

ಅನುಮತಿ ನೀಡಿದ 72 ಗಂಟೆಗಳಲ್ಲಿ ಕಾಮಗಾರಿ ಆರಂಭಿಸುವುದಾಗಿ ಪಣ ತೊಟ್ಟಿದ್ದ ಬಿಜೆಪಿ 2023ರ ಆರಂಭದಲ್ಲಿ ಯುವ ಜನೋತ್ಸವ, ಪ್ರಧಾನಿ ನರೇಂದ್ರ ಮೋದಿ ರೋಡ್‌ಶೋಗಳಲ್ಲಿ ಮಿಂದೆದ್ದರು.

ನೀತಿ ಸಂಹಿತೆ ಘೋಷಿಸಲು ಅರ್ಧ ಗಂಟೆಗೆ ಮೊದಲು ಟೆಂಡರ್ ಕರೆಯಲಾಯಿತು. ಅಲ್ಲಿಗೆ ಮತ್ತೆ ಮಹದಾಯಿ ಜೀವತಳೆದಳು. ಇಲ್ಲಿ ಪಶ್ಚಿಮಘಟ್ಟ ಅರಣ್ಯ ವಲಯ, ಹುಲಿ ಸಂರಕ್ಷಿತ ಪ್ರದೇಶದ ಅನುಮತಿ ದೊರೆತಿಲ್ಲ ಎಂಬುದು ಕಾಂಗ್ರೆಸ್‌ನವರ ಆರೋಪ. ಶ್ವೇತಪತ್ರ ಹೊರಡಿಸಿ ಎನ್ನುವುದೂ ಅವರ ಆಗ್ರಹ. ಜಲ ಯೋಜನೆಯ ಅಶ್ವಾಸನೆಯ ಮೇಲೆ ಅಧಿಕಾರಕ್ಕೆ ಬರುವ ಇವರು ಜನರಿಗೆ ಸೂಕ್ತ ಮಾಹಿತಿ ನೀಡಲಿ ಎಂದು ಕಾಂಗ್ರೆಸ್ ಶಾಸಕ ಎಚ್‌.ಕೆ. ಪಾಟೀಲ, ಕಾಂಗ್ರೆಸ್ ನಾಯಕ ಎನ್‌.ಎಚ್‌. ಕೋನರೆಡ್ಡಿ ಅವರು ಒತ್ತಾಯಿಸುತ್ತಲೇ ಇದ್ದಾರೆ.

ಮತ್ತದೇ ಸಮಸ್ಯೆ, ಮತ್ತದೇ ವಾದ–ಪ್ರತಿವಾದ, ಅವರೇ ನಾಯಕರು ಅಧಿಕಾರದ ಮೋಹದೊಂದಿಗೆ.. ಮತದಾರರಲ್ಲಿ ಮೂರನೆಯ ತಲೆಮಾರು ಬಂದಿರುತ್ತದೆ. ತೀರದ ದಾಹದೊಂದಿಗೆ...

ವಿಸ್ತೃತ ಯೋಜನಾ ವರದಿ (ಡಿಪಿಆರ್)

	ಮೊದಲ ಡಿಪಿಆರ್	ಪರಿಷ್ಕೃತ ಡಿಪಿಆರ್
ನೀರು ಬಳಕೆ (ಟಿಎಂಸಿ ಅಡಿಗಳಲ್ಲಿ)	7.56	3.9
ಅಣೆಕಟ್ಟೆ ಎತ್ತರ (ಮೀಟರ್‌ಗಳಲ್ಲಿ)	28	11
ಪಂಪ್‌ಸೆಟ್ (ಸ್ಥಳಗಳಲ್ಲಿ)	3	2
ಯೋಜನಾ ವೆಚ್ಚ (ಕೋಟಿಗಳಲ್ಲಿ)	₹1,677	₹1,300

ವೆಚ್ಚಗಳಲ್ಲಿ ಏರಿಳಿತ

2002ರಲ್ಲಿ ಮೊದಲ ಅನುಮೋದನೆ ದೊರೆತಾಗ ಯೋಜನಾ ವೆಚ್ಚ ₹93 ಕೋಟಿಯಾಗಿತ್ತು. ಆದರೆ ಆಗ ಗೋವಾ ಸರ್ಕಾರ ತಡೆ ಒಡ್ಡಿತು. ನಂತರ 2013ರಲ್ಲಿ ನ್ಯಾಯಮಂಡಳಿ ವಿಚಾರಣೆ ಕೈಗೆತ್ತಿಕೊಂಡಿತು. 2018ರಲ್ಲಿ ಗೆಜೆಟ್‌ನಲ್ಲಿ ಪ್ರಸ್ತಾಪವಾಯಿತು. 2019ರಲ್ಲಿ ಯೋಜನಾ ವೆಚ್ಚ ₹ 986 ಕೋಟಿಗೆ ಏರಿಕೆಯಾಗಿತ್ತು. 2020ರಲ್ಲಿ ಡಿಪಿಆರ್ ಅನುಮೋದನೆಗೆ ಕಳುಹಿಸಿದಾಗ ಈ ವೆಚ್ಚ ₹1,677 ಕೋಟಿಗೆ ಹೆಚ್ಚಳವಾಯಿತು.

ಇದೀಗ ಪರಿಷ್ಕೃತ ಯೋಜನೆಯನ್ನು ಕಳುಹಿಸಿದ ನಂತರ ಯೋಜನಾ ವೆಚ್ಚ ₹1,300 ಕೋಟಿಗೆ ಇಳಿಕೆಯಾಗಿದೆ.

ಸತ್ಯಾಸತ್ಯತೆ ಏನು?

ಯೋಜನೆಯನ್ನು ಅನುಷ್ಠಾನಕ್ಕೆ ತರುವುದರಿಂದ ಹುಲಿ ವಲಯದ ಅಭಯಾರಣ್ಯಕ್ಕೆ ಸಾಕಷ್ಟು ಹಾನಿಯಾಗಲಿದೆ. 450 ಹೆಕ್ಟೇರ್‌ನಷ್ಟು ಕಾಡು ನಾಶವಾಗಲಿದೆ. ಪರಿಹಾರಾತ್ಮಕವಾಗಿ ಅಥಣಿಯಲ್ಲಿ ಕಾಡು ಬೆಳೆಸುವುದಾಗಿ ಹೇಳಿದೆ. ಆದರೆ ಪಶ್ಚಿಮಘಟ್ಟದ ಸೆರಗನ್ನು ಬಿಟ್ಟು ಶುಷ್ಕ ಭೂಮಿಯಲ್ಲಿ ಕಾಡು ಬೆಳೆಸುವುದು ಅವೈಜ್ಞಾನಿಕವಾಗಿದೆ.

ತರಾತುರಿಯಲ್ಲಿ ಅರಣ್ಯ ಸಮಿತಿಯ ಅನುಮತಿ ಪಡೆದು, ದಾಪುಗಾಲಿಟ್ಟಿರುವ ಈ ಯೋಜನೆಗೆ ₹957 ಕೋಟಿ ಮೊತ್ತದ ಟೆಂಡರ್ ಕೂಗಲು ₹6 ಕೋಟಿಯಷ್ಟು ಹಣ ಮೊದಲಿಗೆ ಕಟ್ಟಬೇಕಿದೆ. ಅರಣ್ಯ ಇಲಾಖೆಯಿಂದ ಅನುಮೋದನೆ ಇಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ ಆಗಿರುವುದರಿಂದ ಯಾರೂ ಇದಕ್ಕೆ ಮುಂದೆ ಬರುವುದಿಲ್ಲ ಎನ್ನುವುದು ಕಾಂಗ್ರೆಸ್ಸಿಗರ ಮತ್ತು ಹೋರಾಟಗಾರರ ಆರೋಪವಾಗಿದೆ.

ಅಂಕಿ–ಅಂಶಗಳು

3.90 ಟಿಎಂಸಿ ಅಡಿ
ಮಹದಾಯಿ ನ್ಯಾಯಾಧೀಕರಣದಿಂದ ನೀರು ಹಂಚಿಕೆ

ಟಿಎಂಸಿ ಅಡಿಗಳಲ್ಲಿ
2.18 ಬಂಡೂರಿ ಮೂಲಕ | **1.72** ಕಳಸಾ ಮೂಲಕ

₹791.50 ಕೋಟಿ
ಬಂಡೂರಿ ಯೋಜನಾ ವೆಚ್ಚ

₹598 ಕೋಟಿ
ಕಳಸಾ ಯೋಜನಾ ವೆಚ್ಚ

ಜಲಾನಯನ ಪ್ರದೇಶಗಳ ವಿವರ

2,032 ಚ.ಕಿ.ಮೀ
ಮಹದಾಯಿ ಜಲಾನಯನ ಪ್ರದೇಶ

1,580 ಚ.ಕಿ.ಮೀ
ಗೋವಾದಲ್ಲಿರುವ ಜಲಾನಯನ ಪ್ರದೇಶ (ಶೇ 78)

375 ಚ.ಕಿ.ಮೀ
ಕರ್ನಾಟಕದಲ್ಲಿರುವ ಜಲಾನಯನ ಪ್ರದೇಶ (ಶೇ 18)

77 ಚ.ಕಿ.ಮೀ
ಮಹಾರಾಷ್ಟ್ರದಲ್ಲಿರುವ ಜಲಾನಯನ ಪ್ರದೇಶ (ಶೇ 4)

ಪ್ರಜಾ ಪತ್ರ

ಆಮಿಷಕ್ಕೆ ಕಡಿವಾಣ ಹಾಕಿ



ಚುನಾವಣೆ ಸಂದರ್ಭದಲ್ಲಿ ಎಲ್ಲ ಪಕ್ಷಗಳು ಪ್ರಣಾಳಿಕೆಯನ್ನು ಬಿಡುಗಡೆಗೊಳಿಸುತ್ತವೆ. ಈ ಪ್ರಣಾಳಿಕೆಯಲ್ಲಿನ ಎಲ್ಲ ಅಂಶಗಳು ಈಡೇರಿಸುವಂತಿರಬೇಕು. ಚುನಾವಣೆಯಲ್ಲಿ ಗೆಲ್ಲಬೇಕೆಂಬ ಉದ್ದೇಶದಿಂದ ಕಾರ್ಯರೂಪಕ್ಕೆ ತರಲು ಸಾಧ್ಯವಾಗದ, ಮತದಾರನ ದಾರಿತಪ್ಪಿಸುವ ಆಶೋತ್ತರಗಳನ್ನು ನೀಡದೇ ವಾಸ್ತವದ ನೆಲೆಗಟ್ಟಿನಲ್ಲಿ ಚುಣಾವಣಾ ಪ್ರಚಾರ ಕೈಗೊಳ್ಳಲಿ. ಹೆಂಡ, ಹಣ ಆಮಿಷದ ಪ್ರಚಾರಕ್ಕೆ ಕಡಿವಾಣ ಹಾಕಬೇಕಿದೆ. ಜನರಿಗೆ ಬೇಕಾಗುವ ಮೂಲಸೌಕರ್ಯ ಒದಗಿಸುವ, ಮತದಾರನ ಕೈಗೆ ಸಿಗುವಂತ ನಾಯಕನನ್ನು ಆಯ್ಕೆ ಮಾಡಬೇಕಾಗಿದೆ. ಎಲ್ಲ ಪಕ್ಷಗಳು ಸಮಾಜದ ಸ್ವಾಸ್ಥ್ಯಕ್ಕೆ ಧಕ್ಕೆಯಾಗದಂತಹ ಪ್ರಚಾರ ಕೈಗೊಳ್ಳಬೇಕು.

ಗಾಯತ್ರಿ ಹುದ್ದಾರ, ಧಾರವಾಡ

ಸಿನಿಕತನ ಬಿಟ್ಟು ಮತ ಚಲಾಯಿಸಿ



ವಿಶ್ವದಲ್ಲಿ ಅತ್ಯಂತ ಯಶಸ್ವಿ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿರುವ ಭಾರತ ಇತರ ದೇಶಗಳಿಗೆ ಮಾದರಿಯಾಗಿದೆ. ಇತ್ತೀಚಿನ ದಿನಗಳಲ್ಲಿ ವಿದ್ಯಾವಂತರು ಚುನಾವಣೆಯಲ್ಲಿ ಮತದಾನ ಮಾಡದೇ ಸಕ್ರಿಯವಾಗಿ ಭಾಗವಹಿಸದಿರುವುದು ಆತಂಕದ ಸಂಗತಿ. ಕೇವಲ ಸರ್ಕಾರ ಜನಪ್ರತಿನಿಧಿಗಳ ಲೋಪದೋಷಗಳ ಬಗ್ಗೆ ದೂಷಿಸುವ ಮನೋಭಾವ ಬಿಟ್ಟು ಸಂವಿಧಾನದತ್ತವಾಗಿ ಬಂದಿರುವ ಮತ ಚಲಾವಣೆ ಮಾಡಿದರೆ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತಷ್ಟು ಬಲಗೊಳ್ಳುತ್ತದೆ. ವಿದ್ಯಾವಂತರು, ಯುವಕರು ಸಿನಿಕತನ ಬಿಟ್ಟು ಮತ ಚಲಾಯಿಸಬೇಕು. ಯುವ ಪೀಳಿಗೆಯು ನಮ್ಮ ಪ್ರಜಾಸತ್ತಾತ್ಮಕ ವ್ಯವಸ್ಥೆ ಸಾಗಿಬಂದ ಇತಿಹಾಸವನ್ನು ಅರಿತುಕೊಳ್ಳಬೇಕು. ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೆ ಸಮರ್ಥ ಪ್ರಾಮಾಣಿಕ ಜನಪ್ರತಿನಿಧಿಗಳ ಆಯ್ಕೆ ಮಾಡಬೇಕು.

ಕೆ. ಪಿ. ಲಕ್ಷ್ಮಿಕಾಂತ ರಾಜೇ ಅರಸು, ಮುಖ್ಯಸ್ಥರು ಚಿಂತನಾ ಬಳಗ, ತುಮಕೂರು

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ಪುತ್ತೂರು ಕಾಂಗ್ರೆಸ್ ಅಭ್ಯರ್ಥಿ ಬಳಿ 112 ನಿವೇಶನ

ಮಂಗಳೂರು: ಪುತ್ತೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಶೋಕ್‌ಕುಮಾರ್ ರೈ ಅವರು ಬೆಂಗಳೂರು, ಮೈಸೂರು, ಮಂಗಳೂರು, ಸುರತ್ಕಲ್ ಸೇರಿದಂತೆ ಒಟ್ಟು 112 ಕಡೆಗಳಲ್ಲಿ ಒಟ್ಟು 16,71,609 ಚದರ ಅಡಿ ಕೃಷಿಯೇತರ ಭೂಮಿ ಹೊಂದಿದ್ದಾರೆ.

ಅವರ ಬಳಿ ರೆನಾಲ್ಟ್ ಕೂಲಿಯೊಸ್, ಟೊಯೊಟಾ ಫಾರ್ಚೂನರ್ ಸೇರಿ ಆರು ವಾಹನಗಳಿವೆ.

ನಾಮಪತ್ರದ ಜತೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಅವರು ಈ ವಿವರ ನೀಡಿದ್ದಾರೆ. ಅಶೋಕ್‌ಕುಮಾರ್ ಹೆಸರಿನಲ್ಲಿ ನಾಲ್ಕು ವಾಣಿಜ್ಯ ಕಟ್ಟಡಗಳು, ಅಪಾರ್ಟ್‌ಮೆಂಟ್ ಒಳಗೊಂಡು ನಾಲ್ಕು ವಸತಿ ಕಟ್ಟಡಗಳು ಇವೆ. ಇವರ ಬಳಿ ₹65.72 ಕೋಟಿ ಸ್ಥಿರಾಸ್ತಿ, ಒಟ್ಟು ₹2.64 ಕೋಟಿ ಚರಾಸ್ತಿ ಇವೆ. ₹9.5 ಕೋಟಿ ಸಾಲ ಇದೆ.

ಉದ್ಯಮಿಗಳ ಮನೆ ಮೇಲೆ ಐಟಿ ದಾಳಿ

ಬಾಗಲಕೋಟೆ: ಜಿಲ್ಲೆಯ ಕಾಂಗ್ರೆಸ್ ಮುಖಂಡರೊಬ್ಬರಿಗೆ ಆಪ್ತರಾಗಿರುವ ನವನಗರ, ಮುಧೋಳ, ಮಹಾಲಿಂಗಪುರದಲ್ಲಿರುವ ಉದ್ಯಮಿಗಳ ಮನೆ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಗುರುವಾರ ದಾಳಿ ನಡೆಸಿದ್ದಾರೆ.

ದಾಳಿಗೆ ಒಳಗಾದವರಲ್ಲಿ ವಿಜಯಪುರ ಜಿಲ್ಲೆ ಮುದ್ದೇಬಿಹಾಳ ಬಾಲಾಜಿ ಸಕ್ಕರೆ ಕಾರ್ಖಾನೆಯ ನಿರ್ದೇಶಕರಾಗಿದ್ದಾರೆ. ನವನಗರದಲ್ಲಿರುವ ಎಚ್‌.ಎಲ್‌. ಪಾಟೀಲ, ಮುಧೋಳದಲ್ಲಿರುವ ನಂದಕುಮಾರ, ಹಣಮಂತಗೌಡ ಪಾಟೀಲ, ಮಹಾಲಿಂಗಪುರದ ಅಜಿತ್ ಕನಕರೆಡ್ಡಿ ಅವರ ಮನೆಗಳಲ್ಲಿ ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ದಾಖಲೆಗಳನ್ನು ಪರಿಶೀಲಿಸಿದ್ದಾರೆ.

ಕೆಲ ತಿಂಗಳ ಹಿಂದೆ ನಿಧನರಾಗಿರುವ ನಂದಕುಮಾರ ಕಾಂಗ್ರೆಸ್ ಕಿಸಾನ್ ವಿಭಾಗದ ಜಿಲ್ಲಾ ಘಟಕದ ಅಧ್ಯಕ್ಷರಾಗಿದ್ದರು.

ಸೆಲೆಬ್ರಿಟಿ ಮಾತು



ಮತದಾನ ವಿವೇಚನೆಯಿಂದ ಮಾಡಬೇಕಾದ ಕರ್ತವ್ಯ

ರಾಕೇಶ ನಿಡಗುಂದಿ
ರಾಷ್ಟ್ರೀಯ ಪ್ಯಾರಾಶೂಟರ್

ಮತದಾನ ನಮ್ಮ ಜವಾಬ್ದಾರಿ ಮತ್ತು ವಿವೇಚನೆಯಿಂದ ಮಾಡಬೇಕಾದ ಕರ್ತವ್ಯ. ಅದರಿಂದ ನುಣಿಚಿಕೊಳ್ಳುವುದು ಪ್ರಜಾಪ್ರಭುತ್ವಕ್ಕೆ ಮಾಡುವ ಅನ್ಯಾಯ. 18 ವರ್ಷ ದಾಟಿದ ಎಲ್ಲರೂ ಯೋಗ್ಯ ಅಭ್ಯರ್ಥಿಗೆ ಮತ ನೀಡಿ ಆಯ್ಕೆ ಮಾಡಿ. ಆಸೆ, ಆಮಿಷಕ್ಕೆ ಒಳಗಾಗದೆ ಮತ ಚಲಾಯಿಸಿ. ಜನಸಾಮಾನ್ಯರಿಗೆ ಸ್ಪಂದಿಸುವವರಿಗೆ ನಿರ್ಭಯವಾಗಿ ಮತ ನೀಡಿದಾಗಲೇ ಸಂವಿಧಾನ ನಮಗೆ ನೀಡಿದ ಹಕ್ಕು ಸಾರ್ಥಕವಾದಂತೆ. ಮೇ 10ರಂದು ಎಲ್ಲರೂ ಮತದಾನ ಮಾಡಿ.

ನಾಮಪತ್ರ ಮೆರವಣಿಗೆ ವೇಳೆ ಚೆಲ್ಲಿದ್ದ ಕಸ ತೆರವಿಗೆ ಸಿಬ್ಬಂದಿ ನಿಯೋಜನೆ

ರಸ್ತೆ ಶುಚಿಗೊಳಿಸಲು ವ್ಯವಸ್ಥೆ ಮಾಡಿದ್ದ ಜೆಡಿಎಸ್ ಅಭ್ಯರ್ಥಿ

ಪ್ರಜಾವಾಣಿ ವಾರ್ತೆ

ಕೊಪ್ಪಳ: ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಸಿ.ವಿ. ಚಂದ್ರಶೇಖರ್ ಗುರುವಾರ ನಾಮಪತ್ರ ಸಲ್ಲಿಸುವ ಮೊದಲು ಸಾವಿರಾರು ಜನರಿಂದ ನಡೆದ ಮೆರವಣಿಗೆ ವೇಳೆ ರಸ್ತೆಯಲ್ಲಿ ಬಿದ್ದ ತ್ಯಾಜ್ಯವನ್ನು ಸ್ವಚ್ಛಗೊಳಿಸಲು ತಾವೇ ವ್ಯವಸ್ಥೆ ಮಾಡಿದ್ದರು.

ರಾಜಕೀಯ ರ‍್ಯಾಲಿಗಳು ಹಾಗೂ ಕಾರ್ಯಕ್ರಮಗಳಲ್ಲಿ ಕಾರ್ಯಕರ್ತರು, ಬೆಂಬಲಿಗರು ಕಸ ಬೀಸಾಡುವುದು ಸಾಮಾನ್ಯ. ಇದರಿಂದಲೇ ನಗರದ ಸೌಂದರ್ಯ ಹಾಳಾಗುತ್ತಿದೆ. ಇದು ಆಗಬಾರದು ಎಂಬ ಉದ್ದೇಶದಿಂದ 50 ಮಹಿಳೆಯರನ್ನು ಕಸ ಸ್ವಚ್ಛ ಮಾಡಲು ನಿಯೋಜಿಸಿದ್ದರು.

ಗವಿಮಠದ ಮುಂಭಾಗದ ರಸ್ತೆ ಯಿಂದ ಆರಂಭವಾದ ಮೆರವಣಿಗೆ ಗಡಿಯಾರ ಕಂಬ, ಅಶೋಕ ವೃತ್ತದ ಮಾರ್ಗವಾಗಿ ತಹಶೀಲ್ದಾರ್ ಕಚೇರಿ ಮೂಲಕ ಸಾಗಿತು. ಅಭ್ಯರ್ಥಿ ಹಾಗೂ ಜೆಡಿಎಸ್ ಮುಖಂಡರ ಮೇಲೆ ಹೂವಿನ ಮಳೆಗರೆದಿದ್ದರು. ಬಿರುಬಿಸಿಲು ಇದ್ದ ಕಾರಣ ಕಾರ್ಯಕರ್ತರಿಗೆ ನೀರು, ಮಜ್ಜಿಗೆ ಪಾಕೆಟ್ ನೀಡಲಾಗಿತ್ತು. ಮೆರವಣಿಗೆ ಮುಂದೆ ಹೋಗುತ್ತಿದ್ದಂತೆ ಹಿಂದಿನಿಂದ ರಸ್ತೆ ಸ್ವಚ್ಛ ಮಾಡಲಾಗುತ್ತಿತ್ತು.

‘ತ್ಯಾಜ್ಯದಿಂದ ನಗರದ ಹೊಲಸು ಹೆಚ್ಚಾಗುತ್ತಿತ್ತು. ನಗರ ಸ್ವಚ್ಛಗೊಳಿಸಿ ಮಾದರಿಯನ್ನಾಗಿ ರೂಪಿಸುವ ಗುರಿಯೊಂದಿಗೆ ಚುನಾವಣೆಗೆ ಸ್ಪರ್ಧಿಸಿರುವೆ. ಮೆರವಣಿಗೆ ನೆಪದಲ್ಲಿ ನಾನೇ ನಗರ ಹೊಲಸು ಮಾಡಬಾರದು ಎಂಬ ಉದ್ದೇಶ ನನ್ನದು’ ಎಂದು ಚಂದ್ರಶೇಖರ್ ಹೇಳಿದರು.



ಮಾದರಿ ನಡೆ

ಜೆಡಿಎಸ್ ಮೆರವಣಿಗೆ ವೇಳೆ ಬಿದ್ದ ತ್ಯಾಜ್ಯವನ್ನು ಸ್ವಚ್ಛಗೊಳಿಸಲಾಯಿತು

₹1.54 ಕೋಟಿ ನಗದು ವಶ

ರಾಮದುರ್ಗ: ಪಟ್ಟಣದ ಮೂಲಕ ಬೆಳಗಾವಿಗೆ ಸಾಗಣೆ ಮಾಡುತ್ತಿದ್ದ ₹1.54 ಕೋಟಿ ನಗದನ್ನು ಪೊಲೀಸರು ಗುರುವಾರ ನಸುಕಿನಲ್ಲಿ ವಶಕ್ಕೆ ಪಡೆದಿದ್ದಾರೆ.

ಕಾರಿನಲ್ಲಿ ವ್ಯಕ್ತಿಯೊಬ್ಬರು ಈ ಹಣ ಸಾಗಣೆ ಮಾಡುತ್ತಿದ್ದರು. ಬೀಟ್‌ನಲ್ಲಿದ್ದ ಪೊಲೀಸರು ತಪಾಸಣೆ ಮಾಡಿದಾಗ ₹500 ಮುಖಬೆಲೆಯ ನೋಟುಗಳು ಪತ್ತೆಯಾಗಿವೆ. ಸೂಕ್ತ ದಾಖಲೆ ಇಲ್ಲದ ಕಾರಣ ಹಣ ಹಾಗೂ ಕಾರು ವಶಕ್ಕೆ ಪಡೆದ ಪೊಲೀಸರು, ಚಾಲಕನನ್ನು ಬಂಧಿಸಿದ್ದಾರೆ. ‘ಈ ಪ್ರಕರಣವನ್ನು ಆದಾಯ ತೆರಿಗೆ ಇಲಾಖೆಗೆ ಒಪ್ಪಿಸಲಾಗಿದೆ’ ಎಂದು ಎಸ್ಪಿ ಡಾ.ಸಂಜೀವ್ ಪಾಟೀಲ ತಿಳಿಸಿದ್ದಾರೆ.

ಸುಳ್ಯ ಬಿಜೆಪಿ ಅಭ್ಯರ್ಥಿ ಭಾಗೀರಥಿ ಬಳಿ ಆಶ್ರಯ ಮನೆ

ಪ್ರಜಾವಾಣಿ ವಾರ್ತೆ

ಸುಳ್ಯ (ದಕ್ಷಿಣ ಕನ್ನಡ): ಸುಳ್ಯ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕುಮಾರಿ ಭಾಗೀರಥಿ (48) ಅವರು ಅವಿವಾಹಿತರು. ಯಾವುದೇ ಆದಾಯ ಇಲ್ಲ. ಕೃಷಿ ಕೂಲಿ ಮಾಡಿಕೊಂಡಿದ್ದಾರೆ. ಆಶ್ರಯ ಮನೆಯಲ್ಲಿ ವಾಸ.

ಚುನಾವಣಾಧಿಕಾರಿಗೆ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿ ಅವರು ಈ ಮಾಹಿತಿ ನೀಡಿದ್ದಾರೆ.

ಭಾಗೀರಥಿ ಮತ್ತು ಅವರ ಅವಲಂಬಿತರಾದ ತಂಗಿ ಜಾನಕಿ ಇಬ್ಬರ



ಬಳಿ ₹60 ಸಾವಿರ ನಗದು, ₹1.24 ಲಕ್ಷ ಬ್ಯಾಂಕ್‌ನಲ್ಲಿರುವ ಹಣ ಇದೆ. ಭಾಗೀರಥಿ ಬಳಿ ₹6.42 ಲಕ್ಷ ಮೌಲ್ಯದ ಹಾಗೂ ತಂಗಿ ಬಳಿ ₹3.99 ಲಕ್ಷ ಮೌಲ್ಯದ ಚಿನ್ನಾಭರಣ ಇವೆ. ಇಬ್ಬರ ಚರಾಸ್ತಿ ಮೌಲ್ಯ ₹12.25 ಲಕ್ಷ.

ಸುಳ್ಯ ತಾಲ್ಲೂಕು ಮುರುಳ್ಯ ಗ್ರಾಮದಲ್ಲಿ ಜಂಟಿ ಹೆಸರಿನಲ್ಲಿ 0.60 ಎಕರೆ ಕೃಷಿ ಜಮೀನು ಇದ್ದು, ಇದರ ಮೌಲ್ಯ ₹3 ಲಕ್ಷ. ಮುರುಳ್ಯ ಗ್ರಾಮದಲ್ಲಿ ಗ್ರಾಮ ಪಂಚಾಯಿತಿಯಿಂದ ಹಂಚಿಕೆಯಾದ ಆಶ್ರಯ ಮನೆ ವಾಸ. ಅದರ ಮೌಲ್ಯ ಈಗ ₹5 ಲಕ್ಷ. ಇಬ್ಬರೂ ಸೇರಿ ಒಟ್ಟಾರೆ ₹8 ಲಕ್ಷದ ಸ್ಥಿರಾಸ್ತಿ ಹೊಂದಿದ್ದಾರೆ.

ಮರುಳ್ಯ–ಎಣ್ಮೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ₹1.50 ಲಕ್ಷ ಕೃಷಿ ಸಾಲ ಹಾಗೂ ₹40 ಸಾವಿರ ಮಧ್ಯಮಾವಧಿ ಕೃಷಿ ಸಾಲ, ₹37,500 ವೈಯಕ್ತಿಕ ಸಾಲ ಹೀಗೆ ಒಟ್ಟಾರೆ ₹2.25 ಲಕ್ಷ ಸಾಲ ಇದೆ.

ಪ್ರಥಮ ಪಿಯು ವ್ಯಾಸಂಗ ಮಾಡಿದ್ದಾರೆ.

ಸಚಿವ ಬಿ.ಸಿ. ನಾಗೇಶ್ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ



ತಿಪಟೂರು (ತುಮಕೂರು): ತಿಪಟೂರು ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ಸಚಿವ ಬಿ.ಸಿ. ನಾಗೇಶ್ ವಿರುದ್ಧ ಗುರುವಾರ ನೀತಿ ಸಂಹಿತೆ ಉಲ್ಲಂಘನೆ ಪ್ರಕರಣ ದಾಖಲಾಗಿದೆ.

ನಾಗೇಶ್ ಬುಧವಾರ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಚುನಾವಣಾ ಅಧಿಕಾರಿ ಕಚೇರಿಯ 100 ಮೀಟರ್ ವ್ಯಾಪ್ತಿ ಒಳಗೆ ನಾಲ್ಕು ಖಾಸಗಿ ಕಾರು ಸೇರಿದಂತೆ ಒಂದು ಬೆಂಗಾವಲು ವಾಹನ ತಂದಿದ್ದರು. ಇದರಿಂದ ನೀತಿ ಸಂಹಿತೆ ಉಲ್ಲಂಘನೆಯಾಗಿತ್ತು.

ನಾಮಪತ್ರ ಸಲ್ಲಿಸಲು ಬರುವ ಅಭ್ಯರ್ಥಿಗಳಿಗೆ ಚುನಾವಣಾಧಿಕಾರಿ ಕಚೇರಿಯ ನೂರು ಮೀಟರ್ ವ್ಯಾಪ್ತಿಯಲ್ಲಿ ಮೂರು ವಾಹನ ತರಲು ಮಾತ್ರ ಅವಕಾಶ ಇದೆ.

ಅದಕ್ಕಿಂತ ಹೆಚ್ಚಿನ ವಾಹನ ತಂದಿರುವ ಬಗ್ಗೆ ಮಾಹಿತಿ ಪಡೆದ ಚುನಾವಣಾ ಅಧಿಕಾರಿಗಳು ಗುರುವಾರ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಾತಿನೇಟು



‘ನಿಮಗೆ ಇಷ್ಟ ಇದ್ದಾಗ ಲಿಂಗಾಯತ, ಹಿಂದುತ್ವ. ಇಲ್ಲದಿದ್ದರೆ ಪಕ್ಷ ಲಿಂಗಾಯತ ವಿರೋಧಿಯಾಗುತ್ತದೆಯೇ? ಪಕ್ಷದ ಅಭ್ಯರ್ಥಿ ಮಹೇಶ ಟೆಂಗಿನಕಾಯಿ ಲಿಂಗಾಯತರಲ್ಲವೇ? ಅವರ ಪರವಾಗಿ ನಿಂತು, ಏಕೆ ಕೆಲಸ ಮಾಡಲಿಲ್ಲ? ನೀವೇ ಲಿಂಗಾಯತರ ವಿರೋಧಿ’

ಕೆ.ಎಸ್. ಈಶ್ವರಪ್ಪ, ಬಿಜೆಪಿ ಹಿರಿಯ ಮುಖಂಡ




ಬಿಜೆಪಿ ಅಭ್ಯರ್ಥಿ ಚನ್ನಬಸಪ್ಪ, ಈಶ್ವರಪ್ಪ ಪ್ರತಿರೂಪ ಶಿವಮೊಗ್ಗ ನಗರದ ಬಿಜೆಪಿ ಅಭ್ಯರ್ಥಿ ಚೆನ್ನಬಸಪ್ಪ ಅವರು ಕೆ.ಎಸ್. ಈಶ್ವರಪ್ಪ ಅವರ ಪ್ರತಿರೂಪವೇ ಆಗಿದ್ದಾರೆ. ಅವರ ಮನಸ್ಥಿತಿ ಹಾಗೂ ಚಿಂತನೆಯೇ ಇವರಿಗೂ ಇದೆ. ಚನ್ನಬಸಪ್ಪ ಅವರು ಹಿಂದಿನ ದಿನಗಳಲ್ಲಿ ಕಾಂಗ್ರೆಸ್ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ತಲೆ ಹಾಗೂ ಕೈ ಕಡಿಯಬೇಕು ಎಂದು ಹೇಳಿದ್ದರು. ಅವರು ಜೇಬಿನಲ್ಲಿ ಮಚ್ಚಿಟ್ಟುಕೊಂಡು ಓಡಾಡುವ ರೀತಿ ಮಾತನಾಡುತ್ತಾರೆ. ಆದ್ದರಿಂದ ಚುನಾವಣೆಯಲ್ಲಿ ಜನರೇ ಹರಿದ ಬಾಯಿಗೆ ಹೊಲಿಗೆ ಹಾಕಲು ಕಾಯುತ್ತಿದ್ದಾರೆ. ಅದಕ್ಕೆ ನಾನು ಸೂಜಿ ಆಗಲು ಮಾತ್ರ ಬಯಸುತ್ತೇನೆ.

ಆಯನೂರು ಮಂಜುನಾಥ್, ಜೆಡಿಎಸ್ ಅಭ್ಯರ್ಥಿ, ಶಿವಮೊಗ್ಗ



ಕಾಂಗ್ರೆಸ್ ಪಕ್ಷ ಹಲವು ಕ್ಷೇತ್ರಗಳಲ್ಲಿ ಇಸ್ಪೀಟ್ ಆಡಿಸುವವರಿಗೆ, ಕ್ಯಾಸಿನೊ ದಂಧೆ ನಡೆಸುವವರಿಗೆ ಟಿಕೆಟ್ ನೀಡಿದೆ. ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಇಸ್ಪೀಟ್ ಆಟವನ್ನೇ ರಾಷ್ಟ್ರೀಯ ಕ್ರೀಡೆಯನ್ನಾಗಿಸುತ್ತದೆ. ಹಣ ಇದ್ದವರಿಗಷ್ಟೇ ಟಿಕೆಟ್ ಕೊಟ್ಟಿದ್ದಾರೆ. ಭಯೋತ್ಪಾದಕರ ಬಳಿಯೂ ಹಣವಿರುತ್ತದೆ, ಅವರಿಗೂ ಟಿಕೆಟ್ ಕೊಟ್ಟರೆ ಗತಿ ಏನು? ಈಗ ಮದ್ದೂರು ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಕದಲೂರು ಉದಯ್‌ಗೆ ಕ್ಷೇತ್ರದ ಪರಿಚಯವೇ ಇಲ್ಲ. ಅವರು ರಾಜವಂಶಸ್ಥನಾಗಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ಹಳ್ಳಿಗಳಿಗೆ ಹೋಗಿ ಒಂದಿಬ್ಬರನ್ನು ಗುರುತಿಸಿ ಹೆಸರು ಹೇಳಿದರೆ ನಾನು ರಾಜಕಾರಣವನ್ನೇ ತ್ಯಜಿಸುತ್ತೇನೆ.

ಎಸ್.ಗುರುಚರಣ್, ಕಾಂಗ್ರೆಸ್ ತ್ಯಜಿಸಿ ಜೆಡಿಎಸ್ ಸೇರಿದವರು



ಕನಕಪುರದಲ್ಲಿ ಸಂಸದ ಡಿ.ಕೆ.ಸುರೇಶ್ ನಾಮಪತ್ರ ಸಲ್ಲಿಸಿದ್ದಾರೆ. ಯಾವ ಭಯದ ಹಿನ್ನೆಲೆಯಲ್ಲಿ ನಾಮಪತ್ರ ಹಾಕಿದ್ದಾರೆ ಎಂಬುದು ಅವರಿಗೇ ಗೊತ್ತು. ಸಿದ್ದರಾಮಯ್ಯ ಅವರಿಗೆ ಕಾಡದ ಭಯ ಡಿ.ಕೆ. ಶಿವಕುಮಾರ್ ಅವರಿಗೇಕೆ ಕಾಡುತ್ತಿದೆ?

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

‘ಕುಕ್ಕರ್’ ಕೂಗುತ್ತಿಲ್ಲ, ಟಿ.ವಿ ಆನ್ ಆಗ್ತಾ ಇಲ್ಲ!

ಗಾಳಿ ಮಾತು

ಮತದಾರರನ್ನು ಓಲೈಸಲು ಅಭ್ಯರ್ಥಿಗಳು ನಾನಾ ಕಸರತ್ತು ನಡೆಸುತ್ತಾರೆ. ಈ ಬಾರಿಯಂತೂ ಎಲ್ಲರೂ ಒಂದು ಹೆಜ್ಜೆ ಮುಂದಿದ್ದಾರೆ.

ಮೂರು ತಿಂಗಳ ಮೊದಲೇ ಅಖಾಡಕ್ಕೆ ಇಳಿದಿದ್ದ ಟಿಕೆಟ್ ಆಕಾಂಕ್ಷಿಗಳು, ಟಿಕೆಟ್ ದೊರೆಯುವ ನಿರೀಕ್ಷೆಯಲ್ಲಿ ಮತದಾರರ ಮನೆಯ ಬಾಗಿಲಿಗೆ ಕುಕ್ಕರ್, ಸೀರೆ, ತವಾ, ಟಿ.ವಿ, ಕೊಡೆ, ವಾಷಿಂಗ್ ಮೆಷಿನ್, ಬೆಳ್ಳಿ ಸಾಮಗ್ರಿಗಳನ್ನು ವಿತರಿಸಿದ್ದರು. ನೀತಿ ಸಂಹಿತೆ ಘೋಷಣೆಗೂ ಮುನ್ನವೇ ಮತದಾರರ ಮನೆಗಳಿಗೆ ಉಡುಗೊರೆ ತಲುಪಿಸಿ ಬೀಗಿದ್ದರು.

ಈಗ ಅಧಿಕೃತ ಅಭ್ಯರ್ಥಿಗಳಾದವರು ಅದೇ ರಸ್ತೆ, ಬಡಾವಣೆ, ಗಲ್ಲಿಗಳಲ್ಲಿ ಪ್ರಚಾರಕ್ಕೆ ಇಳಿದಿದ್ದಾರೆ. ಟಿಕೆಟ್ ಸಿಗದವರು ಅಭ್ಯರ್ಥಿಗಳನ್ನು ಹಿಂಬಾಲಿಸುತ್ತಿದ್ದಾರೆ. ಕೆಲವು ಬಡಾವಣೆಗಳಿಗೆ ತೆರಳಲು ಅಭ್ಯರ್ಥಿಗಳು ಹಾಗೂ ಅವರ ಹಿಂಬಾಲಿಕರಿಗೆ ‘ಭಯ’ವಿದೆ. ಉಡುಗೊರೆಗಳೆಲ್ಲವೂ ಕಳಪೆಯಾಗಿವೆ ಎಂದು ಅವುಗಳನ್ನು ಸ್ವೀಕರಿಸಿದವರು ಬುಸುಗುಡುತ್ತಿದ್ದಾರಂತೆ.

ಚುನಾವಣೆಗೂ ಮುನ್ನವೇ ದೊಡ್ಡ ಬಾಕ್ಸ್‌ನಲ್ಲಿ ತಂದುಕೊಟ್ಟಿದ್ದ ಕೊಡುಗೆಗಳು ಆಗಲೇ ಮನೆ ಮೂಲೆ ಸೇರಿವೆ. ನಿನ್ನೆ–ಮೊನ್ನೆ ವಿತರಿಸಿದ್ದ ಕುಕ್ಕರ್‌ಗಳು ಕೂಗುತ್ತಿಲ್ಲ, ಟಿ.ವಿಗಳು ಆನ್ ಆಗುತ್ತಿಲ್ಲ, ಸೀರೆಗಳು ಹೊಳಪು ಕಳೆದುಕೊಳ್ಳುತ್ತಿವೆ, ಹಾಟ್‌ಬಾಕ್ಸ್ ‘ಕೋಲ್ಡ್ ಬಾಕ್ಸ್’ ಆಗಿವೆ, ಬೆಳ್ಳಿ ಬಟ್ಟಲುಗಳೂ ಕಳಪೆಯಾಗಿವೆ ಎಂದು ಉಡುಗೊರೆ ಸ್ವೀಕರಿಸಿದ್ದವರು ಮುಖವನ್ನು ಊದಿಸಿಕೊಂಡಿದ್ದಾರೆ ಎನ್ನುವ ಮಾಹಿತಿ ಸಿಕ್ಕ ಅಭ್ಯರ್ಥಿಗಳು ಅತ್ತ ಮುಖ ಹಾಕುತ್ತಿಲ್ಲವಂತೆ.

ಮತ ಕೇಳಲು ಹೋದಾಗ ಕೆಟ್ಟುಹೋದ ವಸ್ತುಗಳನ್ನು ಎದುರಿಗೆ ತಂದಿಟ್ಟು ‘ಬಣ್ಣ ಬಯಲು’ ಮಾಡುತ್ತಾರೆಯೋ ಎಂಬ ಅಂಜಿಕೆ ಅಭ್ಯರ್ಥಿಗಳದ್ದು. ಕಳಪೆ ಸಾಮಗ್ರಿ ಹಂಚಿದ್ದ ಕಡೆಗೆ ಅಭ್ಯರ್ಥಿಗಳು ಬೆಂಬಲಿಗರನ್ನು ಮಾತ್ರ ಕಳುಹಿಸುತ್ತಿದ್ದಾರಂತೆ.

ನಿಲ್ಲದ ಸಂಘರ್ಷ ● ಈದ್ ಸಂಭ್ರಮದ ಮೇಲೂ ಕರಿನೆರಳು ● ಸಾವಿನ ಸಂಖ್ಯೆ 330ಕ್ಕೆ ಏರಿಕೆ

ಸುಡಾನ್: ಸುರಕ್ಷಿತ ಸ್ಥಳಕ್ಕೆ ಜನರ ಗುಳೆ

ಖಾರ್ಟೂಮ್ (ಎಎಫ್‌ಪಿ): ಸುಡಾನ್‌ನಲ್ಲಿ ಅಧಿಕಾರಕ್ಕಾಗಿ ಸೇನೆ ಮತ್ತು ಅರೆಸೇನಾ ಪಡೆಗಳ ನಡುವೆ ನಡೆಯುತ್ತಿರುವ ಸಂಘರ್ಷಕ್ಕೆ ಆರನೇ ದಿನವಾದ ಗುರುವಾರವೂ ವಿರಾಮ ಬಿದ್ದಿಲ್ಲ.

ಖಾರ್ಟೂಮ್‌ನಲ್ಲಿ ಬಾಂಬ್, ಗುಂಡಿನ ದಾಳಿ ಮುಂದುವರಿದಿದೆ. ಭಯಗೊಂಡಿರುವ ನಾಗರಿಕರು ಅಗತ್ಯ ಸಾಮಗ್ರಿಗಳ ಗಂಟುಮೂಟೆ ಕಟ್ಟಿಕೊಂಡು ರಾಜಧಾನಿ ತೊರೆದು ಸುರಕ್ಷಿತ ಸ್ಥಳಗಳತ್ತ ತೆರಳುತ್ತಿರುವ ದೃಶ್ಯ ಸಾಮಾನ್ಯವಾಗಿದೆ.

ಇಲ್ಲಿಯವರೆಗೆ ಮೃತಪಟ್ಟವರ ಸಂಖ್ಯೆ 330ಕ್ಕೆ ಏರಿದ್ದು, 3,200 ಜನರು ಗಾಯಗೊಂಡಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ ತಿಳಿಸಿದೆ.

ಶೇ 70ರಷ್ಟು ಆಸ್ಪತ್ರೆಗಳಲ್ಲಿ ವೈದ್ಯಕೀಯ ಸೇವೆ ಸ್ಥಗಿತಗೊಂಡಿದೆ. ಗಾಯಗೊಂಡವರಿಗೆ ಸೂಕ್ತ ಚಿಕಿತ್ಸೆ ಸಿಗುತ್ತಿಲ್ಲ. ಹಾಗಾಗಿ, ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ವೈದ್ಯರ ಸಂಘ ತಿಳಿಸಿದೆ.

ರಂಜಾನ್ ಉಪವಾಸ ಮುಕ್ತಾಯಗೊಳ್ಳುತ್ತಿದ್ದು ಮುಸ್ಲಿಂ ಬಾಂಧವರು ಈದ್ ಉಲ್ ಫಿತರ್ ಹಬ್ಬದ ಸಡಗರಕ್ಕೆ ಸಜ್ಜಾಗುತ್ತಿದ್ದಾರೆ. ಆದರೆ, ಸೇನಾ ಮುಖ್ಯಸ್ಥ ಜನರಲ್ ಅಬ್ದುಲ್ ಫತ್ತಾಹ್ ಅಲ್ ಬುಹ್ರಾನ್ ಹಾಗೂ ಅರೆಸೇನಾ ಪಡೆ ಮುಖ್ಯಸ್ಥ ಮೊಹಮ್ಮದ್ ಹಮದಾನ್ ದಾಗಲೊ ಕದನ ವಿರಾಮ ಘೋಷಿಸುವ ಯಾವುದೇ ಸುಳಿವು ನೀಡಿಲ್ಲ.



ಸೇನಾ ಪಡೆಗಳ ನಡುವಣ ಸಂಘರ್ಷ ಕೊನೆಗೊಳ್ಳದ ಕಾರಣ ಸುಡಾನ್‌ನ ರಾಜಧಾನಿ ಖಾರ್ಟೂಮ್ ನಗರ ತೊರೆದು ಸುರಕ್ಷಿತ ಸ್ಥಳಗಳಿಗೆ ತೆರಳುತ್ತಿರುವ ನಾಗರಿಕರು – ಎಎಫ್‌ಪಿ ಚಿತ್ರ

‘ಶುಕ್ರವಾರದಿಂದ ಈದ್ ಸಂಭ್ರಮ ಶುರುವಾಗಲಿದೆ. ಸಂಘರ್ಷ ಕೊನೆಯಾಗುವುದನ್ನು ಎದುರು ನೋಡುತ್ತಿದ್ದೇವೆ. ಆದರೆ, ಸದ್ಯದ ಸ್ಥಿತಿಯಲ್ಲಿ ಈ ನಿರೀಕ್ಷೆ ಕಷ್ಟಕರ’ ಎಂದು ಖಾರ್ಟೂಮ್ ನಿವಾಸಿ ಅಬ್ದುಲ್ಲಾ ಅಳಲು ತೋಡಿಕೊಂಡರು.

‘ವೈಮಾನಿಕ ದಾಳಿಯ ಸದ್ದಿನಿಂದ ಮುಂಜಾನೆ 4.30ಗಂಟೆಗೆ ಎಚ್ಚರಗೊಂಡೆವು. ಗುಂಡುಗಳು ಮನೆಯೊಳಗೆ ನುಸುಳದಂತೆ ಮನೆಯ ಬಾಗಿಲು, ಕಿಟಕಿಗಳನ್ನು ಭದ್ರಪಡಿಸಿಕೊಂಡೆವು. ಆದರೆ, ಮನೆಯ ಗೋಡೆಗಳಿಗೆ ಹಾನಿಯಾಗಿರುವ ಸಾಧ್ಯತೆಯಿದೆ’ ಎಂದು ರಾಜಧಾನಿಯ ದಕ್ಷಿಣ ಭಾಗದ ನಿವಾಸಿಯೊಬ್ಬರು ತಿಳಿಸಿದರು.

‘ರಸ್ತೆಗಳಲ್ಲಿ ಅರೆಸೇನಾ ಪಡೆಯ ಯೋಧರನ್ನು ಹೊತ್ತ ವಾಹನಗಳು ಸಂಚರಿಸುತ್ತಿವೆ. ಅವರ ಕೈಯಲ್ಲಿ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿವೆ. ಬೀದಿಗಳಲ್ಲಿ ಹೆಣಗಳು ಬಿದ್ದಿವೆ. ಭಯದಿಂದ ಸುರಕ್ಷಿತ ಸ್ಥಳಕ್ಕೆ ತೆರಳುತ್ತಿದ್ದೇವೆ’ ಎಂದೂ ಹೇಳಿದರು.

ಅರೆಸೇನಾ ಪಡೆಯು ಕದನ ವಿರಾಮ ಘೋಷಿಸಿತ್ತು. ಆದರೂ, ಗುಂಡಿನ ದಾಳಿ ನಿಂತಿಲ್ಲ. ವಿಮಾನ ನಿಲ್ದಾಣ ಮತ್ತು ಮಿಲಿಟರಿ ಪಡೆ ಕಚೇರಿಯ ಸುತ್ತಮುತ್ತಲಿನ ಪ್ರದೇಶದಲ್ಲಿ ಮದ್ದುಗುಂಡುಗಳ ಸಿಡಿತದಿಂದ ದಟ್ಟ ಹೊಗೆ ಆವರಿಸಿತ್ತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ಈಜಿಪ್ಟ್ ಸೈನಿಕರ ಸ್ಥಳಾಂತರ: ಸುಡಾನ್‌ನಲ್ಲಿ ಜಂಟಿ ಸಮರಾಭ್ಯಾಸದ ತರಬೇತಿಗೆ ನಿಯೋಜನೆಗೊಂಡಿದ್ದ ಈಜಿಪ್ಟ್‌ನ 177 ಸೈನಿಕರನ್ನು ಅರೆಸೇನಾ ಪಡೆಯು ಬುಧವಾರ ಸೆರೆ ಹಿಡಿದಿತ್ತು. ಅವರನ್ನು ಮೂರು ವಿಮಾನಗಳ ಮೂಲಕ ಸುರಕ್ಷಿತವಾಗಿ ಕೈರೊಗೆ ಸ್ಥಳಾಂತರಿಸಲಾಗಿದೆ ಎಂದು ಈಜಿಪ್ಟ್ ಸೇನೆ ಖಚಿತಪಡಿಸಿದೆ. ವಾಯುಪಡೆಯ 27 ಸೈನಿಕರು ರೆಡ್‌ಕ್ರಾಸ್ ಸಂಸ್ಥೆ ಮತ್ತು ಈಜಿಪ್ಟ್ ರಾಯಭಾರ ಕಚೇರಿಯಲ್ಲಿ ಸುರಕ್ಷಿತವಾಗಿದ್ದು, ಅವರ ಸ್ಥಳಾಂತರಕ್ಕೂ ಸಿದ್ಧತೆ ನಡೆದಿದೆ ಎಂದು ತಿಳಿಸಿದೆ.

ಭಾರತೀಯರ ಸ್ಥಳಾಂತರಕ್ಕೆ ಸಿದ್ಧತೆ

ನವದೆಹಲಿ(ಪಿಟಿಐ): ‘ಸುಡಾನ್‌ನಲ್ಲಿ ಸಿಲುಕಿರುವ ಭಾರತೀಯರನ್ನು ಸುರಕ್ಷಿತವಾಗಿ ತಾಯ್ನಾಡಿಗೆ ಕರೆತರಲು ಸಿದ್ಧತೆ ನಡೆದಿದ್ದು, ವಿಮಾನಗಳ ವ್ಯವಸ್ಥೆ ಮಾಡಲಾಗುತ್ತಿದೆ. ಕಾರ್ಯಾಚರಣೆಯು ಅಲ್ಲಿನ ಪರಿಸ್ಥಿತಿಯನ್ನು ಅವಲಂಬಿಸಿದೆ’ ಎಂದು ಭಾರತೀಯ ವಿದೇಶಾಂಗ ಸಚಿವಾಲಯ ಸ್ಪಷ್ಟಪಡಿಸಿದೆ.

ಸುಡಾನ್ ಸ್ಥಿತಿಗತಿ ಬಗ್ಗೆ ವಿದೇಶಾಂಗ ಸಚಿವ ಜೈಶಂಕರ್ ನ್ಯೂಯಾರ್ಕ್‌ಗೆ ಭೇಟಿ ನೀಡಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜೊತೆಗೆ ಚರ್ಚಿಸುವ ನಿರೀಕ್ಷೆಯಿದೆ. ಸುಡಾನ್‌ನ ಬೆಳವಣಿಗೆ, ಭಾರತೀಯರ ಸುರಕ್ಷತೆ ಬಗ್ಗೆ ನಿಗಾವಹಿಸಲಾಗಿದೆ ಎಂದು ವಿದೇಶಾಂಗ ವಕ್ತಾರ ಅರಿಂಧಮ್ ಬಗ್ಚಿ ತಿಳಿಸಿದ್ದಾರೆ.

ಕದನ ವಿರಾಮ ಕಗ್ಗಂಟು

ಖಾರ್ಟೂಮ್ (ರಾಯಟರ್ಸ್): ‘ಈದ್ ಹಿನ್ನೆಲೆಯಲ್ಲಿ ಕದನ ವಿರಾಮಕ್ಕೆ ಸಿದ್ಧನಿದ್ದೇನೆ. ಆದರೆ, ಸೇನಾ ಮುಖ್ಯಸ್ಥ ಅಬ್ದುಲ್ ಜೊತೆಗೆ ನಾನು ಮಾತುಕತೆಗೆ ಸಿದ್ಧವಿಲ್ಲ. ಆತನೊಬ್ಬ ‘ಕ್ರಿಮಿನಲ್’ ಎಂದು ಅರೆಸೇನಾ ಪಡೆಯ ಮುಖ್ಯಸ್ಥ ಮೊಹಮ್ಮದ್ ಹಮದಾನ್ ದಾಗಲೊ ಹೇಳಿದ್ದಾರೆ’ ಎಂದು ಅಲ್ ಝುಜೀರಾ ಟಿ.ವಿ ವರದಿ ಮಾಡಿದೆ.

‘ಹಲವು ಪ್ರದೇಶಗಳಲ್ಲಿ ಅರೆಸೇನೆಯ ಯೋಧರು ರಸ್ತೆ ಬಂದ್ ಮಾಡಿ ಜನರ ಸುಗಮ ಸಂಚಾರಕ್ಕೆ ತೊಂದರೆ ನೀಡುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ಕದನ ವಿರಾಮ ಸಾಧ್ಯವಿಲ್ಲ’ ಎಂದು ಅಬ್ದುಲ್ ಸ್ಪಷ್ಟಪಡಿಸಿದ್ದಾರೆ.

‘ಗ್ಯಾಂಗ್‌ಸ್ಟರ್’ ಸ್ನೇಹಿತ ಕಾಂಗ್ರೆಸ್ ತಾರಾ ಪ್ರಚಾರಕ’

ಬೆಂಗಳೂರು: ಕಾಂಗ್ರೆಸ್ ಪಕ್ಷದ ತಾರಾ ಪ್ರಚಾರಕರ ಪಟ್ಟಿಯಲ್ಲಿ ಉತ್ತರ ಪ್ರದೇಶದ ಇಮ್ರಾನ್ ಪ್ರತಾಪ್ ಗಡಿಯಾ ಹೆಸರಿದ್ದು, ಈತ ಇತ್ತೀಚೆಗೆ ಹತ್ಯೆಯಾದ ‘ಗ್ಯಾಂಗ್‌ಸ್ಟರ್’ ಅತೀಕ್ ಅಹ್ಮದ್‌ನ ಆತ್ಮೀಯ ಸ್ನೇಹಿತ ಎಂದು ಬಿಜೆಪಿ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿ ಶೋಭಾ ಕರಂದ್ಲಾಜೆ ದೂರಿದರು.

‘ಈ ಮೂಲಕ ಕಾಂಗ್ರೆಸ್ ಪಕ್ಷವು ರಾಜ್ಯ ವಿಧಾನಸಭಾ ಚುನಾವಣಾ ಪ್ರಚಾರಕ್ಕೆ ದೇಶ ದ್ರೋಹಿಗಳು ಮತ್ತು ಸಮಾಜ ವಿರೋಧಿ ಶಕ್ತಿಗಳನ್ನು ಬಳಸಿಕೊಳ್ಳುತ್ತಿದೆ’ ಎಂದು ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

‘ಅತೀಕ್ ಅಹ್ಮದ್ ತನ್ನ ಗುರುವೆಂದು ಹೇಳುತ್ತಿದ್ದುದು ಮಾತ್ರವಲ್ಲದೆ ಅತೀಕ್ ಕುರಿತಾಗಿ ಶಾಯಿರಿಗಳನ್ನೂ ಇಮ್ರಾನ್ ಬರೆಯುತ್ತಿದ್ದ. ಇಮ್ರಾನ್ ಕಾರ್ಯಕ್ರಮಗಳಲ್ಲಿ ಅತೀಕ್ ಭಾಗವಹಿಸುತ್ತಿದ್ದ. ಇಮ್ರಾನ್ ಶಾಯಿರಿಗಳಲ್ಲಿ ದೇಶ ದ್ರೋಹ, ಸಮಾಜ ವಿರೋಧಿ ಮತ್ತು ಹಿಂದೂಗಳ ವಿರುದ್ಧ ಮುಸ್ಲಿಮರನ್ನು ಎತ್ತಿ ಕಟ್ಟುವ ಅಂಶಗಳಿವೆ. ಈ ವ್ಯಕ್ತಿಯನ್ನು ಮಹಾರಾಷ್ಟ್ರಕ್ಕೆ ಕರೆತಂದು ರಾಜ್ಯಸಭಾ ಸದಸ್ಯನನ್ನಾಗಿ ಮಾಡಿ ಕಾಂಗ್ರೆಸ್ ಪಾಪದ ಕೆಲಸ ಮಾಡಿದೆ’ ಎಂದು ದೂರಿದರು.

ಅತೀಕ್ ಅಹ್ಮದ್ ಮೇಲೆ ವಿವಿಧ ರೀತಿಯ 102 ಪ್ರಕರಣಗಳಿದ್ದವು. ಇಂತಹ ಅಪರಾಧಿಗೆ ಇಮ್ರಾನ್ ತನ್ನ ಮನೆಯಲ್ಲಿ ಆತಿಥ್ಯ ನೀಡುತ್ತಿದ್ದ ಎಂದು ಶೋಭಾ ಹೇಳಿದರು.

ಸುದ್ದಿ 2 ನಿಮಿಷ

ಕೆಎಂಎಫ್: ಆಯ್ಕೆ ಪಟ್ಟಿ– ಮಧ್ಯಂತರ ಆದೇಶ ತೆರವು

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) 487 ವಿವಿಧ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಅಂತಿಮ ಆಯ್ಕೆಪಟ್ಟಿ ಪ್ರಕಟಿಸಲು ವಿಧಿಸಿದ್ದ ಮಧ್ಯಂತರ ತಡೆ ಆದೇಶವನ್ನು ಹೈಕೋರ್ಟ್ ಗುರುವಾರ ತೆರವುಗೊಳಿಸಿದೆ. ಇದೇ ವೇಳೆ, ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲು ಕೆಎಂಎಫ್‌ಗೆ ಅನುಮತಿಸಲಾಗಿದ್ದು, ‘ಈ ಆದೇಶ ಅರ್ಜಿಯ ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ’ ಎಂದು ಸ್ಪಷ್ಟಪಡಿಸಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಐತಪ್ಪನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ಸೇರಿದಂತೆ ಐದು ಸಂಘಗಳು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

‘2023ರ ಮಾರ್ಚ್ 17ರಂದು ನೇಮಕಾತಿಯ ಅಂತಿಮ ಪ್ರಕಟಿಸುವುದಕ್ಕೆ ನಿರ್ಬಂಧಿಸಿದ್ದ ಆದೇಶದಲ್ಲಿ ಮಾರ್ಪಾಡು ಮಾಡಲಾಗಿದೆ. ಅಂತಿಮ ಆಯ್ಕೆ ಪಟ್ಟಿಯನ್ನು ಕೆಎಂಎಫ್ ಪ್ರಕಟಿಸಬಹುದಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಬಹುದಾಗಿದ್ದು, ಅದರಲ್ಲಿ ನೇಮಕಾತಿಯು ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ ಎಂದು ಉಲ್ಲೇಖಿಸಬೇಕು’ ಎಂದು ನ್ಯಾಯಪೀಠ ಹೇಳಿದೆ.



ಕೆಎಂಎಫ್ ಪರ ಹಿರಿಯ ವಕೀಲ ಎಸ್.ಎಸ್. ನಾಗಾನಂದ, ಅರ್ಜಿದಾರರ ಪರ ಹಿರಿಯ ವಕೀಲ ಡಿ.ಆರ್.ರವಿ ಶಂಕರ್ ಹಾಗೂ 3ನೇ ಪ್ರತಿವಾದಿ ಗುಜರಾತ್‌ನ ಆನಂದ್ ಜಿಲ್ಲೆಯ ಗ್ರಾಮೀಣ ನಿರ್ವಹಣೆ ಸಂಸ್ಥೆ (ಐಎಂಆರ್‌ಎ)ಯ ಪರ ಹಿರಿಯ ವಕೀಲ ಉದಯ್ ಹೊಳ್ಳ ವಾದ ಮಂಡಿಸಿದರು.

ಪ್ರಾಣೇಶ್ ಪ್ರಕರಣ: ಮೇಲ್ಮನವಿ ವಜಾ

ಬೆಂಗಳೂರು: ‘ನಗರ ಸ್ಥಳೀಯ ಸಂಸ್ಥೆಗಳ ಕ್ಷೇತ್ರಗಳಿಂದ ವಿಧಾನ ಪರಿಷತ್ತಿಗೆ ನಡೆಯವ ಚುನಾವಣೆಯಲ್ಲಿ ಸ್ಥಳೀಯ ಸಂಸ್ಥೆಗಳ ನಾಮ ನಿರ್ದೇಶಿತ ಸದಸ್ಯರಿಗೆ ಮತದಾನದ ಹಕ್ಕು ಇಲ್ಲ’ ಎಂದು 2022ರ ನವೆಂಬರ್ 3ರಂದು ನೀಡಿದ್ದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಮೇಲ್ಮನವಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಹೈಕೋರ್ಟ್ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ವಿಧಾನ ಪರಿಷತ್ ಬಿಜೆಪಿ ಸದಸ್ಯ ಎಂ.ಕೆ. ಪ್ರಾಣೇಶ್ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ಮೇಲ್ಮನವಿಯನ್ನು ವಜಾಗೊಳಿಸಿ ಆದೇಶಿಸಿತು.

ಏಕಸದಸ್ಯ ನ್ಯಾಯಪೀಠದ ಆದೇಶದಿಂದ ಪ್ರಾಣೇಶ್ ಅವರಿಗೆ ಹಿನ್ನಡೆ ಉಂಟಾಗಿತ್ತು. ಹೀಗಾಗಿ, ಅವರು ಮೇಲ್ಮನವಿ ಸಲ್ಲಿಸಿದ್ದರು. ಏತನ್ಮಧ್ಯೆ, ‘ಪ್ರಾಣೇಶ್ ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು ಎಂದು ಕೋರಿ ಸಲ್ಲಿಸಲಾಗಿರುವ ಪ್ರತ್ಯೇಕ ಚುನಾವಣಾ ತಕರಾರು ಅರ್ಜಿ ಹೈಕೋರ್ಟ್‌ನಲ್ಲಿ ವಿಚಾರಣೆಗೆ ಬಾಕಿ ಇದೆ. ಈ ಹಿನ್ನೆಲೆಯಲ್ಲಿ ಸದ್ಯಕ್ಕೆ ಪ್ರಾಣೇಶ್ ಅವರ ಸದಸ್ಯತ್ವಕ್ಕೆ ಯಾವುದೇ ಬಾಧೆ ಇಲ್ಲ’ ಎಂಬುದು ಕಾನೂನು ತಜ್ಞರ ಅಭಿಮತ.

‘ಟಿಕೆಟ್ ವಂಚಿತರಿಗೆ ಸರ್ಕಾರದಲ್ಲಿ ಸ್ಥಾನಮಾನ’

ಪ್ರಜಾವಾಣಿ ವಾರ್ತೆ

ಸಿಂಧನೂರು (ರಾಯಚೂರು ಜಿಲ್ಲೆ): ‘ವಿಧಾನಸಭಾ ಚುನಾವಣೆಯಲ್ಲಿ ಟಿಕೆಟ್ ವಂಚಿತರಿಗೆ ಮುಂದಿನ ಲೋಕಸಭಾ ಚುನಾವಣೆ ಹಾಗೂ ಸರ್ಕಾರದಲ್ಲಿ ಮಹತ್ವದ ಸ್ಥಾನಗಳು ಸಿಗಲಿವೆ’ ಎಂದು ಕಾಂಗ್ರೆಸ್ ಪಕ್ಷದ ಕರ್ನಾಟಕ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ತಿಳಿಸಿದರು.

ಸಿಂಧನೂರು ಕ್ಷೇತ್ರಕ್ಕೆ ಪಕ್ಷೇತರ ಅಭ್ಯರ್ಥಿಯಾಗಿ ಗುರುವಾರ ನಾಮಪತ್ರ ಸಲ್ಲಿಸಿದ ಕೆಪಿಸಿಸಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಬಸನಗೌಡ ಬಾದರ್ಲಿ ಅವರ ಮನವೊಲಿಕೆ ಮಾಡಿದ ಬಳಿಕ ಮಾತನಾಡಿದ ಅವರು, ‘ಬಾದರ್ಲಿ ಅವರಿಗೆ ಇನ್ನೂ 8 ತಿಂಗಳಲ್ಲಿ ಬರುವ ಲೋಕಸಭೆ ಚುನಾವಣೆಯಲ್ಲಿ ಕೊಪ್ಪಳ ಕ್ಷೇತ್ರದಿಂದ ಸ್ಪರ್ಧಿಸಲು ಟಿಕೆಟ್ ನೀಡಲಾಗುವುದು’ ಎಂದು ಹೇಳಿದರು.

ಬೇಗ ಕರೆಸಿಕೊಳ್ಳಿ, ಕನ್ನಡಿಗರ ಮೊರೆ

● ಡಿ.ಕೆ.ಬಸವರಾಜು

ದಾವಣಗೆರೆ: ‘ಉಕ್ರೇನ್‌ನಲ್ಲಿ ಸಿಲುಕಿದ್ದ ಭಾರತೀಯರನ್ನು ಸುರಕ್ಷಿತವಾಗಿ ಸ್ವದೇಶಕ್ಕೆ ವಾಪಸ್ ಕರೆಸಿಕೊಂಡಂತೆಯೇ ಕೇಂದ್ರ ಸರ್ಕಾರ ನಮ್ಮನ್ನೂ ಆದಷ್ಟು ಬೇಗ ವಾಪಸು ಕರೆಸಿಕೊಳ್ಳಲಿದೆ’ ಎಂಬ ಆಶಾಭಾವದೊಂದಿಗೆ ಸುಡಾನ್‌ನ ವಿವಿಧ ನಗರಗಳಲ್ಲಿ ಸಿಲುಕಿರುವ ಭಾರತೀಯರೇನೋ ಕಾಲ ಕಳೆಯುತ್ತಿದ್ದಾರೆ. ಆದರೆ, ದಿನ ಕಳೆದಂತೆ ಅವರ ಆತಂಕ ಹೆಚ್ಚುತ್ತಿದೆ.

ಆಯುರ್ವೇದ ಗಿಡಮೂಲಿಕೆಗಳ ವ್ಯಾಪಾರಕ್ಕೆಂದು ಸುಡಾನ್‌ಗೆ ತೆರಳಿರುವ, ಹಕ್ಕಿಪಿಕ್ಕಿ ಸಮುದಾಯದ ನೂರಾರು ಕನ್ನಡಿಗರ ಸುರಕ್ಷಿತ ವಾಪಸಾತಿಯ ಭರವಸೆ ನೀಡಿದ್ದ ಸರ್ಕಾರಕ್ಕೆ ಇದುವರೆಗೆ ರಕ್ಷಣಾ ಕಾರ್ಯಾಚರಣೆ ನಡೆಸಲು ಸಾಧ್ಯವಾಗಿಲ್ಲ.

ಸುಡಾನ್‌ನ ರಾಜಧಾನಿ ಖಾರ್ಟೂಮ್‌ನಲ್ಲಿರುವ ಭಾರತೀಯ ದೂತಾವಾಸ ಕಚೇರಿಯ ಅಧಿಕಾರಿಗಳೊಂದಿಗೆ ಗುರುವಾರ ಮಾತನಾಡಿರುವ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅಲ್ಲಿನ ಸ್ಥಿತಿಗತಿ ಅವಲೋಕಿಸಿದ್ದಾರೆ. ಆದರೆ, ಜೀವ ಉಳಿದರೆ ಸಾಕು ಎಂಬ ಆಶಯದಲ್ಲಿ ದಿನ ದೂಡುತ್ತಿರುವ ಭಾರತೀಯರ ಸುರಕ್ಷಿತ ವಾಪಸಾತಿ ಮತ್ತಷ್ಟು ವಿಳಂಬವಾಗುವ ಸಾಧ್ಯತೆಗಳೇ ಇವೆ ಎಂದು ತಿಳಿದುಬಂದಿದೆ.



ಸುಡಾನ್ ದೇಶದ ಅಲ್ಫಾಶೇರ್ ನಗರದಲ್ಲಿ ಸಿಲುಕಿಕೊಂಡಿರುವ ಕನ್ನಡಿಗರು

‘ಸಚಿವರು ಮಾಹಿತಿ ಪಡೆದಿರುವ ವಿಷಯ ಸಹಾಯವಾಣಿಯಿಂದ ತಿಳಿದಿದೆ. ನಮ್ಮನ್ನು ಸುರಕ್ಷಿತವಾಗಿರುವ ಅಕ್ಕಪಕ್ಕದ ದೇಶಗಳ ಮೂಲಕವಾದರೂ ಭಾರತಕ್ಕೆ ಕರೆಸಿಕೊಳ್ಳಲು ವ್ಯವಸ್ಥೆ ಮಾಡಬೇಕಿದೆ’ ಎಂದು ಖಾರ್ಟೂಮ್‌ನಿಂದ 500 ಕಿಲೋಮೀಟರ್ ದೂರದಲ್ಲಿರುವ ಅಲ್ಫಾಶೇರ್ ನಗರದಲ್ಲಿ ಸಿಲುಕಿರುವ ಚನ್ನಗಿರಿ ತಾಲ್ಲೂಕಿನ ಗೋಪನಾಳ್ ಗ್ರಾಮದ ನಂದಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

‘ವಿಮಾನ ನಿಲ್ದಾಣಗಳನ್ನೂ ಸೇನೆ ವಶಕ್ಕೆ ಪಡೆದಿದೆ. ಸುಡಾನ್‌ನೊಂದಿಗೆ ಗಡಿ ಹಂಚಿಕೊಂಡಿರುವ ದೇಶಗಳ ಮೂಲಕ ಸ್ಥಳಾಂತರಕ್ಕೆ ಕೇಂದ್ರ ಸರ್ಕಾರ ವ್ಯವಸ್ಥೆ ಮಾಡಬೇಕು’ ಎಂದು ಮತ್ತೊಬ್ಬ ಸಂತ್ರಸ್ತ ಪ್ರಭು ಆಗ್ರಹಿಸಿದ್ದಾರೆ.

‘ಸಂಘರ್ಷದಿಂದಾಗಿ ಜಿಗುಪ್ಸೆ ಉಂಟಾಗಿದೆ. ಕದನ ವಿರಾಮದ ಮಾತುಕತೆಗಳು ವಿಫಲವಾಗಿದ್ದು, ಜೀವಭಯ ಹೆಚ್ಚಿದೆ. ಅಡುಗೆ ಮಾಡಲು ದಿನಸಿ ಪದಾರ್ಥಗಳು ಸಿಗುತ್ತಿಲ್ಲ. ದಿನಸಿ ಖರೀದಿಸಲು ತೆರಳಿದ ನಮ್ಮವರನ್ನು ವ್ಯಾಪಾರಿಯು ಕಳ್ಳತನದ ಭಯದಿಂದ ಏನನ್ನೂ ಕೊಡದೇ ಹೊರಹಾಕಿದ್ದಾನೆ. ಇದರಿಂದ ನಮಗೆ ದಿಕ್ಕೇ ತೋಚದಂತಾಗಿದೆ. ಪರಿಸ್ಥಿತಿಯನ್ನು ಅವಲೋಕಿಸಿ ಶೀಘ್ರವೇ ಕರೆಸಿಕೊಳ್ಳಬೇಕು’ ಎಂದೂ ಮನವಿ ಮಾಡಿದ್ದಾರೆ.

‘ನಾವು ಒಂದೇ ಸೂರಿನಡಿ 33 ಜನ ಇದ್ದೇವೆ. ಮದ್ದುಗುಂಡುಗಳ ದಾಳಿ ನಿರಂತರವಾಗಿದೆ. ಅಡುಗೆ ಮಾಡಲು ನೀರಿಲ್ಲದೇ ಪಕ್ಕದ ಮನೆಯವರನ್ನು ಕಾಡಿಬೇಡಿ ಪಡೆದಿದ್ದೇವೆ. ಆಹಾರ, ನೀರು ಇಲ್ಲದೆ ದಿನ, ಜೀವನ ಕಳೆಯುವುದು ಕಷ್ಟಸಾಧ್ಯ’ ಎಂದು ಅವರು ಅಳಲು ತೋಡಿಕೊಂಡಿದ್ದಾರೆ.

ಬುಧವಾರ ಸಂತ್ರಸ್ತ ಕುಟುಂಬಗಳನ್ನು ದೂರವಾಣಿ ಮೂಲಕ ಸಂಪರ್ಕಿಸಿದ್ದ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಆಯುಕ್ತ ಡಾ.ಮನೋಜ್ ರಾಜನ್, ‘ಶೀಘ್ರವೇ ಎಲ್ಲರನ್ನೂ ಸುರಕ್ಷಿತವಾಗಿ ಸ್ವದೇಶಕ್ಕೆ ವಾಪಸ್ ಕರೆತರಲು ಕ್ರಮ ಕೈಗೊಳ್ಳಲಾಗುವುದು’ ಎಂಬ ಭರವಸೆ ನೀಡಿದ್ದರು. ಆದರೆ, ಮತ್ತೆ ಸಂತ್ರಸ್ತರನ್ನು ಸಂಪರ್ಕಿಸಿಲ್ಲ.

‘ಜೈವಿಕ ವಿಕಾಸ’ ಸಿದ್ಧಾಂತ ಪಠ್ಯಕ್ಕೆ ಕೊಕ್: ಖಂಡನೆ

ಬೆಂಗಳೂರು: ಚಾರ್ಲ್ಸ್ ಡಾರ್ವಿನ್ ಅವರ ‘ಜೈವಿಕ ವಿಕಾಸ’ ಸಿದ್ಧಾಂತವನ್ನು 10ನೇ ತರಗತಿ ಪಠ್ಯದಿಂದ ಶಾಶ್ವತವಾಗಿ ಕೈಬಿಟ್ಟಿರುವುದನ್ನು ಬ್ರೇಕ್‌ಥ್ರೂ ಸೊಸೈಟಿ ಖಂಡಿಸಿದೆ.

ಮಾನವನ ಸೃಷ್ಟಿ ಮತ್ತು ವಿಕಾಸ ದೈವಸೃಷ್ಟಿಯಲ್ಲ, ಜೀವವಿಕಾಸಕ್ಕೆ ಸಾಕಷ್ಟು ವೈಜ್ಞಾನಿಕ ಪುರಾವೆಗಳಿವೆ. ಬದಲಾವಣೆ ಶಾಶ್ವತ, ಎಲ್ಲ ಸಿದ್ಧಾಂತಗಳು ಬದಲಾವಣೆಗೆ ಒಳಗಾಗುತ್ತಲೇ ಇರುತ್ತವೆ. ಆದರೆ, ಡಾರ್ವಿನ್ ಅವರ ‘ವಿಕಾಸವಾದ’ ವೈಜ್ಞಾನಿಕ ತಳಹದಿ ಇಂದಿಗೂ ಬದಲಾಗಿಯೇ ಇಲ್ಲ. ಮಾನವನ ಸೃಷ್ಟಿ ಮತ್ತು ವಿಕಾಸ ಈ ತತ್ವದ ಮೇಲೆ ನಿಂತಿದೆ. ಗಣಿತ, ವಿಜ್ಞಾನ ಸೇರಿದಂತೆ ಹಲವು ಸಿದ್ಧಾಂತಗಳು ಬದಲಾವಣೆಗೆ ಒಳಪಟ್ಟರೂ, ಜೀವ ವಿಜ್ಞಾನದಲ್ಲಿನ ಡಾರ್ವಿನ್ ಸಿದ್ಧಾಂತಕ್ಕೆ ಪರ್ಯಾಯವಾದ ಮತ್ತೊಂದು ಸಿದ್ಧಾಂತ ಕಾಣಲು ಸಾಧ್ಯವಿಲ್ಲ’ ಎಂದು ಪ್ರತಿಪಾದಿಸಿದೆ.

‘ಹಾಗಾಗಿ, ಇಂತಹ ಸಿದ್ಧಾಂತವನ್ನು ಪ್ರೌಢಶಾಲಾ ಹಂತದ 9 ಅಥವಾ 10ನೇ ತರಗತಿ ವಿದ್ಯಾರ್ಥಿಗಳಿಗೆ ಬೋಧಿಸಬೇಕಿದೆ’ ಎಂದು 1,800ಕ್ಕೂ ಹೆಚ್ಚಿನ ವಿಜ್ಞಾನಿಗಳು, ವಿಜ್ಞಾನ ಶಿಕ್ಷಕರು, ಶಿಕ್ಷಣ ತಜ್ಞರು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ತಿಗೆ (ಎನ್‌ಸಿಇಆರ್‌ಟಿ) ಪತ್ರ ಬರೆದಿದ್ದಾರೆ.

ಕೋವಿಡ್ ಸಮಯದಲ್ಲಿ ಮಕ್ಕಳಿಗೆ ಶೈಕ್ಷಣಿಕ ಅವಧಿ ಕಡಿಮೆ ಮಾಡಿದ್ದ ಕಾರಣ ಡಾರ್ವಿನ್ ಸಿದ್ಧಾಂತ ಸೇರಿದಂತೆ ಪಠ್ಯದ ಕೆಲ ವಿಷಯಗಳನ್ನು ಕೈಬಿಡಲಾಗಿತ್ತು. ಹೊಸ ರಾಷ್ಟ್ರೀಯ ಶಿಕ್ಷಣ ನೀತಿ–2020 ಜಾರಿಗೆ ಬಂದ ನಂತರ ‘ಪಾಠಗಳನ್ನು ಅದರ ಮೂಲಭೂತ ಅಂಶಗಳಿಗೆ ಇಳಿಸಿ, ಆಳವಾದ ಅಧ್ಯಯನಕ್ಕೆ ವಿದ್ಯಾರ್ಥಿಗಳಿಗೆ ಅವಕಾಶ ಮಾಡಿಕೊಡಬೇಕು’ ಎಂಬ ನಿಯಮದ ಪ್ರಕಾರ ಹಲವು ವಿಷಯಗಳನ್ನು ಕೈಬಿಟ್ಟಿರುವುದಾಗಿ ಎನ್‌ಸಿಇಆರ್‌ಟಿ ಹೇಳಿದೆ. ಹಾಗಂತ ಜೈವಿಕ ವಿಕಾಸ ಸಿದ್ಧಾಂತ ಕೈಬಿಡುವುದು ಸಲ್ಲದು ಎಂದು ಪತ್ರದಲ್ಲಿ ವಿವರಿಸಲಾಗಿದೆ.

ಸುರೇಶ್ ನಾಮಪತ್ರ ಕುತೂಹಲ

ಒಂದನೇ ಪುಟದಿಂದ...

ತಮ್ಮ ಕುಟುಂಬದ ಆಸ್ತಿ ವಿವರ, ತಮ್ಮ ವಿರುದ್ಧ ದಾಖಲಾದ ಪ್ರಕರಣಗಳ ಮಾಹಿತಿ ಒಳಗೊಂಡ 108 ಪುಟಗಳ ಪ್ರಮಾಣಪತ್ರವನ್ನು ಅವರು ಲಗತ್ತಿಸಿದ್ದಾರೆ. ಒಟ್ಟು ₹1,414 ಕೋಟಿ ಆಸ್ತಿ ಘೋಷಿಸಿಕೊಂಡಿದ್ದಾರೆ.

‘ಈ ಪ್ರಮಾಣಪತ್ರದಲ್ಲಿನ ಇಂಚಿಂಚು ಮಾಹಿತಿಯನ್ನೂ ಬಿಜೆಪಿ ಜಾಲಾಡುತ್ತಿದೆ. ಆಸ್ತಿ ವಿವರಗಳ ಕುರಿತು ಐ.ಟಿ. ಮತ್ತು ಇ.ಡಿ.ಯಿಂದಲೂ ಪರಿಶೀಲನೆ ನಡೆಸಿದೆ. ಯಾವುದಾದರೂ ಲೋಪ ಹುಡುಕಿ ಶಿವಕುಮಾರ್ ನಾಮಪತ್ರ ತಿರಸ್ಕಾರಕ್ಕೆ ಮನವಿ ಸಲ್ಲಿಸಬಹುದು. ನಂತರ ಅಧಿಕಾರಿಗಳನ್ನು ಬಳಸಿಕೊಂಡು ನಾಮಪತ್ರವನ್ನು ಅಸಿಂಧುಗೊಳಿಸಬಹುದು ಎನ್ನುವುದು ಕಾಂಗ್ರೆಸ್ ಮುಖಂಡರ ಆತಂಕವಾಗಿದೆ’ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಬಂಧನ ಭೀತಿ: ಶಿವಕುಮಾರ್‌ಗೆ ಐ.ಟಿ. ಮತ್ತು ಇ.ಡಿ. ವಾರದ ಹಿಂದಷ್ಟೇ ನೋಟಿಸ್ ನೀಡಿದ್ದು, ವಿಚಾರಣೆಗೆ ಹಾಜರಾಗುವಂತೆ ತಿಳಿಸಿದೆ. ಚುನಾವಣೆ ಸಂದರ್ಭದಲ್ಲಿ ಶಿವಕುಮಾರ್ ಅವರನ್ನು ಬಂಧಿಸಬಹುದು ಎನ್ನುವ ಆತಂಕವೂ ಕಾಂಗ್ರೆಸ್‌ಗೆ ಕಾಡುತ್ತಿದೆ ಎಂದೂ ಮೂಲಗಳು ತಿಳಿಸಿವೆ.

ಪ್ರಜಾ ಮತ ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

ಮುಂಚೆಯೇ ಸಿದ್ಧತೆ!

ವಿಧಾನಸಭೆ ಚುನಾವಣೆ ಸ್ಪರ್ಧೆಗೆ ಬೇಕಾದ ಕೆಲವು ನಿರಾಕ್ಷೇಪಣಾ ಪತ್ರಗಳನ್ನು (ಎನ್‌ಒಸಿ) ಸುರೇಶ್ ಅವರು ಮೂರ್‍ನಾಲ್ಕು ದಿನದ ಹಿಂದೆಯೇ ದೆಹಲಿಯಿಂದ ಪಡೆದುಕೊಂಡಿದ್ದರು. ತಮ್ಮ ಆಸ್ತಿ ವಿವರಗಳನ್ನೂ ಕಲೆಹಾಕಿದ್ದರು.

ಕನಕಪುರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸಚಿವ ಆರ್. ಅಶೋಕ ಸ್ಪರ್ಧೆ ಮಾಡಿದ್ದಾರೆ. ಅದಕ್ಕೆ ಪ್ರತಿಯಾಗಿ ಸುರೇಶ್ ಪದ್ಮನಾಭ ನಗರದಲ್ಲಿ ಅಶೋಕ ವಿರುದ್ಧ ಸ್ಪರ್ಧಿಸಬಹುದು ಎನ್ನಲಾಗಿತ್ತು. ಅದಕ್ಕಾಗಿ ದಾಖಲೆಗಳನ್ನು ಸಿದ್ಧಪಡಿಸಿಟ್ಟುಕೊಂಡಿದ್ದಾರೆ ಎಂದು ಹೇಳಲಾಗಿತ್ತು.

ಸಿಬಿಐ ತನಿಖೆ: ಡಿಕೆಶಿ ಅರ್ಜಿ ವಜಾ

ಒಂದನೇ ಪುಟದಿಂದ...

‘ಈಗಾಗಲೇ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿದ್ದ ಇಂತಹುದೇ ಮೇಲ್ಮನವಿಯನ್ನು ರಾಜ್ಯ ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠ 2020ರಲ್ಲೇ ವಜಾಗೊಳಿಸಿದೆ. ಈ ಅರ್ಜಿಯನ್ನು 2020ರಲ್ಲೇ ಸಲ್ಲಿಸಿದ್ದರೂ ಇದಕ್ಕೆ ತಡೆ ಸಿಕ್ಕಿಲ್ಲ.

ಆದಕಾರಣ, ಶಿವಕುಮಾರ್ ಅವರ ಈ ಅರ್ಜಿ ಊರ್ಜಿತವಾಗುವುದಿಲ್ಲ’ ಎಂಬ ಸಿಬಿಐ ವಾದವನ್ನು ನ್ಯಾಯಪೀಠ ಮಾನ್ಯ ಮಾಡಿದೆ.

‘ಎರಡೂವರೆ ವರ್ಷಗಳಲ್ಲಿ ಸಿಬಿಐ ಶೇ 90ರಷ್ಟು ತನಿಖೆಯನ್ನು ಈಗಾಗಲೇ ಪೂರ್ಣಗೊಳಿಸಿದೆ. ಈ ಕುರಿತಂತೆ ತನಿಖೆಯ ವಸ್ತುಸ್ಥಿತಿ ವರದಿಯನ್ನು ಕೋರ್ಟ್‌ಗೂ ಸಲ್ಲಿಸಲಾಗಿದೆ. ಇಷ್ಟೆಲ್ಲಾ ಸಮಯ ಕಳೆದ ಮೇಲೆ ಅರ್ಜಿದಾರರು ಅಧಿಸೂಚನೆ ಪ್ರಶ್ನಿಸುವುದಾಗಲೀ ಅಥವಾ ರದ್ದುಗೊಳಿಸಿ ಎಂದು ಕೋರುವುದಾಗಲಿ ಕಾನೂನು ಪ್ರಕಾರ ಸಾಧ್ಯವಿಲ್ಲ. ಇದು ಆದಾಯ ತೆರಿಗೆ ಕಾನೂನುಗಳ ಪ್ರಕಾರ ದಾಖಲಾಗಿಸಿರುವ ವಿಶೇಷ ಕ್ರಿಮಿನಲ್ ಪ್ರಕರಣ’ ಎಂಬ ಸಿಬಿಐ ವಾದಾಂಶವನ್ನು ನ್ಯಾಯಪೀಠ ಎತ್ತಿಹಿಡಿದಿದೆ. ರಾಜ್ಯ ಸರ್ಕಾರದ ಪರ ಪ್ರಾಸಿಕ್ಯೂಟರ್ ವಿ.ಎಸ್. ಹೆಗಡೆ, ‘ಒಕ್ಕೂಟ ವ್ಯವಸ್ಥೆಯಲ್ಲಿ ಸಿಬಿಐ ಕೋರಿದ್ದ ಮನವಿಗೆ ರಾಜ್ಯ ಸರ್ಕಾರ ಅನುವು ಮಾಡಿಕೊಟ್ಟಿದೆ. ಹೀಗಾಗಿ, ಸಿಬಿಐ ತನಿಖೆಗೆ ಸರ್ಕಾರ ನೀಡಿರುವ ಅನುಮತಿ ಸೂಕ್ತವಾಗಿದೆ’ ಎಂದು ಪ್ರತಿಪಾದಿಸಿದ್ದರು.

ಏನಿದು ಪ್ರಕರಣ?: ಸಿಬಿಐ ತನಿಖೆಗೆ ಅನುಮತಿ ನೀಡಿ ರಾಜ್ಯ ಸರ್ಕಾರ 2019ರ ಸೆಪ್ಟೆಂಬರ್ 25ರಂದು ಆದೇಶ ಹೊರಡಿಸಿತ್ತು. ಇದರನ್ವಯ ಸಿಬಿಐ ಭ್ರಷ್ಟಾಚಾರ ನಿಗ್ರಹ ಕಾಯ್ದೆ–1988ರ ಕಲಂ 13(2), 13 (1)(ಇ) ಅಡಿಯಲ್ಲಿ 2020ರ ಅಕ್ಟೋಬರ್ 3ರಂದು ಪ್ರಕರಣ ದಾಖಲಿಸಿತ್ತು. ಸಿಬಿಐ ತನಿಖೆಗೆ ಒಪ್ಪಿಸಿದ ರಾಜ್ಯ ಸರ್ಕಾರದ ಈ ಕ್ರಮವನ್ನು ಪ್ರಶ್ನಿಸಿ ಶಿವಕುಮಾರ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಏತನ್ಮಧ್ಯೆ, ಮತ್ತೊಂದು ರಿಟ್ ಅರ್ಜಿಯಲ್ಲಿ ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಶಿವಕುಮಾರ್ ವಿರುದ್ಧದ ಸಿಬಿಐ ತನಿಖೆಗೆ ಇದೇ ನ್ಯಾಯಪೀಠ ಫೆ.10ರಂದು ಮಧ್ಯಂತರ ತಡೆ ನೀಡಿದೆ. ಸದ್ಯ ಈ ಅರ್ಜಿ ವಿಚಾರಣೆಗೆ ಬಾಕಿ ಇದ್ದು ಮಧ್ಯಂತರ ತಡೆಯನ್ನು ಮೇ ಅಂತ್ಯದವರೆಗೆ ವಿಸ್ತರಿಸಲಾಗಿದೆ.

ಹೆಚ್ಚುವರಿ ವಿಭಾಗ; ಅನುದಾನಿತ ಶಾಲೆಗಳಿಗೆ ಅನುಮತಿ

ಬೆಂಗಳೂರು: ಅನುದಾನಿತ ಖಾಸಗಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಹೆಚ್ಚುವರಿ ವಿಭಾಗಗಳನ್ನು ಆರಂಭಿಸಲು ಅನುಮತಿ ಪಡೆಯಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಅವಕಾಶ ಕಲ್ಪಿಸಿದೆ.

ಹೆಚ್ಚುವರಿ ವಿಭಾಗಗಳನ್ನು ಶಾಶ್ವತ ಅನುದಾನರಹಿತ ಷರತ್ತಿಗೆ ಒಳಪಟ್ಟು ಆರಂಭಿಸಬೇಕು. ಸಮೀಪದ ಶಾಲೆಗಳ ಮಕ್ಕಳ ದಾಖಲಾತಿಗೆ ಧಕ್ಕೆಯಾಗಬಾರದು. ಹೆಚ್ಚುವರಿ ವಿಭಾಗಕ್ಕೆ ಅಗತ್ಯವಾದ ಮೂಲಸೌಕರ್ಯವನ್ನು ಒದಗಿಸಬೇಕು. ಹರ ಶಿಕ್ಷಕರನ್ನು ನೇಮಿಸಕೊಳ್ಳಬೇಕುಎಂದುನಿಬಂಧನೆಗಳನ್ನುಹಾಕಲಾಗಿದ್ದು, ಅನುಮತಿ ನೀಡುವ ಅಧಿಕಾರವನ್ನು ಶಿಕ್ಷಣ ಇಲಾಖೆ ಆಯುಕ್ತಾಲಯದ ನಿರ್ದೇಶಕರಿಗೆ ನೀಡಲಾಗಿದೆ.

‘ಹೆಚ್ಚುವರಿ ವಿಭಾಗ’ ಅಧಿಕೃತ ಪಟ್ಟಿ ಕೈಬಿಡಲು ಆಗ್ರಹ: ‘ಹೆಚ್ಚುವರಿ ವಿಭಾಗ’ ಹೊಂದಿರುವ ಶಾಲೆಗಳನ್ನು ಅನಧಿಕೃತ ಶಾಲೆಗಳ ಪಟ್ಟಿಯಿಂದ ಕೈಬಿಡುವಂತೆ ಖಾಸಗಿ ಅನುದಾನ ರಹಿತ ಶಾಲೆಗಳು ಒತ್ತಾಯಿಸಿವೆ.

‘ಇಲಾಖೆಯು ಈಚೆಗೆ 1,600 ಶಾಲೆಗಳನ್ನು ಅನಧಿಕೃತ ಎಂದು ಪಟ್ಟಿ ಮಾಡಿದೆ. ಅದರಲ್ಲಿ 620 ಶಾಲೆಗಳು ಇಲಾಖೆಯ ಅನುಮೋದನೆ ಪಡೆಯದೆ ಹೆಚ್ಚುವರಿ ವಿಭಾಗ ಆರಂಭಿಸಿವೆ ಎನ್ನುವ ಕಾರಣಕ್ಕೆ ಅನಧಿಕೃತ ಎಂದು ಪಟ್ಟಿ ಮಾಡಲಾಗಿದೆ. 2006ರಲ್ಲಿ ಹೊರಡಿಸಿದ ಸರ್ಕಾರದ ಆದೇಶದ ಪ್ರಕಾರ ಹೆಚ್ಚುವರಿ ವಿಭಾಗಗಳನ್ನು ತೆರೆಯಲಾಗಿದೆ ಎಂದು ಹಿಂತೆಗೆದುಕೊಳ್ಳಲಾಗಿಲ್ಲ. ಇದು ಪ್ರವೇಶದ ಸಮಯದಲ್ಲಿ ಪೋಷಕರಿಗೆ ತಪ್ಪು ಸಂದೇಶ ನೀಡುತ್ತಿದೆ. ಹಾಗಾಗಿ, ಅನಧಿಕೃತ ಶಾಲೆಗಳ ಪಟ್ಟಿಯಿಂದ ಕೈಬಿಡಬೇಕು’ ಶಾಲಾ ಆಡಳಿತ ಮಂಡಳಿ, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಸಮನ್ವಯ ಸಮಿತಿ (ಕೆಪಿಎಂಟಿಸಿಸಿ) ಸಂಚಾಲಕ ಡಿ.ಶಶಿಕುಮಾರ್ ಒತ್ತಾಯಿಸಿದ್ದಾರೆ.



ಮತ್ಸ್ಯ ಬೇಟೆ

ಉತ್ತರ ಕನ್ನಡ ಜಿಲ್ಲೆ ಶಿರಸಿ ತಾಲ್ಲೂಕಿನ ಮಧುರವಳ್ಳಿ– ಹಾಡಲಗಿ ಗ್ರಾಮಗಳ ವ್ಯಾಪ್ತಿಯ ದೊಡ್ಡಕೆರೆಯಲ್ಲಿ ಗುರುವಾರ ಪಾರಂಪರಿಕ ಕೆರೆ ಬೇಟೆಯಲ್ಲಿ (ಮತ್ಸ್ಯ ಬೇಟೆ) ಅಸಂಖ್ಯ ಜನರು ಏಕಕಾಲಕ್ಕೆ ಕೆರೆಗೆ ಧುಮುಕಿ ಮೀನು ಬೇಟೆ ನಡೆಸಿದರು –ಪ್ರಜಾವಾಣಿ ಚಿತ್ರ

‘ಕೈ’ಗೆ ದಸಂಸ ಐಕ್ಯ ಸಮಿತಿ ಬೆಂಬಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಘೋಷಿಸಿದೆ.

ಕೆಪಿಸಿಸಿ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಸಮ್ಮುಖದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ನಾಯಕರು ಈ ವಿಷಯ ತಿಳಿಸಿದರು.

ಸಮಿತಿಯ ಸಂಚಾಲಕ ಇಂದೂಧರ ಹೊನ್ನಾಪುರ ಅವರ, ‘ಒಂಬತ್ತು ವರ್ಷಗಳಿಂದ ದೇಶದಲ್ಲಿ ಆಗುತ್ತಿರುವ ಬೆಳವಣಿಗೆಗಳನ್ನು ಗಮನಿಸಿ, ಪ್ರಜಾಪ್ರಭುತ್ವ ಹಾಗೂ ಸಂವಿಧಾನ ರಕ್ಷಣೆಗೆ ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು ಎಂದು ತೀರ್ಮಾನಿಸಿ ಷರತ್ತುಗಳೊಂದಿಗೆ ಕಾಂಗ್ರೆಸ್‌ಗೆ ಬೆಂಬಲ ನೀಡುತ್ತಿದ್ದೇವೆ’ ಎಂದರು.

‘ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ದಲಿತರ ಮೇಲೆ ದೌರ್ಜನ್ಯಗಳು ಹೆಚ್ಚಾಗಿವೆ. ಹಕ್ಕುಗಳನ್ನು ಕಸಿಯಲಾಗುತ್ತಿದೆ. ವಿದ್ಯಾರ್ಥಿವೇತನ ಸ್ಥಗಿತಗೊಳಿಸಲಾಗಿದೆ. ಸಂವಿಧಾನ ಬದಲಿಸುತ್ತೇವೆಂದು ಬಿಜೆಪಿಯವರು ಬಹಿರಂಗ ಹೇಳಿಕೆ ನೀಡಿದ್ದಾರೆ. ಕೆಳ ಸಮುದಾಯದವರು, ಮಹಿಳೆಯರು, ಕಾರ್ಮಿಕರು ಬದುಕಲು, ಸಂವಿಧಾನದ ಬಹುತ್ವವನ್ನು ಪುನರ್ ಸ್ಥಾಪಿಸಬೇಕಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಸಂವಿಧಾನದ ಮೌಲ್ಯಗಳನ್ನು ಎತ್ತಿ ಹಿಡಿಯಬೇಕು. ಮತಾಂತರ ನಿಷೇಧ, ಗೋ ಹತ್ಯೆ ನಿಷೇಧ, ರೈತ ವಿರೋಧಿ, ಜನವಿರೋಧಿ ಕಾಯ್ದೆಗಳನ್ನು ರದ್ದುಪಡಿಸಬೇಕು’ ಎಂದು ಆಗ್ರಹಿಸಿದರು.

ಡಿ.ಕೆ.ಶಿವಕುಮಾರ್ ಅವರು, ‘20ಕ್ಕೂ ಹೆಚ್ಚು ದಲಿತ ಸಂಘಟನೆಗಳ ಐಕ್ಯ ಸಮಿತಿ ಎಲ್ಲ 224 ಕ್ಷೇತ್ರಗಳಲ್ಲಿ ಕಾಂಗ್ರೆಸ್‌ಗೆ ಬೆಂಬಲ ಘೋಷಿಸಿದೆ. ಸಂವಿಧಾನ, ಪ್ರಜಾಪ್ರಭುತ್ವ ರಕ್ಷಣೆ, ದಲಿತ ಸಮುದಾಯಗಳ ಹಕ್ಕು ರಕ್ಷಣೆ ಹಾಗೂ ದಲಿತರ ಮೇಲಿನ ದೌರ್ಜನ್ಯಗಳನ್ನು ಕೊನೆಗಾಣಿಸಲು ಈ ಬೆಂಬಲ ನೀಡಿದೆ’ ಎಂದರು.

ಸಿದ್ದರಾಮಯ್ಯ ಮಾತನಾಡಿ, ‘ಸಮಿತಿ ಉತ್ತಮ ತೀರ್ಮಾನ ತೆಗೆದುಕೊಂಡಿದೆ. ಸಮಿತಿಯು ಷರತ್ತುಗಳನ್ನು ನಮ್ಮ ಮುಂದೆ ಇಟ್ಟಿದ್ದು, ಕಾಂಗ್ರೆಸ್ ಪಕ್ಷ ಸಂವಿಧಾನದ ತತ್ವ, ಸಿದ್ಧಾಂತ, ನಿಯಮಾವಳಿಗೆ ಬದ್ಧವಾಗಿದೆ. ಸಂವಿಧಾನ ರಕ್ಷಣೆ, ಅದರ ಧ್ಯೇಯೋದ್ದೇಶ ಈಡೇರಿಸುವುದು ಕಾಂಗ್ರೆಸ್ ಸಿದ್ಧಾಂತ’ ಎಂದರು.

ರಾಹುಕಾಲದಲ್ಲಿ ಸತೀಶ ಜಾರಕಿಹೊಳಿ ನಾಮಪತ್ರ ಸಲ್ಲಿಕೆ

ಹುಕ್ಕೇರಿ: ತಾಲ್ಲೂಕಿನ ಯಮಕನಮರಡಿ ವಿಧಾನಸಭಾ ಮತಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿ ಸತೀಶ ಜಾರಕಿಹೊಳಿ ಗುರುವಾರ ರಾಹು ಕಾಲದಲ್ಲಿ ನಾಮಪತ್ರ ಸಲ್ಲಿಸಿದರು. ‘ಕಾಂಗ್ರೆಸ್ ಪಕ್ಷದ ಪ್ರಚಾರಕ್ಕೆ ಅಥಣಿಗೆ ಹೋಗಿ ಜಿಲ್ಲೆಯಲ್ಲಿ ಹೆಚ್ಚು ಸೀಟು ಗೆಲ್ಲುವಂತೆ ಪ್ರಯತ್ನಿಸಲಾಗುವುದು’ ಎಂದು ಸತೀಶ ಹೇಳಿದರು.

ಉಚ್ಚಾಟಿತ ಪುತ್ರನಿಗೆ ಸಾಥ್ ನೀಡಿದ ಮಾಡಾಳ್

ಚನ್ನಗಿರಿ: ಪಕ್ಷದಿಂದ ಉಚ್ಚಾಟನೆಗೊಂಡ ಮಾಡಾಳ್ ಮಲ್ಲಿಕಾರ್ಜುನ್ ಅವರು ಬಿಜೆಪಿಯಿಂದ ಬಂಡಾಯವೆದ್ದು ಸ್ವತಂತ್ರ ಅಭ್ಯರ್ಥಿಯಾಗಿ ಗುರುವಾರ ಮತ್ತೊಮ್ಮೆ ನಾಮಪತ್ರ ಸಲ್ಲಿಸಲು ನಡೆಸಿದ ಮೆರವಣಿಗೆಯಲ್ಲಿ ಅವರ ತಂದೆ, ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಪಾಲ್ಗೊಂಡು ಗಮನ ಸೆಳೆದರು.

ಲಂಚ ಪ್ರಕರಣದಲ್ಲಿ ಲೋಕಾಯುಕ್ತದಿಂದ ಬಂಧನಕ್ಕೆ ಒಳಗಾಗಿದ್ದ ವಿರೂಪಾಕ್ಷಪ್ಪ ಮೂರು ದಿನಗಳ ಹಿಂದೆ ಜಾಮೀನಿನ ಮೇಲೆ ಹೊರಬಂದಿದ್ದರಾದರೂ ಸಾರ್ವಜನಿಕವಾಗಿ ಕಾಣಿಸಿಕೊಂಡಿರಲಿಲ್ಲ. ಪುತ್ರನ ನಾಮಪತ್ರ ಸಲ್ಲಿಕೆ ಮೆರವಣಿಗೆಯಲ್ಲಿ ಅವರು ಭಾಗವಹಿಸಿದರು.

ಪಕ್ಷ ವಿರೋಧಿ ಚಟುವಟಿಕೆ ಹಿನ್ನೆಲೆಯಲ್ಲಿ ಮಾಡಾಳ್ ಮಲ್ಲಿಕಾರ್ಜುನ್ ಅವರನ್ನು 6 ವರ್ಷಗಳ ಅವಧಿಗೆ ಪಕ್ಷದಿಂದ ಉಚ್ಚಾಟಿಸಿ ಬುಧವಾರವಷ್ಟೇ ಬಿಜೆಪಿ ಆದೇಶ ಹೊರಡಿಸಿತ್ತು.

ಶ್ಯಾಮ್ ಪ್ರಸಾದ್ ಶಾಸ್ತ್ರಿ ಆತ್ಮಹತ್ಯೆ ಪ್ರಕರಣ

ರಾಘವೇಶ್ವರ ಶ್ರೀ ವಿರುದ್ಧದ ದೋಷಾರೋಪ ಪಟ್ಟಿ ರದ್ದು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಏಕಸದಸ್ಯ ನ್ಯಾಯಪೀಠ ಆದೇಶ
- ಕಲ್ಲಡ್ಕ ಪ್ರಭಾಕರ ಭಟ್ ಅವರ ವಿರುದ್ಧದ ದೋಷಾರೋಪವೂ ರದ್ದು
- ಮರಣ ಪತ್ರದಲ್ಲಿಲ್ಲದ ಅರ್ಜಿದಾರರ ಹೆಸರು

ಬೆಂಗಳೂರು: ‘ರಾಮಕಥಾ ಗಾಯಕಿ ಮೇಲಿನ ಅತ್ಯಾಚಾರ ಆರೋಪ ಪ್ರಕರಣದಲ್ಲಿ ಸ್ವಾಮೀಜಿ ಪರ ವಹಿಸುವಂತೆ ಒತ್ತಡ ಹಾಕಿದ್ದ ಹಿನ್ನೆಲೆಯಲ್ಲಿ ಸಂತ್ರಸ್ತೆಯ ಪತಿಯ ತಮ್ಮ ಶ್ಯಾಮ್ ಪ್ರಸಾದ್ ಶಾಸ್ತ್ರಿ ಆತ್ಮಹತ್ಯೆಗೆ ಶರಣಾಗಿದ್ದಾರೆ’ ಎಂಬ ಕುಮ್ಮಕ್ಕಿನ ಆರೋಪಕ್ಕೆ ಸಂಬಂಧಿಸಿದಂತೆ ಹೊಸನಗರ ರಾಮಚಂದ್ರಾಪುರ ಮಠದ ಪೀಠಾಧಿಪತಿ ರಾಘವೇಶ್ವರ ಭಾರತೀ ಶ್ರೀ ಮತ್ತು ಆರೆಸ್ಸೆಸ್ ಹಿರಿಯ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ವಿರುದ್ಧ ದಾಖಲಿಸಲಾಗಿದ್ದ ದೋಷಾರೋಪ ಪಟ್ಟಿಯನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ, ‘ಪುತ್ತೂರು ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಸಿಐಡಿ ತನಿಖಾಧಿಕಾರಿಗಳು ಸಲ್ಲಿಸಿರುವ ದೋಷಾರೋಪ ಪಟ್ಟಿಯನ್ನು ರದ್ದುಗೊಳಿಸಬೇಕು’ ಎಂದು ಕೋರಿ ರಾಘವೇಶ್ವರ ಶ್ರೀಗಳು ಮತ್ತು ಕಲ್ಲಡ್ಕ ಪ್ರಭಾಕರ ಭಟ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಗಳನ್ನು ಗುರುವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ದೋಷಾರೋಪ ಪಟ್ಟಿಯ ಆಧಾರದ ವಿಚಾರಣೆ ರದ್ದುಗೊಳಿಸಿ ಆದೇಶಿಸಿದೆ.

ಶ್ರೀಗಳ ಪರ ವಕೀಲ ಪಿ.ಎನ್. ಮನಮೋಹನ್ ಮತ್ತು ಕಲ್ಲಡ್ಕ ಪ್ರಭಾಕರ ಭಟ್ ಪರ ಹಿರಿಯ ವಕೀಲ ಪಿ.ಪಿ.ಹೆಗ್ಡೆ ವಾದ ಮಂಡಿಸಿ, ‘ಅರ್ಜಿದಾರರು ಆತ್ಮಹತ್ಯೆಗೆ ಪ್ರಚೋದನೆ ನೀಡಿದ್ದಾರೆ ಎಂಬುದಕ್ಕೆ ಯಾವುದೇ ಸಾಕ್ಷ್ಯಾಧಾರ ಇಲ್ಲ. ಶಾಮ್ ಪ್ರಸಾದ್ ಶಾಸ್ತ್ರಿ ಹತಾಶ ಮನೋಭಾವದಿಂದ ಆತ್ಮಹತ್ಯೆಗೆ ಶರಣಾದಂತಿದೆ. ಅವರು ಬರೆದಿಟ್ಟಿದ್ದ ಮರಣ ಪತ್ರದಲ್ಲಿ ಅರ್ಜಿದಾರರ ಹೆಸರುಗಳ ಉಲ್ಲೇಖವೇ ಇಲ್ಲ. ಅಂತೆಯೇ, ತನಿಖಾಧಿಕಾರಿಗಳು ಶಾಮ್ ಪ್ರಸಾದ್ ಶಾಸ್ತ್ರಿ ಮೃತಪಟ್ಟ ಒಂದು ತಿಂಗಳ ನಂತರ ಸುಳ್ಳು ಹೇಳಿಕೆ ತಯಾರಿಸಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ’ ಎಂದು ಆಕ್ಷೇಪಿಸಿದರು.

ಪ್ರಕರಣವೇನು?: ರಾಮಕಥಾ ಗಾಯಕಿಯ ಪತಿ ದಿವಾಕರ ಶಾಸ್ತ್ರಿ ಅವರ ಖಾಸಾ ತಮ್ಮನಾದ ಶ್ಯಾಮ್ ಪ್ರಸಾದ್ ಶಾಸ್ತ್ರಿ ಪುತ್ತೂರಿನ ಕೆದಿಲ ಗ್ರಾಮದಲ್ಲಿ 2014ರ ಸೆಪ್ಟೆಂಬರ್ 1 ರಂದು ತಮ್ಮ ಬಳಿಯಿದ್ದ ಬಂದೂಕಿನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.

‘ರಾಘವೇಶ್ವರ ಶ್ರೀಗಳ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣವನ್ನು ಹಿಂಪಡೆಯುವಂತೆ ಸಂತ್ರಸ್ತೆಗೆ ಹೇಳಬೇಕು. ನೀವು ಸ್ವಾಮೀಜಿ ಪರ ನಿಲ್ಲಬೇಕು ಎಂದು ಸ್ವಾಮೀಜಿ ಕಡೆಯವರು ದೂರವಾಣಿ ಮೂಲಕ ಒತ್ತಡ ಹಾಕಿದ್ದರು ಮತ್ತು ಈ ಒತ್ತಡ ಹೇರುವ ಹಿಂದೆ ಕಲ್ಲಡ್ಕ ಪ್ರಭಾಕರ ಭಟ್ ಮತ್ತಿತರರು ಇದ್ದರು’ ಎಂದು ಆರೋಪಿಸಿ ಶ್ಯಾಮ್ ಪ್ರಸಾದ್ ಶಾಸ್ತ್ರಿ ಅವರ ಪತ್ನಿ ಸಂಧ್ಯಾಲಕ್ಷ್ಮಿ ಪೊಲೀಸರಿಗೆ ದೂರು ನೀಡಿದ್ದರು.

ಈ ಪ್ರಕರಣದ ತನಿಖೆ ನಡೆಸಿದ್ದ ಸಿಐಡಿ ತನಿಖಾಧಿಕಾರಿ ಪುತ್ತೂರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಸಲಿಂಗ ವಿವಾಹ: ಸಿಜೆಐ ಚಂದ್ರಚೂಡ್ ನೇತೃತ್ವದ ಸಾಂವಿಧಾನಿಕ ಪೀಠ ಅಭಿಮತ

‘ಸಾಮಾಜಿಕವಾಗಿ ಭಾರತ ವಿಕಸಿತ’

ನವದೆಹಲಿ (ಪಿಟಿಐ): ಸಲಿಂಗಿಗಳ ವಿವಾಹವನ್ನು ಅನುಮೋದಿಸುವಷ್ಟರ ಮಟ್ಟಿಗೆ ಭಾರತವು ಸಾಮಾಜಿಕವಾಗಿ ಹಾಗೂ ಸಾಂವಿಧಾನಿಕವಾಗಿ ವಿಕಸನಗೊಂಡಿದೆ ಎಂದು ಸುಪ್ರೀಂಕೋರ್ಟ್ ಗುರುವಾರ ಹೇಳಿದೆ.

ಸಲಿಂಗಕಾಮ ಅಪರಾಧವಲ್ಲ ಎಂದು ಹೇಳಿದ ನಂತರ, ಈಗ ಸಲಿಂಗಿಗಳ ಮದುವೆಯನ್ನು ಒಪ್ಪಿಕೊಳ್ಳುವ ನಿಟ್ಟಿನಲ್ಲಿ ವಿಚಾರ ಮಾಡುವಂತಹ ಮಧ್ಯಂತರ ಹಂತವನ್ನು ಭಾರತ ತಲುಪಿದೆ ಎಂದೂ ಅಭಿಪ್ರಾಯಪಟ್ಟಿದೆ.

ಸಲಿಂಗ ಮದುವೆಗೆ ಮಾನ್ಯತೆ ನೀಡುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸುತ್ತಿರುವ, ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ಸದಸ್ಯರ ಸಾಂವಿಧಾನಿಕ ಪೀಠ, ಭಿನ್ನಲಿಂಗ ದಂಪತಿ ಎದುರಿಸುತ್ತಿರುವ ಸಮಸ್ಯೆಗಳನ್ನೂ ಪ್ರಸ್ತಾಪಿಸಿತು.

ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್, ಎಸ್.ರವೀಂದ್ರ ಭಟ್, ಹಿಮಾ ಕೊಹ್ಲಿ ಹಾಗೂ ಪಿ.ಎಸ್.ನರಸಿಂಹ ಈ ಪೀಠದಲ್ಲಿದ್ದಾರೆ.

‘ಭಿನ್ನಲಿಂಗ ದಂಪತಿಯೂ ಕೌಟುಂಬಿಕ ಹಿಂಸೆ ಎದುರಿಸುತ್ತಿರುವ

> **ಇಲ್ಲಿ ಯಾವುದೂ ಸಾಪೇಕ್ಷ ಅಲ್ಲ. ನಾನು ಕೋರ್ಟ್‌ನಲ್ಲಿ ಎತ್ತುವ ವಿಷಯಗಳಿಗೆ ಟ್ರೋಲ್‌ಗಳಲ್ಲಿ ಉತ್ತರ ಸಿಗುತ್ತಿದೆ ಆದರೆ, ಕೋರ್ಟ್‌ನಲ್ಲಿ ಸಿಗುತ್ತಿಲ್ಲ**
> **ನ್ಯಾ.ಡಿ.ವೈ.ಚಂದ್ರಚೂಡ್,** ಸಿಜೆಐ

ಬಗ್ಗೆ ಏನು ಹೇಳುತ್ತೀರಿ. ಅದರಲ್ಲೂ, ಅವರ ಮಕ್ಕಳ ಮೇಲೆ ಇದು ಬೀರುವ ಪರಿಣಾಮ ಏನು? ಇಂಥ ಕುಟುಂಬಗಳಲ್ಲಿ, ಕುಡಿದ ಅಮಲಿನಲ್ಲಿ ಮನೆಗೆ ಬರುವ ತಂದೆ ಇದ್ದರೆ ಹಾಗೂ ಮದ್ಯ ಕುಡಿಯಲು ಹಣ ನೀಡುವಂತೆ ತಾಯಿಯನ್ನು ಪೀಡಿಸಿ, ಆಕೆಯನ್ನು ಥಳಿಸುತ್ತಿರುವ ಬಗ್ಗೆ ಏನು ಹೇಳುತ್ತೀರಿ’ ಎಂದು ಸಿಜೆಐ ಪ್ರಶ್ನಿಸಿದರು.

ಸಲಿಂಗ ವಿವಾಹಕ್ಕೆ ಮಾನ್ಯತೆ ಕೋರಿ ಸುಪ್ರಿಯೊ ಎಂಬುವವರು ಸಲ್ಲಿಸಿರುವ ಅರ್ಜಿಯ ವಿಚಾರಣೆ ವೇಳೆ ಪೀಠವು ಈ ಮೌಖಿಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿತು.

‘ಸಲಿಂಗ ಕಾಮವನ್ನು ಅಪರಾಧವಲ್ಲ ಎಂದು ಒಪ್ಪಿಕೊಂಡ ನಂತರ, ಸಲಿಂಗಿಗಳ ನಡುವಿನ ಸಂಬಂಧಕ್ಕೆ ಮಾತ್ರವಲ್ಲದೇ, ಅವರು ಸ್ಥಿರವಾದ ಸಂಬಂಧ ಹೊಂದಬಹುದು ಎಂಬುದಕ್ಕೆ ಕೂಡ ಸೂಚ್ಯವಾಗಿ ಮಾನ್ಯತೆ ನೀಡಿದಂತಾಗುತ್ತದೆ’ ಎಂದು ಚಂದ್ರಚೂಡ್ ಹೇಳಿದರು.

‘1954ರಲ್ಲಿ ರಚಿಸಿದ ವಿಶೇಷ ವಿವಾಹ ಕಾಯ್ದೆಯ ಉದ್ದೇಶವು ಕೂಡ, ಸಲಿಂಗ ವಿವಾಹಕ್ಕೆ ಒಳಗಾಗುವ ವ್ಯಕ್ತಿಗಳನ್ನು ತನ್ನ ವ್ಯಾಪ್ತಿಗೆ ತರಬೇಕು ಎಂಬುದಾಗಿತ್ತು’ ಎಂದೂ ನ್ಯಾಯಪೀಠ ಅಭಿಪ್ರಾಯಪಟ್ಟಿತು.

ವಾದ ಮಂಡನೆಗೆ ಸಮಯ ನಿಗದಿ ಅಗತ್ಯ: ಸಾಂವಿಧಾನಿಕ ಪೀಠದ ಮುಂದೆ ಬರುವ ಅರ್ಜಿಗಳ ಸಂಖ್ಯೆ ದೊಡ್ಡದು. ಹೀಗಾಗಿ, ವಾದ ಮಂಡನೆಗೆ ಸಮಯ ನಿಗದಿ ಮಾಡದ ಹೊರತು ಅರ್ಜಿಗಳನ್ನು ವಿಚಾರಣಾ ಪಟ್ಟಿಗೆ ಸೇರಿಸುವುದು ಅಸಾಧ್ಯ ಎಂದು ಪೀಠ ಹೇಳಿದೆ.

ಸಲಿಂಗ ಮದುವೆಗೆ ಮಾನ್ಯತೆ ನೀಡುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ವೇಳೆ ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಈ ಅಭಿಪ್ರಾಯ ವ್ಯಕ್ತಪಡಿಸಿದರು.

‘ಸಾಕಷ್ಟು ಸಂಖ್ಯೆಯಲ್ಲಿ ಅರ್ಜಿಗಳು ಸಲ್ಲಿಕೆಯಾಗುತ್ತಿರುವ ಕಾರಣ ನ್ಯಾಯಾಲಯಗಳ ಮೇಲೆ ಒತ್ತಡ ಹೆಚ್ಚುತ್ತಿದೆ. ಇದೇ ಕಾರಣಕ್ಕಾಗಿಯೇ ಈ ಹಿಂದಿನ ಮುಖ್ಯ ನ್ಯಾಯಮೂರ್ತಿಗಳು ಸಾಂವಿಧಾನಿಕ ಪೀಠಗಳನ್ನು ರಚಿಸಿರಲಿಲ್ಲ’ ಎಂದರು.

ಅರ್ಜಿಗಳ ವಿಚಾರಣೆ ಮೂರನೇ ದಿನವೂ ಮುಂದುವರಿಯಿತು.

‘ಕೆಲ ಕೋರ್ಟ್‌ಗಳಲ್ಲಿ ವಾದ ಮಂಡನೆ 30 ನಿಮಿಷಗಳಲ್ಲಿ ಮುಗಿದು ಹೋಗುತ್ತದೆ. ಅಂಥದ್ದರಲ್ಲಿ ನಿಮಗೆ (ಅರ್ಜಿದಾರರ ಪರ ವಕೀಲರಿಗೆ) ಮೂರು ದಿನಗಳನ್ನು ನೀಡಲಾಗಿದೆ. ಇಷ್ಟು ಸಮಯ ಸಾಕು ಎನಿಸುತ್ತದೆ’ ಎಂದು ಹೇಳಿದರು.

ಇದೇ ವಿಷಯವಾಗಿ ಕೆಲ ಸಮಯದ ವರೆಗೆ ಚರ್ಚೆಯೂ ನಡೆಯಿತು. ನಂತರ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ವಾದ ಮಂಡಿಸಿದರು. ಏ. 24ರಂದು ವಾದ ಮಂಡನೆ ಪೂರ್ಣಗೊಳಿಸುವಂತೆ ಸಿಂಘ್ವಿ ಅವರಿಗೆ ನ್ಯಾಯಪೀಠ ಸೂಚಿಸಿತು.

‘ಗಂಡು ಮಗು ಇರಲೇಬೇಕೆಂಬ ಕಲ್ಪನೆ ದೂರವಾಗಿದೆ’


ಡಿ.ವೈ. ಚಂದ್ರಚೂಡ್

‘ಗಂಡು ಮಗು ಹೊಂದಿರಲೇಬೇಕು ಎಂಬ ಕಲ್ಪನೆಯಿಂದ ಜನರು ಹೊರಬಂದಿದ್ದಾರೆ. ಇದು ಶಿಕ್ಷಣದ ಪ್ರಭಾವ’ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ಸಲಿಂಗ ಮದುವೆಗೆ ಮಾನ್ಯತೆ ನೀಡುವಂತೆ ಕೋರಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆ ವೇಳೆ, ಡಿ.ವೈ. ಚಂದ್ರಚೂಡ್ ಈ ಅಭಿಪ್ರಾಯ ವ್ಯಕ್ತಪಡಿಸಿದರು.

‘ಆಧುನಿಕ ಕಾಲದ ಒತ್ತಡಗಳಿಂದಾಗಿ ಭಿನ್ನಲಿಂಗಿ ದಂಪತಿ ಕೂಡ ಈಗ ಮಕ್ಕಳನ್ನು ಹೊಂದಿಲ್ಲ ಅಥವಾ ಒಂದು ಮಗು ಹೊಂದಿರುತ್ತಾರೆ. ಇದು ಜನಸಂಖ್ಯಾ ಅಸಮತೋಲನಕ್ಕೆ ಕಾರಣವಾಗುತ್ತಿದೆ. ಹಿರಿಯರ ಸಂಖ್ಯೆಯೇ ಹೆಚ್ಚುತ್ತಿದೆ. ಇಂಥ ವಿದ್ಯಮಾನವನ್ನು ಚೀನಾದಲ್ಲಿ ಕಾಣಬಹುದು’ ಎಂದರು.

ಅರ್ಜಿದಾರರೊಬ್ಬರ ಪರ ವಕೀಲ ಕೆ.ವಿ.ವಿಶ್ವನಾಥನ್ ವಾದ ಮಂಡಿಸಿದರು. ನಂತರ, ನ್ಯಾಯಪೀಠವು ವಿಚಾರಣೆಯನ್ನು ಇದೇ 24ಕ್ಕೆ ಮುಂದೂಡಿತು.

‘ಮೇ 6ರ ಒಳಗೆ ವಿ.ವಿ ಜಾಗ ತೆರವು ಮಾಡಿ’

ಅಮರ್ತ್ಯ ಸೆನ್ ಅವರಿಗೆ ವಿಶ್ವವಿದ್ಯಾಲಯದಿಂದ ನೋಟಿಸ್


ಅಮರ್ತ್ಯ ಸೆನ್

ಕೋಲ್ಕತ್ತ (ಪಿಟಿಐ): ‘ನೊಬೆಲ್ ಪ್ರಶಸ್ತಿ ಪುರಸ್ಕೃತ ಅಮರ್ತ್ಯ ಸೆನ್ ಅವರು ಒತ್ತುವರಿ ಮಾಡಿಕೊಂಡಿರುವ ವಿಶ್ವಭಾರತಿ ವಿಶ್ವವಿದ್ಯಾಲಯದ ಜಾಗವನ್ನು ಮೇ 6ರ ಒಳಗೆ ಅಥವಾ ನೋಟಿಸ್ ಪಡೆದ 15 ದಿನಗಳ ಒಳಗೆ ತೆರವು ಮಾಡಬೇಕು’ ಎಂದು ವಿಶ್ವವಿದ್ಯಾಲಯವು ಇದೇ 19ರಂದು ನೀಡಿದ ನೋಟಿಸ್‌ನಲ್ಲಿ ತಿಳಿಸಿದೆ.

ಒತ್ತುವರಿ ಜಾಗವನ್ನು ಅಮರ್ತ್ಯ ಸೆನ್ ಅವರು ತೆರವು ಮಾಡಬೇಕು. ಇಲ್ಲವಾದಲ್ಲಿ ಬಲವಂತದಿಂದ ತೆರವು ಕಾರ್ಯಾಚರಣೆ ನಡೆಸುವುದಾಗಿಯೂ ನೋಟಿಸ್‌ನಲ್ಲಿ ಎಚ್ಚರಿಸಲಾಗಿದೆ.

‘ವಿಶ್ವವಿದ್ಯಾಲಯದ ಆವರಣದ 1.25 ಎಕರೆ ಪ್ರದೇಶವನ್ನು ಮಾತ್ರವೇ ಅಮರ್ತ್ಯ ಸೆನ್ ಅವರು ಬಳಸಿಕೊಳ್ಳಬಹುದಾಗಿದೆ. ಇಷ್ಟು ಜಾಗವನ್ನು ಸೆನ್ ಅವರ ತಂದೆ ಗುತ್ತಿಗೆಗೆ ಪಡೆದುಕೊಂಡಿದ್ದರು. ಆದರೆ, ಸೆನ್ ಅವರು ಒಟ್ಟು 1.38 ಎಕರೆ ಪ್ರದೇಶದಲ್ಲಿ ಮನೆ ನಿರ್ಮಿಸಿಕೊಂಡಿದ್ದಾರೆ. ಅಲ್ಲಿಗೆ 5,662.8 ಚದರ ಅಡಿ ಹೆಚ್ಚುವರಿ ಜಾಗವನ್ನು ಸೆನ್ ಅವರು ಒತ್ತುವರಿ ಮಾಡಿಕೊಂಡಿದ್ದಾರೆ’ ಎಂದು ವಿಶ್ವವಿದ್ಯಾಲಯದ ಜಂಟಿ ರಿಜಿಸ್ಟ್ರಾರ್ ಅಶೋಕ್ ಮಹತೋ ಅವರು ಬುಧವಾರ ಹೇಳಿದ್ದಾರೆ.

‘1.25 ಎಕರೆ ಜಾಗವನ್ನು ನನ್ನ ತಂದೆ ವಿಶ್ವವಿದ್ಯಾಲಯದಿಂದ ಗುತ್ತಿಗೆ ಪಡೆದಿದ್ದರು. 5,662.8 ಚದರ ಅಡಿ ಹೆಚ್ಚುವರಿ ಜಾಗವನ್ನು ನನ್ನ ತಂದೆಯು ವಿಶ್ವವಿದ್ಯಾಲಯದಿಂದ ಖರೀದಿ ಮಾಡಿದ್ದರು. ಈ ಬಗ್ಗೆ ನನ್ನ ಬಳಿ ದಾಖಲೆಗಳಿವೆ’ ಎಂದು ಅಮರ್ತ್ಯ ಸೆನ್ ಅವರು ಪದೇ ಪದೇ ಹೇಳುತ್ತಲೇ ಬಂದಿದ್ದಾರೆ.

> **ಸೆನ್ ಅವರು ಜೂನ್‌ನಲ್ಲಿ ಭಾರತಕ್ಕೆ ಮರಳಿದ್ದಾರೆ. ಆದರೆ, ನಾವು ಅಲ್ಲಿಯ ವರೆಗೂ ಕಾಯುತ್ತೇವೆಯೇ ಗೊತ್ತಿಲ್ಲ. ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಿದ್ದೇವೆ**
> **ಮಹುವಾ ಬ್ಯಾನರ್ಜಿ,** ವಿಶ್ವಭಾರತಿ ವಿಶ್ವವಿದ್ಯಾಲಯ ವಕ್ತಾರೆ

ನೋಟಿಸ್‌ಗೆ ವಿರೋಧ: ‘ಅಮರ್ತ್ಯ ಸೆನ್ ಅವರ ಮನೆಯನ್ನು ಕೆಡವಲು ವಿಶ್ವವಿದ್ಯಾಲಯ ಮುಂದಾದರೆ, ನಾವು ಶಾಂತಿಯುತ ಪ್ರತಿಭಟನೆ ನಡೆಸುತ್ತೇವೆ’ ಎಂದು ವಿಶ್ವವಿದ್ಯಾಲಯದ ಬೋಧನಾ ಸಿಬ್ಬಂದಿ ಸಂಘದ ಅಧ್ಯಕ್ಷ ಸುದೀಪ್ತೊ ಭಟ್ಟಾಚಾರ್ಯ ಅವರು ಹೇಳಿದ್ದಾರೆ.

‘ವಿಶ್ವವಿದ್ಯಾಲಯವು ಯಾವ ಮಟ್ಟದ ವರೆಗೆ ಹೋಗಲಿದೆ ಎಂಬುದನ್ನು ನಾವೂ ನೋಡುತ್ತೇವೆ’ ಎಂದು ವಿಶ್ವವಿದ್ಯಾಲಯದ ಎಸ್‌ಎಫ್‌ಐ ನಾಯಕ ಸೋಮ್‌ನಾಥ್ ಅವರು ಪ್ರತಿಕ್ರಿಯೆ ನೀಡಿದ್ದಾರೆ.

ಕಾಂಗ್ರೆಸ್ ವಿರೋಧ

ನವದೆಹಲಿ: ಕೇಂದ್ರ ಸರ್ಕಾರವು ಅಮರ್ತ್ಯ ಸೆನ್ ಅವರನ್ನು ‘ಗುರಿ’ ಮಾಡುತ್ತಿದೆ ಎಂದು ಕಾಂಗ್ರೆಸ್ ಗುರುವಾರ ಆರೋಪಿಸಿದೆ.

ತಮ್ಮನ್ನು ಟೀಕಿಸುವವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಹಿಂಸಿಸುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಆದರೆ, ಮೋದಿ ಅವರು ನೊಬೆಲ್ ಪ್ರಶಸ್ತಿ ಪುರಸ್ಕೃತ ಸೆನ್ ಅವರನ್ನು ಗುರಿಯಾಗಿಸಿದ್ದಾರೆ. ಜೊತೆಗೆ, ವಾಯಪೇಯಿ ಅವರ ಸರ್ಕಾರವು ಸೆನ್ ಅವರಿಗೆ ‘ಭಾರತ ರತ್ನ’ ನೀಡಿ ಪುರಸ್ಕರಿಸಿತ್ತು’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಟ್ವೀಟ್ ಮಾಡಿದ್ದಾರೆ.

ಪವಾರ್ ಭೇಟಿಯಾದ ಅದಾನಿ

ಮುಂಬೈನ ಬ್ರೀಚ್ ಕ್ಯಾಂಡಿ ಪ್ರದೇಶದಲ್ಲಿನ ಶರದ್ ನಿವಾಸದಲ್ಲಿ ಗೋಪ್ಯ ಸಭೆ

ಪ್ರಜಾವಾಣಿ ವಾರ್ತೆ


ಅದಾನಿ


ಶರದ್ ಪವಾರ್

ಮುಂಬೈ: ಉದ್ಯಮಿ ಹಾಗೂ ಅದಾನಿ ಸಮೂಹದ ಮುಖ್ಯಸ್ಥ ಗೌತಮ್ ಅದಾನಿ ಅವರು ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ವರಿಷ್ಠ ಶರದ್ ಪವಾರ್ ಅವರನ್ನು ಗುರುವಾರ ಭೇಟಿಯಾಗಿದ್ದಾರೆ. ಇದು ರಾಜಕೀಯ ವಲಯದಲ್ಲಿ ಸಂಚಲನಕ್ಕೆ ಕಾರಣವಾಗಿದೆ.

ದಕ್ಷಿಣ ಮುಂಬೈನ ಬ್ರೀಚ್ ಕ್ಯಾಂಡಿ ಪ್ರದೇಶದಲ್ಲಿರುವ ಪವಾರ್ ಅವರ ಸಿಲ್ವರ್ ಓಕ್ ಬಂಗಲೆಗೆ ಭೇಟಿ ನೀಡಿದ್ದ ಅದಾನಿ, ಗೋಪ್ಯವಾಗಿ ಸಭೆ ನಡೆಸಿದ್ದಾರೆ. ಇಬ್ಬರೂ ಯಾವ ವಿಚಾರಗಳ ಕುರಿತು ಮಾತುಕತೆ ನಡೆಸಿದ್ದಾರೆ ಎಂಬುದು ಗೊತ್ತಾಗಿಲ್ಲ.

ಮಹಾರಾಷ್ಟ್ರ ವಿಧಾನಸಭೆ ವಿರೋಧ ಪಕ್ಷದ ನಾಯಕ ಅಜಿತ್ ಪವಾರ್ ಅವರು ತಮ್ಮ ಬೆಂಬಲಿಗ ಶಾಸಕರೊಂದಿಗೆ ಬಿಜೆಪಿಗೆ ಸೇರ್ಪಡೆಯಾಗಲಿದ್ದಾರೆ ಎಂಬ ಮಾತುಗಳು ಕೇಳಿಬಂದಿದ್ದವು. ಈ ಸುದ್ದಿಯನ್ನು ಸ್ವತಃ ಅಜಿತ್ ಅವರೇ ಅಲ್ಲಗಳೆದಿದ್ದರು. ತಮ್ಮ ಜೀವ ಇರುವವರೆಗೂ ಎನ್‌ಸಿಪಿ ಪರ ಕೆಲಸ ಮಾಡುವುದಾಗಿ ಅವರು ಸ್ಪಷ್ಟಪಡಿಸಿದ್ದರು. ಈ ಬೆಳವಣಿಗೆ ಬೆನ್ನಲ್ಲೇ ಅದಾನಿ ಹಾಗೂ ಶರದ್ ಪವಾರ್ ಭೇಟಿಯಾಗಿರುವುದು ಹಲವು ಚರ್ಚೆಗಳಿಗೆ ಎಡೆಮಾಡಿಕೊಟ್ಟಿದೆ.

ಪವಾರ್ ಮತ್ತು ಅದಾನಿ ಕಳೆದ ವರ್ಷದ ಜೂನ್ 16ರಂದು ಪುಣೆಯ ಬಾರಾಮತಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಭೇಟಿಯಾಗಿದ್ದರು.

ಅದಾನಿ ಸಮೂಹವು ಷೇರು ಬೆಲೆಯನ್ನು ಕೃತಕವಾಗಿ ಏರಿಳಿತವಾಗುವಂತೆ ಮಾಡಿದೆ ಹಾಗೂ ಲೆಕ್ಕಪತ್ರಗಳ ವಂಚನೆಯಲ್ಲಿ ತೊಡಗಿದೆ ಎಂದು ‘ಹಿಂಡನ್‌ಬರ್ಗ್ ರಿಸರ್ಚ್’ ವರದಿಯಲ್ಲಿ ಆರೋಪಿಸಲಾಗಿತ್ತು. ಇದನ್ನು ಜಂಟಿ ಸಂಸದೀಯ ಸಮಿತಿ (ಜೆಪಿಸಿ) ತನಿಖೆಗೆ ಒಪ್ಪಿಸಬೇಕೆಂದು ಪಟ್ಟು ಹಿಡಿದಿದ್ದ ವಿರೋಧ ಪಕ್ಷಗಳು ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಕೋಲಾಹಲ ಸೃಷ್ಟಿಸಿದ್ದವು.

‘ಅದಾನಿ ಸಮೂಹದ ವಿರುದ್ಧದ ಪ್ರಕರಣವನ್ನು ಜೆಪಿಸಿ ತನಿಖೆಗೆ ಒಪ್ಪಿಸಬೇಕೆಂಬ ಬೇಡಿಕೆಗೆ ನಮ್ಮ ಪಕ್ಷದ ಬೆಂಬಲವೂ ಇದೆ. ಜೆಪಿಸಿಯಲ್ಲಿ ಆಡಳಿತ ಪಕ್ಷದವರ ಪ್ರಾಬಲ್ಯವೇ ಹೆಚ್ಚಿರುವುದರಿಂದ ಸತ್ಯ ಮುಚ್ಚಿಹಾಕಿಬಿಡುವ ಸಾಧ್ಯತೆ ಇರುತ್ತದೆ. ಹೀಗಾಗಿ ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯ ಸಮಿತಿಯಿಂದಲೇ ಈ ಪ್ರಕರಣದ ತನಿಖೆ ನಡೆಸುವುದು ಸೂಕ್ತ ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ’ ಎಂದು ಪವಾರ್ ಸುದ್ದಿ ವಾಹಿನಿಯೊಂದಕ್ಕೆ ನೀಡಿದ ಸಂದರ್ಶನದಲ್ಲಿ ಇತ್ತೀಚೆಗೆ ತಿಳಿಸಿದ್ದರು.

ಬಳಿಕ ತಮ್ಮ ಮಾತಿನ ವರಸೆ ಬದಲಿಸಿದ್ದ ಅವರು ‘ಜೆಪಿಸಿ ತನಿಖೆಯ ವಿಚಾರದಲ್ಲಿ ನನ್ನ ಮತ್ತು ಇತರ ವಿರೋಧ ಪಕ್ಷಗಳ ಅಭಿಪ್ರಾಯ ಬೇರೆ ಬೇರೆಯಾಗಿರಬಹುದು. ಹೀಗಿದ್ದರೂ ನಾವು ಒಗ್ಗಟ್ಟು ಕಾಯ್ದುಕೊಳ್ಳಬೇಕು. ಜೆಪಿಸಿ ತನಿಖೆಯೇ ಸೂಕ್ತ ಎಂದು ಇತರ ವಿರೋಧ ಪಕ್ಷಗಳು ಅಭಿಪ್ರಾಯಪಟ್ಟರೆ ಅದನ್ನು ನಾನು ವಿರೋಧಿಸುವುದಿಲ್ಲ’ ಎಂದಿದ್ದರು.



ಬಿಸಿಲಿಗೆ ತಂಪು

ಜಾರ್ಖಂಡ್ ರಾಜಧಾನಿ ರಾಂಚಿ ಹೊರಭಾಗದಲ್ಲಿರುವ ಬಿರ್ಸಾ ಮುಂಡಾ ಮೃಗಾಲಯದಲ್ಲಿ ಬಿಸಿಲಿನ ಝಳವನ್ನು ತಾಳಲಾರದೆ ಆನೆಗಳು ನೀರಿಗೆ ಇಳಿದಿದ್ದರೆ, ಮಾವುತ ಅವುಗಳ ಮೇಲೆ ನೀರು ಚಿಮುಕಿಸಿ ತಂಪು ಮಾಡುವ ಯತ್ನ ನಡೆಸಿದ್ದು ಗುರುವಾರ ಕಂಡುಬಂತು
–ಪಿಟಿಐ ಚಿತ್ರ

ಆರಾಧ್ಯ ಬಚ್ಚನ್ ಆರೋಗ್ಯದ ಬಗ್ಗೆ ಸುಳ್ಳು ಸುದ್ದಿ

ಸುಳ್ಳು ಸುದ್ದಿ ಪ್ರಸಾರ ಮಾಡುವುದು ಸಮಾಜದಲ್ಲಿ ಬೇರೂರುತ್ತಿರುವ ರೋಗಗ್ರಸ್ತ ಮತ್ತು ವಿಕೃತ ಮನಸ್ಥಿತಿಗೆ ಹಿಡಿದ ಕೈಗನ್ನಡಿ: ದೆಹಲಿ ಹೈಕೋರ್ಟ್

ಅಮಿತಾಭ್ ಮೊಮ್ಮಗಳ ಕುರಿತು ಸುಳ್ಳು ಸುದ್ದಿ ಪ್ರಸಾರಕ್ಕೆ ತಡೆ

ನವದೆಹಲಿ (ಪಿಟಿಐ): ಬಾಲಿವುಡ್ ನಟ ಅಮಿತಾಭ್ ಬಚ್ಚನ್ ಕುಟುಂಬದ ಕುಡಿ ಆರಾಧ್ಯ ಬಚ್ಚನ್ ಆರೋಗ್ಯದ ಬಗ್ಗೆ ಸುಳ್ಳು ಸುದ್ದಿ ಪ್ರಸಾರ ಮಾಡದಂತೆ ಯೂಟ್ಯೂಬ್ ಚಾನೆಲ್‌ಗಳಿಗೆ ಗುರುವಾರ ನಿರ್ಬಂಧ ಹೇರಿರುವ ದೆಹಲಿ ಹೈಕೋರ್ಟ್, ‘ಇದು ಸಮಾಜದಲ್ಲಿ ಬೇರೂರುತ್ತಿರುವ ರೋಗಗ್ರಸ್ತ ಮತ್ತು ವಿಕೃತ ಮನಸ್ಥಿತಿಗೆ ಹಿಡಿದ ಕೈಗನ್ನಡಿ’ ಎಂದು ವ್ಯಾಖ್ಯಾನಿಸಿದೆ.

ಬಾಲಿವುಡ್ ನಟಿ ಐಶ್ವರ್ಯಾ ರೈ ಬಚ್ಚನ್ ಮತ್ತು ಅಭಿಷೇಕ್ ಬಚ್ಚನ್ ದಂಪತಿಯ ಪುತ್ರಿ ಆರಾಧ್ಯಳ ಆರೋಗ್ಯ ಕುರಿತು ಆಧಾರರಹಿತ ವದಂತಿ ಹಬ್ಬಿಸುತ್ತಿರುವ ಆಕ್ಷೇಪಾರ್ಹ ವಿಡಿಯೊಗಳನ್ನು ತಕ್ಷಣವೇ ಯೂಟ್ಯೂಬ್‌ನಿಂದ ತೆಗೆದುಹಾಕುವಂತೆ ಗೂಗಲ್ ಕಂಪನಿಗೆ ತಾಕೀತು ಮಾಡಿದೆ.

ವೀಕ್ಷಕರಿಂದ ಹೆಚ್ಚಿನ ವ್ಯೂಸ್ ಪಡೆಯಲು ಪೈಪೋಟಿಗೆ ಬಿದ್ದಿರುವ ಕೆಲವು ಯೂಟ್ಯೂಬ್ ಚಾನೆಲ್‌ಗಳು ಆರಾಧ್ಯಳ ಆರೋಗ್ಯ ತೀವ್ರ ಹದಗೆಟ್ಟಿದೆ. ಆಕೆ ಮೃತಪಟ್ಟಿದ್ದಾಳೆ ಎಂದು ಸುದ್ದಿ ಪ್ರಸಾರ ಮಾಡಿದ್ದವು. ಇದರಿಂದ ಬಚ್ಚನ್ ಕುಟುಂಬ ಕಸಿವಿಸಿಗೊಂಡಿತ್ತು. ಇಂಥ ಚಾನೆಲ್‌ಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಕೋರಿ 11 ವರ್ಷದ ಆರಾಧ್ಯ ಹಾಗೂ ಅಭಿಷೇಕ್ ಬಚ್ಚನ್ ನ್ಯಾಯಾಲಯದ ಮೆಟ್ಟಿಲೇರಿದ್ದರು.

ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಿ. ಹರಿಶಂಕರ್, ‘ಪ್ರತಿ ಮಗುವನ್ನೂ ಗೌರವಿಸುವುದು ಎಲ್ಲರ ಜವಾಬ್ದಾರಿ. ಮಗುವಿನ ಆರೋಗ್ಯ ಕುರಿತು ಸುಳ್ಳು ಸುದ್ದಿ ಪ್ರಸಾರ ಮಾಡುವುದು ಕಾನೂನುಬಾಹಿರ’ ಎಂದು ಅಭಿಪ್ರಾಯಪಟ್ಟರು.

‘ಆಕ್ಷೇಪಾರ್ಹ ವಿಡಿಯೊಗಳ ಬಗ್ಗೆ ದೂರುದಾರರಿಗೆ ಗೂಗಲ್ ಮಾಹಿತಿ ನೀಡಬೇಕು. ಇಂತಹ ವಿಡಿಯೊಗಳು ಯಾವಾಗ ಅಪ್‌ಲೋಡ್ ಆಗಿವೆ. ಇದು ಕಂಪನಿಯ ಗಮನಕ್ಕೆ ಯಾವಾಗ ಬಂದಿದೆ ಎಂಬುದನ್ನು ಸ್ಪಷ್ಟಪಡಿಸಬೇಕು’ ಎಂದು ಮಧ್ಯಂತರ ಆದೇಶದಲ್ಲಿ ಸೂಚಿಸಿದೆ.

ಇನ್ನು ಮುಂದೆ ಆರಾಧ್ಯಳ ಆರೋಗ್ಯದ ಬಗ್ಗೆ ಯಾವುದೇ ಯೂಟ್ಯೂಬ್ ಚಾನೆಲ್‌ಗಳು ವಿಡಿಯೊ ಸಿದ್ಧಪಡಿಸಬಾರದು. ಅವುಗಳನ್ನು ಪ್ರಸಾರ ಮಾಡಬಾರದು. ಮಗುವಿನ ಹಿತಾಸಕ್ತಿ ರಕ್ಷಣೆ ಸಂಬಂಧ ನಿರ್ಲಕ್ಷ್ಯ ವಹಿಸಿರುವುದು ಸರಿಯಲ್ಲ ಎಂದು ಹೇಳಿದೆ.

ಯೂಟ್ಯೂಬ್‌ನಲ್ಲಿ ಆಕ್ಷೇಪಾರ್ಹ ವಿಡಿಯೊಗಳ ಪ್ರಸಾರ ತಡೆಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಪ್ರತಿವಾದಿ ಗೂಗಲ್ ಕಂಪನಿ ಪರ ಹಾಜರಿದ್ದ ವಕೀಲರಿಗೆ ಪ್ರಶ್ನಿಸಿದ ನ್ಯಾಯಾಲಯವು, ಈ ಕುರಿತು ವರದಿ ಸಲ್ಲಿಸುವಂತೆ ಆದೇಶಿಸಿದೆ.

ಕಾನೂನಿನ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಣೆ ಬಗ್ಗೆ ಗೂಗಲ್‌ಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ.

ಅತೀಕ್ ಹತ್ಯೆ: ಅಪರಾಧ ದೃಶ್ಯ ಮರುಸೃಷ್ಟಿ

ಪ್ರಯಾಗ್‌ರಾಜ್ (ಉತ್ತರ ಪ್ರದೇಶ) (ಪಿಟಿಐ): ಪಾತಕಿ, ಮಾಜಿ ಸಂಸದ ಅತೀಕ್ ಅಹಮದ್ ಹಾಗೂ ಆತನ ತಮ್ಮ ಅಶ್ರಫ್ ಅವರ ಹತ್ಯೆ ನಡೆದಿದ್ದ ಸ್ಥಳದಲ್ಲಿ ಉತ್ತರ ಪ್ರದೇಶ ಪೊಲೀಸರು ಗುರುವಾರ ಅಪರಾಧ ದೃಶ್ಯ ಮರು ಸೃಷ್ಟಿಸಿದ್ದಾರೆ.

ಪ್ರಯಾಗ್‌ರಾಜ್ ಆಸ್ಪತ್ರೆಯ ಹೊರ ಭಾಗದಲ್ಲಿ ಇದೇ ತಿಂಗಳ 15ರಂದು ರಾತ್ರಿ ಹತ್ಯೆ ನಡೆದಿತ್ತು. ಈ ಸ್ಥಳಕ್ಕೆ ಭೇಟಿ ನೀಡಿದ್ದ ವಿಶೇಷ ತನಿಖಾ ತಂಡ (ಎಸ್‌ಐಟಿ) ಹಾಗೂ ವಿಧಿವಿಜ್ಞಾನ ಪ್ರಯೋಗಾಲಯ ತಂಡದ ಅಧಿಕಾರಿಗಳು, ಹತ್ಯೆ ನಡೆದದ್ದು ಹೇಗೆ ಎಂಬುದರ ಕುರಿತು ಮಾಹಿತಿ ಕಲೆಹಾಕಿದ್ದಾರೆ.

ಕಾಲ್ವಿನ್ ಆಸ್ಪತ್ರೆಯ ಹೊರ ಭಾಗದಲ್ಲಿರುವ ಸ್ಥಳಕ್ಕೆ ಮಧ್ಯಾಹ್ನ 1.30ರ ಸುಮಾರಿಗೆ ಭೇಟಿ ನೀಡಿದ್ದ ತನಿಖಾ ತಂಡದ ಸದಸ್ಯರು ಹತ್ಯೆಯ ವೇಳೆ ಅತೀಕ್ ಹಾಗೂ ಅಶ್ರಫ್ ಅವರ ಜೊತೆ ಇದ್ದ ಪೊಲೀಸ್ ಸಿಬ್ಬಂದಿಯನ್ನೂ ಸ್ಥಳಕ್ಕೆ ಕರೆಸಿಕೊಂಡಿದ್ದರು. ಅಪರಾಧ ದೃಶ್ಯದ ಮರುಸೃಷ್ಟಿ ವೇಳೆ ಘಟನಾ ಸ್ಥಳದ ಸುತ್ತಲೂ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿತ್ತು. ಈ ವೇಳೆ ಎಡಿಜಿ ಭಾನು ಭಾಸ್ಕರ್, ಪೊಲೀಸ್ ಆಯುಕ್ತ ರಮಿತ್ ಶರ್ಮಾ ಮತ್ತು ಜಂಟಿ ಆಯುಕ್ತ ಆಕಾಶ್ ಕುಲ್ಹಾರಿ ಅವರೂ ಸ್ಥಳದಲ್ಲಿ ಹಾಜರಿದ್ದರು.

‘ಅಪರಾಧ ದೃಶ್ಯದ ಮರುಸೃಷ್ಟಿಯಿಂದಾಗಿ ಒಂದಷ್ಟು ಸುಳಿವುಗಳು ಲಭ್ಯವಾಗಲಿವೆ. ಇದರ ಆಧಾರದಲ್ಲಿ ತನಿಖಾ ತಂಡದವರು ಆರೋಪಿಗಳನ್ನು ತನಿಖೆಗೆ ಒಳಪಡಿಸಬಹುದು’ ಎಂದು ಪೊಲೀಸರು ಹೇಳಿದ್ದಾರೆ.

ಅತೀಕ್ ಗುಂಪಿನ ಸದಸ್ಯ ಬಂಧನ: ಅತೀಕ್ ಅಹಮದ್‌ನ ಗುಂಪಿಗೆ ಸೇರಿದ ಪಾತಕಿಯೊಬ್ಬನನ್ನು ಬಂಧಿಸಿರುವುದಾಗಿ ಪೊಲೀಸರು ಗುರುವಾರ ಹೇಳಿದ್ದಾರೆ.

‘ನ್ಯೂ ಚಾಕಿಯಾ ನಿವಾಸಿ ಅಸದ್ ಕಾಲಿಯಾ ಬಂಧಿತ. ಕರೇಲಿ ಪೊಲೀಸ್ ಠಾಣೆಯ ಸಿಬ್ಬಂದಿ ಬುಧವಾರ ಈತನನ್ನು ಬಂಧಿಸಿದ್ದಾರೆ’ ಎಂದು ಪ್ರಕಟಣೆ ತಿಳಿಸಿದೆ. ‘ಕಾಲಿಯಾ, ಅತೀಕ್ ಪತ್ನಿ ಶಾಯಿಸ್ತಾ ಪರ್ವೀನ್ ಅವರ ಬಲಗೈ ಬಂಟ ಎಂದೇ ಗುರುತಿಸಿಕೊಂಡಿದ್ದ, ಉಮೇಶ್ ಪಾಲ್ ಹತ್ಯೆ ಪ್ರಕರಣದಲ್ಲಿ ಪೊಲೀಸರಿಗೆ ಬೇಕಾಗಿದ್ದ ಈತ ಹಲವು ದಿನಗಳಿಂದ ತಲೆಮರೆಸಿಕೊಂಡಿದ್ದ. ಈತನ ವಿರುದ್ಧ ಕೊಲೆ ಯತ್ನ ಸೇರಿದಂತೆ ಹಲವು ಗಂಭೀರ ಪ್ರಕರಣಗಳು ಕರೇಲಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದವು. ಈತನ ಸುಳಿವು ನೀಡಿದವರಿಗೆ ₹50 ಸಾವಿರ ಬಹುಮಾನ ಘೋಷಿಸಲಾಗಿತ್ತು’ ಎಂದು ಹೇಳಿದೆ.

ಕೊಳವೆ ಬಾವಿ ಬಳಸಿದ್ದಕ್ಕೆ ಹಲ್ಲೆ: ಮಹಿಳೆ ಸಾವು

ಏಟ್, ಉತ್ತರಪ್ರದೇಶ (ಪಿಟಿಐ): ಸಾರ್ವಜನಿಕ ಕೊಳವೆ ಬಾವಿ ಬಳಸಿದ್ದಕ್ಕಾಗಿ ಮೂವರು ವ್ಯಕ್ತಿಗಳಿಂದ ತೀವ್ರವಾಗಿ ಹಲ್ಲೆಗೀಡಾಗಿದ್ದ 40 ವರ್ಷ ವಯಸ್ಸಿನ ಮಹಿಳೆ ಗುರುವಾರ ಆಸ್ಪತ್ರೆಯಲ್ಲಿ ಮರಣ ಹೊಂದಿದ್ದಾರೆ.

ಮಾರ್‌ಹರಾ ಪೊಲೀಸ್ ಠಾಣೆಯ ವ್ಯಾಪ್ತಿಯ ಲಾಲ್‌ಪುರ್ ದೆಹಮಾಫಿ ಗ್ರಾಮದಲ್ಲಿ ಕಳೆದ ಶನಿವಾರ ಸಾಧನಾ ಎಂಬುವವರ ಮೇಲೆ ಹಲ್ಲೆ ನಡೆದಿತ್ತು. ‘ನನ್ನ ಪತ್ನಿ ಗ್ರಾಮದ ಕೊಳವೆ ಬಾವಿ ಬಳಸಿದ್ದಕ್ಕಾಗಿ ಸುಧೀರ್ ಕುಮಾರ್, ಸಂದೀಪ್ ಮತ್ತು ಅವರ ತಂದೆ ಪ್ರೇಮ್‌ಪಾಲ್ ನಿಂದಿಸಿ ತೀವ್ರ ಹಲ್ಲೆ ನಡೆಸಿದ್ದರು’ ಎಂದು ಮೃತ ಮಹಿಳೆಯ ಪತಿ ರಿಂಕು ದೂರು ನೀಡಿದ್ದಾರೆ. ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ವಲಸೆ ಕಾರ್ಮಿಕರಿಗೆ ಪಡಿತರ ಚೀಟಿ: 3 ತಿಂಗಳ ಕಾಲಾವಕಾಶ



ನವದೆಹಲಿ (ಪಿಟಿಐ): ಇ-ಶ್ರಮ್ ಪೋರ್ಟಲ್ ಮೂಲಕ ನೋಂದಣಿ ಮಾಡಿಸಿಕೊಂಡಿರುವ ವಲಸೆ ಕಾರ್ಮಿಕರಿಗೆ ಪಡಿತರ ಚೀಟಿ ನೀಡಲು ಎಲ್ಲಾ ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸುಪ್ರೀಂ ಕೋರ್ಟ್ ಗುರುವಾರ ಮತ್ತೆ ಮೂರು ತಿಂಗಳ ಕಾಲಾವಕಾಶ ನೀಡಿದೆ.

ಕೇಂದ್ರ ಸರ್ಕಾರದ ಕಾರ್ಮಿಕ ಮತ್ತುಉದ್ಯೋಗ ಸಚಿವಾಲಯದ ಪೋರ್ಟಲ್‌ನಲ್ಲಿ ನೋಂದಣಿ ಮಾಡಿಸಿಕೊಂಡಿರುವ ವಲಸೆ ಕಾರ್ಮಿಕರಿಗೆ ಪಡಿತರ ಚೀಟಿ ನೀಡುವುದರಿಂದ ಅವರು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (ಎನ್‌ಎಫ್‌ಎಸ್‌ಎ) ಅಡಿಯಲ್ಲಿ ಪ್ರಯೋಜನಗಳನ್ನು ಪಡೆಯಬಹುದು ಎಂದು ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಅಹ್ಸಾನುದ್ದೀನ್ ಅಮಾನುಲ್ಲಾ ಅವರಿದ್ದ ನ್ಯಾಯಪೀಠವು ಹೇಳಿದೆ.

ವಲಸೆ ಕಾರ್ಮಿಕರಿಗೂ ಪಡಿತರ ಚೀಟಿ ನೀಡಬೇಕೆಂದು ಕೋರಿ ಅಂಜಲಿ ಭಾರದ್ವಾಜ್, ಹರ್ಷ ಮಂದರ್ ಮತ್ತು ಜಗದೀಪ್ ಚೊಕ್ಕಾರ್ ಎಂಬವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಪೀಠವು ಈ ಆದೇಶ ನೀಡಿದೆ.

‘ಕಲ್ಯಾಣ ಯೋಜನೆಗಳ ಪ್ರಯೋಜನಗಳು ಪ್ರತಿ ನಾಗರಿಕನಿಗೂ ಲಭಿಸಬೇಕು. ಈ ಯೋಜನೆಗಳನ್ನು ಜನರಲ್ಲಿಗೆ ತಲುಪಿಸುವುದು ಸರ್ಕಾರದ ಕೆಲಸ’ ಎಂದೂ ನ್ಯಾಯಪೀಠ ಹೇಳಿದೆ.

‘ಸರ್ಕಾರವು ತನ್ನ ಕರ್ತವ್ಯವನ್ನು ನಿಭಾಯಿಸುತ್ತಿಲ್ಲ ಎಂದು ನಾವು ಹೇಳುತ್ತಿಲ್ಲ. ಆದರೆ ಕೆಲವರು ಯೋಜನೆಗಳಿಂದ ಹೊರಗುಳಿಯುತ್ತಿದ್ದಾರೆ’ ಎಂದಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಲಸೆ ಕಾರ್ಮಿಕರಿಗೆ ಪಡಿತರ ಚೀಟಿ ನಿರಾಕರಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಇದೇ 17ರಂದು ಹೇಳಿತ್ತು.

ಕಾಶ್ಮೀರದಲ್ಲಿ ಉಗ್ರರ ದಾಳಿ ಐವರು ಯೋಧರ ಸಾವು

ಒಂದನೇ ಪುಟದಿಂದ...

‘ಘಟನಾ ಸ್ಥಳದಿಂದ ಸೈನಿಕರೊಬ್ಬರನ್ನು ರಕ್ಷಿಸಲಾಗಿದ್ದು, ಗಾಯಗೊಂಡಿರುವ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ರಜೌರಿಯಲ್ಲಿರುವ ಸೇನಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಉಗ್ರರ ಪತ್ತೆಗಾಗಿ ಕಾರ್ಯಾಚರಣೆ ಆರಂಭಿಸಲಾಗಿದೆ’ ಎಂದು ಪ್ರಕಟಣೆ ತಿಳಿಸಿದೆ.

ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಘಟನೆಯ ಕುರಿತು ಮಾಹಿತಿ ನೀಡಿದ್ದಾರೆ.

ಬಾಲಕಿಯರ ಮೇಲೆ ಅತ್ಯಾಚಾರ

ಭವಾನಿಪಟ್ಣ (ಒಡಿಶಾ) (ಪಿಟಿಐ): ಕಾಲಹಂದಿ ಜಿಲ್ಲೆಯ ಬುಡಕಟ್ಟು ಸಮುದಾಯಕ್ಕೆ ಸೇರಿದ ಇಬ್ಬರು ಬಾಲಕಿಯರು ಜಾತ್ರೆ ನೋಡಿಕೊಂಡು ಮನೆಗೆ ವಾಪಸ್ ಬರುವ ವೇಳೆ ಐವರು ಅವರ ಮೇಲೆ ಅತ್ಯಾಚಾರ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜೂನ್ 5ರಿಂದ ಸಿಯುಇಟಿ–ಪಿಜಿ ಪರೀಕ್ಷೆ

ನವದೆಹಲಿ (ಪಿಟಿಐ): ‘ದೇಶದಲ್ಲಿರುವ ವಿಶ್ವವಿದ್ಯಾಲಯಗಳಲ್ಲಿನ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕಾಗಿ ಜೂನ್ 5ರಿಂದ 12ರವರೆಗೆ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಯುಇಟಿ–ಪಿಜಿ) ನಡೆಸಲಾಗುವುದು’ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಗುರುವಾರ ತಿಳಿಸಿದೆ.

‘ಅರ್ಜಿ ಸಲ್ಲಿಕೆಗೆ ಈ ಮೊದಲು ಏಪ್ರಿಲ್ 19ರವರೆಗೆ ಗಡುವು ನೀಡಲಾಗಿತ್ತು. ಇದನ್ನು ಮೇ 5ರವರೆಗೂ ವಿಸ್ತರಿಸಲಾಗಿದೆ. ಪರೀಕ್ಷೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ ಎನ್‌ಟಿಎ ವೆಬ್‌ಸೈಟ್‌ಗೆ ಭೇಟಿ ನೀಡಬಹುದು’ ಎಂದು ಉನ್ನತ ಅಧಿಕಾರಿಯೊಬ್ಬರು ಹೇಳಿದ್ದಾರೆ.

ನರೋದಾ ಗಾಮ್ ಗಲಭೆ: ಎಲ್ಲ 67 ಆರೋಪಿಗಳ ಖುಲಾಸೆ

ಅಹಮದಾಬಾದ್ (ಪಿಟಿಐ): 2002ರ ನರೋದಾ ಗಾಮ್ ಗಲಭೆ ಪ್ರಕರಣದ ಎಲ್ಲ 67 ಜನ ಆರೋಪಿಗಳನ್ನು ಇಲ್ಲಿನ ವಿಶೇಷ ನ್ಯಾಯಾಲಯ ಗುರುವಾರ ಖುಲಾಸೆಗೊಳಿಸಿದೆ.

ಎಸ್‌ಐಟಿ ಪ್ರಕರಣಗಳ ಕುರಿತ ನ್ಯಾಯಾಲಯದ ವಿಶೇಷ ನ್ಯಾಯಾಧೀಶ ಎಸ್.ಕೆ.ಬಕ್ಷಿ ತೀರ್ಪು ಪ್ರಕಟಿಸಿದರು.

ಬಿಜೆಪಿ ನಾಯಕಿ, ಮಾಜಿ ಸಚಿವೆ ಮಾಯಾ ಕೊಡ್ನಾನಿ, ವಿಶ್ವ ಹಿಂದೂ ಪರಿಷತ್‌ನ ಮಾಜಿ ಮುಖಂಡ ಜಯದೀಪ್ ಪಟೇಲ್, ಬಜರಂಗ ದಳ ಮಾಜಿ ಮುಖಂಡ ಬಾಬು ಬಜರಂಗಿ ಈ ಪ್ರಕರಣದ ಆರೋಪಿಗಳಾಗಿದ್ದರು.

ನರೋದಾ ಗಾಮ್‌ನಲ್ಲಿ ನಡೆದ ಗಲಭೆಯಲ್ಲಿ 11 ಮಂದಿ ಮುಸ್ಲಿಮರನ್ನು ಹತ್ಯೆ ಮಾಡಲಾಗಿತ್ತು. ಈ ಪ್ರಕರಣ ಕುರಿತು ಸುಪ್ರೀಂ ಕೋರ್ಟ್ ನೇಮಿಸಿದ್ದ ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆ ನಡೆಸಿತ್ತು.

ಈ ಪ್ರಕರಣದಲ್ಲಿ ಒಟ್ಟು 86 ಆರೋಪಿಗಳಿದ್ದರು. ಈ ಪೈಕಿ 18 ಮಂದಿ ವಿಚಾರಣೆ ನಡೆಯುತ್ತಿದ್ದ ಅವಧಿಯಲ್ಲಿ ಮೃತಪಟ್ಟಿದ್ದಾರೆ. ಒಬ್ಬ ಆರೋಪಿಯನ್ನು ಕೋರ್ಟ್ ಈ ಮೊದಲೇ ಖುಲಾಸೆಗೊಳಿಸಿತ್ತು.

ರಾಹುಲ್ ಗಾಂಧಿ ಸಲ್ಲಿಸಿದ್ದ ಅರ್ಜಿ ತಿರಸ್ಕರಿಸಿದ ಕೋರ್ಟ್

ಒಂದನೇ ಪುಟದಿಂದ...

‘ದೂರುದಾರರಾದ ಪೂರ್ಣೇಶ್ ಮೋದಿ ಅವರಿಗೆ, ಮಾನಹಾನಿಕರ ಪದಗಳ ಬಳಕೆ ಹಾಗೂ ಮೋದಿ ಉಪನಾಮ ಹೊಂದಿರುವವರನ್ನು ಕಳ್ಳರಿಗೆ ಹೋಲಿಕೆ ಮಾಡಿದ್ದರಿಂದ ಮಾನಸಿಕ ನೋವುಂಟಾಗಿರುತ್ತದೆ. ಅವರ ಗೌರವಕ್ಕೆ ಧಕ್ಕೆ ಉಂಟಾಗಿದೆ’ ಎಂದೂ ಹೇಳಿದ್ದಾರೆ.

ಲೋಕಸಭೆಗೆ 2019ರಲ್ಲಿ ನಡೆದ ಚುನಾವಣೆಯ ಪ್ರಚಾರದ ಸಂದರ್ಭದಲ್ಲಿ ಕೋಲಾರದಲ್ಲಿ ಮಾತನಾಡಿದ್ದ ರಾಹುಲ್ ಗಾಂಧಿ, ‘ಎಲ್ಲ ಕಳ್ಳರಿಗೂ ಮೋದಿ ಎಂಬ ಉಪನಾಮ ಏಕಿದೆ’ ಎಂದು ಪ್ರಶ್ನಿಸಿದ್ದರು. ಅದನ್ನು ಪ್ರಶ್ನಿಸಿ ಸೂರತ್ (ಪಶ್ಚಿಮ) ಕ್ಷೇತ್ರದ ಶಾಸಕ ಪೂರ್ಣೇಶ್ ಮೋದಿ ಅವರು ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ಸೂರತ್ ನ್ಯಾಯಾಲಯವು ರಾಹುಲ್ ಅವರಿಗೆ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿ ಮಾರ್ಚ್ 23ರಂದು ತೀರ್ಪು ನೀಡಿತ್ತು.

ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಿದ್ದ ನ್ಯಾಯಾಲಯ, ತೀರ್ಪನ್ನು 30 ದಿನಗಳ ಕಾಲ ಅಮಾನತಿನಲ್ಲಿಟ್ಟಿದೆ. ಜೈಲು ಶಿಕ್ಷೆ ಪ್ರಕಟಗೊಂಡ ಮಾರನೇ ದಿನವೇ ಅವರನ್ನು ಲೋಕಸಭಾ ಸದಸ್ಯತ್ವದಿಂದ ಅನರ್ಹಗೊಳಿಸಲಾಗಿತ್ತು. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದ ಕಾಂಗ್ರೆಸ್, ದೇಶದ ವಿವಿಧೆಡೆ ವ್ಯಾಪಕ ಪ್ರತಿಭಟನೆಗಳನ್ನು ನಡೆಸಿತ್ತು.

ಹೋರಾಟ ಮುಂದುವರಿಕೆ–ಕಾಂಗ್ರೆಸ್: ಸೂರತ್ ಸೆಷನ್ಸ್ ನ್ಯಾಯಾಲಯವು ರಾಹುಲ್ ಗಾಂಧಿ ಅವರ ಅರ್ಜಿಯನ್ನು ತಿರಸ್ಕರಿಸಿದ್ದರೂ ಕಾನೂನಿನಡಿ ಲಭ್ಯವಿರುವ ಎಲ್ಲ ಆಯ್ಕೆಗಳನ್ನು ಬಳಸಿಕೊಂಡು, ಕಾನೂನು ಹೋರಾಟ ಮುಂದುವರಿಸಲಾಗುವುದು ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

‘ಇದು ರಾಜಕೀಯ ಪ್ರೇರಿತ ಪ್ರಕರಣ. ನಮಗೆ ಭಾರತದ ನ್ಯಾಯಾಂಗದ ಮೇಲೆ ಸಂಪೂರ್ಣ ವಿಶ್ವಾಸ ಇದ್ದು, ಹೋರಾಟ ಮುಂದುವರಿಯಲಿದೆ’ ಎಂದು ಕಾಂಗ್ರೆಸ್‌ನ ಮುಖಂಡ ಭೂಪಿಂದರ್ ಸಿಂಗ್ ಹೂಡಾ ಹೇಳಿದ್ದಾರೆ.

‘ಕ್ಷಮೆ ಯಾಚಿಸಲು ಇನ್ನೂ ಸಮಯ ಇದೆ’

ನವದೆಹಲಿ: ‘ದೇಶದ ಕ್ಷಮೆ ಯಾಚಿಸಲು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಈಗಲೂ ಅವಕಾಶ ಇದೆ’ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಅನುರಾಗ್ ಠಾಕೂರ್ ಗುರುವಾರ ಹೇಳಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ ಅವರನ್ನು ನಿಂದಿಸುವ ಹಾಗೂ ಅವರ ವಿರುದ್ಧ ದಾಳಿ ಮಾಡುವ ನೆಪದಲ್ಲಿ ಕಾಂಗ್ರೆಸ್ ರಾಜಮನೆತನವು ದೇಶದ ಇತರ ಹಿಂದುಳಿದ ಸಮುದಾಯವನ್ನು (ಒಬಿಸಿ) ಉದ್ದೇಶಪೂರ್ವಕವಾಗಿ ಅವಮಾನಿಸಿತ್ತು. ಮಾನನಷ್ಟ ಮೊಕದ್ದಮೆಯಲ್ಲಿ ವಿಧಿಸಿದ್ದ ಶಿಕ್ಷೆಗೆ ತಡೆ ಕೋರಿ ರಾಹುಲ್ ಗಾಂಧಿ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿರುವ ಸೆಷನ್ಸ್ ನ್ಯಾಯಾಲಯದ ಕ್ರಮ ಇದನ್ನು ಮತ್ತೊಮ್ಮೆ ಸಾಬೀತು ಮಾಡಿದಂತಾಗಿದೆ’ ಎಂದು ಠಾಕೂರ್ ಹೇಳಿದ್ದಾರೆ.

ವಿಚ್ಛೇದನ: ಮಂಗಳೂರು ವೈದ್ಯ ಕೋರಿ ಸಲ್ಲಿಸಿದ್ದ ಅರ್ಜಿ ತಿರಸ್ಕರಿಸಿದ ‘ಸುಪ್ರೀಂ’

‘ಮದುವೆ: ಹೊಂದಿಕೊಳ್ಳಲು ಸಮಯ ಬೇಕು’

ಪ್ರಜಾವಾಣಿ ವಾರ್ತೆ



ನವದೆಹಲಿ: ಕೆನಡ ನಿವಾಸಿ ಮಹಿಳೆಯೊಂದಿಗಿನ ತಮ್ಮ ಮದುವೆಯನ್ನು ರದ್ದುಗೊಳಿಸುವಂತೆ ಕೋರಿ ಮಂಗಳೂರು ಮೂಲದ ವೈದ್ಯ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿದೆ. ‘ಮದುವೆಯಾದ ನಂತರ ಹೊಂದಿಕೊಳ್ಳಲು ಸಮಯ ಬೇಕಾಗುತ್ತದೆ’ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ನ್ಯಾಯಮೂರ್ತಿಗಳಾದ ರಾಜೇಶ್ ಬಿಂದಲ್ ಹಾಗೂ ಅರವಿಂದ ಕುಮಾರ್ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿದೆ.

‘ಮದುವೆ ನಂತರ ಇಬ್ಬರು 40 ದಿನ ಮಾತ್ರ ಒಟ್ಟಿಗೆ ಜೀವನ ನಡೆಸಿದ್ದೀರಿ. ಹೊಂದಿಕೊಳ್ಳಲು ಸಮಯ ಬೇಕಾಗುತ್ತದೆ’ ಎಂದು ದಂಪತಿಗೆ ಕಿವಿಮಾತು ಹೇಳಿದೆ.

‘ಅರ್ಜಿದಾರರು ಕೋರಿರುವಂತೆ, ಸಂವಿಧಾನದ 142ನೇ ವಿಧಿಯಡಿ ದತ್ತವಾದ ವಿಶೇಷ ಅಧಿಕಾರವನ್ನು ಬಳಸಲು ಯೋಗ್ಯವಾದ ಪ್ರಕರಣವೂ ಇದಲ್ಲ’ ಎಂದು ನ್ಯಾಯಪೀಠ ಹೇಳಿತು.

ವಿಚ್ಛೇದನ ಕೋರಿ ಪತಿ ದಾಖಲಿಸಿರುವ ಪ್ರಕರಣವನ್ನು ಮಂಗಳೂರಿನಿಂದ ಮುಂಬೈನ ಕೋರ್ಟ್‌ಗೆ ವರ್ಗಾಯಿಸಬೇಕು ಎಂದು ಕೋರಿ ಪತ್ನಿ ಸಲ್ಲಿಸಿದ್ದ ಅರ್ಜಿಯನ್ನೂ ನ್ಯಾಯಪೀಠ ವಜಾಗೊಳಿಸಿತು.

ಮುಂಬೈನಿಂದ ಮಂಗಳೂರಿಗೆ ಪ್ರಯಾಣಿಸಲು ತಗುಲುವ ವೆಚ್ಚವನ್ನು ಭರಿಸುವುದಕ್ಕೆ ಸಂಬಂಧಿಸಿ ಯಾವುದೇ ಆದೇಶ ನೀಡಲು ನಿರಾಕರಿಸಿದ ನ್ಯಾಯಪೀಠ, ಈ ಕುರಿತು ಕೌಟುಂಬಿಕ ನ್ಯಾಯಾಲಯಕ್ಕೆ ಆಕೆ ಅರ್ಜಿ ಸಲ್ಲಿಸಬಹುದು ಎಂದು ಹೇಳಿತು.

‘ದಂಪತಿ ಮಗು ಹೊಂದಿರದ ಕಾರಣ, ಮಗುವಿನ ಪಾಲನೆಯ ಪ್ರಶ್ನೆಯೇ ಉದ್ಭವಿಸದು. ಇಬ್ಬರೂ ಸುಶಿಕ್ಷಿತರಾಗಿದ್ದು, ಉದ್ಯೋಗದಲ್ಲಿದ್ದಾರೆ. ಆಕೆ ವಿಚಾರಣೆಗಾಗಿ ಮಂಗಳೂರಿಗೆ ತೆರಳಬಹುದು. ಅಗತ್ಯ ಬಿದ್ದರೆ, ಖುದ್ದು ಹಾಜರಾತಿಯಿಂದ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಬಹುದು’ ಎಂದೂ ನ್ಯಾಯಪೀಠ ಹೇಳಿತು.

ವೈದ್ಯ ಹಾಗೂ ಕೆನಡ ನಿವಾಸಿ ಮಹಿಳೆಯು 2019ರ ಡಿಸೆಂಬರ್‌ನಲ್ಲಿ ಫೇಸ್‌ಬುಕ್ ಮೂಲಕ ಪರಿಚಯಗೊಂಡಿದ್ದರು. 2020ರ ಡಿಸೆಂಬರ್ 5ರಂದು ಮಂಗಳೂರಿನಲ್ಲಿ ಕ್ರೈಸ್ತ ಧರ್ಮದ ವಿಧಿ–ವಿಧಾನಗಳಂತೆ ಇಬ್ಬರು ಮದುವೆಯಾಗಿದ್ದಾರೆ.

ಮದುವೆಯಾಗಿ 40 ದಿನಗಳ ನಂತರ, ಮಹಿಳೆ ಮುಂಬೈಗೆ ತೆರಳಿ ಖಾಸಗಿ ಬ್ಯಾಂಕ್‌ನಲ್ಲಿ ಕೆಲಸ ಸೇರಿದ್ದರು. ನಂತರ, ಪತ್ನಿ ಅವಮಾನಿಸುತ್ತಾಳೆ ಎಂದು ಆರೋಪಿಸಿದ್ದ ವೈದ್ಯ, ವಿಚ್ಛೇದನ ಕೋರಿ ಅರ್ಜಿ ಸಲ್ಲಿಸಿದ್ದರು. ಈ ಆರೋಪಗಳನ್ನು ತಿರಸ್ಕರಿಸಿದ್ದ ಮಹಿಳೆ, ‘ನನ್ನನ್ನು ಅವಮಾನಿಸಿ, ಕೆಟ್ಟದಾಗಿ ನಡೆಸಿಕೊಳ್ಳಲಾಗಿತ್ತು’ ಎಂದು ಹೇಳಿದ್ದಾರೆ.

‘ನ್ಯಾಯಾಧೀಶರು ಪ್ರಧಾನಿ ಕಚೇರಿಯಿಂದ ಪ್ರಭಾವಿತ’


ನವದೆಹಲಿ (ಪಿಟಿಐ): ‘ಮಾನನಷ್ಟ ಮೊಕದ್ದಮೆಯಲ್ಲಿ ತಮಗೆ ವಿಧಿಸಿರುವ ಶಿಕ್ಷೆಗೆ ತಡೆ ಕೋರಿ ರಾಹುಲ್ ಗಾಂಧಿ ಅವರು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿ ತೀರ್ಪು ನೀಡಿರುವ ಸೂರತ್ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರು ಪ್ರಧಾನಿ ಕಚೇರಿಯಿಂದ ಪ್ರಭಾವಿತರಾಗಿರಬಹುದು’ ಎಂದು ಕಾಂಗ್ರೆಸ್ ಗುರುವಾರ ಆರೋಪಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಪಕ್ಷದ ಹಿರಿಯ ವಕ್ತಾರ ಅಭಿಷೇಕ್ ಮನು ಸಿಂಘ್ವಿ, ‘ಸೆಷನ್ಸ್ ನ್ಯಾಯಾಲಯದ ತೀರ್ಪು ದೋಷಪೂರಿತ ಹಾಗೂ ಸಮರ್ಥನೀಯವಲ್ಲ’ ಎಂದರು. ‘ಈ ತೀರ್ಪು ಕಾನೂನಿನ ಎಲ್ಲ ಮೂಲ ತತ್ವಗಳಿಗೆ ವಿರುದ್ಧವಾಗಿದೆ. ಹೀಗಾಗಿ ಸೂರತ್‌ನ ಸೆಷನ್ಸ್ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಶೀಘ್ರವೇ ಹೈಕೋರ್ಟ್ ಮೆಟ್ಟಿಲೇರಲಾಗುವುದು’ ಎಂದು ಸಿಂಘ್ವಿ ಹೇಳಿದರು.

‘ಈ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯವು ಸಮರ್ಥನೀಯವಲ್ಲದ ಆದೇಶ ನೀಡಿದ್ದು ದುರದೃಷ್ಟಕರ. ವಿಚಾರಣಾ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿದು ಸೂರತ್‌ನ ಸೆಷನ್ಸ್ ನ್ಯಾಯಾಲಯ ಇಂದು ತೀರ್ಪು ನೀಡಿರುವುದು ಅದಕ್ಕಿಂತ ದುರದೃಷ್ಟಕರ’ ಎಂದರು.

‘ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ‘ಮೋದಿ ಉಪನಾಮ’ ಹೊಂದಿರುವ ಇತರ 13 ಕೋಟಿ ಜನರಿಗೆ ಅವಮಾನವಾಗಿದೆ ಎಂಬುದಾಗಿ ಕೋರ್ಟ್ ಅಭಿಪ್ರಾಯಪಟ್ಟಿದೆ. ಇದು, ನ್ಯಾಯಾಧೀಶರು ಪ್ರಧಾನಿ ಕಚೇರಿಯ ಪ್ರಭಾವಕ್ಕೆ ಒಳಗಾಗಿರುವುದನ್ನು ತೋರಿಸುತ್ತದೆ’ ಎಂದರು.

ಷೇರುಪೇಟೆ ವಹಿವಾಟು 64



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,619
ಇಂದಿನ ಅಂತ್ಯ	17,624
▲	5
ದಿನದ ಗರಿಷ್ಠ	17,684

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹410
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹418

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1650(1680)
ಸೋಯಾ (ರಿಫೈನ್ಡ್)	₹1020(1025)
ಸೂರ್ಯಕಾಂತಿ (ರಿಫೈನ್ಡ್)	₹1050(1060)
ಪಾಮೋಲಿನ್	₹955 (965)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1000-1500
ಮಧ್ಯಮ	₹700-1000
ಸಣ್ಣ	₹300-700

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹148
ಆರ್‌ಎಸ್‌ಎಸ್-5	₹142.50
ಗುಡ್ ಲಾಟ್	₹131.50

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹266-526
ದ್ವಿತಳಿ (ಬಿ.ವಿ)	₹261-652

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಬೆಂಗಳೂರು	₹11500-16000
ಪುತ್ತೂರು	₹4500-7500
ತುರುವೇಕೆರೆ	₹9000-9000

ಮುಂಬೈ ಧಾರಣೆ

ಶೇಂಗಾ

20–4-2023

ಜಾವಾ 70/80(ಹೊಸ)	11050-11150
ಜಾವಾ 80/90(ಹೊಸ)	10750-10850
ದಪ್ಪ ಮಧ್ಯಪ್ರದೇಶ(ಹೊಸ)	10900-11000
ದಪ್ಪ ಗುಜರಾತ್(ಹೊಸ)	11900-12000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1660(1690)
ಒಂದು ವಾರದ ಡೆಲಿವರಿ	1655(1685)
ಸೋಯಾ ಕಚ್ಚಾ	925(925)
ಪಾಮ್ ವಾರದ ಡೆಲಿವರಿ	953(963)
ಸೂರ್ಯಕಾಂತಿ ಎಣ್ಣೆ ಕಚ್ಚಾ	930(920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60,450 (59,900)
ಬೆಳ್ಳಿ ಕೆ.ಜಿ 75,450 (74,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎಚ್‌ಸಿಎಲ್ ಟೆಕ್ನಾಲಜೀಸ್ ಲಾಭ ಶೇ 11ರಷ್ಟು ಏರಿಕೆ

ನವದೆಹಲಿ (ಪಿಟಿಐ): ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಎಚ್‌ಸಿಎಲ್ ಟೆಕ್ನಾಲಜೀಸ್‌ನ ನಿವ್ವಳ ಲಾಭವು ಶೇಕಡ 10.85ರಷ್ಟು ಹೆಚ್ಚಳ ಆಗಿದ್ದು, ₹ 3,983 ಕೋಟಿಗೆ ತಲುಪಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ₹ 3,599 ಕೋಟಿ ನಿವ್ವಳ ಲಾಭ ಗಳಿಸಿತ್ತು.

ಕಂಪನಿಯ ಕಾರ್ಯಾಚರಣೆ ವರಮಾನದಲ್ಲಿ ಶೇ 18ರಷ್ಟು ಹೆಚ್ಚಳ ದಾಖಲಾಗಿದ್ದು, ಕಂಪನಿಯು ₹ 26,606 ಕೋಟಿ ವರಮಾನ ಗಳಿಸಿದೆ. ಮಾರ್ಚ್ 31ಕ್ಕೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ಕಂಪನಿಯ ಲಾಭವು ಶೇ 10ರಷ್ಟು ಹೆಚ್ಚಾಗಿದ್ದು, ₹ 14,845 ಕೋಟಿಗೆ ತಲುಪಿದೆ. ಹಿಂದಿನ ಆರ್ಥಿಕ ವರ್ಷದಲ್ಲಿ ಕಂಪನಿಯು ₹ 13,499 ಕೋಟಿ ಲಾಭ ಗಳಿಸಿತ್ತು.

ಕಂಪನಿಯ ವಾರ್ಷಿಕ ಕಾರ್ಯಾಚರಣೆ ವರಮಾನವು ₹ 1 ಲಕ್ಷ ಕೋಟಿಯ ಗಡಿ ದಾಟಿದೆ.

₹1.01 ಲಕ್ಷ ಕೋಟಿ ಮೊತ್ತದ ಜಿಎಸ್‌ಟಿ ವಂಚನೆ ಪತ್ತೆ

ನವದೆಹಲಿ (ಪಿಟಿಐ): 2022–23ನೇ ಹಣಕಾಸು ವರ್ಷದಲ್ಲಿ ₹ 1.01 ಲಕ್ಷ ಕೋಟಿ ಮೊತ್ತದ ಜಿಎಸ್‌ಟಿ ವಂಚನೆ ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಂಚನೆ ಆಗಿರುವ ಒಟ್ಟು ಮೊತ್ತದಲ್ಲಿ ಜಿಎಸ್‌ಟಿ ತನಿಖಾ ವಿಭಾಗದ ಮಹಾನಿರ್ದೇಶನಾಲಯದ ಅಧಿಕಾರಿಗಳು ₹ 21 ಸಾವಿರ ಕೋಟಿಯನ್ನು ವಸೂಲಿ ಮಾಡಿದ್ದಾರೆ.

2021–22ನೇ ಹಣಕಾಸು ವರ್ಷದಲ್ಲಿ ₹ 54 ಸಾವಿರ ಕೋಟಿ ಮೊತ್ತದ ತೆರಿಗೆ ವಂಚನೆ ಪತ್ತೆ ಮಾಡಲಾಗಿತ್ತು. ಅದರಲ್ಲಿ ₹ 21 ಸಾವಿರ ಕೋಟಿಯನ್ನು ವಸೂಲಿ ಮಾಡಲಾಗಿತ್ತು.

ಜಿಎಸ್‌ಟಿ ರಿಟರ್ನ್ಸ್ ಸಲ್ಲಿಕೆ ಸುಲಭಗೊಳಿಸಲು ಮತ್ತು ವಂಚನೆ ತಡೆಯಲು ಕೇಂದ್ರ ಸರ್ಕಾರವು ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಏ. 25ರಿಂದ ಮ್ಯಾನ್‌ಕೈಂಡ್ ಫಾರ್ಮಾ ಐಪಿಒ

ನವದೆಹಲಿ (ಪಿಟಿಐ): ಫಾರ್ಮಾ ಕಂಪನಿ ಮ್ಯಾನ್‌ಕೈಂಡ್ ಫಾರ್ಮಾ ಆರಂಭಿಕ ಸಾರ್ವಜನಿಕ ಕೊಡುಗೆ (ಐಪಿಒ) ಮೂಲಕ ₹ 4,326 ಕೋಟಿ ಬಂಡವಾಳ ಸಂಗ್ರಹಿಸಲಿದ್ದು, ಪ್ರತಿ ಷೇರಿಗೆ ₹ 1,026ರಿಂದ ₹ 1,080ರ ನಡುವೆ ಬೆಲೆ ನಿಗದಿ ಮಾಡಿದೆ.

ಏಪ್ರಿಲ್ 25ರಿಂದ 27ರವರೆಗೆ ಷೇರುಗಳಿಗೆ ಬಿಡ್ ಸಲ್ಲಿಸಲು ಅವಕಾಶ ಇದೆ. ಆರಂಭಿಕ ಹೂಡಿಕೆದಾರರಿಗೆ ಬಿಡ್ಡಿಂಗ್ ಪ್ರಕ್ರಿಯೆಯು ಏಪ್ರಿಲ್ 24ರಿಂದ ಶುರುವಾಗಲಿದೆ ಎಂದು ಕಂಪನಿ ತಿಳಿಸಿದೆ.

ಮಾರಾಟಕ್ಕೆ ಇರುವ ಷೇರುಗಳಲ್ಲಿ ಶೇಕಡ 35ರಷ್ಟು, ಸಣ್ಣ ಹೂಡಿಕೆದಾರರಿಗೆ ಮೀಸಲಾಗಿವೆ.

ಕಂಪನಿಯು ದೇಶದಲ್ಲಿ ಒಟ್ಟು 25 ತಯಾರಿಕಾ ಘಟಕಗಳನ್ನು ಹೊಂದಿದೆ.

ಕಂಪನಿಯ ಷೇರುಗಳು ಮೇ 9ರಂದು ರಾಷ್ಟ್ರೀಯ ಷೇರುಪೇಟೆ ಹಾಗೂ ಮುಂಬೈ ಷೇರುಪೇಟೆಯಲ್ಲಿ ವಹಿವಾಟು ಆರಂಭಿಸಲಿವೆ.

ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ ರಾಜೀವ್ ಅಂದಾಜು

ಆ್ಯಪಲ್ ಹೂಡಿಕೆ 3 ಪಟ್ಟು ಹೆಚ್ಚಳ

ನವದೆಹಲಿ (ರಾಯಿಟರ್ಸ್): ಅಮೆರಿಕದ ತಂತ್ರಜ್ಞಾನ ವಲಯದ ದೈತ್ಯ ಕಂಪನಿಯಾಗಿರುವ ಆ್ಯಪಲ್ ಭಾರತದಲ್ಲಿ ತನ್ನ ಹೂಡಿಕೆಯನ್ನು ಈಗಿರುವುದಕ್ಕಿಂತ ಮೂರು ಪಟ್ಟು ಹೆಚ್ಚು ಮಾಡುವ ಸಾಧ್ಯತೆ ಇದೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅಂದಾಜಿಸಿದ್ದಾರೆ.

ಆ್ಯಪಲ್ ಕಂಪನಿಯು ಈಗ ಭಾರತದಲ್ಲಿ ಪ್ರಮುಖವಾಗಿ ಐಫೋನ್‌ಗಳ ಬಿಡಿಭಾಗಗಳನ್ನು ಜೋಡಿಸುವ ಕೆಲಸ ಮಾತ್ರ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಐಪ್ಯಾಡ್ ಮತ್ತು ಏರ್‌ಪಾಡ್‌ಗಳನ್ನೂ ಇಲ್ಲಿಯೇ ಸಿದ್ಧಪಡಿಸುವಂತೆ ಆಗಬೇಕು ಎಂಬ ಬಯಕೆಯನ್ನು ಅದು ಹೊಂದಿದೆ.

‘ಆ್ಯಪಲ್ ಕಂಪನಿ ಮತ್ತು ಭಾರತದ ನಡುವಿನ ಸಂಬಂಧದಲ್ಲಿ ಇನ್ನಷ್ಟು ಹೂಡಿಕೆಗಳು ಬರುವುದಕ್ಕೆ, ಇನ್ನಷ್ಟು ರಫ್ತಿಗೆ ಮತ್ತು ಇನ್ನಷ್ಟು ಉದ್ಯೋಗ ಸೃಷ್ಟಿಗೆ ಅವಕಾಶಗಳು ಇವೆ ಎಂಬುದು ನನ್ನ ನಂಬಿಕೆ. ಮುಂದಿನ ವರ್ಷಗಳಲ್ಲಿ ಹೂಡಿಕೆಯು ಮೂರು ಪಟ್ಟು ಕೂಡ ಹೆಚ್ಚಾಗಬಹುದು’ ಎಂದು ರಾಜೀವ್ ಅವರು ರಾಯಿಟರ್ಸ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಮುಖ್ಯಾಂಶಗಳು

- ದೇಶದಲ್ಲಿ ಕಂಪನಿಯ ಎರಡನೇ ರಿಟೇಲ್ ಮಳಿಗೆ
- ಚೀನಾ ಮೇಲಿನ ಅವಲಂಬನೆ ತಗ್ಗಿಸಲು ಕಂಪನಿಯ ಪ್ರಯತ್ನ
- ಐಪ್ಯಾಡ್, ಏರ್‌ಪಾಡ್ ಭಾರತದಲ್ಲಿಯೇ ಸಿದ್ಧಪಡಿಸುವ ಇರಾದೆ

ಆ್ಯಪಲ್ ಕಂಪನಿಯ ಸಿಇಒ ಟಿಮ್ ಕುಕ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಬುಧವಾರ ಭೇಟಿ ಮಾಡಿದ್ದರು. ಇದಾದ ನಂತರದಲ್ಲಿ ರಾಜೀವ್ ಅವರು ಈ ಮಾತು ಹೇಳಿದ್ದಾರೆ. ಪ್ರಧಾನಿಯವರನ್ನು ಭೇಟಿ ಮಾಡಿದ ನಂತರ ಕುಕ್ ಅವರು, ‘ದೇಶದಾದ್ಯಂತ ಹೂಡಿಕೆ ಮಾಡುವ ವಿಚಾರದಲ್ಲಿ ಆ್ಯಪಲ್ ಬದ್ಧತೆ ಹೊಂದಿದೆ’ ಎಂದು ಹೇಳಿದ್ದಾರೆ. ಕುಕ್ ಅವರು ದೆಹಲಿಯಲ್ಲಿ ಗುರುವಾರ ಆ್ಯಪಲ್ ಕಂಪನಿಯ ರಿಟೇಲ್ ಮಳಿಗೆಯೊಂದನ್ನು ಉದ್ಘಾಟಿಸಿದ್ದಾರೆ.



ನವದೆಹಲಿಯಲ್ಲಿ ಆ್ಯಪಲ್ ಮಳಿಗೆ ಉದ್ಘಾಟನೆ ವೇಳೆ ಯುವತಿಯೊಬ್ಬರು ಕಂಪನಿಯ ಸಿಇಒ ಟಿಮ್ ಕುಕ್ ಜೊತೆ ಸೆಲ್ಫಿ ತೆಗೆದುಕೊಂಡರು –ಎಎಫ್‌ಪಿ ಚಿತ್ರ

ಮೂಲಗಳ ಪ್ರಕಾರ, ದೆಹಲಿಯ ಮಳಿಗೆಯು ಗಾತ್ರದಲ್ಲಿ ಮುಂಬೈನಲ್ಲಿ ಇರುವ ಮಳಿಗೆಯ ಅರ್ಧದಷ್ಟಿದೆ. ದೆಹಲಿಯ ಮಳಿಗೆಯಲ್ಲಿ ಉತ್ತಮ ಕೌಶಲ ಹೊಂದಿರುವ 70ಕ್ಕೂ ಅಧಿಕ ಕೆಲಸಗಾರರಿದ್ದು, ಗ್ರಾಹಕರು 15ಕ್ಕೂ ಅಧಿಕ ಭಾಷೆಗಳಲ್ಲಿ ಸೇವೆ ಪಡೆಯಬಹುದು.

ವಿಪ್ರೊ ತೆಕ್ಕೆಗೆ ಕೇರಳದ ‘ಬ್ರಾಹ್ಮಿನ್ಸ್’

ಪ್ಯಾಕ್ ಮಾಡಿದ ಆಹಾರ ಉತ್ಪನ್ನಗಳ ವಿಭಾಗದತ್ತ ಗಮನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳ ಮೂಲದ ‘ಬ್ರಾಹ್ಮಿನ್ಸ್’ ಬ್ರ್ಯಾಂಡ್ ಅನ್ನು ಸ್ವಾಧೀನಪಡಿಸಿಕೊಳ್ಳಲು ನಿರ್ಣಾಯಕ ಒಪ್ಪಂದಕ್ಕೆ ಬರಲಾಗಿದೆ ಎಂದು ವಿಪ್ರೊ ಕನ್ಸ್ಯೂಮರ್ ಕೇರ್ ಆ್ಯಂಡ್ ಲೈಟ್ನಿಂಗ್ ಕಂಪನಿಯು ಗುರುವಾರ ತಿಳಿಸಿದೆ.

ಬ್ರಾಹ್ಮಿನ್ಸ್ ಬ್ರ್ಯಾಂಡ್, ಮಸಾಲೆ ಪದಾರ್ಥಗಳ ಮಿಶ್ರಣ ಮತ್ತು ಅಡುಗೆಗೆ ಸಿದ್ಧವಾದ (ರೆಡಿ ಟು ಕುಕ್) ಉತ್ಪನ್ನಗಳಿಗೆ ಕೇರಳದಲ್ಲಿ ಹೆಚ್ಚು ಜನಪ್ರಿಯವಾಗಿದೆ.

ವಿಪ್ರೊ ಕಂಪನಿಯು ಸಂಬಾರ ಪದಾರ್ಥಗಳು ಮತ್ತು ಅಡುಗೆಗೆ ಸಿದ್ಧವಾದ ಪದಾರ್ಥಗಳ ವಹಿವಾಟು ನಡೆಸುವ ನಿರಾಪರ ಕಂಪನಿಯನ್ನು ಈಚೆಗಷ್ಟೇ ಸ್ವಾಧೀನಪಡಿಸಿಕೊಂಡಿದೆ. ಈಗ ‘ಬ್ರಾಹ್ಮಿನ್ಸ್’ ಬ್ರ್ಯಾಂಡ್ ಖರೀದಿಗೆ ಒಪ್ಪಂದ ಮಾಡಿಕೊಳ್ಳುವ ಮೂಲಕ ಪ್ಯಾಕ್ ಮಾಡಿದ ಆಹಾರ ಉತ್ಪನ್ನಗಳ ವಿಭಾಗದಲ್ಲಿ ಹೆಚ್ಚಿನ ಪಾಲು ಹೊಂದಲು ಮುಂದಾಗಿದೆ.

ಕೇರಳದಲ್ಲಿ ಬ್ರಾಹ್ಮಿನ್ಸ್ ಬ್ರ್ಯಾಂಡ್ ಉತ್ತಮ ವಹಿವಾಟು ನಡೆಸುತ್ತಿದೆ. ಗುಣಮಟ್ಟದ ಗರಿಷ್ಠ ಮಾನದಂಡಗಳನ್ನು ಅಳವಡಿಸಿಕೊಂಡಿರುವುದರಿಂದ ಮಾರುಕಟ್ಟೆಯಲ್ಲಿ ಪ್ರಮುಖ ಸ್ಥಾನ ಪಡೆದುಕೊಂಡಿದೆ. ಈ ಬ್ರ್ಯಾಂಡ್ ಸ್ವಾಧೀನ ಮಾಡಿಕೊಳ್ಳುತ್ತಿರುವುದು ಸಂತೋಷ ತಂದಿದೆ ಎಂದು ಕಂಪನಿಯ ಸಿಇಒ ವಿನೀತ್ ಅಗರ್ವಾಲ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಬ್ರಾಹ್ಮಿನ್ಸ್’ 1987ರಲ್ಲಿ ಸ್ಥಾಪನೆ ಆಗಿದ್ದು, ಕೇರಳದ ಮಾರುಕಟ್ಟೆಯಲ್ಲಿ ಗ್ರಾಹಕರು ಹೆಚ್ಚು ಇಷ್ಟಪಡುವ ಬ್ರ್ಯಾಂಡ್‌ಗಳಲ್ಲಿ ಒಂದಾಗಿದೆ ಎಂದು ವಿಪ್ರೊ ಹೇಳಿದೆ.


‘ಬ್ರಾಹ್ಮಿನ್ಸ್ ಬ್ರ್ಯಾಂಡ್ ಇದೀಗ ವಿಪ್ರೊ ಕನ್ಸ್ಯೂಮರ್ ಕೇರ್ ಭಾಗವಾಗಿರುವುದು ಹೆಮ್ಮೆಯ ವಿಷಯ. ಸ್ಥಳೀಯ ಗ್ರಾಹಕರ ಬೆಂಬಲದೊಂದಿಗೆ ಬ್ರ್ಯಾಂಡ್ ಅಭಿವೃದ್ಧಿಪಡಿಸಲು ಮತ್ತು ತಯಾರಿಕೆಯನ್ನು ಇನ್ನಷ್ಟು ಉತ್ತಮಗೊಳಿಸಲು ಜಂಟಿಯಾಗಿ ಗಮನ ಹರಿಸಲಾಗುವುದು. ವಿಪ್ರೊ ಕಂಪನಿಯ ನೆಟ್‌ವರ್ಕ್, ಮಾರುಕಟ್ಟೆ ಪರಿಣತಿಯಿಂದ ಬ್ರಾಹ್ಮಿನ್ಸ್ ಬ್ರ್ಯಾಂಡ್ ಹೊಸ ಎತ್ತರಕ್ಕೆ ಏರುವ ವಿಶ್ವಾಸವಿದೆ’ ಎಂದು ಬ್ರಾಹ್ಮಿನ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಶ್ರೀನಾಥ್ ವಿಷ್ಣು ತಿಳಿಸಿದರು.

ಫೋರ್ಟಿಸ್ ವಶಕ್ಕೆ ಮೆಡೋರ್ ಹಾಸ್ಪಿಟಲ್

ನವದೆಹಲಿ (ಪಿಟಿಐ): ಮಾನೇಸರ್ ಮೂಲದ ಮೆಡೋರ್ ಹಾಸ್ಪಿಟಲ್ ಅನ್ನು ₹ 225 ಕೋಟಿಗೆ ಸ್ವಾಧೀನಕ್ಕೆ ತೆಗೆದುಕೊಳ್ಳಲು ವಿಪಿಎಸ್ ಸಮೂಹದೊಂದಿಗೆ ಒಪ್ಪಂದ ಮಾಡಿಕೊಂಡಿರುವುದಾಗಿ ಫೋರ್ಟಿಸ್ ಹೆಲ್ತ್‌ಕೇರ್ ಗುರುವಾರ ತಿಳಿಸಿದೆ.

ಆಸ್ಪತ್ರೆಯು 350 ಹಾಸಿಗೆಗಳ ಸಾಮರ್ಥ್ಯ ಹೊಂದಿದ್ದು, ಒಂಬತ್ತು ತಿಂಗಳಿನಲ್ಲಿ ಹಂತ ಹಂತವಾಗಿ ಕಾರ್ಯಾಚರಣೆ ಆರಂಭಿಸಲಾಗುವುದು ಎಂದು ಹೇಳಿದೆ.

ಮೆಡೋರ್‌ಗೆ ಸಂಬಂಧಿಸಿದ ಜಾಗ, ಕಟ್ಟಡ ಮತ್ತು ಚರ ಆಸ್ತಿಗಳ ಖರೀದಿ ಪ್ರಕ್ರಿಯೆಯು ಜುಲೈ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆ ಮಾಡಲಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.



ಬಾಲಿವುಡ್ ನಟಿ ಆಲಿಯಾ ಭಟ್ ಅವರು ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್ ಕಂಪನಿಯ ರಾಯಭಾರಿ ಆಗಲು ಒಪ್ಪಿಕೊಂಡಿದ್ದು, ಕಂಪನಿಯ ಭಾರತದ ವ್ಯವಸ್ಥಾಪಕ ನಿರ್ದೇಶಕ ಆಶರ್ ಒ. ಅವರ ಜೊತೆ ಕಂಪನಿಯ ಲಾಂಛನ ಪ್ರದರ್ಶಿಸಿದರು.

‘ಹಣದುಬ್ಬರ ನಿಯಂತ್ರಣಕ್ಕೆ ಬೇಕಿದೆ ದೀರ್ಘಾವಧಿ’

ಮುಂಬೈ (ಪಿಟಿಐ): ರೆಪೊ ದರವನ್ನು ಒಂದು ವರ್ಷದಿಂದ ಹೆಚ್ಚು ಮಾಡುತ್ತ ಇರುವುದರ ಒಟ್ಟು ಪರಿಣಾಮಗಳು ಇನ್ನೂ ಪೂರ್ತಿಯಾಗಿ ಕಾಣಿಸಿಕೊಂಡಿಲ್ಲ ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು ಹಣಕಾಸು ನೀತಿ ಸಮಿತಿಯ (ಎಂಪಿಸಿ) ಸಭೆಯಲ್ಲಿ ಹೇಳಿದ್ದಾರೆ. ಈ ತಿಂಗಳ ಆರಂಭದಲ್ಲಿ ನಡೆದ ಎಂಪಿಸಿ ಸಭೆಯ ವಿವರಗಳನ್ನು ಗುರುವಾರ ಪ್ರಕಟಿಸಲಾಗಿದೆ.

‘ಪ್ರಸಕ್ತ ಹಣಕಾಸು ವರ್ಷದಲ್ಲಿ ಹಣದುಬ್ಬರ ಪ್ರಮಾಣ ಕಡಿಮೆ ಆಗುವ ನಿರೀಕ್ಷೆ ಇದೆ. ಆದರೆ, ಹಣದುಬ್ಬರವನ್ನು ನಿಗದಿತ ಮಟ್ಟಕ್ಕೆ ಇಳಿಸುವುದಕ್ಕೆ ಹೆಚ್ಚು ಕಾಲ ಬೇಕಾಗಬಹುದು’ ಎಂದಿದ್ದಾರೆ.

ಚಿಲ್ಲರೆ ಹಣದುಬ್ಬರವನ್ನು ಶೇ4ರಲ್ಲಿ ಇರಿಸಬೇಕು ಎಂದು ಕೇಂದ್ರವು ಆರ್‌ಬಿಐಗೆ ಗುರಿ ನಿಗದಿ ಮಾಡಿದೆ. ಚಿಲ್ಲರೆ ಹಣದುಬ್ಬರ ಗರಿಷ್ಠ ಶೇ 6ರವರೆಗೆ ತಲುಪಲು ಅವಕಾಶ ಇದೆ. ಮಾರ್ಚ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ಶೇ 5.66ರಷ್ಟು ದಾಖಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ


ಸಕಲೇಶಪುರ	
ಕೂಳೆ	400-450
ನಡುಗೋಲು	500-600
ರಾಶಿ	700-750
ರಾಶಿ ಉತ್ತಮ	800-900
ಜರಡಿ	1000-1050
ಹೆರಕಿದ್ದು	1300-1400
ಹಸಿರು ಸಾಧಾರಣ	850-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1200-1500
ಕಾಳು ಮೆಣಸು	470
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-53000
ಪುತ್ತೂರು	
ಕೋಕ	11000-25000
ಹೊಸತು	32000-39000
ಕುಮಟಾ	
ಚಿಪ್ಪು	24899-32199
ಕೋಕ	16099-29999
ಫ್ಯಾಕ್ಟರಿ	12099-20729
ಹಳೆಚಾಲಿ	35899-39299
ಹೊಸಚಾಲಿ	33069-36169
ಸಾಗರ	
ಬಿಳಿಗೋಟು	18889-30699
ಚಾಲಿ	33099-37000
ಕೋಕ	14099-33599
ಕೆಂಪುಗೋಟು	22111-36669
ರಾಶಿ	36899-49119
ಶಿವಮೊಗ್ಗ	
ಬೆಟ್ಟೆ	46600-53199
ಗೊರಬಲು	18019-34499
ರಾಶಿ	32039-49555
ಸರಕು	50019-81009
ಶಿರಸಿ	
ಬೆಟ್ಟೆ	31368-44099
ಬಿಳಿಗೋಟು	23299-31650
ಚಾಲಿ	33999-37238
ಕೆಂಪುಗೋಟು	26999-33699
ರಾಶಿ	41299-45399
ಯಲ್ಲಾಪುರ	
ಬಿಳಿಗೋಟು	24899-33699
ಚಾಲಿ	33940-39511
ಕೋಕ	16109-30099
ಕೆಂಪುಗೋಟು	26899-34612
ರಾಶಿ	40306-48400
ತಟ್ಟಿಬೆಟ್ಟೆ	36306-44709

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ	
	ಮುದ್ರೆಮನೆ	ಪ್ಲಾಂಟರ್ಸ್	ನ್ಯೂಯಾರ್ಕ್
ಎಪಿ	15900	15800	200.15 ಸೆಂಟ್ಸ್
ಎಸಿ	8260	7850	
ಆರ್‌ಪಿ	10600	10600	ಲಂಡನ್
ಆರ್‌ಸಿ	5770	226 on OT	2386 ಡಾಲರ್ಸ್

ಫಫ್ ಡುಪ್ಲೆಸಿ–ವಿರಾಟ್ ಕೊಹ್ಲಿ ಶತಕದ ಜೊತೆಯಾಟ; ಟೂರ್ನಿಯಲ್ಲಿ ಆರ್‌ಸಿಬಿಗೆ ಮೂರನೇ ಜಯ

ಸಿರಾಜ್ ಸ್ವಿಂಗ್‌ಗೆ ಶರಣಾದ ಪಂಜಾಬ್ ಕಿಂಗ್ಸ್



ಮೊಹಮ್ಮದ್ ಸಿರಾಜ್ ಸಂಭ್ರಮ –ಎಎಫ್‌ಪಿ ಚಿತ್ರ

ಓವರ್ 4 | ರನ್ 21 | ವಿಕೆಟ್ 4 | ಎಕಾನಮಿ 5.25

ಮೊಹಾಲಿ (ಪಿಟಿಐ): ತಮ್ಮ ಪಕ್ಕೆಲುಬಿನ ಗಾಯದ ನೋವಿನಲ್ಲಿಯೂ ಅಬ್ಬರದ ಬ್ಯಾಟಿಂಗ್ ಮಾಡಿದ ಫಫ್ ಡುಪ್ಲೆಸಿ ಮತ್ತು ಮೊಹಮ್ಮದ್ ಸಿರಾಜ್ ಅಮೋಘ ಬೌಲಿಂಗ್ ಬಲದಿಂದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಜಯಭೇರಿ ಬಾರಿಸಿತು.

ಪಂಜಾಬ್ ಕ್ರಿಕೆಟ್ ಸಂಸ್ಥೆಯ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಬೆಂಗಳೂರು ತಂಡವು 24 ರನ್‌ಗಳಿಂದ ಪಂಜಾಬ್ ಕಿಂಗ್ಸ್ ಎದುರು ಜಯಿಸಿತು.

ಈ ಪಂದ್ಯದಲ್ಲಿ ಇಂಪ್ಯಾಕ್ಟ್ ಪ್ಲೇಯರ್ ನಿಯಮವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡ ಶ್ರೇಯ ಆರ್‌ಸಿಬಿಗೆ ಸಲ್ಲುತ್ತದೆ. ಗಾಯಗೊಂಡಿದ್ದ ಫಫ್ ನಾಯಕತ್ವ ವಹಿಸಲಿಲ್ಲ. ವಿರಾಟ್ ಕೊಹ್ಲಿ ತಂಡವನ್ನು ಮುನ್ನಡೆಸಿದರು.

ಟಾಸ್ ಗೆದ್ದ ಪಂಜಾಬ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಫಫ್ (84; 56ಎ)ಮತ್ತು ಕೊಹ್ಲಿ (59; 47ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 137 ರನ್‌ಗಳನ್ನು ಸೇರಿಸಿದರು. ಆದರೆ ಪಂಜಾಬ್ ಬೌಲರ್‌ಗಳು ಬೆಂಗಳೂರು ತಂಡವನ್ನು 4 ವಿಕೆಟ್‌ಗಳಿಗೆ 174 ರನ್‌ಗಳಿಗೆ ನಿಯಂತ್ರಿಸಿದರು.

ಗುರಿ ಬೆನ್ನಟ್ಟಿದ ಪಂಜಾಬ್ ತಂಡಕ್ಕೆ ವೇಗಿ ಸಿರಾಜ್ (21ಕ್ಕೆ4) ತಡೆಯೊಡ್ಡಿದರು. ಶಿಖರ್ ಧವನ್ ಗಾಯದಿಂದಾಗಿ ವಿಶ್ರಾಂತಿ ಪಡೆದಿದ್ದು ತಂಡಕ್ಕೆ ದೊಡ್ಡ ಹಿನ್ನಡೆಯಾಯಿತು. ಪ್ರಭಸಿಮ್ರನ್ ಸಿಂಗ್ (46; 30ಎ) ಮತ್ತು ಜಿತೇಶ್ ಶರ್ಮಾ (41; 27ಎ) ಅವರಿಬ್ಬರ ಹೋರಾಟ ವ್ಯರ್ಥವಾಯಿತು. ತಂಡವು 18.2 ಓವರ್‌ಗಳಲ್ಲಿ 150 ರನ್ ಗಳಿಸಿ ಆಲೌಟ್ ಆಯಿತು.

ಸಿರಾಜ್ ಇನಿಂಗ್ಸ್ ಆರಂಭದಲ್ಲಿ ಹೊಸ ಚೆಂಡಿನಲ್ಲಿ ಮತ್ತು ಕೊನೆಯ ಓವರ್‌ನಲ್ಲಿ ಮಿಂಚಿದರು. ಇದರಿಂದಾಗಿ ಟೂರ್ನಿಯಲ್ಲಿ ಆರ್‌ಸಿಬಿಯು ಮೂರನೇ ಜಯ ಸಾಧಿಸಲು ಸಾಧ್ಯವಾಯಿತು.



ಫಫ್ ಡುಪ್ಲೆಸಿ

ಇನಿಂಗ್ಸ್‌ನ ಮೊದಲ ಓವರ್‌ನ ಎರಡನೇ ಎಸೆತದಲ್ಲಿ ಇನ್‌ಸ್ವಿಂಗರ್ ಮೂಲಕ ಅಥರ್ವ ತೈಡೆ ವಿಕೆಟ್ ಕಬಳಿಸಿದರು. ನಾಲ್ಕನೇ ಓವರ್‌ನಲ್ಲಿ ಲಿಯಾಮ್ ಲಿವಿಂಗ್‌ಸ್ಟೋನ್ ಅವರನ್ನು ಸಿರಾಜ್ ಎಲ್‌ಬಿಡಬ್ಲ್ಯು ಬಲೆಗೆ ಬೀಳಿಸಿದರು.

ಈ ಎರಡೂ ವಿಕೆಟ್‌ಗಳು ಯುಡಿಆರ್‌ಎಸ್ ತೀರ್ಪಿನಲ್ಲಿ ಪರಿಶೀಲನೆಗೊಂಡವು.

ಸ್ಪಿನ್ನರ್ ವಣಿಂದು ಹಸರಂಗಾ ಅವರು ಮ್ಯಾಥ್ಯೂ ಶಾರ್ಟ್ ಹಾಗೂ ಶಾರೂಕ್ ಖಾನ್ ವಿಕೆಟ್‌ಗಳನ್ನು ಗಳಿಸಿ ಪಂಜಾಬ್ ತಂಡದ ಮಧ್ಯಮ ಕ್ರಮಾಂಕಕ್ಕೆ ಪೆಟ್ಟುಕೊಟ್ಟರು.

ಈ ನಡುವೆ ಮಿಂಚಿದ ಪ್ರಭಸಿಮ್ರನ್ ಸಿಂಗ್ ಮೂರು ಬೌಂಡರಿ ಹಾಗೂ ನಾಲ್ಕು ಸಿಕ್ಸರ್ ಸಿಡಿಸಿದರು. ಆದರೆ ತಂಡದ ಮೊತ್ತ ನೂರರ ಗಡಿ ಮುಟ್ಟುವ ಮುನ್ನವೇ ಅವರನ್ನು ವೇಯ್ನ್ ಪಾರ್ನೆಲ್ ಬೌಲ್ಡ್ ಮಾಡಿದರು.

ಈ ಒತ್ತಡದಲ್ಲಿಯೂ ಜಿತೇಶ್ ದಿಟ್ಟ ಹೋರಾಟ ಮಾಡಿದರು. ಮೂರು ಸಿಕ್ಸರ್ ಹಾಗೂ ಎರಡು ಬೌಂಡರಿಗಳನ್ನು ಹೊಡೆದರು. ಅವರ ಆಟದಿಂದಾಗಿ ಪಂಜಾಬ್ ತಂಡದಲ್ಲಿ ಗೆಲುವಿನ ಆಸೆ ಚಿಗುರಿತ್ತು. 17ನೇ ಓವರ್‌ನಲ್ಲಿ ಜಿತೇಶ್ ಅವರ ಕ್ಯಾಚ್ ಅನ್ನು ಡೀಪ್ ಮಿಡ್‌ವಿಕೆಟ್‌ನಲ್ಲಿ ವಿರಾಟ್ ಕೊಹ್ಲಿ ಕೈಚೆಲ್ಲಿದರು. ಆದರೆ ಇದರ ಲಾಭ ಪಂಜಾಬ್ ತಂಡಕ್ಕೆ ದಕ್ಕಲು ಸಿರಾಜ್ ಬಿಡಲಿಲ್ಲ. ಅವರು 18ನೇ ಓವರ್‌ನ ಮೂರನೇ ಎಸೆತದಲ್ಲಿ ಹರಪ್ರೀತ್ (13) ಹಾಗೂ ಕೊನೆ ಎಸೆತದಲ್ಲಿ ನೇಥನ್ ಎಲಿಸ್ ಅವರನ್ನು ಕ್ಲೀನ್‌ಬೌಲ್ಡ್ ಮಾಡಿದರು.

ವೈಶಾಖ ವಿಜಯಕುಮಾರ್ ಅವರಿಗೆ ಈ ಪಂದ್ಯದಲ್ಲಿ ವಿಕೆಟ್ ಲಭಿಸಲಿಲ್ಲ.

ಕೊಹ್ಲಿ 48ನೇ ಅರ್ಧಶತಕ: ವಿರಾಟ್ ಕೊಹ್ಲಿ ಐಪಿಎಲ್‌ನಲ್ಲಿ 48ನೇ ಅರ್ಧಶತಕ ದಾಖಲಿಸಿದರು. ಈ ಟೂರ್ನಿಯಲ್ಲಿ ಅವರು ನಾಲ್ಕನೇ ಸಲ ಐವತ್ತರ ಗಡಿ ದಾಟಿದರು. ಫಫ್ ಅವರಿಗೆ ಇದು ಈ ಟೂರ್ನಿಯ ನಾಲ್ಕನೇ ಅರ್ಧಶತಕ.

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 4ಕ್ಕೆ174 (20 ಓವರ್‌ಗಳಲ್ಲಿ)
ಕೊಹ್ಲಿ ಸಿ ಜಿತೇಶ್ ಬಿ ಹರಪ್ರೀತ್ 59 (47ಎ, 4X5, 6X1)
ಡುಪ್ಲೆಸಿ ಸಿ ಸ್ಯಾಮ್ ಬಿ ನೇಥನ್ 84 (56ಎ, 4X5, 6X5)
ಮ್ಯಾಕ್ಸ್‌ವೆಲ್ ಸಿ ಅಥರ್ವ್ ಬಿ ಹರಪ್ರೀತ್ 0 (1ಎ)
ದಿನೇಶ್ ಸಿ ಅಥರ್ವ್ ಬಿ ಅರ್ಷದೀಪ್ 7 (5ಎ, 4X1)
ಮಹಿಪಾಲ್ ಔಟಾಗದೆ 7 (9ಎ, 4X1)
ಶಾಬಾಜ್ ಔಟಾಗದೆ 5 (3ಎ)
ಇತರೆ: 12 (ಲೆಗ್‌ಬೈ 8, ವೈಡ್ 3, ನೋಬಾಲ್ 1)
ವಿಕೆಟ್ ಪತನ: 1–137 (ವಿರಾಟ್ ಕೊಹ್ಲಿ; 16.1), 2–137 (ಗ್ಲೆನ್ ಮ್ಯಾಕ್ಸ್‌ವೆಲ್; 16.2), 3–151 (ಫಫ್ ಡುಪ್ಲೆಸಿ; 17.3) 4–163 (ದಿನೇಶ್ ಕಾರ್ತಿಕ್; 18.6)
ಬೌಲಿಂಗ್: ಅರ್ಷದೀಪ್ ಸಿಂಗ್ 4–0–34–1, ಹರಪ್ರೀತ್ ಬ್ರಾರ್ 3–0–31–2, ನೇಥನ್ ಎಲಿಸ್ 4–0–41–1, ಸ್ಯಾಮ್ ಕರನ್ 4–0–27–0, ರಾಹುಲ್ ಚಾಹರ್ 4–0–24–0, ಲಿಯಾಮ್ ಲಿವಿಂಗ್‌ಸ್ಟೋನ್ 1–0–9–0

ಪಂಜಾಬ್ ಕಿಂಗ್ಸ್ 150 (18.2 ಓವರ್‌ಗಳಲ್ಲಿ)
ಅಥರ್ವ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 4 (2ಎ, 4X1)
ಪ್ರಭಸಿಮ್ರನ್ ಬಿ ಪಾರ್ನೆಲ್ 46 (30ಎ, 4X3, 4X4)
ಮ್ಯಾಥ್ಯೂ ಬಿ ಹಸರಂಗಾ 8 (7ಎ, 6X1)
ಲಿವಿಂಗ್‌ಸ್ಟೋನ್ ಎಲ್‌ಬಿಡಬ್ಲ್ಯು ಬಿ ಸಿರಾಜ್ 2 (4ಎ)
ಭಾಟಿಯಾ ರನ್‌ಔಟ್ (ಸಿರಾಜ್) 13 (9ಎ, 4X1. 6X1)
ಸ್ಯಾಮ್ ರನ್‌ಔಟ್ (ಹಸರಂಗಾ) 10 (12ಎ, 4X1)
ಜಿತೇಶ್ ಸಿ ಶಾಬಾಜ್ ಬಿ ಹರ್ಷಲ್ 41 (27ಎ, 4X2, 6X3)
ಶಾರೂಕ್ ಸ್ಟಂಪ್ಡ್ ದಿನೇಶ್ ಬಿ ಹಸರಂಗಾ 7 (5ಎ, 6X1)
ಹರಪ್ರೀತ್ ಬಿ ಸಿರಾಜ್ 13 (13ಎ, 4X1)
ನೇಥನ್ ಬಿ ಸಿರಾಜ್ 1 (2ಎ)
ಅರ್ಷದೀಪ್ ಔಟಾಗದೆ 0)
ಇತರೆ: 5 (ಬೈ 1, ಲೆಗ್‌ಬೈ 1, ವೈಡ್ 2, ನೋಬಾಲ್ 1)
ವಿಕೆಟ್ ಪತನ: 1–4 (ಅಥರ್ವ್ ತೈಡೆ; 0.2), 2–20 (ಮ್ಯಾಥ್ಯೂ ಶಾರ್ಟ್;2.1), 3–27(ಲಿಯಾಮ್ ಲಿವಿಂಗ್‌ಸ್ಟೋನ್; 3.2), 4–43 (ಹರಪ್ರೀತ್ ಸಿಂಗ್ ಭಾಟಿಯಾ; 5.3), 5–76 (ಸ್ಯಾಮ್ ಕರನ್; 9.5), 6–97 (ಪ್ರಭಸಿಮ್ರನ್ ಸಿಂಗ್;11.3), 7–106 (ಶಾರೂಕ್; 12.5), 8–147(ಹರಪ್ರೀತ್ ಬ್ರಾರ್; 17.3), 9–149 (ಎಲಿಸ್;17.6), 10–150 (ಜಿತೇಶ್; 18.2)
ಬೌಲಿಂಗ್: ಮೊಹಮ್ಮದ್ ಸಿರಾಜ್ 4–0–21–4, ವೇಯ್ನ್ ಪಾರ್ನೆಲ್ 3–0–32–1, ವಣಿಂದು ಹಸರಂಗಾ 4–0–39–2, ವೈಶಾಖ ವಿಜಯಕುಮಾರ್ 3–0–29–0, ಗ್ಲೆನ್ ಮ್ಯಾಕ್ಸ್‌ವೆಲ್ 1–0–5–0, ಹರ್ಷಲ್ ಪಟೇಲ್ 3.2–0–22–1

ಫಲಿತಾಂಶ: ಆರ್‌ಸಿಬಿಗೆ 24 ರನ್‌ಗಳ ಜಯ
ಪಂದ್ಯಶ್ರೇಷ್ಠ: ಮೊಹಮ್ಮದ್ ಸಿರಾಜ್ (ಆರ್‌ಸಿಬಿ)

ಮತ್ತೊಂದು ಜಯದತ್ತ ಧೋನಿ ಪಡೆ ಚಿತ್ತ



ಮಹೇಂದ್ರಸಿಂಗ್ ಧೋನಿ

ಚೆನ್ನೈ (ಪಿಟಿಐ): ಗಾಯದಿಂದ ಚೇತರಿಸಿಕೊಂಡಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಆಲ್‌ರೌಂಡರ್ ಬೆನ್ ಸ್ಟೋಕ್ಸ್ ಶುಕ್ರವಾರ ಸನ್‌ರೈಸರ್ಸ್ ಹೈದರಾಬಾದ್ ಎದುರಿನ ಪಂದ್ಯದಲ್ಲಿ ಕಣಕ್ಕಿಳಿಯುವ ನಿರೀಕ್ಷೆ ಇದೆ.

ಇದರಿಂದಾಗಿ ಚೆನ್ನೈ ಬಳಗದಲ್ಲಿ ಆತ್ಮವಿಶ್ವಾಸ ವೃದ್ಧಿಸಿದೆ. ಉಂಗುಷ್ಠದ ಗಾಯದಿಂದಾಗಿ ಅವರು ಮೂರು ಪಂದ್ಯಗಳಲ್ಲಿ ಆಡಿರಲಿಲ್ಲ. ಬುಧವಾರ ಅವರು ನೆಟ್ಸ್‌ನಲ್ಲಿ ಅಭ್ಯಾಸ ಮಾಡಿದರು. ಇದರಿಂದಾಗಿ ಅವರು ಫಿಟ್ ಆಗಿರುವ ವಿಶ್ವಾಸ ಮೂಡಿದೆ. ಈಚೆಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ಜಯಸಿತ್ತು.

ತಂಡದ ಆರಂಭಿಕ ಜೋಡಿ ಡೇವೊನ್ ಕಾನ್ವೆ ಹಾಗೂ ಋತುರಾಜ್ ಗಾಯಕವಾಡ್ ಉತ್ತಮ ಲಯದಲ್ಲಿದ್ದಾರೆ. ಅನುಭವಿ ಬ್ಯಾಟರ್ ಅಜಿಂಕ್ಯ ರಹಾನೆ ಮತ್ತು ಮುಂಬೈನ ಬ್ಯಾಟರ್ ಶಿವಂ ದುಬೆ ಅವರ ಅಬ್ಬರದ ಆಟವೂ ಚೆನ್ನೈ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದ್ದವು. ಅಂಬಟಿ ರಾಯುಡು, ಮೋಯಿನ್ ಅಲಿ, ಧೋನಿ ಮತ್ತು ರವೀಂದ್ರ ಜಡೇಜ ಅವರು ಕೊನೆಯ ಹಂತದ ಓವರ್‌ಗಳಲ್ಲಿ ತಂಡದ ಮೊತ್ತಕ್ಕೆ ಒಂದಿಷ್ಟು ರನ್‌ಗಳ ಕಾಣಿಕೆ ನೀಡುವ ಸಮರ್ಥರು. ಆದರೆ ಚೆನ್ನೈಗೆ ಚಿಂತೆ ಇರುವುದು ಬೌಲಿಂಗ್ ವಿಭಾಗದಲ್ಲಿ ಮಾತ್ರ.

ಹೆಚ್ಚು ವೈಡ್‌ಗಳನ್ನು ಹಾಕುತ್ತಿರುವ ಬೌಲರ್‌ಗಳು ಲೈನ್ ಮತ್ತು ಲೆಂಗ್ತ್ ನಿರ್ವಹಿಸುವ ಸವಾಲು ಇದೆ. ಫೀಲ್ಡಿಂಗ್‌ನಲ್ಲಿಯೂ ಸುಧಾರಣೆ ಕಂಡುಕೊಂಡರೆ ತಂಡಕ್ಕೆ ಗೆಲುವಿನ ಹಾದಿ ಸುಗಮವಾಗಬಹುದು.

ಅದೇ ಹೈದರಾಬಾದ್ ತಂಡವು ಈಚೆಗೆ ಮುಂಬೈ ಇಂಡಿಯನ್ಸ್ ವಿರುದ್ಧ ಪರಾಭವಗೊಂಡಿತ್ತು. ತಂಡವು ಆಡಿರುವ ಐದು ಪಂದ್ಯಗಳಲ್ಲಿ ಎರಡರಲ್ಲಿ ಮಾತ್ರ ಜಯಿಸಿದೆ. ಇದರಿಂದಾಗಿ ಉಳಿದ ಪಂದ್ಯಗಳಲ್ಲಿ ಜಯ ಸಾಧಿಸುವುದು ಮುಖ್ಯವಾಗಿದೆ. ಆದ್ದರಿಂದ ಏಡನ್ ಮರ್ಕರಂ ಬಳಗವು ದಿಟ್ಟ ಹೋರಾಟ ತೋರುವ ನಿರೀಕ್ಷೆ ಇದೆ.

ರಾಹುಲ್ ತ್ರಿಪಾಠಿ, ವಾಷಿಂಗ್ಟನ್ ಸುಂದರ್, ಅಭಿಷೇಕ್ ಶರ್ಮಾ ವರು ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿದರೆ ತಂಡದ ಹೋರಾಟಕ್ಕೆ ಬಲ ಬರುಬಹುದು. ಬೌಲರ್‌ಗಳಾದ ಭುವನೇಶ್ವರ್ ಕುಮಾರ್, ಉಮ್ರಾನ್ ಮಲಿಕ್ ಹಾಗೂ ಟಿ ನಟರಾಜನ್ ಅವರ ಮುಂದೆ ಚೆನ್ನೈನ ಬಲಿಷ್ಠ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸವಾಲು ಇದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನೆಮಾ ಆ್ಯಪ್.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ರಾಜಸ್ಥಾನ	6	4	2	0	8	1.043
ಲಖನೌ	6	4	2	0	8	0.709
ಚೆನ್ನೈ	5	3	2	0	6	0.265
ಗುಜರಾತ್	5	3	2	0	6	0.192
ಬೆಂಗಳೂರು	6	3	3	0	6	-0.068
ಮುಂಬೈ	5	3	2	0	6	-0.164
ಪಂಜಾಬ್	6	3	3	0	6	-0.298
ಕೋಲ್ಕತ್ತ	6	2	4	0	4	0.214
ಹೈದರಾಬಾದ್	5	2	3	0	4	-0.798
ಡೆಲ್ಲಿ	6	1	5	0	2	-1.183

* ಗುರುವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	343

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಸಿರಾಜ್	ಆರ್‌ಸಿಬಿ	12

ಡೆಲ್ಲಿ ತಂಡಕ್ಕೆ ಮೊದಲ ಜಯ

ನವದೆಹಲಿ (ಪಿಟಿಐ): ಡೇವಿಡ್ ವಾರ್ನರ್ ಆಕರ್ಷಕ ಅರ್ಧಶತಕದ ನಡುವೆಯೂ ಆತಂಕದ ಕ್ಷಣಗಳನ್ನು ಎದುರಿಸಿದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಈ ಬಾರಿಯ ಐಪಿಎಲ್ ಟೂರ್ನಿಯಲ್ಲಿ ಮೊದಲ ಜಯ ದಾಖಲಿಸಿತು.

ಅರುಣ ಜೇಟ್ಲಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಡೆಲ್ಲಿ ತಂಡವು 4 ವಿಕೆಟ್‌ಗಳಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಸೋಲಿಸಿತು.

ವಾರ್ನರ್ ಬ್ಯಾಟಿಂಗ್ (57, 41ಎ, 4X11) ಹಾಗೂ ಅಕ್ಷರ್ ಪಟೇಲ್ (ಅಜೇಯ 19 ರನ್, 13ಕ್ಕೆ 2 ವಿಕೆಟ್) ಅವರ ಆಲ್‌ರೌಂಡ್ ಆಟ ಡೆಲ್ಲಿ ಗೆಲುವಿಗೆ ಪ್ರಮುಖ ಕಾರಣವಾದವು.

ಟಾಸ್ ಗೆದ್ದ ಡೆಲ್ಲಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕೋಲ್ಕತ್ತ ತಂಡವನ್ನು 20 ಓವರ್‌ಗಳಲ್ಲಿ 127 ರನ್‌ಗೆ ನಿಯಂತ್ರಿಸಿತು. ಡೆಲ್ಲಿ 19.2 ಓವರ್‌ಗಳಲ್ಲಿ ಆರು ವಿಕೆಟ್ ಕಳೆದುಕೊಂಡು ಗೆಲುವು ಸಾಧಿಸಿತು. ಇದರೊಂದಿಗೆ ತಂಡದ ಸತತ ಐದು ಪಂದ್ಯಗಳ ಸೋಲಿನ ಸರಣಿ ಕಳಚಿತು.

ಜೇಸನ್, ರಸೆಲ್ ಆಟ: ಆರಂಭಿಕ ಬ್ಯಾಟರ್ ಜೇಸನ್ ರಾಯ್ (43; 39ಎ) ಮತ್ತು ಮಧ್ಯಮ ಕ್ರಮಾಂಕದಲ್ಲಿ ಆ್ಯಂಡ್ರೆ ರಸೆಲ್ (ಔಟಾಗದೆ 38; 31ಎ, 4X1, 6X4) ಅವರ ಆಟದಿಂದಾಗಿ ಕೋಲ್ಕತ್ತ ಅಲ್ಪಮೊತ್ತಕ್ಕೆ ಕುಸಿಯುವುದು ತಪ್ಪಿತು.

ವೇಗಿ ಇಶಾಂತ್ ಶರ್ಮಾ, ಎನ್ರಿಚ್ ನಾಕಿಯಾ, ಕುಲದೀಪ್ ಯಾದವ್ ಕೂಡ ತಲಾ ಎರಡು ವಿಕೆಟ್ ಗಳಿಸಿ, ಕೋಲ್ಕತ್ತ-ಬ್ಯಾಟರ್‌ಗಳಿಗೆ ಕಡಿವಾಣ ಹಾಕಿದರು.

ಸಂಕ್ಷಿಪ್ತ ಸ್ಕೋರು: ಕೋಲ್ಕತ್ತ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 127 (ಜೇಸನ್ ರಾಯ್ 43, ಮನದೀಪ್ ಸಿಂಗ್ 12, ಆ್ಯಂಡ್ರೆ ರಸೆಲ್ ಔಟಾಗದೆ 13, ಇಶಾಂತ್ ಶರ್ಮಾ 19ಕ್ಕೆ2, ಎನ್ರಿಚ್ ನಾಕಿಯಾ 15ಕ್ಕೆ2, ಅಕ್ಷರ್ ಪಟೇಲ್ 13ಕ್ಕೆ2, ಕುಲದೀಪ್ ಯಾದವ್ 15ಕ್ಕೆ2). ಡೆಲ್ಲಿ ಕ್ಯಾಪಿಟಲ್ಸ್: 19.2 ಓವರ್‌ಗಳಲ್ಲಿ 6 ವಿಕೆಟ್‌ಗೆ 128 (ಡೇವಿಡ್ ವಾರ್ನರ್ 57, ಪೃಥ್ವಿ ಶಾ 13, ಮನೀಷ್ ಪಾಂಡೆ 21, ಅಕ್ಷರ್ ಪಟೇಲ್ ಔಟಾಗದೆ 19; ವರುಣ್ ಚಕ್ರವರ್ತಿ 16ಕ್ಕೆ 2, ಅನುಕೂಲ್ ರಾಯ್ 19ಕ್ಕೆ 2, ನಿತೀಶ್ ರಾಣಾ 17ಕ್ಕೆ 2). ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 4 ವಿಕೆಟ್‌ಗಳ ಜಯ



ಡೇವಿಡ್ ವಾರ್ನರ್ ಆಟದ ಪರಿ– ಎಎಫ್‌ಪಿ ಚಿತ್ರ

ರಾಹುಲ್‌ಗೆ ದಂಡ

ನವದೆಹಲಿ: ರಾಜಸ್ಥಾನ ರಾಯಲ್ಸ್ ವಿರುದ್ಧ ಬುಧವಾರ ನಡೆದಿದ್ದ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡವು ನಿಗದಿತ ಅವಧಿಯಲ್ಲಿ ಓವರ್‌ಗಳನ್ನು ಪೂರ್ಣಗೊಳಿಸದ್ದಕ್ಕೆ ನಾಯಕ ಕೆ.ಎಲ್. ರಾಹುಲ್ ಅವರಿಗೆ ₹ 12 ಲಕ್ಷ ದಂಡ ವಿಧಿಸಲಾಗಿದೆ.

ಈ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಲಖನೌ 10 ರನ್‌ಗಳಿಂದ ಗೆಲುವು ಸಾಧಿಸಿತ್ತು.

ಜೈಪುರದ ಸವಾಯ್ ಮಾನಸಿಂಗ್ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಲಖನೌ, ನಿಗದಿತ ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 154 ರನ್ ಗಳಿಸಿತ್ತು. ಆ ಬಳಿಕ ಶಿಸ್ತುಬದ್ಧ ದಾಳಿ ನಡೆಸಿ ರಾಜಸ್ಥಾನ ತಂಡವನ್ನು 6 ವಿಕೆಟ್‌ಗಳಿಗೆ 144 ರನ್‌ಗಳಿಗೆ ನಿಯಂತ್ರಿಸಿತ್ತು.

ರಂಜಾನ್ ನಿಮಿತ್ತ ಬಡವರಿಗೆ ನೆರವು ನೀಡುವಾಗ ನಡೆದ ದುರಂತ

ಯೆಮನ್: ಕಾಲ್ತುಳಿತಕ್ಕೆ 78 ಜನರ ಸಾವು

ಸನಾ (ಎಪಿ): ಮುಸಲ್ಮಾನರ ಪವಿತ್ರ ಮಾಸವಾದ ರಂಜಾನ್ ನಿಮಿತ್ತ ಹಣಕಾಸು ನೆರವು ನೀಡಲು ಯೆಮನ್‌ನ ರಾಜಧಾನಿ ಸನಾದಲ್ಲಿ ಬುಧವಾರ ರಾತ್ರಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಕಾಲ್ತುಳಿತ ಸಂಭವಿಸಿ ಕನಿಷ್ಠ 78 ಮಂದಿ ಸತ್ತಿದ್ದು, 73 ಮಂದಿ ಗಾಯಗೊಂಡಿದ್ದಾರೆ.

ಜನರ ಗುಂಪನ್ನು ನಿಯಂತ್ರಿಸುವುದಕ್ಕಾಗಿ ಹಾರಿಸಿದ ಗುಂಡು ವಿದ್ಯುತ್ ತಂತಿಗೆ ತಾಗಿ ಸ್ಫೋಟ ಸಂಭವಿಸಿತು. ಇದರಿಂದ ಬೆದರಿದ ಜನರು ಕಂಡ ಕಂಡಲ್ಲಿ ಓಡಿದ್ದೇ ಕಾಲ್ತುಳಿತ ಉಂಟಾಗಲು ಕಾರಣವಾಯಿತು. ಘಟನೆಗೂ ಯೆಮನ್‌ನಲ್ಲಿ ನಡೆಯುತ್ತಿರುವ ಸಂಘರ್ಷಕ್ಕೂ ಸಂಬಂಧವಿಲ್ಲ. ಇದು ಈಚಿನ ವರ್ಷಗಳಲ್ಲಿ ನಡೆದ ಭೀಕರ ಅವಘಡವಾಗಿದೆ ಎಂದು ವರದಿ ತಿಳಿಸಿದೆ.

ಹಣಕಾಸು ನೆರವು ಪಡೆದುಕೊಳ್ಳಲು ಬಂದವರಲ್ಲಿ ಮಹಿಳೆಯರು ಮತ್ತು ಮಕ್ಕಳೂ ಇದ್ದರು.

ಸ್ಥಳದಲ್ಲಿ ಹಲವು ಶವಗಳು ಬಿದ್ದಿರುವ, ಕೆಲವರು ಸಹಾಯಕ್ಕಾಗಿ ಆಕ್ರಂದನದಲ್ಲಿ ತೊಡಗಿದ್ದ ವಿಡಿಯೊ ತುಣುಕುಗಳು ಜಾಲತಾಣದಲ್ಲಿ ಹರಿದಾಡಿವೆ. ರಕ್ತದ ಕಲೆಗಳು, ಹರಿದ ಬಟ್ಟೆಗಳು, ಚೆಲ್ಲಾಪಿಲ್ಲಿಯಾಗಿ ಬಿದ್ದ ಶೂಗಳ ದೃಶ್ಯವುಳ್ಳ ವಿಡಿಯೊವನ್ನು ಸ್ಥಳೀಯ ಆಡಳಿತವೂ ಬಿಡುಗಡೆ ಮಾಡಿದೆ.

ಯೆಮನ್‌ನ ರಾಜಧಾನಿ ಸನಾದಲ್ಲಿರುವ ಓಲ್ಡ್ ಸಿಟಿ ಎಂಬಲ್ಲಿ ಈ ಅವಘಡ ಸಂಭವಿಸಿದೆ.

ಸ್ಥಳೀಯ ಹೋತಿ ಸರ್ಕಾರದ ಒಳಾಡಳಿತದ ಸಚಿವಾಲಯದ ಅಧಿಕಾರಿಗಳು, ಇಬ್ಬರು ಆಯೋಜಕರನ್ನು ಬಂಧಿಸಿದ್ದು, ತನಿಖೆಗೆ ಆದೇಶಿಸಿದ್ದಾರೆ. ಸ್ಥಳೀಯ ಆಡಳಿತದ ಸಹಯೋಗ ಇಲ್ಲದೇ ಏಕಾಏಕಿ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದೂ ಆರೋಪಿಸಿದ್ದಾರೆ.

ಅವಘಡದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ 2000 ಡಾಲರ್ (₹1.64 ಲಕ್ಷ) ಮತ್ತು ಗಾಯಗೊಂಡವರಿಗೆ 400 ಡಾಲರ್ (₹33 ಸಾವಿರ) ಪರಿಹಾರ ವಿತರಿಸಲಾಗುವುದು ಎಂದು ಹೋತಿ ಆಡಳಿತವು ಪ್ರಕಟಿಸಿದೆ.



ಯೆಮೆನ್ ರಾಜಧಾನಿ ಸನಾದಲ್ಲಿ ಕಾಲ್ತುಳಿತ ಸಂಭವಿಸಿದ ಅವಘಡದ ವಿಡಿಯೊದಿಂದ ಪಡೆಯಲಾದ ದೃಶ್ಯ –ಎಎಫ್‌ಪಿ ಚಿತ್ರ

ಭಾರತದ ಪರ್ವತಾರೋಹಿ ಪತ್ತೆ, ಪರಿಸ್ಥಿತಿ ಗಂಭೀರ

ಕಠ್ಮಂಡು (ಪಿಟಿಐ): ಹಿಮಾಲಯದಲ್ಲಿ ನಾಪತ್ತೆಯಾಗಿದ್ದ ಭಾರತದ ಪರ್ವತಾರೋಹಿ ಅನುರಾಗ್ ಮಲೂ, ಇಲ್ಲಿನ ಅನ್ನಪೂರ್ಣ ಪರ್ವತದಲ್ಲಿ ಪತ್ತೆಯಾಗಿದ್ದಾರೆ. ಶೋಧದಲ್ಲಿ ತೊಡಗಿದ್ದ ಸಿಬ್ಬಂದಿ ಅವರನ್ನು ಪತ್ತೆ ಮಾಡಿದ್ದು, ಅವರ ಸ್ಥಿತಿ ಗಂಭೀರವಾಗಿದೆ.

34 ವರ್ಷದ ಅನುರಾಗ್ ರಾಜಸ್ಥಾನದ ಕಿಷನ್‌ಘರ್ ನಿವಾಸಿ. ಶಿಬಿರದಲ್ಲಿ ಭಾಗವಹಿಸಿದ್ದ ಅವರು ಸೋಮವಾರ 6000 ಮೀಟರ್ ಆಳಕ್ಕೆ ಆಯತಪ್ಪಿ ಬಿದ್ದಿದ್ದು, ಬಳಿಕ ನಾಪತ್ತೆಯಾಗಿದ್ದರು. 10ನೇ ಅತಿದೊಡ್ಡ ಪರ್ವತವಾದ ಅನ್ನಪೂರ್ಣದಲ್ಲಿ ಈಗ ಅವರು ಪತ್ತೆಯಾಗಿದ್ದಾರೆ.

‘ಅನುರಾಗ್ ಅದೃಷ್ಟವಶಾತ್ ಬದುಕಿದ್ದಾರೆ. ಆದರೆ, ಅವರ ಸ್ಥಿತಿ ಗಂಭೀರವಾಗಿದೆ. ಪೋಖರಾದಲ್ಲಿರುವ ಮಣಿಪಾಲ್ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಅವರ ಸಹೋದರ ಸುಧೀರ್ ಮಲೂ ತಿಳಿಸಿದ್ದಾರೆ.

ಉಗ್ರರಿಗೆ ನೆರವು: ಭಾರತೀಯನ ಬಂಧನ

ಲಂಡನ್ (ಪಿಟಿಐ): ಭಯೋತ್ಪಾದನೆ ಚಟುವಟಿಕೆಗಳಿಗೆ ಆರ್ಥಿಕ ನೆರವು ನೀಡಿರುವ ಆರೋಪದಡಿ ಭಾರತೀಯ ಪ್ರಜೆಯೊಬ್ಬನನ್ನು ಇಲ್ಲಿನ ಪೊಲೀಸರು, ಗುರುವಾರ ವೆಸ್ಟ್ ಲಂಡನ್‌ನ ಹೇಯ್ಸ್‌ನಲ್ಲಿ ಬಂಧಿಸಿದ್ದಾರೆ.

ಬಂಧಿತ ಆರೋಪಿ ಮೂಲತಃ ತಮಿಳುನಾಡಿನ ಮದುರೈನವನಾಗಿದ್ದು, ಬ್ರಿಟನ್ ಮತ್ತು ಬೆಲ್ಜಿಯಂನ ವಿಳಾಸ ಹೊಂದಿದ್ದ. ಈತನ ವಿರುದ್ಧ ಅಮೆರಿಕದ ತನಿಖಾ ಸಂಸ್ಥೆ ಬಂಧನ ವಾರಂಟ್ ಅನ್ನು ನೀಡಿತ್ತು. 65 ವರ್ಷದ ಸುಂದರ್ ನಾಗರಾಜನ್ ಬಂಧಿತ ಆರೋಪಿ.

ಈತನನ್ನು ನಾಗರಾಜನ್ ಸುಂದರ್ ಪೂಂಗುಲಾಮ್ ಕಾಶಿವಿಶ್ವನಾಥನ್ ಮತ್ತು ನಾಗಸುಂದರ್ ಪೂಂಗುಲಾಮ್ ಕೆ.ನಾಗರಾಜನ್ ಹೆಸರಿನಿಂದಲೂ ಗುರುತಿಸಲಾಗುತ್ತಿತ್ತು. ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಈತನ ಜಾಮೀನು ಅರ್ಜಿ ತಿರಸ್ಕೃತಗೊಂಡಿದ್ದು, ಲಂಡನ್‌ನ ವೆಸ್ಟ್‌ಮಿನಿಸ್ಟರ್ ಕೋರ್ಟ್‌ಗೆ ಮುಂದಿನ ವಾರ ಹಾಜರಾಗಬೇಕಿತ್ತು. ಈತನಿಗೆ ಭಯೋತ್ಪಾದಕರಿಗೆ ಹಣ ನೆರವು ಆರೋಪವುಳ್ಳ ವಜ್ರದ ವ್ಯಾಪಾರಿ, ನಜೀಮ್ ಅಹ್ಮದ್ ಜೊತೆಗೆ ಸಂಪರ್ಕವಿದೆ ಎಂದು ಶಂಕಿಸಲಾಗಿದೆ

ಪರಿಸರವಾದಿಗಳ ತೀವ್ರ ವಿರೋಧವನ್ನು ಲೆಕ್ಕಿಸದ ದ್ವೀಪ ರಾಷ್ಟ್ರದ ಸರ್ಕಾರ

ಚೀನಾಕ್ಕೆ ಹಾರಲಿವೆ ಲಂಕಾದ ಲಕ್ಷ ಕೋತಿಗಳು!



ಕೊಲಂಬೊ (ಪಿಟಿಐ): ತನ್ನ ದೇಶದಲ್ಲಿರುವ ಅಳಿವಿನಂಚಿನ ಪ್ರಭೇದದ ಒಂದು ಲಕ್ಷ ಕೋತಿಗಳನ್ನು ಶ್ರೀಲಂಕಾ ದೇಶವು ಚೀನಾಕ್ಕೆ ಕಳುಹಿಸಿಕೊಡಲಿದೆ. ಈ ಸಂಬಂಧ ಚೀನಾದಿಂದ ಬಂದ ಬೇಡಿಕೆಯನ್ನು ಸ್ಥಳೀಯ ಪರಿಸರವಾದಿಗಳ ತೀವ್ರ ವಿರೋಧದ ನಡುವೆಯೂ ಶ್ರೀಲಂಕಾ ಸರ್ಕಾರ ಒಪ್ಪಿಕೊಂಡಿದೆ.

ಶ್ರೀಲಂಕಾದ ಕೃಷಿ ಸಚಿವಾಲಯದ ಹಿರಿಯ ಅಧಿಕಾರಿ ಗುಣದಾಸ ಸಮರಸಿಂಘೆ ಅವರು, ಈ ವಿಷಯ ತಿಳಿಸಿದ್ದು, ಚೀನಾದಲ್ಲಿ ಮೃಗಾಲಯದ ಜೊತೆಗೆ ಸಹಭಾಗಿತ್ವವುಳ್ಳ, ಪ್ರಾಣಿ ಸಂತತಿ ವೃದ್ಧಿಗೆ ಒತ್ತು ನೀಡುವ ಖಾಸಗಿ ಕಂಪನಿಯೊಂದು 1 ಲಕ್ಷ ಕೋತಿಗಳನ್ನು ಹಿಡಿದು ಒದಗಿಸಲು ಬೇಡಿಕೆ ಮಂಡಿಸಿದೆ ಎಂದು ತಿಳಿಸಿದರು.

‘ನಾವು ಒಂದೇ ಬಾರಿಗೆ ಲಕ್ಷ ಕೋತಿಗಳನ್ನು ಹಿಡಿದು ಕಳುಹಿಸುತ್ತಿಲ್ಲ ದೇಶದ ವಿವಿಧೆಡೆ ಕೋತಿಗಳ ಹಾವಳಿಯಿಂದ ಬೆಳೆ ಹಾನಿ ಸಂಭವಿಸುತ್ತಿದೆ ಎಂಬ ಹಿನ್ನೆಲೆಯಲ್ಲಿ ಈ ಬೇಡಿಕೆಯನ್ನು ಒಪ್ಪಿದ್ದೇವೆ. ಆದರೆ, ಸಂರಕ್ಷಿತ ಪ್ರದೇಶದಿಂದ ಕೋತಿಗಳನ್ನು ಹಿಡಿಯುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

‘ಟೋಕ್ ಮಕಾಕ್’ ಎಂದು ಗುರುತಿಸುವ ಅಳಿವಿನಂಚಿನಲ್ಲಿರುವ ಪ್ರಭೇದದ ಕೋತಿಗಳನ್ನು ಶ್ರೀಲಂಕಾದಲ್ಲಿ ಉಪದ್ರವಕಾರಿ ಎಂದು ಗುರುತಿಸಲಾಗಿದೆ. ಜೀವಂತ ಪ್ರಾಣಿಗಳನ್ನು ಹಿಡಿದು ಹೊರದೇಶಕ್ಕೆ ಕಳುಹಿಸುವುದನ್ನು ಶ್ರೀಲಂಕಾದಲ್ಲಿ ನಿಷೇಧಿಸಲಾಗಿದೆ. ಆದರೆ, ಮೂರು ಪ್ರಭೇದಗಳ ಕೋತಿಗಳು, ನವಿಲುಗಳು, ಕಾಡುಹಂದಿಗಳು ಸೇರಿದಂತೆ ಹಲವು ವನ್ಯಜೀವಿಗಳನ್ನು ‘ಸಂರಕ್ಷಿತ ಪಟ್ಟಿ’ಯಿಂದ ಶ್ರೀಲಂಕಾ ಇತ್ತೀಚೆಗಷ್ಟೆ ಕೈಬಿಟ್ಟಿದೆ. ಹೀಗಾಗಿ ಪಟ್ಟಿಯಿಂದ ಕೈಬಿಡಲಾದ ಪ್ರಾಣಿಗಳು ಕೃಷಿಭೂಮಿಯಲ್ಲಿ ಉಪದ್ರವ ಕೊಟ್ಟರೆ ರೈತರು ಅವುಗಳನ್ನು ಕೊಲ್ಲಬಹುದಾಗಿದೆ.

ಒಂದು ಲಕ್ಷ ಕೋತಿಗಳನ್ನು ಚೀನಾದ ಸಾವಿರಕ್ಕೂ ಅಧಿಕ ಮೃಗಾಲಯಗಳಲ್ಲಿ ಇರಿಸಲು ಉದ್ದೇಶಿಸಲಾಗಿದೆ ಎಂದು ಶ್ರೀಲಂಕಾದ ಕೃಷಿ ಸಚಿವರು ಕಳೆದ ವಾರ ತಿಳಿಸಿದ್ದರು. ಆದರೆ, ಶ್ರೀಲಂಕಾವು ತೀವ್ರ ಆರ್ಥಿಕ ಬಿಕ್ಕಟ್ಟಿನಿಂದ ಬಳಲುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ‘ಕೋತಿಗಳ ವ್ಯಾಪಾರ ಪ್ರಸ್ತಾವ’ ಕಾರ್ಯಗತಗೊಳ್ಳುತ್ತಿರುವುದು ಗಮನಾರ್ಹವಾಗಿದೆ.

ಆಸ್ಟ್ರೇಲಿಯಾ: ಪೂರ್ಣ ಗ್ರಹಣ ಗೋಚರ

ಜಕಾರ್ತಾ (ಎಪಿ): ಆಸ್ಟ್ರೇಲಿಯಾದ ವಾಯುವ್ಯ ಕರಾವಳಿ ತೀರದ ಎಕ್ಸ್‌ಮೌತ್ ನಗರದಲ್ಲಿ ಶುಭ್ರ ಆಕಾಶದಲ್ಲಿ ಗೋಚರಿಸಿದ ಅಪರೂಪದ ಸಮ್ಮಿಶ್ರ ಸೂರ್ಯ ಗ್ರಹಣವನ್ನು ಗುರುವಾರ 20 ಸಾವಿರ ಜನ ಕಣ್ತುಂಬಿಕೊಂಡರು.

ಮೂರು ಸಾವಿರಕ್ಕೂ ಕಡಿಮೆ ನಿವಾಸಿಗಳಿರುವ ಎಕ್ಸ್‌ಮೌತ್ ಪಟ್ಟಣ ಈ ಸೂರ್ಯಗ್ರಹಣ ವೀಕ್ಷಣೆಗೆ ಸೂಕ್ತತಾಣವೆಂದು ದೊಡ್ಡ ಸಂಖ್ಯೆಯಲ್ಲಿ ಜನ ಜಮಾಯಿಸಿದ್ದರು.

ಎಕ್ಸ್‌ಮೌತ್ ಮಾತ್ರವಲ್ಲದೆ ಇಂಡೋನೇಷ್ಯಾ ಮತ್ತು ಪೂರ್ವ ಟಿಮೋರ್ ಭಾಗದ ಹಲವು ಪ್ರದೇಶಗಳಲ್ಲೂ ಸೂರ್ಯಗ್ರಹಣ ಸ್ಪಷ್ಟವಾಗಿ ಗೋಚರಿಸಿತು. ಈ ವಿಸ್ಮಯ ನೋಡಲು ಖಗೋಳಾಸಕ್ತರು ಕೆಲವು ದಿನಗಳ ಹಿಂದೆಯೇ ಶಿಬಿರಗಳನ್ನು ನಿರ್ಮಿಸಿಕೊಂಡು ಕಾದುಕುಳಿತಿದ್ದರು. ಸೂರ್ಯ ಗ್ರಹಣದ ದೃಶ್ಯಗಳನ್ನು ಸೆರೆ ಹಿಡಿದು ಸಂಭ್ರಮಿಸಿದರು.

ನಾಸಾದ ಖಗೋಳ ಶಾಸ್ತ್ರಜ್ಞ ಹೆನ್ರಿ ಥ್ರೂಪ್ ಕೂಡ ಎಕ್ಸ್‌ಮೌತ್‌ನಲ್ಲಿ ಗ್ರಹಣದ ಸೊಗಬನ್ನು ಆನಂದಿಸಿದರು. ‘ಗ್ರಹಣ ಕೇವಲ ಒಂದು ಕ್ಷಣದ ವಿಸ್ಮಯವಾದರೂ ಹೆಚ್ಚು ಕಾಲ ನೆನಪಿನಲ್ಲಿ ಉಳಿಯುತ್ತದೆ. ಇದಕ್ಕಿಂತ ಉತ್ತಮವಾದುದನ್ನು ನೋಡಲು ಸಾಧ್ಯವಿಲ್ಲ’ ಎಂದು ಅವರು ಅಭಿಪ್ರಾಯಪಟ್ಟರು.



ಆಸ್ಟ್ರೇಲಿಯಾದ ಎಕ್ಸ್‌ಮೌತ್ ನಗರದಲ್ಲಿ ಕಂಡುಬಂದ ಸೂರ್ಯ ಗ್ರಹಣ – ಎಎಫ್‌ಪಿ ಚಿತ್ರ

ಕೋವಿಡ್: ದೇಶದಲ್ಲಿ ಒಂದೇ ದಿನ 12,591 ಪ್ರಕರಣ ದೃಢ

ನವದೆಹಲಿ (ಪಿಟಿಐ): ದೇಶದಲ್ಲಿ ಕಳೆದ 24 ಗಂಟೆ ಅವಧಿಯಲ್ಲಿ ಹೊಸದಾಗಿ 12,591 ಕೋವಿಡ್ ಪ್ರಕರಣಗಳು ದೃಢಪಟ್ಟಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 65,286ಕ್ಕೆ ಏರಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯದ ಪ್ರಕಟಣೆಯು ಗುರುವಾರ ತಿಳಿಸಿದೆ.

‘ಕಳೆದ ಎಂಟು ತಿಂಗಳಲ್ಲೇ ದಿನವೊಂದರಲ್ಲಿ ಪತ್ತೆಯಾದ ಗರಿಷ್ಠ ಪ್ರಕರಣಗಳು ಇವು’ ಎಂದೂ ಅದು ಹೇಳಿದೆ.

ಸೋಂಕಿನಿಂದ ಹೊಸದಾಗಿ 40 ಮಂದಿ ಮೃತಪಟ್ಟಿದ್ದು, ಕೇರಳವೊಂದರಲ್ಲೇ 11 ಮಂದಿ ಸಾವಿಗೀಡಾಗಿದ್ದಾರೆ. ಸದ್ಯ ದೈನಂದಿನ ದೃಢ ಪ್ರಮಾಣ ದರ ಶೇ 5.46ರಷ್ಟಿದೆ. ವಾರದ ದೃಢ ಪ್ರಮಾಣ ದರ ಶೇ 5.32ರಷ್ಟಿದೆ ಎಂದು ಪ್ರಕಟಣೆ ವಿವರಿಸಿದೆ.


ಸ್ಪೇಸ್–ಎಕ್ಸ್ ರಾಕೆಟ್ ಸ್ಫೋಟ

ಬೊಕಾ ಚಿಕಾ, ಮೆಡ್‌ಫೋರ್ಡ್ ಕೊಲೊನಿಯಾ (ಅಮೆರಿಕ) (ಎಎಫ್‌ಪಿ): ಜಗತ್ತಿನ ಅತಿದೊಡ್ಡ ಹಾಗೂ ಅತ್ಯಂತ ಶಕ್ತಿಶಾಲಿ ರಾಕೆಟ್ ಎಂದೇ ಬಿಂಬಿತವಾಗಿದ್ದ ಸ್ಪೇಸ್–ಎಕ್ಸ್ ಸ್ಟಾರ್‌ಶಿಪ್ ರಾಕೆಟ್ ತನ್ನ ಮೊದಲ ಯಾನದ ವೇಳೆಯೇ ಸ್ಫೋಟಗೊಂಡಿದೆ.

ಮಾನವರಹಿತವಾಗಿದ್ದ ಈ ರಾಕೆಟ್ ಅನ್ನು ಟೆಕ್ಸಾಸ್‌ನ ಬೊಕಾ ಚಿಕಾದಲ್ಲಿರುವ ಸ್ಪೇಸ್–ಎಕ್ಸ್‌ನ ಸ್ಟಾರ್‌ಬೇಸ್‌ನಿಂದ ಸ್ಥಳೀಯ ಕಾಲಮಾನ ಬೆಳಿಗ್ಗೆ 8.33ಕ್ಕೆ ಉಡಾವಣೆ ಮಾಡಲಾಗಿತ್ತು. ಅದಾಗಿ ನಾಲ್ಕು ನಿಮಿಷಗಳಲ್ಲೇ ಇದು ಸ್ಫೋಟಗೊಂಡಿದೆ.


ಗಗನಯಾತ್ರಿಗಳು ಹಾಗೂ ಇತರ ಸರಕುಗಳನ್ನು ಒಯ್ಯಬೇಕಾಗಿದ್ದ ಈ ಗಗನ ನೌಕೆಯು ಉಡಾವಣೆಗೊಂಡ ಮೂರು ನಿಮಿಷಗಳ ನಂತರ ರಾಕೆಟ್‌ನಿಂದ ಪ್ರತ್ಯೇಕಗೊಳ್ಳಬೇಕಿತ್ತು. ಅದು ಸಾಧ್ಯವಾಗದಿದ್ದರಿಂದ ಮೆಕ್ಸಿಕೊ ಕೊಲ್ಲಿ ಬಳಿ ಸ್ಫೋಟಗೊಂಡಿದೆ.

ಗಗನಯಾತ್ರಿಗಳನ್ನು ಚಂದ್ರ ಹಾಗೂ ಮಂಗಳನಲ್ಲಿಗೆ ಕಳುಹಿಸುವ ಸಲುವಾಗಿ ಈ ರಾಕೆಟ್ ಅನ್ನು ಅಭಿವೃದ್ಧಿಪಡಿಸಲಾಗಿತ್ತು. ಈ ಗಗನ ನೌಕೆಯು 90 ನಿಮಿಷಗಳ ಪರೀಕ್ಷಾರ್ಥ ಉಡಾವಣೆ ಪೂರ್ಣಗೊಳಿಸುವಲ್ಲಿ ವಿಫಲವಾಗಿದೆ. ಕಕ್ಷೆಯನ್ನೂ ಸೇರಿಲ್ಲ.



ಮೆಕ್ಸಿಕೊ ಕೊಲ್ಲಿ ಬಳಿ ಸ್ಫೋಟಗೊಂಡ ಸ್ಪೇಸ್–ಎಕ್ಸ್ ಸ್ಟಾರ್‌ಶಿಪ್ ರಾಕೆಟ್

ಸಚಿವ ರಾಜ್‌ನಾಥ್ ಸಿಂಗ್‌ಗೆ ಕೋವಿಡ್



ನವದೆಹಲಿ (ಪಿಟಿಐ): ‘ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಕೋವಿಡ್ ದೃಢಪಟ್ಟಿದೆ’ ಎಂದು ಗುರುವಾರ ಅಧಿಕಾರಿಗಳು ತಿಳಿಸಿದ್ದಾರೆ.

‘ರಾಜನಾಥ್ ಅವರು ಮನೆಯಲ್ಲಿಯೇ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ’ ಎಂದೂ ಅವರು ಹೇಳಿದ್ದಾರೆ.

‘ವೈದ್ಯರ ತಂಡ ಸಚಿವರನ್ನು ಪರೀಕ್ಷಿಸಿದ್ದು, ವಿಶ್ರಾಂತಿ ತೆಗೆದುಕೊಳ್ಳಲು ಸೂಚಿಸಿದೆ. ಗುರುವಾರ ನಡೆಯಲಿದ್ದ ಭಾರತೀಯ ವಾಯುಪಡೆಯ ಕಮಾಂಡರ್‌ಗಳ ಸಭೆಯಲ್ಲಿ ಸಚಿವರು ಭಾಗವಹಿಸಬೇಕಿತ್ತು’ ಎಂದು ಅವರು ಹೇಳಿದ್ದಾರೆ.

ಪಳನಿಸ್ವಾಮಿ ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ: ಆಯೋಗ ಸಮ್ಮತಿ



ಎಡಪ್ಪಾಡಿ ಕೆ.ಪಳನಿಸ್ವಾಮಿ

ಚೆನ್ನೈ (ಪಿಟಿಐ): ‘ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಿರುವ ಪಕ್ಷದ ಕ್ರಮಕ್ಕೆ ಚುನಾವಣಾ ಆಯೋಗ ಸಮ್ಮತಿ ಸೂಚಿಸಿದೆ’ ಎಂದು ತಮಿಳುನಾಡಿನ ಎಐಎಡಿಎಂಕೆ ಗುರುವಾರ ಹೇಳಿದೆ.

‘ಪಕ್ಷದ ಬೈಲಾದಲ್ಲಿ ಹಲವು ತಿದ್ದುಪಡಿಗಳನ್ನು ಮಾಡಲಾಗಿತ್ತು. ಜೊತೆಗೆ ಆಡಳಿತ ಮಂಡಳಿಗೆ ಹೊಸ ಸದಸ್ಯರನ್ನು ನೇಮಿಸಲಾಗಿತ್ತು. ಇದಕ್ಕೆ ಆಯೋಗ ಅನುಮೋದನೆ ನೀಡಿದೆ’ ಎಂದು ಪಕ್ಷದ ವಕ್ತಾರ ಆರ್.ಎಂ.ಬಾಬು ಮುರುಗವೇಲ್ ಟ್ವೀಟ್ ಮಾಡಿದ್ದಾರೆ.

ಪಳನಿಸ್ವಾಮಿ ಅವರನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಿರುವ ಹಾಗೂ ತಮ್ಮನ್ನು ಪಕ್ಷದಿಂದ ಉಚ್ಚಾಟನೆ ಮಾಡಿರುವುದನ್ನು ಒ.ಪನ್ನೀರಸೆಲ್ವಂ ಅವರು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾರೆ. ಮದ್ರಾಸ್ ಹೈಕೋರ್ಟ್‌ನ ವಿಭಾಗೀಯ ಪೀಠವು ಗುರುವಾರ ಇದರ ವಿಚಾರಣೆ ನಡೆಸಿದೆ. ಇದೇ ಸಮಯದಲ್ಲಿ ಆಯೋಗವು ಪಳನಿಸ್ವಾಮಿ ಬಣದ ಮನವಿಯನ್ನು ಪುರಸ್ಕರಿಸಿದೆ.

ಉಕ್ರೇನ್‌ನಲ್ಲಿ ನ್ಯಾಟೊ ಪ್ರಧಾನ ಕಾರ್ಯದರ್ಶಿ



ಸ್ಟೋಲ್ಟನ್‌ಬರ್ಗ್

ಕೀವ್ (ಎಪಿ): ರಷ್ಯಾ ದೇಶವು ದಾಳಿ ಆರಂಭಿಸಿದ ಬಳಿಕ ಯುದ್ಧಪೀಡಿತ ಉಕ್ರೇನ್ ದೇಶಕ್ಕೆ ನ್ಯಾಟೊ ಪ್ರಧಾನ ಕಾರ್ಯದರ್ಶಿ ಜೇನ್ಸ್ ಸ್ಟೋಲ್ಟನ್‌ಬರ್ಗ್ ಇದೇ ಮೊದಲ ಬಾರಿಗೆ ಭೇಟಿ ನೀಡಿದ್ದಾರೆ. ರಾಜಧಾನಿ ಕೀವ್ ನಗರಕ್ಕೆ ಗುರುವಾರ ಆಗಮಿಸಿರುವ ಅವರು, ಹುತಾತ್ಮ ಸೈನಿಕರ ಸ್ಮಾರಕಕ್ಕೆ ಭೇಟಿ ನೀಡಿ, ಗೌರವ ಅರ್ಪಿಸಿದ್ದಾರೆ.

ಸ್ಟೋಲ್ಟನ್‌ಬರ್ಗ್ ಅವರು ಉಕ್ರೇನ್ ಭೇಟಿ ನೀಡುವ ವಿಷಯವಾಗಿ ಯಾವ ಮಾಹಿತಿಯನ್ನೂ ಮುಂಚಿತವಾಗಿ ಹಂಚಿಕೊಂಡಿರಲಿಲ್ಲ. ಕೀವ್‌ಗೆ ತೆರಳುವ ಬಹುತೇಕ ಯುರೋಪ್ ನಾಯಕರು ಆ ಪ್ರವಾಸದ ವಿವರವನ್ನು ಭದ್ರತೆಯ ಕಾರಣದಿಂದ ಬಹಿರಂಗಪಡಿಸುವುದಿಲ್ಲ.

‘ನ್ಯಾಟೊ ಪ್ರಧಾನ ಕಾರ್ಯದರ್ಶಿ ಭೇಟಿಯ ಬಗ್ಗೆ ಹೆಚ್ಚಿನ ಮಾಹಿತಿ ಶೀಘ್ರ ಹಂಚಿಕೊಳ್ಳಲಾಗುವುದು’ ಎಂದು ನ್ಯಾಟೊ ಅಧಿಕಾರಿಗಳು ತಿಳಿಸಿದ್ದಾರೆ.

‘ಜನಸಂಖ್ಯೆಯಲ್ಲಿ ಭಾರತಕ್ಕೆ ಅಗ್ರಸ್ಥಾನ ಸರ್ಕಾರದ ವೈಫಲ್ಯ’



ಅಖಿಲೇಶ್ ಯಾದವ್

ಲಖನೌ (ಪಿಟಿಐ): ‘ಭಾರತವು ಜಗತ್ತಿನಲ್ಲೇ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರಗಳ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಲು ಕೇಂದ್ರ ಸರ್ಕಾರದ ವೈಫಲ್ಯ ಕಾರಣ’ ಎಂದು ಸಮಾಜವಾದಿ ಪಕ್ಷದ (ಎಸ್‌ಪಿ) ಅಧ್ಯಕ್ಷ ಅಖಿಲೇಶ್ ಯಾದವ್ ಗುರುವಾರ ಟೀಕಿಸಿದ್ದಾರೆ.

‘ಇದು ಆತಂಕಕಾರಿ ಸುದ್ದಿ. ಇದಕ್ಕೆ ಕಾರಣ ಸರ್ಕಾರದ ವೈಫಲ್ಯ’ ಎಂದು ಅಖಿಲೇಶ್ ಟ್ವೀಟ್ ಮಾಡಿದ್ದಾರೆ.

‘ಬಡತನ, ನಿರುದ್ಯೋಗದಿಂದ ತತ್ತರಿಸಿರುವ ಜನರು, ತಮ್ಮ ಕೆಲಸಕ್ಕೆ ನೆರವಾಗಲಿ ಹಾಗೂ ಕುಟುಂಬಕ್ಕೆ ಆಧಾರವಾಗಿರಲಿ ಎಂದು ಹೆಚ್ಚೆಚ್ಚು ಮಕ್ಕಳನ್ನು ಪಡೆಯುತ್ತಿದ್ದಾರೆ. ವೈದ್ಯಕೀಯ ಸೌಲಭ್ಯ ಕೊರತೆಯಿಂದಾಗಿ ಜನ ತಮ್ಮ ಮಕ್ಕಳ ಮರಣದ ಭಯದಲ್ಲಿದ್ದಾರೆ. ಗರ್ಭನಿರೋಧಕ ಸಾಧನ ವಿತರಿಸುವಲ್ಲಿ ಸರ್ಕಾರ ವಿಫಲವಾಗಿದೆ’ ಎಂದು ಆರೋಪಿಸಿದ್ದಾರೆ.

ವಿಶ್ವಕಪ್ ಸ್ಟೇಜ್ 1 ಆರ್ಚರಿ ಟೂರ್ನಿ: ಚೀನಾ ತಂಡ ಎದುರಾಳಿ

ಫೈನಲ್‌ಗೆ ಭಾರತ ರಿಕರ್ವ್ ತಂಡ

ಅಂತಲ್ಯಾ, ಟರ್ಕಿ (ಪಿಟಿಐ): ಸತತ ಮೂರು ಸ್ಪರ್ಧೆಗಳಲ್ಲಿ ಜಯ ಗಳಿಸಿದ ಭಾರತ ಪುರುಷರ ರಿಕರ್ವ್ ತಂಡದವರು ವಿಶ್ವಕಪ್ ಸ್ಟೇಜ್ 1 ಆರ್ಚರಿ ಟೂರ್ನಿಯಲ್ಲಿ ಗುರುವಾರ ಪ್ರಶಸ್ತಿ ಸುತ್ತಿಗೆ ಕಾಲಿಟ್ಟರು.

ಒಂಬತ್ತು ವರ್ಷಗಳಲ್ಲಿ ಮೊದಲ ಬಾರಿಗೆ ತಂಡವು ಫೈನಲ್ ತಲುಪಿದೆ. ಅತನು ದಾಸ್, ಬಿ. ಧೀರಜ್ ಮತ್ತು ತರುಣದೀಪ್ ರಾಯ್ ಅವರನ್ನೊಳಗೊಂಡ ತಂಡವು ಫೈನಲ್‌ನಲ್ಲಿ ಭಾನುವಾರ ಚೀನಾ ಸವಾಲು ಎದುರಿಸಲಿದೆ. ಅಂತಿಮ ಸುತ್ತಿನಲ್ಲಿ ಗೆದ್ದರೆ ಭಾರತಕ್ಕೆ 13 ವರ್ಷಗಳ ಬಳಿಕ ವಿಶ್ವಕಪ್ ಚಿನ್ನದ ಪದಕ ಒಲಿಯುವುದು.

ಭಾರತ ಪುರುಷರ ರಿಕರ್ವ್ ತಂಡವು ಕೊನೆಯ ಬಾರಿ ಚಿನ್ನ ಗೆದ್ದಿದ್ದು 2010ರಲ್ಲಿ. ಶಾಂಘೈನಲ್ಲಿ ನಡೆದಿದ್ದ ಈ ಟೂರ್ನಿಯ ಫೈನಲ್‌ನಲ್ಲಿ ಅತನು ರಾಯ್, ಜಯಂತ್ ತಾಲೂಕ್ದಾರ್ ಮತ್ತು ರಾಹುಲ್ ಬ್ಯಾನರ್ಜಿ ಅವರಿದ್ದ ತಂಡ ಜಪಾನ್‌ಅನ್ನು ಮಣಿಸಿತ್ತು.

ಈ ವಿಶ್ವಕಪ್ ಟೂರ್ನಿಯ ಮೊದಲ ಸುತ್ತಿನಲ್ಲಿ ಬೈ ಪಡೆದಿದ್ದ 4ನೇ ಶ್ರೇಯಾಂಕದ ಭಾರತ ತಂಡದವರು, ಎರಡನೇ ಸುತ್ತಿನಲ್ಲಿ 5–4ರಿಂದ ಜಪಾನ್ ಸವಾಲು ಮೀರಿದ್ದರು. ಜಪಾನ್ 13ನೇ ಶ್ರೇಯಾಂಕ ಪಡೆದಿತ್ತು. ಉಭಯ ತಂಡಗಳ ನಡುವಿನ ಹಣಾಹಣಿ 4–4 ಸ್ಕೋರ್‌ನಿಂದ ಸಮಬಲವಾಗಿತ್ತು. ಟೈಬ್ರೇಕ್‌ನಲ್ಲಿ ಭಾರತ 29–28 ಪಾಯಿಂಟ್ಸ್‌ನಿಂದ ಗೆಲುವು ಸಾಧಿಸಿತು.

ಮೂರನೇ ಸುತ್ತಿನಲ್ಲಿ ಭಾರತ 6–2ರಿಂದ 12ನೇ ಶ್ರೇಯಾಂಕದ ಚೀನಾ ತೈಪೆ ವಿರುದ್ಧ, ಬಳಿಕ ಇಷ್ಟೇ ಅಂತರದಿಂದ ಒಂಬತ್ತನೇ ಶ್ರೇಯಾಂಕದ ನೆದರ್ಲೆಂಡ್ಸ್ ವಿರುದ್ಧ ಜಯ ಸಾಧಿಸಿತು.

ಕಂಚಿನ ಪದಕದ ಸುತ್ತಿನಲ್ಲಿ ನೆದರ್ಲೆಂಡ್ಸ್ ಮತ್ತು ಸ್ಲೊವೇನಿಯಾ ತಂಡಗಳು ಸೆಣಸಲಿವೆ.

ಸೆಮಿಫೈನಲ್‌ಗೆ ಜ್ಯೋತಿ: ಮಹಿಳೆಯರ ಕಾಂಪೌಂಡ್ ವೈಯಕ್ತಿಕ ವಿಭಾಗದಲ್ಲಿ ಭಾರತದ ಜ್ಯೋತಿ ಅವರು ಸೆಮಿಫೈನಲ್ ತಲುಪಿದರು. ಕ್ವಾರ್ಟರ್‌ಫೈನಲ್ ಹಣಾಹಣಿಯಲ್ಲಿ ಜ್ಯೋತಿ 147–142ರಿಂದ ಡೆನ್ಮಾರ್ಕ್‌ನ ತಜಾ ಗೆಲೆಂತಿಯೆನ್ ಅವರನ್ನು ಪರಾಭವಗೊಳಿಸಿದರು.

ವಿಶ್ವ ಚೆಸ್: ಎಂಟನೇ ಪಂದ್ಯ ಡ್ರಾ

ಅಸ್ತಾನಾ, ಕಜಕಸ್ತಾನ: ಸ್ಕೋರ್ ಸಮಬಲ ಮಾಡುವ ಉತ್ಸಾಹದಿಂದ ಆಡಿದ ಚೀನಾದ ಗ್ರ್ಯಾಂಡ್‌ಮಾಸ್ಟರ್ ಡಿಂಗ್ ಲಿರೆನ್ ಒಂದು ಹಂತದಲ್ಲಿ ನಿರ್ಣಾಯಕ ಮೇಲುಗೈ ಹೊಂದಿದ್ದರು. ಆದರೆ ಎದುರಾಳಿ ಇಯಾನ್ ನಿಪೊಮ್‌ನಿಷಿ ಅವರು 'ಮಿಡ್ಲ್ ಗೇಮ್' ಹಂತದಲ್ಲಿ ತಮ್ಮ ಬತ್ತಳಿಕೆಯಲ್ಲಿರುವ ರಕ್ಷಣಾ ತಂತ್ರಗಳನ್ನು ಕರಾರುವಾಕ್ ಆಗಿ ಕಾರ್ಯರೂಪಕ್ಕೆ ಇಳಿಸುವ ಮೂಲಕ ಪಂದ್ಯವನ್ನು ಸಮಬಲದ ಸ್ಥಿತಿಗೆ ತಂದರು.

ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ ಎಂಟನೇ ಪಂದ್ಯ ಗುರುವಾರ 45ನೇ ನಡೆಯಲ್ಲಿ 'ಡ್ರಾ' ಆಯಿತು. ಫಿಡೆ ಧ್ವಜದಡಿ ಆಡುತ್ತಿರುವ ರಷ್ಯನ್ ಗ್ರ್ಯಾಂಡ್‌ಮಾಸ್ಟರ್ ನಿಪೊಮ್‌ನಿಷಿ ಸದ್ಯ ಒಂದು ಪಾಯಿಂಟ್ ಅಂತರದಲ್ಲಿ (4.5–3.5) ಮುಂದಿದ್ದಾರೆ. 14 ಪಂದ್ಯಗಳ ಸರಣಿಯಲ್ಲಿ ಯಾರು ಮೊದಲು 7.5 ಪಾಯಿಂಟ್ಸ್ ಗಳಿಸುತ್ತಾರೊ ಅವರು ವಿಶ್ವ ಚಾಂಪಿಯನ್ ಪಟ್ಟಕ್ಕೇರುತ್ತಾರೆ.

ಬಿಳಿ ಕಾಯಿಗಳಲ್ಲಿ ಆಡಿದ ಲಿರೆನ್ ಹೆಣೆದ ಜಾಲದಿಂದ 'ಪವಾಡ ಸದೃಶ' ರೀತಿ ತಪ್ಪಿಸಿಕೊಳ್ಳುವಲ್ಲಿ ನಿಪೊಮ್‌ನಿಷಿ ಯಶಸ್ವಿಯಾದರು. 9ನೇ ಪಂದ್ಯ ಶುಕ್ರವಾರ ನಡೆಯಲಿದ್ದು, ಬಿಳಿ ಕಾಯಿಗಳಲ್ಲಿ ಆಡುವ ಸರದಿ ನಿಪೊಮ್‌ನಿಷಿ ಅವರದ್ದು.

ಟಿಟಿ: ಫೈನಲ್‌ಗೆ ಯಶಸ್ವಿನಿ ಘೋರ್ಪಡೆ

ನವದೆಹಲಿ (ಪಿಟಿಐ): ಆಯಿಲ್ ಇಂಡಿಯನ್ ಲಿಮಿಟೆಡ್ (ಒಐಎಲ್) ತಂಡವನ್ನು ಪ್ರತಿನಿಧಿಸಿರುವ ಯಶಸ್ವಿನಿ ಘೋರ್ಪಡೆ ಅವರು ಇಲ್ಲಿ ನಡೆಯುತ್ತಿರುವ ಪಿಎಸ್‌ಪಿಬಿ ಅಂತರ ಸಂಸ್ಥೆಗಳ ಟೇಬಲ್ ಟೆನಿಸ್ ಟೂರ್ನಿಯ ಫೈನಲ್ ತಲುಪಿದರು.

ಗುರುವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ನಾಲ್ಕರ ಘಟ್ಟದ ಪಂದ್ಯದಲ್ಲಿ ಕರ್ನಾಟಕದ ಆಟಗಾರ್ತಿ 11-4, 11-8, 3-11, 3-11, 11-6, 11-9ರಿಂದ ಒಎನ್‌ಜಿಸಿ ತಂಡದ ದಿವ್ಯಾ ದೇಶಪಾಂಡೆ ಅವರನ್ನು ಪರಾಭವಗೊಳಿಸಿದರು.

ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ಐಒಸಿಎಲ್ ತಂಡದ ಟಿ. ರೀತ್ ರಿಷ್ಯಾ 5-11, 10-12, 11-9, 6-11, 11-8, 11-7, 11-4ರಿಂದ ತಮ್ಮದೇ ತಂಡದ ಜೆನಿಫರ್ ವರ್ಗೀಸ್ ಎದುರು ಗೆದ್ದರು.



ಯಶಸ್ವಿನಿ ಘೋರ್ಪಡೆ

ವುಡ್ಸ್‌ಗೆ ಶಸ್ತ್ರಚಿಕಿತ್ಸೆ

ನ್ಯೂಯಾರ್ಕ್ (ಎಪಿ): ಗಾಲ್ಫ್ ತಾರೆ ಟೈಗರ್ ವುಡ್ಸ್ ಅವರ ಬಲ ಹಿಮ್ಮಡಿಯ ಮುರಿದ ಮೂಳೆಗೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ಇದರಿಂದಾಗಿ ಮುಂಬರುವ ಮೇಜರ್ ಟೂರ್ನಿಗಳಲ್ಲಿ ಆಡುವ ಸಾಧ್ಯತೆ ಕಡಿಮೆಯಾಗಿದೆ.

2021ರ ಫೆಬ್ರುವರಿಯಲ್ಲಿ ಅವರು ಗಾಯಗೊಂಡಿದ್ದರು. 'ಈಗ ಅವರು ವಿಶ್ರಾಂತಿಯಲ್ಲಿದ್ದಾರೆ. ಶೀಘ್ರವೇ ಪುನಶ್ಚೇತನ ಪ್ರಕ್ರಿಯೆಯೂ ಆರಂಭವಾಗಲಿದೆ' ಎಂದು ವುಡ್ಸ್ ಅವರ ಪ್ರತಿನಿಧಿ ಮಾರ್ಕ್ ಸ್ಟೀನ್‌ಬರ್ಗ್ ದೂರವಾಣಿ ಸಂದರ್ಶನದಲ್ಲಿ ತಿಳಿಸಿದ್ದಾರೆ.

ನ್ಯೂಯಾರ್ಕ್‌ನಲ್ಲಿ ಬುಧವಾರ ಬೆಳಿಗ್ಗೆ ಶಸ್ತ್ರಚಿಕಿತ್ಸೆ ನಡೆಯಿತು. ನಂತರ ಫ್ಲಾರಿಡಾದ ಜುಪಿಟರ್ ಸಮೀಪವಿರುವ ತಮ್ಮ ನಿವಾಸಕ್ಕೆ ಮರಳಿದರು ಎಂದೂ ಸ್ಟೀನ್‌ಬರ್ಗ್ ತಿಳಿಸಿದ್ದಾರೆ.

ಪಾಕ್ ಕ್ರಿಕೆಟ್ ತಂಡಕ್ಕೆ ಆರ್ಥರ್ ನಿರ್ದೇಶಕ

ಕರಾಚಿ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ತಂಡದ ನಿರ್ದೇಶಕರಾಗಿ ಮಿಕಿ ಆರ್ಥರ್ ಅವರನ್ನು ನೇಮಕ ಮಾಡಲಾಗಿದೆ. ಭಾರತದಲ್ಲಿ ವರ್ಷದ ಕೊನೆಯಲ್ಲಿ ನಡೆಯಲಿರುವ ಏಕದಿನ ಪಂದ್ಯಕ್ಕೆ ಪಾಕ್ ತಂಡವನ್ನು ಸಜ್ಜುಗೊಳಿಸುವಲ್ಲಿ ಅವರ ಪಾತ್ರ ಮಹತ್ವದ್ದಾಗಲಿದೆ.

54 ವರ್ಷದ ಆರ್ಥರ್ ಅವರು 2016 ರಿಂದ 2019ರವರೆಗೆ ಪಾಕಿಸ್ತಾನ ತಂಡಕ್ಕೆ ಮುಖ್ಯ ಕೋಚ್ ಆಗಿದ್ದರು. ಅವರು ತಂಡದ ರೂಪುರೇಷೆ, ತರಬೇತಿಯ ಭಾಗವಾಗಲಿದ್ದಾರೆ. ಅವರ ನೇಮಕವನ್ನು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಗುರುವಾರ ಖಚಿತಪಡಿಸಿದೆ.

ಸಂಕ್ಷಿಪ್ತ ಸುದ್ದಿ

ಪ್ರೊ ಲೀಗ್: ಯಶಸ್ಸಿನ ಓಟ ಮುಂದುವರಿಸುವ ಸವಾಲು– ಅಮಿತ್

ಬೆಂಗಳೂರು (ಪಿಟಿಐ): ಎಫ್‌ಐಎಚ್ ಪ್ರೊ ಲೀಗ್‌ನ ಯುರೋಪ್ ಲೆಗ್‌ನಲ್ಲಿ ಗೆಲುವಿನ ಓಟವನ್ನು ಮುಂದುವರಿಸುವುದು ಸದ್ಯ ಭಾರತ ಹಾಕಿ ತಂಡದ ಮುಂದಿರುವ ಸವಾಲು ಎಂದು ಅನುಭವಿ ಡಿಫೆಂಡರ್ ಅಮಿತ್ ರೋಹಿದಾಸ್ ಅಭಿಪ್ರಾಯಪಟ್ಟಿದ್ದಾರೆ.

ಭಾರತ ತಂಡ ಕಳೆದ ಋತುವಿನಲ್ಲಿ ಮೂರನೇ ಸ್ಥಾನ ಗಳಿಸಿ ಉತ್ತಮ ಸಾಧನೆ ಪ್ರದರ್ಶಿಸಿತ್ತು. ಪ್ರಸ್ತುತ ಪ್ರೊ ಲೀಗ್‌ನ ಎಂಟು ಪಂದ್ಯಗಳಿಂದ 19 ಪಾಯಿಂಟ್ಸ್ ಸಂಗ್ರಹಿಸಿ ಅಗ್ರಸ್ಥಾನದಲ್ಲಿದೆ. ಕಳೆದ ತಿಂಗಳು ರೂರ್ಕೆಲಾದಲ್ಲಿ ನಡೆದ ಪಂದ್ಯಗಳಲ್ಲಿ ಆತಿಥೇಯರು ಅಮೋಘ ಪ್ರದರ್ಶನ ನೀಡಿದ್ದರು. ವಿಶ್ವ ಚಾಂಪಿಯನ್ ಜರ್ಮನಿ ಮತ್ತು ಆಸ್ಟ್ರೇಲಿಯಾ ವಿರುದ್ಧದ ಪಂದ್ಯಗಳಲ್ಲಿ ಭಾರತ ಅಜೇಯ ಸಾಧನೆ ಪ್ರದರ್ಶಿಸಿತ್ತು.ಭಾರತ ಮೇ – ಜೂನ್‌ನಲ್ಲಿ ಯುರೋಪ್ ಪ್ರವಾಸ ಮಾಡಲಿದ್ದು, ಲಂಡನ್‌ನಲ್ಲಿ ಬೆಲ್ಜಿಯಂ ಮತ್ತು ಬ್ರಿಟನ್ ವಿರುದ್ಧ , ನಂತರ ಈಂಡ್‌ಹೊವೆನ್‌ನಲ್ಲಿ ಅರ್ಜೆಂಟೀನಾ ಮತ್ತು ಆತಿಥೇಯ ನೆದರ್ಲೆಂಡ್ಸ್ ವಿರುದ್ಧ ಆಡಲಿದೆ.



ಅಮಿತ್

ಕೃತಕ ಬುದ್ಧಿಮತ್ತೆ ಬಳಸಿ ಶೂಮಾಕರ್ ಸಂದರ್ಶನ

ಬರ್ಲಿನ್ (ಎಪಿ): ಫಾರ್ಮುಲಾ ಒನ್ ರೇಸ್ ದಿಗ್ಗಜ ಮೈಕೆಲ್ ಶೂಮಾಕರ್ ಅವರ ಕುಟುಂಬವು ಜರ್ಮನಿಯ ವಾರಪತ್ರಿಕೆಯೊಂದರ ವಿರುದ್ಧ ಕಾನೂನು ಸಮರ ಸಾರಲು ಸಿದ್ಧವಾಗಿದೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಬಳಸಿ ಶೂಮಾಕರ್ ಅವರ ನಕಲಿ ಸಂದರ್ಶನ ಪ್ರಕಟಿಸಿದೆ ಎಂದು ಕುಟುಂಬವು ಆರೋಪಿಸಿದೆ.

'ಡೈ ಆಕ್ಚುವೆಲ್' ನಿಯತಕಾಲಿಕೆಯ ಮುಖಪುಟದಲ್ಲಿ ಶೂಮಾಕರ್ ಅವರ ಚಿತ್ರವನ್ನು ಪ್ರಕಟಿಸಲಾಗಿದೆ